ಮಾನವಿಕ ಕರ್ಣಾಟಕ

ಸಂಪುಟ ೮ ಸಂಚಿಕೆ ೧

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೭೭

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೮ ಸಂಚಿಕೆ ೧

೨೯

ನವೆಂಬರ್ ಸಂಚಿಕೆ

ಮೈಸೂರು ವಿಶ್ವವಿದ್ಯಾನಿಲಯ

ಮೈ ಸೂ ರು

೧೯೭೭

MANAVIKA KARNATAKA, Kannada Quarterly (Humanities) of the University of Mysore, Volume 8, Number 1, November 1977, Edited by Dr. B. R. Gopal and Dr. B. S. Srikantharadhya.

All Rights Reserved

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಬಿ. ಎಸ್. ಶ್ರೀಕಂಠಾರಾಧ್ಯ

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಹರ್ಷ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು–570 008

ವಿಷಯಸೂಚಿ

ಈ ಸಂಚಿಕೆಯ ಲೇಖಕರು

೧.	ಎ. ಎನ್. ಶೇಷಗಿರಿರಾವ್	ಅಧ್ಯಾಪಕ, ತತ್ತ್ವಶಾಸ್ತ್ರವಿಭಾಗ, ಮಾನಸ ಗಂಗೋತ್ರಿ, ಮೈಸೂರು ೫೭೦೦೦೬ .
೨.	ಎನ್. ಸುಬ್ರಹ್ಮಣ್ಯ	ರೀಡರ್, ಶಿಕ್ಷಣವಿಭಾಗ, ಶಾರದಾವಿಲಾಸ ಶಿಕ್ಷಣ ಕಾಲೇಜು, ಮೈಸೂರು ೫೭೦೦೦೪
೩.	ಎಂ. ಎ. ನೀಲಾಂಬಿಕಾ	೨೪೩, ಉತ್ತರಾದಿಮಠದ ರಸ್ತೆ, ಮೈಸೂರು ೫೭೦೦೦೪
೪.	ಪಿ. ಆರ್. ತಿಪ್ಪೇಸ್ವಾಮಿ	ಕ್ಯೂರೇಟರ್, ಜನಪದ ವಸ್ತುಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು ೫೭೦೦೦೬
೫.	ಎಸ್. ಎನ್. ಶಿವರುದ್ರಸ್ವಾಮಿ	ಇತಿಹಾಸದ ಅಧ್ಯಾಪಕ, ಕಲ್ಪತರು ಕಾಲೇಜು ತಿಪಟೂರು
೬.	ಎನ್. ಎಸ್. ಶಾರದಾ ಪ್ರಸಾದ್	ಸಹಾಯಕ ಭಾಷಾಂತರಕಾರರು, ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೫೭೦೦೦೬
೭.	ಬಿ. ವಸಂತಶೆಟ್ಟಿ	ಅಧ್ಯಾಪಕ, ಎಸ್. ಎಮ್. ಎಸ್. ಜೂನಿಯರ್ ಕಾಲೇಜು, ಬ್ರಹ್ಮಾವರ, ೫೭೬೨೧೩
೮.	ರು. ಮ. ಷಡಕ್ಷರಯ್ಯ	ಸಂಶೋಧನ ವಿದ್ಯಾರ್ಥಿ, ಪ್ರಾಚೀನ ಭಾರತೀಯ ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩
೯.	ಕೆ. ಎಸ್. ಸದಾಶಿವಯ್ಯ	ಅಧ್ಯಾಪಕ, ಶಿಕ್ಷಣ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ೫೭೦೦೦೬
೧೦.	ಎಸ್. ಗೋವಿಂದಗೌಡ	ಸಮಾಜ ಮತ್ತು ಅರ್ಥಶಾಸ್ತ್ರ ವಿಭಾಗ, ವ್ಯವಸಾಯ ಕಾಲೇಜು, ಧಾರವಾಡ ೫೮೦೦೦೫
೧೧.	ಕೃಷ್ಣವೇಣಿ	ಶಾಸನ ಸಹಾಯಕಿ, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೫೭೦೦೦೬
೧೨.	ಜಿ. ಆರ್. ಕುಪ್ಪುಸ್ವಾಮಿ	ಅಧ್ಯಾಪಕ, ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ೫೮೦೦೦೩
೧೩.	ಸಿ. ಕೆ. ರೇಣುಕಾರ್ಯ	ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ೫೭೦೦೦೬
೧೪.	ಬಿ. ಕುಪ್ಪಸ್ವಾಮಿ	೪೯೦, ೧೯ನೆಯ ಮುಖ್ಯ ಟಿ ಬ್ಲಾಕ್, ಜಯನಗರ, ಬೆಂಗಳೂರು ೫೬೦೦೧೧
೧೫.	ಎನ್. ಬಸವಾರಾಧ್ಯ	ಉಪನಿರ್ದೇಶಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ. ಮೈಸೂರು ೫೭೦೦೦೬
೧೬.	ರಾಮ್‌ಕುಲಕರ್ಣಿ	ರೀಡರ್, ಶಿಕ್ಷಣ ವಿಭಾಗ, ಮಾನಸಗಂಗೋತ್ರಿ ಮೈಸೂರು ೫೭೦೦೦೬
೧೭.	ಎನ್. ಬಿ. ಪಾಂಗಣ್ಣಾಯ	ಅಧ್ಯಾಪಕರು, ಗ್ರಂಥಾಲಯ ವಿಜ್ಞಾನವಿಭಾಗ, ಮಾನಸಗಂಗೋತ್ರಿ, ಮೈಸೂರು ೫೭೦೦೦೬
೧೮.	ಬಿ. ಜಿ. ಗುರುಪ್ರಸಾದ್	ಅಧ್ಯಾಪಕರು, ವಾಣಿಜ್ಯ ವಿಭಾಗ, ಮಹಾರಾಜಾ ಕಾಲೇಜು, ಮೈಸೂರು ೫೭೦೦೦೫

ವಿ. ಎನ್. ಶೇಷಗಿರಿರಾವ್

ಗಾಂಧೀ ದರ್ಶನದಲ್ಲಿ 'ದೇವರು'

(ಒಂದು ತಾತ್ತ್ವಿಕ ವಿಶ್ಲೇಷಣೆ)

೧

ಗಾಂಧೀಜಿಯವರ ಪ್ರಕಾರ ದೇವರ ಅಸ್ತಿತ್ವವೆಂಬುದು ವಾದ ವಿವಾದಗಳ ಮೂಲಕ ಚರ್ಚಿಸಿ ಸ್ಥಾಪಿಸುವಂತಹುದಲ್ಲ; ದೇವರ ಅಸ್ತಿತ್ವ ವಾದ ವಿವಾದಗಳನ್ನು ಮೀರಿದ್ದು ; ದೇವರು ಸ್ವಯಂ ಸಿದ್ಧ ತತ್ತ್ವ. ಅಂದರೆ ಕೇವಲ ಬೌದ್ಧಿಕ ಚರ್ಚೆಯೇ ದೇವರ ಅಸ್ತಿತ್ವವನ್ನು ಅಳೆಯುವ ಏಕೈಕ ಮಾನದಂಡವಲ್ಲ. ಬೌದ್ಧಿಕವಾದ ವಾದ ವಿವಾದಗಳು ದೇವರ ಅಸ್ತಿತ್ವವನ್ನು ಸಾಬೀತುಪಡಿಸಿದ ಮೇಲೆ ಮಾತ್ರ ದೇವರಿದ್ದಾನೆ ಎಂದು ಒಪ್ಪಬೇಕು ಎಂಬುವ ವಿಚಾರವಾದಿಯ (Rationalist) ಯುಕ್ತಿಯನ್ನು ಗಾಂಧೀಜಿ ಒಪ್ಪುವುದಿಲ್ಲ. ಗಾಂಧೀ ದರ್ಶನದಲ್ಲಿ ದೇವರ ಅಸ್ತಿತ್ವದ ವಿಚಾರವನ್ನು ಗಣನೆಗೆ ತೆಗೆದುಕೊಂಡರೆ ಒಂದು ರೀತಿಯ 'ಬೌದ್ಧಿಕ ವಿರೋಧ' (anti-intellectualism) ಇರುವುದು ಅವರ ಈ ಕೆಳಗಿನ ಮಾತುಗಳಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ :

"He is not God who merely satisfies the intellect, if He ever does. God to be God must rule the heart and transform it;".[1]

ಗಾಂಧೀಜಿ ದೇವರ ಅಸ್ತಿತ್ವವನ್ನು ತರ್ಕ (Reason) ದಿಂದ ಸಾಧಿಸಲಾಗುವುದಿಲ್ಲವೆಂದು ಅಭಿಪ್ರಾಯಪಡಲಿಲ್ಲ. ತರ್ಕದಿಂದ ದೇವರ ಅಸ್ತಿತ್ವವನ್ನು ಸಾಧಿಸಬಹುದೆಂಬುದಕ್ಕೆ ಗಾಂಧೀಜಿ ಕೊಡುವ ವಾದ ಬಹಳ ಚಮತ್ಕಾರವಾದುವಾಗಿದೆ :

"If we exist and our parents and their parents have existed then it is proper to believe in the Parent of whole creation !'[2]

ಆದರೆ ದೇವರು ಮುಖ್ಯತಃ ಅನುಭವಗಮ್ಯನಾದುದರಿಂದ ತರ್ಕಗಳಿಂದ ಅವನ ಅಸ್ತಿತ್ವವನ್ನು ಸಾಧಿಸಬಹುದಾದರೂ, ತರ್ಕ ಕೇವಲ ಬೌದ್ಧಿಕವಾದುದರಿಂದ ಅಷ್ಟು ಮುಖ್ಯವಲ್ಲ ಎಂಬುದು ಗಾಂಧೀಜಿಯವರ ವಾದದ ನಿಲುವಾಗಿತ್ತು. ಅಷ್ಟೇ ಅಲ್ಲ. ಬುದ್ಧಿ ಅಥವಾ ತರ್ಕ ಎರಡು ಅಲುಗುಳ್ಳ ಕತ್ತಿಯಂತೆ : ಯಾವುದನ್ನು ಬುದ್ಧಿಯಿಂದ ಸಾಧನೆ ಮಾಡಿ ತೋರಿಸುತ್ತೇವೆಯೋ ಅದನ್ನೇ ಬುದ್ಧಿಯ ಇನ್ನೊಂದು ಮುಖವನ್ನು ಹಿಡಿದು ಅಲ್ಲಗಳೆಯಲೂ ಬಹುದು. ಅಂದರೆ ತರ್ಕವನ್ನು ಉಪಯೋಗಿಸಿಕೊಂಡು ದೇವರ ಅಸ್ತಿತ್ವವನ್ನು ಸಾಧಿಸಬಹುದು : ನಿರಾಕರಿಸಲೂ ಬಹುದು. ತರ್ಕ ಈ ಎರಡೂ ಕಾರ್ಯಗಳನ್ನು ಮಾಡುವುದರಿಂದ ದೇವರ ಅಸ್ತಿತ್ವದ

ಬಗ್ಗೆ ಒಂದು ದೃಢ ನಿಲುವನ್ನು ಕೊಡಲು ಸೋಲುತ್ತದೆ. ಆದುದರಿಂದಲೇ ಗಾಂಧೀಜಿ, ತರ್ಕ ಅಥವಾ ಬುದ್ಧಿಗೆ ದೇವರ ಅಸ್ತಿತ್ವವನ್ನು ಸಾಬೀತು ಮಾಡುವುದಿರಲಿ, ಅವನ ಮುಖವನ್ನು ತೋರಿಸುವ ಶಕ್ತಿಯಾಗಲೀ ಸಾಮರ್ಥ್ಯವಾಗಲಿ ಇಲ್ಲವೆಂದು ವಾದಿಸುತ್ತಾರೆ. ಒಟ್ಟಾರೆ, ದೇವರ ಅಸ್ತಿತ್ವ ಬುದ್ಧಿಯ ಸಾಮರ್ಥ್ಯಕ್ಕೆ ಮೀರಿದ್ದು:

"Reason is powerless to know Him. He is beyond the reach or grasp of reason."[3]

೨

ದೇವರ ಅಸ್ತಿತ್ವವನ್ನು ಸಿದ್ಧಪಡಿಸುವುದರಲ್ಲಿ ಬುದ್ಧಿ ಅಸಮರ್ಥವೆಂದಾದರೆ, ದೇವರಿದ್ದಾನೆಂಬುದಕ್ಕೆ ಆಧಾರವಾದರೂ ಏನು? 'ನಂಬಿಕೆ'ಯೇ ಪರಮ ಆಧಾರ ಎಂಬುದು ಗಾಂಧೀಜಿಯ ನೇರ ಹಾಗೂ ಸರಳ ಉತ್ತರ. ಈ ನಂಬಿಕೆಯಾದರೂ ಏನು? ಅದು ಒಂದು ಬಗೆಯ ಅಂತಃಶಕ್ತಿ, ಆಧ್ಯಾತ್ಮಿಕ ಬಲ, ಅಂತರಿಕ ದನಿ. ಪರಿಶುದ್ಧ ಮನಸ್ಸು ಹಾಗೂ ಆಧ್ಯಾತ್ಮ ದೃಷ್ಟಿಯನ್ನು ಉಳ್ಳವರು ನಿರಾಕರಿಸಲಾರದ ಅದಮ್ಯ ಶಕ್ತಿ.

ಆಳವಾಗಿ ವಿಶ್ಲೇಷಿಸಿದರೆ ನಂಬಿಕೆ ಮತ್ತು ಯುಕ್ತಿ ಪರಸ್ಪರ ವಿರುದ್ಧ ತತ್ತ್ವಗಳಲ್ಲ ಎಂಬುದು ತಿಳಿದುಬರುತ್ತದೆ. ನಂಬಿಕೆಗೆ ಅನರ್ಹವಾದ ಯುಕ್ತಿ (unfaithful reason) ಮತ್ತು ಯುಕ್ತಿರಹಿತವಾದ ನಂಬಿಕೆ—(irrational faith) ಇವೆರಡೂ ಅರ್ಥವಿಲ್ಲದ ಶಬ್ದಜಾಲಗಳಷ್ಟೆ. ನಂಬಿಕೆಯ ಮೂಲಕ ಯುಕ್ತಿ ಪುಷ್ಟಿಗೊಂಡರೆ ನಂಬಿಕೆ ಯುಕ್ತಿಯಿಂದ ಎಲ್ಲಿಲ್ಲದ ಸ್ಪಷ್ಟತೆಯನ್ನು ಪಡೆಯುತ್ತದೆ. ನಂಬಿಕೆಯನ್ನು ಸಾಬೀತು ಪಡಿಸಲು ಊಹಾಪೋಹ ಬುದ್ಧಿ ಅಸಮರ್ಥವೆಂಬಂತೆ ಕಂಡರೂ, ನಂಬಿಕೆ ಯುಕ್ತಿಗೆ ವಿರುದ್ಧವಾದುದಲ್ಲ. ನಂಬಿಕೆ ಇಲ್ಲದವನಿಗೆ ಎಲ್ಲವೂ ಶೂನ್ಯ. ನಂಬಿಕೆಯೊಡಗೂಡದ ಯುಕ್ತಿಯೇ ಮೂಢ ನಂಬಿಕೆ; ಎಲ್ಲ ಅಪಾಯದ ಮೂಲ; ಒಂದು ಬಗೆಯ ಹುಚ್ಚು ಎಂಬುದು ಗಾಂಧೀಜಿಯವರ ಖಚಿತ ಅಭಿಪ್ರಾಯ:

"Ture faith is appropriation of the reasoned experiences of people whom we believe to have lived a life purified by prayer and penance."[4]

ಹೀಗೆ ಮಾನವನ ಹೃದಯಾಂತರಾಳದಲ್ಲಿ ನೆಲಸಿರುವ ನಂಬಿಕೆಯೇ ದೇವರ ಅಸ್ತಿತ್ವಕ್ಕೆ ಆಧಾರ.

"The heart accepts a conclusion for which the intellect subsequently finds the reasoning. Arguments follow conviction. Man often finds reason in support of what he does or wants to do."[5]

ಹೀಗೆ ಪರಿಶುದ್ಧ ಹೃದಯಾಂತರಾಳದ ಅದಮ್ಯ ಕೂಗೇ ನಂಬಿಕೆ, ದೇವರ ಅಸ್ತಿತ್ವದ ಮೂಲಾಧಾರ. ಈ ಪರಿಶುದ್ಧ ನಂಬಿಕೆಗೆ ಪರ್ವತವನ್ನೇ ಅಲುಗಾಡಿಸುವ, ಸಾಗರವನ್ನೇ ಹಾಯ್ದು ನಿಲ್ಲುವ ಅಗಾಧ ಶಕ್ತಿ ಉಂಟು. ಎಲ್ಲಾ ಸಹಾಯಕರೂ ಕೈ ಬಿಟ್ಟ ಮೇಲೆ ಮಾನವನನ್ನು ಕೈ ಹಿಡಿದು ನಡೆಸುವುದು ಈ ನಂಬಿಕೆಯೊಂದೇ ಎಂದು ಗಾಂಧೀಜಿ ಒತ್ತಿ ಒತ್ತಿ ಹೇಳುತ್ತಿದ್ದರು.

ಗಾಂಧೀ ದರ್ಶನದಲ್ಲಿ ನಂಬಿಕೆಯ ಪ್ರಾಮುಖ್ಯತೆಯ ಬಗ್ಗೆ ಪ್ರಬಲವಾಗಿ ಒತ್ತಿ ಹೇಳಿದ್ದರೂ, ಅದು ಯುಕ್ತಿರಹಿತ ನಂಬಿಕೆಯಲ್ಲ ಎಂಬುದನ್ನು ನಾವು ಗಮನದಲ್ಲಿಡಬೇಕು. ನಂಬಿಕೆ

ಯೊಡಗೂಡದ ಶುದ್ಧ ಬುದ್ಧಿಗೆ (Pure Reason) ಗಾಂಧೀ ದರ್ಶನದಲ್ಲಿ ಪ್ರಮುಖ ಸ್ಥಾನವಿಲ್ಲ. ನಂಬಿಕೆಯೊಡಗೂಡದ ಶುದ್ಧ ಬುದ್ಧಿ ಮಿತಿಯುಳ್ಳದ್ದು. ಅದು ಯಾವ ಸಮಸ್ಯೆಯನ್ನೂ ಸಮೂಲಾಗ್ರವಾಗಿ ಬಿಡಿಸಲಾರದು, ಎಂಬುದಕ್ಕೆ ಗಾಂಧೀಜಿಯವರ ಈ ಮಾತುಗಳೇ ಸಾಕ್ಷಿ;

"Rationalists are admirable beings, but rationalism can be a hideous monster when it claims omnipotence for itself, Attribution of omnipotence to reason is as bad a piece of idolatry as the worship of stick and stone believing it to be God. I plead not for the suppression of reason but for a due recognition of that in us which sanctifies reason."[6]

ನಂಬಿಕೆ ರಹಿತವಾದ ಶುದ್ಧ ಬುದ್ಧಿಯ (Pure Reason) ಈ ಸುಂದರ ವಿಶ್ಲೇಷಣೆ ಜರ್ಮನಿಯ ಸುಪ್ರಸಿದ್ಧ ತತ್ವಜ್ಞಾನಿಯಾದ ಕ್ಯಾಂಟನ ಶುದ್ಧ ಬುದ್ಧಿಯ ವಿಶ್ಲೇಷಣೆಗೆ ಎಷ್ಟೊಂದು ಹತ್ತಿರವಾಗಿದೆ ಎಂಬುದು ಇಲ್ಲಿನ ಮುಖ್ಯ ಅಂಶ.[7] ಗಾಂಧೀ ದರ್ಶನದಲ್ಲಿ ದೇವರು ನಂಬಿಕೆಯೊಡಗೂಡಿದ ಬುದ್ಧಿಯ ವಸ್ತು.

೩

ಗಾಂಧೀ ದರ್ಶನದಲ್ಲಿ ಒಂದು ಬಗೆಯ 'ಅನುಭಾವ' ಇಲ್ಲದೇ ಇಲ್ಲ. ಪ್ರಸಿದ್ಧ ಅನುಭಾವಿಗಳಂತೆ ಗಾಂಧೀಜಿ ಸಮಾಧಿಸ್ಥಿತಿಯನ್ನು ಅನುಭವಿಸದಿದ್ದರೂ ತಮ್ಮನ್ನು ಕೈ ಹಿಡಿದು ನಡೆಸುತ್ತಿರುವ ಆಂತರಿಕ ಶಕ್ತಿಯನ್ನು ಗುರುತಿಸಿದ್ದರು. ಇದೇ ಅವರ ದರ್ಶನದಲ್ಲಿ ಕಾಣುವ ತಾರ್ಕಿಕ ಬೇಡಿಕೆಗಳಿಗೆ ಬೆನ್ನುತಿರುಗಿಸುವಿಕೆಯ ಮೂಲ.

೪

ಗಾಂಧೀ ದರ್ಶನದಲ್ಲಿ ದೇವರು ವ್ಯಕ್ತಿ ಸ್ವರೂಪನೋ (**personal**) ಅಥವಾ ವ್ಯಕ್ತಿ ಸ್ವರೂಪವಿಲ್ಲದವನೋ (impersonal), ಎಂಬುದು ಬಹು ಮುಖ್ಯವಾದ, ಉತ್ತರಿಸಲು ಅಷ್ಟೇ ಕಷ್ಟವಾದ ಪ್ರಶ್ನೆ; 'ಹೌದು' 'ಅಲ್ಲ' ಎಂದು ಎರಡು ಸ್ಪಷ್ಟ ಮಾತುಗಳಿಂದ ಉತ್ತರಿಸುವಂಥದ್ದಲ್ಲ.

ದೇವರ ಬಗ್ಗೆ ಅವರ ಚಿಂತನೆಗಳನ್ನು ಅಮೂಲಾಗ್ರವಾಗಿ ಪರಿಶೀಲಿಸಿದಾಗ ಅವರು ಮೊದಮೊದಲು ಹೇಗೆ ವ್ಯಕ್ತಿಸ್ವರೂಪನಾದ ದೇವರಲ್ಲಿ ನಂಬಿಕೆ ಇಟ್ಟದ್ದರು ಎಂಬುದು ವೇದ್ಯವಾಗುತ್ತದೆ. ದೇವರೂ ಒಬ್ಬ ವ್ಯಕ್ತಿ. ಆದರೆ ಇನ್ನುಳಿದ ವ್ಯಕ್ತಿಗಳಂತೆ ಅವನು ಮಿತನಾದವನಲ್ಲ (unlimited). ಅವನಿಗೆ ಸಂಕಲ್ಪಶಕ್ತಿ ಉಂಟು (willpower). ಪ್ರಜ್ಞಾನಘನನೂ ಸ್ವಪ್ರಜ್ಞೆ ಉಳ್ಳವನೂ ಆದ ದೇವರು ದಯಾಮಯ, ಆಪ್ತ ಗೆಳೆಯ, ಗುರು ಮತ್ತು ಮಾರ್ಗದರ್ಶಿ; ಕರಾಳದಿನಗಳಲ್ಲಿ ಬೆಳಕನ್ನು ತೋರಿಸುವವನು ಎಂದು ವೈಷ್ಣವ ಧರ್ಮದಲ್ಲಿ ಪ್ರತಿಪಾದಿಸಿರುವುದನ್ನು ಗಾಂಧೀಜಿ ಮುಕ್ತಕಂಠದಿಂದ ಗುಣಗಾನ ಮಾಡುತ್ತಾರೆ. ಈ ಅರ್ಥದಲ್ಲಿ, ದೇವರು ಒಂದು ರೀತಿಯ ನಿರಾಕಾರ, ನಿರ್ಗುಣ, ಅಮೂರ್ತ ತತ್ತ್ವವಲ್ಲ. ಅವನು ಮಾನವನಿಗೆ ತೀರ ಸಮೀಪನೂ ಸುಲಭಲಭ್ಯನೂ ಆಗಿದ್ದಾನೆ. ಹಾಗಿಲ್ಲದಿದ್ದರೆ ಧಾರ್ಮಿಕ ಆಚರಣೆಗಳೆಲ್ಲ ಅರ್ಥವಿಲ್ಲದವುಗಳಾಗುತ್ತಿದ್ದವು. ದೇವರು ಎಷ್ಟೇ ಅಪ್ರಮೇಯನಾದರೂ ಅವನನ್ನು ಒಂದಲ್ಲ ಒಂದು ದಿನ ಪಡೆದೇ ತೀರುತ್ತೇನೆ ಎಂಬುದು ಭಕ್ತನ ಅಚಲ ಆಶಾವಾದ. ಜೀವಂತ ವ್ಯಕ್ತಿಯಾದ ದೇವರ ಸಾನ್ನಿಧ್ಯವೇ ಭಕ್ತನ ದಿವ್ಯಾನಂದ.

ಅಲ್ಲದೆ ದೇವರು ಪ್ರೀತಿಯ, ಪ್ರೇಮದ ಸಾಕಾರ ರೂಪ. ಪ್ರೀತಿ ಅಥವಾ ಪ್ರೇಮ ಯಾವಾಗಲೂ ವ್ಯಕ್ತಿಸ್ವರೂಪವಿಲ್ಲದ್ದಾಗಿರುವುದು ಸಾಧ್ಯವಿಲ್ಲ: ಪ್ರೀತಿ ಒಂದು ಅಮೂರ್ತ ತತ್ತ್ವ ಹಾಗೂ ವ್ಯಕ್ತಿಯ ನಡುವೆ ಇರುವಂಥದಲ್ಲ. ಪ್ರೇಮ ಸ್ವರೂಪನಾದ ದೇವರನ್ನು ವ್ಯಕ್ತಿ ಸ್ವರೂಪನೆಂದು ಕರೆಯುವುದೇ ಸಮಂಜಸವೆಂದು ಗಾಂಧೀ ದರ್ಶನದಲ್ಲಿ ನಾವು ತಿಳಿಯುತ್ತೇವೆ.

ಆದರೆ ತಮ್ಮ ವಿಚಾರಪಥದಲ್ಲಿ ಮುಂದುವರಿದಂತೆ ಗಾಂಧೀಜಿ ವ್ಯಕ್ತಿ ಸ್ವರೂಪವಲ್ಲದ ದೇವರಲ್ಲಿ ನಂಬಿಕೆಯಿಡುವುದನ್ನು ಅವರ ಬರವಣಿಗೆಗಳನ್ನು ಎಚ್ಚರಿಕೆಯಿಂದ ಅವಲೋಕಿಸಿದಾಗ ತಿಳಿಯಬಹುದು. ಅವರು ಸತ್ಯವೇ ದೇವರೆಂದಾಗಲಂತೂ ಸಂಪೂರ್ಣವಾಗಿ ವ್ಯಕ್ತಿ ಸ್ವರೂಪನಲ್ಲದ ದೇವರಲ್ಲಿ ನಂಬುತ್ತಾರೆ. ಏಕೆಂದರೆ 'ಸತ್ಯ' ಎಂದಿಗೂ ವ್ಯಕ್ತಿ ಸ್ವರೂಪವಾಗಿರಲು ಸಾಧ್ಯವಿಲ್ಲ.

೫

'ದೇವರೇ ಸತ್ಯ' (God is Truth) ಮತ್ತು 'ಸತ್ಯವೇ ದೇವರು' (Truth is God)—ಈ ಎರಡು ವಾಕ್ಯಗಳು ಗಾಂಧೀ ದರ್ಶನದಲ್ಲಿ ಬಹುಮುಖ್ಯವಾದ ತಾತ್ತ್ವಿಕ ಹೇಳಿಕೆಗಳು.

ಮೊದಲನೇ ವಾಕ್ಯವನ್ನು ಪರಿಶೀಲಿಸೋಣ. ದೇವರನ್ನು ವಿವರಿಸಲು ಭಾಷೆ ಮಿತವಾದರೂ, ಇತರ ಎಲ್ಲ ವಿವರಣೆಗಳಿಗಿಂತ ಅವನನ್ನು 'ಸತ್ಯ'ನೆಂದು ಸಂಬೋಧಿಸಿದಾಗ[8] ಹೆಚ್ಚು ಅರ್ಥಪೂರ್ಣವಾಗುವುದೆಂದು ಗಾಂಧೀಜಿ ಬರೆಯುತ್ತಾರೆ. ದೇವರು ದಯಾಮಯ, ಸರ್ವಜ್ಞ; ಇವೆಲ್ಲಕ್ಕೂ ಮಿಗಿಲಾಗಿ ಅವನು 'ಸತ್ಯ' (Truth) ವಾಗಿದ್ದಾನೆ.

"ದೇವರೇ ಸತ್ಯ" ಎಂದು ಗಾಂಧೀಜಿ ಪ್ರತಿಪಾದಿಸಿದಾಗ 'ಸತ್ಯ' ದೇವರ ಒಂದು ಗುಣ ಮಾತ್ರ ಎಂದು ಅರ್ಥ ಮಾಡಬಾರದು. 'ಸತ್ಯ' ದೇವರ ಸ್ವರೂಪವೇ. ಇನ್ನೂ ಮುಂದುವರಿದು ಹೇಳುವುದಾದರೆ, ಗಾಂಧೀದರ್ಶನದಲ್ಲಿ 'ಸತ್ಯ' 'ದೇವರಿಂದ' ಬೇರ್ಪಡಿಸಲಾರದ್ದು. 'ಸತ್ಯ' ದೇವರ ಒಂದು ಗುಣವಲ್ಲ, ಅಂಶವಲ್ಲ; ಸತ್ಯವೇ ದೇವರು ಎಂಬುದನ್ನು ಸ್ಪಷ್ಟಪಡಿಸಲೆಂದೇ ಗಾಂಧೀಜಿಯವರು "ಸತ್ಯವೇ ದೇವರೆಂದು" (Truth is God) ಪುನಃ ಹೇಳಿರುವುದು. ಅದ್ವೈತ ದರ್ಶನದಲ್ಲಿ 'ಬ್ರಹ್ಮ'ವನ್ನು ಸತ್, ಚಿತ್, ಆನಂದ (ಸಚ್ಚಿದಾನಂದ) ಎಂದು ವಿವರಿಸಿದಾಗ ಹೇಗೆ 'ಸತ್' 'ಚಿತ್' ಮತ್ತು 'ಆನಂದ'ಗಳು ಬ್ರಹ್ಮದ ಗುಣಗಳಲ್ಲವೆಂದು ಸ್ಪಷ್ಟಪಡಿಸಿದೆಯೋ ಹಾಗೆ. ಇಲ್ಲಿ 'ಸತ್' 'ಚಿತ್' 'ಆನಂದ' ಎಂಬ ಮೂರು ಪದಗಳಿದ್ದರೂ, ಅವುಗಳು 'ಒಂದೇ ಅರ್ಥ'ವನ್ನು ಮಾತ್ರ ಸೂಚಿಸುತ್ತವೆ.

ತಾತ್ತ್ವಿಕ ಪರಿಭಾಷೆಯಲ್ಲಿ ಹೇಳುವುದಾದರೆ, ಗಾಂಧೀಜಿಯವರ ಪ್ರಕಾರ Reality (ಯಥಾವತ್ತು) ಮತ್ತು Truth (ಸತ್ಯ) ಇವುಗಳು ಪರ್ಯಾಯ ಪದಗಳಷ್ಟೆ. ಇವುಗಳ ನಡುವೆ ಯಾವ ಭೇದವೂ ಇಲ್ಲ. ಯಥಾವತ್ತೇ ಸತ್ಯ, ಸತ್ಯವೇ ಯಥಾವತ್ತು. ಇವು ಗಾಂಧೀ ದರ್ಶನದಲ್ಲಿ ಕೇವಲ ಅದಲು ಬದಲು ಪದಗಳು.

ಜೆ. ಎಚ್. ಮುರ್‌ಹೆಡ್ ಎಂಬ ಪಾಶ್ಚಾತ್ಯ ತಾತ್ತ್ವಿಕ ವಿದ್ವಾಂಸ, ಗಾಂಧೀಜಿಯವರು ಯಥಾವತ್ತತೆ ಮತ್ತು ಸತ್ಯತೆ ಇವುಗಳನ್ನು ಐಕ್ಯ ಮಾಡುವುದನ್ನು ಅಕ್ಷೇಪಿಸಿದ್ದಾನೆ. ಈ ಅಕ್ಷೇಪ ಕೇವಲ ಗಾಂಧೀದರ್ಶನಕ್ಕೆ ಮಾತ್ರ ಅನ್ವಯವಾಗುವುದಿಲ್ಲ; ಇಡೀ ಭಾರತೀಯ ಚಿಂತನೆಗೇ ಈ ಅಕ್ಷೇಪ ನಿಲ್ಲುತ್ತದೆ. ಈ ವಿದ್ವಾಂಸನ ಪ್ರಕಾರ ಯಥಾವತ್ತು ಮತ್ತು ಸತ್ಯಗಳು ಪರ್ಯಾಯ ಪದಗಳಲ್ಲ; ಅದಲು ಬದಲು ಪದಗಳಂತೂ ಅಲ್ಲವೇ ಅಲ್ಲ. ಮಾನವನ ಮನಸ್ಸೆಂಬ ದರ್ಪಣದಲ್ಲಿ 'Reality' (ಯಥಾವತ್ತು)ಯ ಪ್ರತಿಫಲನವೇ 'ಸತ್ಯ'

(Truth). Reality (ಯಥಾವತ್ತು) ಮಾನವನ ಮನಸ್ಸಿಗೆ ಹೇಗೆ ತೋರ್ಪಡಿಸಿಕೊಳ್ಳುತ್ತದೋ ಅದೇ ಸತ್ಯ. ಅದನ್ನೇ ತಿಳಿಯುವಿಕೆ (Knowing) ಎಂದು ಕರೆಯುವುದು.

ಯಥಾವತ್ತನ್ನು ಅನುಭಾವಿ ನೋಡುವ ದೃಷ್ಟಿಯೇ ಬೇರೆ. ಧಾರ್ಮಿಕ ಭಾಷೆಯಲ್ಲಿ ಹೇಳುವುದಾದರೆ ಸತ್ಯ ದೇವರ ' ವಚನ '. ದೇವರೇ ಯಥಾವತ್ತು, ಆತನ ವಚನವೇ ಸತ್ಯ. ಅಂದರೆ ಸತ್ಯ ಒಂದು ದೇವರ ಅಂಶ ಮಾತ್ರ ; ಒಂದು ಗುಣ ; ದಿವ್ಯಗುಣ. ಹೀಗೆಂದಾಗಲೇ ಸ್ಪಷ್ಟತೆ ಉಂಟಾಗುತ್ತದೆ. ಜ್ಞಾನ ಮೀಮಾಂಸೆಯೂ (Theory of Knowledge), ಯಥಾವತ್ತು ಮತ್ತು ' ಸತ್ಯ 'ಗಳನ್ನು ಐಕ್ಯಮಾಡುವುದಕ್ಕೆ ಯಾವ ಸಮರ್ಥನೆಯೂ ಇಲ್ಲವೆಂದು ಹೇಳುವಾಗ, ' ತಿಳುವಳಿಕೆಯೇ ಇರುವಿಕೆ ' (Knowing is being) ಎಂದು ಪ್ರತಿಪಾದಿಸುವ ಹಿಂದೂ ಚಿಂತನೆಯಿಂದ ಪಾಶ್ಚಾತ್ಯ ವೈಜ್ಞಾನಿಕ ಪ್ರಜ್ಞೆಯುಳ್ಳವನು ತಾತ್ತ್ವಿಕವಾಗಿ ದಿಕ್ಕನ್ನು ತಪ್ಪುತ್ತಾನೆ ಎಂದು ಮುರ್‌ಹೆಡ್ ಬರೆಯುತ್ತಾನೆ.[9]

ಈ ಆಕ್ಷೇಪಕ್ಕೆ ಗಾಂಧೀ ದರ್ಶನದಲ್ಲಿ ಉತ್ತರವನ್ನು ಹುಡುಕುವುದು ಕಷ್ಟವಲ್ಲ. ಉಪನಿಷತ್ತುಗಳು ಹೇಳುವಂತೆ ಸಾಧಕ ' ತಾನು ಬ್ರಹ್ಮವೇ ಆಗಿದ್ದೇನೆ ' ಎಂಬುದನ್ನು ಸಾಕ್ಷಾತ್ಕರಿಸಿಕೊಂಡಾಗ ಬ್ರಹ್ಮವಾಗಿದ್ದುಕೊಂಡೇ ತಿಳಿಯುತ್ತಾನೆ. ಇಲ್ಲಿ ' ತಿಳಿಯುವುದೆಂದರೆ ' ಸಾಧಾರಣವಾಗಿ ನಾವು ಹೇಳುವ ಒಂದು ವಸ್ತುವಿನ ಜ್ಞಾನವನ್ನು ಪಡೆಯುವುದಲ್ಲ. ತಾನು ಬ್ರಹ್ಮವಾಗಿದ್ದುಕೊಂಡೇ ' ಬ್ರಹ್ಮವಾಗಿದ್ದೇನೆ ' ಎಂಬ ಪ್ರಜ್ಞೆಯನ್ನು ಹೊಂದಿರುವುದೇ ಸಾಕ್ಷಾತ್ಕಾರ ಅಥವಾ ' ಮುಕ್ತಿ '. ಈ ಸ್ಥಿತಿಯಲ್ಲಿ ' ತಿಳಿಯುವಿಕೆ ' ಮತ್ತು ' ಇರುವಿಕೆ ' ಐಕ್ಯವಾಗುತ್ತವೆ. ಹೀಗೆ ಗಾಂಧೀದರ್ಶನದಲ್ಲಿ ' ಸತ್ಯಂ ಜ್ಞಾನಂ ಅನಂತಂ ಬ್ರಹ್ಮ '[10] ' ಸತ್ಯಂ ಜ್ಞಾನಂ ಆನಂದಂ ಬ್ರಹ್ಮ ', ಮುಂತಾದ ಉಪನಿಷದ್ ವಾಕ್ಯಗಳ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು.

೬

ಗಾಂಧೀ ದರ್ಶನದ " ಸತ್ಯವೇ ದೇವರು " ಎಂಬ ಸೂತ್ರ ಅನೇಕ ಕಾರ್ಯಗಳನ್ನು ಮಾಡುತ್ತದೆ. ಈ ಸೂತ್ರದ ಪ್ರಕಾರ ಜಗತ್ತಿನಲ್ಲಿ ' ನಾಸ್ತಿಕ 'ನೆಂಬುವವನೇ ಇಲ್ಲ. ಏಕೆಂದರೆ ನಾಸ್ತಿಕ ' ದೇವ 'ರಲ್ಲಿ ನಂಬಿಕೆ ಇಡದಿದ್ದರೂ ' ಸತ್ಯ 'ದಲ್ಲಿ ಅಚಲ ಶ್ರದ್ಧೆಯನ್ನು ಇಟ್ಟಿರುತ್ತಾನೆ. ಅವನು ಧಿಕ್ಕರಿಸುವುದು ' ದೇವ 'ರನ್ನೇ ವಿನಹ ' ಸತ್ಯ 'ವನ್ನಲ್ಲ. " ಸತ್ಯವೇ ದೇವರು " ಎಂದಾಗ ಸತ್ಯವನ್ನು ಗೌರವಿಸುವ ಅವನು ತನಗರಿವಿಲ್ಲದೆಯೇ ' ದೇವ 'ರನ್ನೂ ಗೌರವಿಸುವುದರಿಂದ ' ನಾಸ್ತಿಕ 'ನಾಗಿ ಉಳಿಯದೆ ಆಸ್ತಿಕನೇ ಆಗುತ್ತಾನೆ, ಎಂದು ಗಾಂಧೀಜಿ ವಾದಿಸುತ್ತಾರೆ. ಈ ಅರ್ಥದಲ್ಲಿ, ಬೌದ್ಧರು,ಮಾರ್ಕ್ಸ್‌ವಾದಿಗಳು ಇನ್ನೂ ಇತರ ' ನಾಸ್ತಿಕ 'ರೆನಿಸಿಕೊಂಡವರು ಆಸ್ತಿಕರಾಗಿಬಿಡುತ್ತಾರೆ.

" ದೇವರೇ ಸತ್ಯ " ಎಂಬುದಕ್ಕೆ ಬದಲಾಗಿ " ಸತ್ಯವೇ ದೇವರು " ಎಂದಾಗ, ದೇವರ ಬಗೆ ಇರುವ ಕೆಲವು ತಪ್ಪುಕಲ್ಪನೆಗಳು ಮಾಯವಾಗುತ್ತವೆ ಎಂದು ಗಾಂಧೀಜಿ ನಂಬುತ್ತಾರೆ. ' ದೇವರು ' ಎಂಬ ಪದ ವಿವಿಧಾರ್ಥಗಳನ್ನು ಕೆಲವೊಮ್ಮೆ ಪರಸ್ಪರ ವಿರೋಧಾರ್ಥಗಳನ್ನೂ ಸೂಚಿಸುತ್ತದೆ. ಅಲ್ಲದೆ ' ದೇವರ ' ಹೆಸರಿನಲ್ಲಿ ಮಾಡಬಾರದ ಅನ್ಯಾಯಗಳನ್ನೂ, ಹೀನ ಕೃತ್ಯಗಳನ್ನೂ, ವಿನಾಕಾರಣ ಯುದ್ಧಗಳನ್ನೂ ಮಾಡಿರುವುದರಿಂದ ಕೆಲವರಂತೂ ' ದೇವರು ' ಎಂಬ ಪದವನ್ನು ಕೇಳಿದರೇ ಸಿಟ್ಟಿಗೆದ್ದು ಜಿಗುಪ್ಸಾ ಮನೋಭಾವವನ್ನು ತಾಳುತ್ತಾರೆ. ದೇವರನ್ನು ಅದರ ಸುತ್ತಬೆಳೆದ ಧರ್ಮವನ್ನು ದ್ವೇಷಿಸುತ್ತಾರೆ. ಈ ದ್ವೇಷಕ್ಕೆ ದೇವರ ಬಗ್ಗೆ ಬೆಳೆದು ಬಂದಿರುವ ತಪ್ಪುಕಲ್ಪನೆಯೇ ಕಾರಣ. " ಸತ್ಯವನ್ನೇ ದೇವರೆ "ಂದಾಗ ಈ ದ್ವೇಷಕ್ಕೆ, ಮತಾಂಧತೆಗೆ (fanaticism) ಅಶಾಢಭೂತಿತನಕ್ಕೆ ಎಳ್ಳಷ್ಟೂ ಎಡೆಯಿಲ್ಲ ; ಏಕೆಂದರೆ ಮಾನವ ತಾನು ಮಾನವನೇ ಆಗಿದ್ದ ಪಕ್ಷದಲ್ಲಿ, ಸತ್ಯವನ್ನು ದ್ವೇಷಿಸಲಾಗದು. ಸತ್ಯ ಅಪ್ರಿಯವಾಗಿರಬಹುದಾದರೂ

ಅದನ್ನು ಎಲ್ಲಿಲ್ಲದ ಆದರದಿಂದ, ಶ್ರದ್ಧೆಯಿಂದ, ತೆರೆದ ಮನಸ್ಸಿನಿಂದ ಗುರುತಿಸಿ, ಸ್ವಾಗತಿಸಿ, ಆರಾಧಿಸಬೇಕು. ಈ ಅರ್ಥದಲ್ಲಿ ಯಾವ ಧರ್ಮದ ಯಾವ ಕಟ್ಟುಪಾಡುಗಳನ್ನು ಪಾಲಿಸದಿದ್ದರೂ ಅವನು ಸತ್ಯಶೋಧಕನಾಗಿದ್ದರೆ, ಢಾಂಬಿಕ ಧರ್ಮಾವಲಂಬಿಗಿಂತ ಸಾವಿರಪಾಲು ಉತ್ತಮ ಎಂಬುದು ಗಾಂಧೀಜಿಯವರ ದೃಢನಿರ್ಣಯವಾಗಿತ್ತು.

೨

ಗಾಂಧೀ ದರ್ಶನದಲ್ಲಿ 'ಸತ್ಯ'ವನ್ನು ಪರಿಶುದ್ಧ ಪ್ರೀತಿ ಅಥವಾ ಪ್ರೇಮದೊಡನೆಯೂ ಐಕ್ಯಗೊಳಿಸಲಾಗಿದೆ. ಅಸತ್ಯದ ಅಭಾವವಷ್ಟೇ, 'ಸತ್ಯ'ವಲ್ಲ; ಸತ್ಯ ಭಾವರೂಪವಾದದ್ದು. ಅಸತ್ಯವನ್ನು ಹೇಳದಿರುವುದಷ್ಟೇ ಸತ್ಯವಲ್ಲ; ಸತ್ಯವಂತನಾಗಿರಬೇಕಾದರೆ ಅಸತ್ಯವನ್ನು ನುಡಿಯದೇ ಇರಬೇಕಾದುದು ಅತ್ಯಾವಶ್ಯಕವಾದುದಾದರೂ, ಸತ್ಯದ ಮಾಪದಂಡ ಎಂದಿಗೂ ಬುದ್ಧಿ (Reason) ಒಂದೇ ಅಲ್ಲ; ಅದು ಅವನ ಹೃದಯ, ಅಂತರಾಳವೂ ಹೌದು; ಅಪರಿಮಿತ ಪ್ರೀತಿ, ಪ್ರೇಮವೇ ಸತ್ಯದ ಮಾಪದಂಡ. ಒಟ್ಟಾರೆ ಪರಿಶುದ್ಧ ಪ್ರೀತಿ, ಅಥವಾ ಪ್ರೇಮವೇ ಸತ್ಯ (Truth is Love), ದೇವರು. ಆದುದರಿಂದ "ಪರಿಶುದ್ಧ ಪ್ರೀತಿ ಅಥವಾ ಪರಿಶುದ್ಧ ಪ್ರೇಮವೇ ದೇವರು" ಎಂಬ ತೀರ್ಮಾನಕ್ಕೆ ಗಾಂಧೀಜಿ ಬಂದಿಳಿಯುತ್ತಾರೆ.

ಗಾಂಧೀಜಿಯವರು ದೇವರ ಸ್ವರೂಪದ ಬಗ್ಗೆ ತಮ್ಮ ಚಿಂತನೆಯನ್ನು ಮುಂದುವರಿಸಿದಂತೆಲ್ಲಾ ಅನೇಕ ತಾತ್ತ್ವಿಕ ತಿರುವುಗಳನ್ನು (philosophical turns) ತೆಗೆದುಕೊಳ್ಳುವುದನ್ನು ನಾವು ಗಾಂಧೀ ದರ್ಶನವನ್ನು ಸೂಕ್ಷ್ಮವಾಗಿ ಅವಲೋಕಿಸುವುದರಿಂದ ತಿಳಿಯಬಹುದು. ಮೊದಮೊದಲು ದೇವರನ್ನು 'ಪುರುಷೋತ್ತಮ' ನೆಂದು (the Highest Person) ಪ್ರತಿಪಾದಿಸಿ, ಅನಂತರ "ಸತ್ಯವೇ ದೇವರೆಂದು" ಹೇಳುವುದರ ಮೂಲಕ ತಮ್ಮ ಮೊದಲ ನಿಲುವನ್ನು ತಾವೇ ವಿರೋಧಿಸಿ ಕೊನೆಯಲ್ಲಿ "ಸತ್ಯವೇ ಪ್ರೇಮ (ಪ್ರೀತಿ)" ಎಂದು ಸತ್ಯದೊಂದಿಗೆ ಪ್ರೇಮ (ಪ್ರೀತಿ)ವನ್ನು ಐಕ್ಯವಾಗುವುದರ ಮೂಲಕ ಪುನಃ ದೇವರು 'ಪುರುಷ' (Person) ನೆಂಬ ಕಲ್ಪನೆಗೆ ಬಂದಿಳಿಯುತ್ತಾರೆ; ಏಕೆಂದರೆ, ಪ್ರೇಮ (ಪ್ರೀತಿ) ಎಂದಿಗೂ ಪುರುಷರಹಿತವಾಗಿರುವುದು ಸಾಧ್ಯವಿಲ್ಲ; ಪ್ರೇಮ (ಪ್ರೀತಿ) ಯಾವಾಗಲೂ ಮೂರ್ತತೆಯ ಮೂಲಕವೇ ಅಭಿವ್ಯಕ್ತಗೊಳ್ಳುತ್ತದೆ. ಹೀಗೆ ಗಾಂಧೀ ದರ್ಶನದಲ್ಲಿ ಬರುವ ಭಾವಗಳು ನಿರ್ದಿಷ್ಟ ಭಾವಗಳಾಗಿ ಉಳಿಯದೆ ಇತರ ಭಾವಗಳೊಂದಿಗೆ ಐಕ್ಯವಾಗಿಬಿಡುತ್ತವೆ. ಹೀಗಾಗಿ ದೇವರ ಬಗ್ಗೆ ಅವರ ಅಭಿಪ್ರಾಯ ಸ್ಪಷ್ಟವಾಗಿ 'ಇದೇ' ಎಂದು ಬೊಟ್ಟು ಮಾಡಿ ತೋರಿಸುವುದು ಕಷ್ಟಸಾಧ್ಯವಾಗುತ್ತದೆ.

"ಸತ್ಯವೇ ದೇವರು" ಎಂದಾಗ ಧರ್ಮಾಂಧತೆಗೆ ಯಾವ ಎಡೆಯೂ ಇಲ್ಲದಂತಾಗಿ ದೇವರು ತೆರೆದ ಮನಸ್ಸಿನ ವಸ್ತುವಾಗುತ್ತಾನೆ ಎಂಬ ಗಾಂಧೀಜಿಯವರ ವಿಶ್ಲೇಷಣೆ ಸ್ವಾಗತಾರ್ಹವಾದರೂ, ಸತ್ಯ 'ದೇವರು' ಎಂಬ ಪದದಷ್ಟು ಸಂದಿಗ್ಧ ಅಲ್ಲ, ಎಂಬ ಅವರ ಅಭಿಪ್ರಾಯವನ್ನು ತಾತ್ತ್ವಿಕವಾಗಿ ಒಪ್ಪಲಾಗುವುದಿಲ್ಲ. ಅಷ್ಟೇಕೆ, ತತ್ತ್ವಶಾಸ್ತ್ರದಲ್ಲಿ 'ಸತ್ಯ' ಎಂಬ ಪದ, 'ದೇವರು' ಎಂಬ ಪದದಷ್ಟೇ ಸಂಕೀರ್ಣ ಹಾಗೂ ಸಂದಿಗ್ಧವಾದುದು. ಸತ್ಯವೆಂದರೇನು ಎಂಬ ಪ್ರಶ್ನೆಗೆ ನೇರ ಹಾಗೂ ಸರಳವಾದ ಉತ್ತರವನ್ನು ತತ್ತ್ವಶಾಸ್ತ್ರದಿಂದ ಬಯಸುವುದು ಜಟಿಲವೇ ಸರಿ. 'ಸಾಪೇಕ್ಷ ಸತ್ಯ' (Relative Truth), ವ್ಯವಹಾರ ಸತ್ಯ (Pragmatic Truth) ಪ್ರಾತಿಭಾಸಿಕ ಸತ್ಯ (Apparent Truth), ಆತ್ಯಂತಿಕ ಅಥವಾ ಅಂತಿಮ ಸತ್ಯ (Ultimate Truth)—ಹೀಗೆ ಅನೇಕ ಉಪಭಾಗಗಳ ಮೂಲಕ ಸತ್ಯವೆಂದರೇನೆಂಬ ಪ್ರಶ್ನೆಗೆ ತತ್ತ್ವಶಾಸ್ತ್ರ ಉತ್ತರಗಳನ್ನು ಹುಡುಕಲು ಉಪಕ್ರಮಿಸುತ್ತದೆ. ಹಾಗೆಯೇ ಸತ್ಯವೆಂದರೇನು ಎಂಬ ಪ್ರಶ್ನೆಯನ್ನು ಉತ್ತರಿಸಲು ತತ್ತ್ವಶಾಸ್ತ್ರದಲ್ಲಿ ಅನೇಕ ವಾದಗಳೂ [ಉದಾ: ಸಂವಾದವಾದ (correspondence theory); ಸಾಂಗತ್ಯವಾದ (coherence theory);

ಅರ್ಥಕ್ರಿಯಾಕಾರಿತ್ವವಾದ (pragmatic theory)] ಉಂಟು. ಜ್ಞಾನಮೀಮಾಂಸೆ (Theory of Knowledge)ಯ ಬೆಳವಣಿಗೆಯ ವಿವಿಧ ಹಂತಗಳನ್ನು ಅಭ್ಯಾಸಿಸಿದರಂತೂ ' ಸತ್ಯ ' ಎಂಬ ಪದ ಎಷ್ಟೊಂದು ಸಂಕೀರ್ಣ ಹಾಗೂ ಸಂದಿಗ್ಧವಾದುದು ಎಂಬುದು ಗೋಚರಿಸದೇ ಇರದು. ಆದರೂ ಎಲ್ಲ ಜಗೆಯ, ಎಲ್ಲ ಹಂತಗಳ, ಎಲ್ಲ ಮಾನವರಿಗೂ ' ವ್ಯಾವಹಾರಿಕ ಸತ್ಯ ' ಒಂದು ರೀತಿಯ ಭೂಮಿಕೆಯನ್ನು ಒದಗಿಸುತ್ತದೆ ಎಂಬ ಗಾಂಧೀ ದರ್ಶನದ ನಿರ್ವಿವಾದ ಅಂಶವನ್ನು ಇಲ್ಲಿ ತಪ್ಪದೇ ಗಮನಿಸಬೇಕು.

೮

ಗಾಂಧೀ ದರ್ಶನದಲ್ಲಿ ದೇವರು ಸಗುಣನೋ ಅಥವಾ ನಿರ್ಗುಣನೋ ಎಂಬುದು ಮತ್ತೊಂದು ಮುಖ್ಯವಾದ ಪ್ರಶ್ನೆ. ಸಗುಣ ದೇವರನ್ನು ಪ್ರತಿಪಾದಿಸುವ ವೈಷ್ಣವ ಧರ್ಮದ ಪ್ರಭಾವಕ್ಕೆ ಚಿಕ್ಕಂದಿನಲ್ಲೇ ಒಳಗಾದ ಗಾಂಧೀಜಿ, ದೇವರನ್ನು ಸರ್ವಜ್ಞ, ಸರ್ವಶಕ್ತ, ಪ್ರೇಮಮೂರ್ತಿ ಎಂಬೀ ಮುಂತಾದ ಸಗುಣಗಳಿಂದ ಸಂಬೋಧಿಸಿ ಆರಾಧಿಸಿದರೂ, ತಮ್ಮ ತಾತ್ತ್ವಿಕ ಚಿಂತನೆಯಲ್ಲಿ ಮುಂದುವರಿದಂತೆ, ಅದರಲ್ಲೂ " ಸತ್ಯವೇ ದೇವರು " ಎಂದಾಗ, ಪೂರ್ಣ ನಿರಾಕಾರ ನಿರ್ಗುಣ ದೇವರನ್ನು ಒಪ್ಪಿ ಗೌರವಿಸುತ್ತಾರೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅದ್ವೈತ ದರ್ಶನದಲ್ಲಿ ಹೇಳಿದಂತೆ ' ನಿರ್ಗುಣ ' ಎಂದರೆ ' ಗುಣಾತೀತ ' ಎಂದೇ ಗಾಂಧೀ ದರ್ಶನದ ಸ್ಪಷ್ಟೋಕ್ತಿ ; ದುರ್ಗುಣಗಳ ಆಗರವೆಂದಲ್ಲ. ಮಾನವನ ಭಾಷೆ ದೇವರಿಗೆ ಯಾವ ಗುಣವನ್ನು ಹೇಳಿದರೂ ಅದು ಮಿತವಾದುದರಿಂದ ದೇವರ ಸ್ವರೂಪವನ್ನು ಸಂಪೂರ್ಣವಾಗಿ ವಿವರಿಸಲಾರದು. ತೈತ್ತಿರೀಯ ಉಪನಿಷತ್ತಿನಲ್ಲಿ ಹೇಳಿದಂತೆ[12], ದೇವರು ವಾಕ್ ಮತ್ತು ಮನಸ್ಸುಗಳಿಂದ ಅಳೆಯಲಾರದ್ದು. ಅವರದೇ ಆದ ಮಾತುಗಳಲ್ಲಿ ಹೇಳುವುದಾದರೆ :

"……….. And little man has tried in his humble way to describe mighty God by giving Him attributes, though He is above all attributes, Indescribable, Immeasurable."[13]

ಇನ್ನೂ ಸ್ಪಷ್ಟವಾದ ಮಾತುಗಳಲ್ಲಿ ಹೇಳಬೇಕೆಂದರೆ :

"As a matter of fact, we are all thinking of the unthinkable describing the indescribable, seeking to know the unknown and that is why our speech falters, is inadequate and even often contradictory. That is why the Vedas describe Brahman as 'not this', 'not this'."[14] ಒಟ್ಟಾರೆ, ಗಾಂಧೀ ದರ್ಶನ, ದೇವರು ವರ್ಣನಾತೀತ ವಚನಾತೀತ ಎಂದು ಸಾರುತ್ತದೆ. ದೇವರು ಅನಂತ [Infinite]; ಜೀವ ಮತ್ತು ಪ್ರಪಂಚ, ಮಿತಿಯುಳ್ಳ ತತ್ತ್ವಗಳು [Finite] ಎಂದು ಪ್ರತಿಪಾದಿಸುವ ಗಾಂಧೀ ದರ್ಶನ, ಅನಂತನಾದ ದೇವರನ್ನು ವರ್ಣಿಸಲಾರೆವು ಎಂಬ ತೀರ್ಮಾನವನ್ನು ತಳೆದಿರುವುದು ತಾತ್ತ್ವಿಕವಾಗಿ ಎಷ್ಟೊಂದು ಸಮಂಜಸವಾಗಿದೆ ಎಂಬುದನ್ನು ಇಲ್ಲಿ ನಾವು ತಪ್ಪದೇ ಗಮನಿಸಬೇಕು. ಈ ಅರ್ಥದಲ್ಲಿಯೇ ದೇವರನ್ನು ಸಂಪೂರ್ಣವಾಗಿ ತಿಳಿಯಲಾಗುವುದಿಲ್ಲ [Perfect knowledge of God is a contradiction in terms] ಎಂದು ಗಾಂಧೀ ದರ್ಶನ ವಿನಯಪೂರ್ವಕವಾಗಿ ಒಪ್ಪಿಕೊಳ್ಳುತ್ತದೆ. ' ದೇವರು ಇಂಥವನಲ್ಲ ಹೊರತು ಅಂಥವನಲ್ಲ ' ಎಂದು ಗಾಂಧೀಜಿ ನಿರ್ದಿಷ್ಟವಾಗಿಯಾಗಲಿ ಸ್ಪಷ್ಟವಾಗಿಯಾಗಲಿ ತಿಳಿದಂತೆ ಕಂಡುಬರುವುದಿಲ್ಲ. ಹಾಗೆ ಹೇಳಲೂ ಸಾಧ್ಯವಿಲ್ಲ. ಏಕೆಂದರೆ ದೇವರು ' ಅನಂತ '; ಅಲ್ಲದೆ ಎಲ್ಲಾ ಮಾನವರ ದೇವರ ಕಲ್ಪನೆ ಒಂದೇ ತೆರನಾದು

ವಲ್ಲ; ಆದುದರಿಂದಲೇ ಬಹುಮುಖನಾದ ದೇವರನ್ನು ನಾನಾ ರೀತಿಯಲ್ಲಿ ಗಾಂಧೀಜಿ ವಿವರಿಸುತ್ತಾರೆ:

"To me God is Truth and Love; God is ethics and morality; God is fearlessness... ....God is conscience."[15]

೯

ದೇವರು ಅಂತರ್ಯಾಮಿಯೋ [immanent] ಅಥವಾ ಅತೀತನೋ [transcendental] ಎಂಬುದರ ಬಗ್ಗೆ ಗಾಂಧೀ ದರ್ಶನದ ನಿಲುವು ಏನೆಂಬುದನ್ನು ಈಗ ನೋಡೋಣ. ಗಾಂಧೀ ದರ್ಶನದ ಪ್ರಕಾರ ದೇವರು ಅಂತರ್ಯಾಮಿಯೂ ಹೌದು, ಅತೀತನೂ ಹೌದು. ದೇವರು ಮಾನವನಿಗೆ ತೀರ ಸಮೀಪ; ಅವನ ಪ್ರಾರ್ಥನೆಯನ್ನು ಕೇಳುವಂಥವನು, ಮನ್ನಿಸುವಂಥವನು. ಈ ಪ್ರಪಂಚವನ್ನು ಆವರಿಸಿದ್ದರೂ, ಅದರಿಂದ ಬಂಧಿತನಾಗದೆ, ಮಿತಿಗೊಳ್ಳದೆ ಅದನ್ನೂ ಮೀರಿ ನಿಲ್ಲುವಂಥವನು. ನಾವು ಊಹಿಸಬಹುದಾದ ಅತಿ ಚಿಕ್ಕ ಗಾತ್ರದ ನೀರಿನ ಹನಿಯಲ್ಲಿ ಅವನಿರಬಲ್ಲನಾದರೂ, ಸಪ್ತಸಾಗರಗಳೂ ಅವನನ್ನು ಮಿತಿಗೊಳಿಸಲಾರವು. ಅವನು ಅಣುಗಳಲ್ಲಿ ಅಣು, ಮಹತ್ತಿನಲ್ಲಿ ಮಹತ್. ದೇವರು ಅನಂತನಾದರೆ ಅವನು ಪ್ರಪಂಚದಲ್ಲಿ ಅಂತರ್ಯಾಮಿಯೂ ಆಗಿರಬೇಕು: ಪ್ರಪಂಚವನ್ನು ಅವನು ಆವರಿಸದಿದ್ದರೆ ಅವನು 'ಅನಂತ'ನಲ್ಲನೆಂದೇ ಹೇಳಬೇಕು; ಈ ಅರ್ಥದಲ್ಲಿ ಅರಿಸ್ಟಾಟಲನ ತತ್ತ್ವಜ್ಞಾನದಲ್ಲಿ ಬರುವ ದೇವರು 'ಅನಂತ'ನಲ್ಲ. ಏಕೆಂದರೆ ಅವನು ದೇಶಕಾಲಾತೀತನಾದವನು. ತನ್ನದೇ ಆದ ಲೋಕದಲ್ಲಿ ತನ್ನದೇ ಆದ ಮಹಿಮೆಯಲ್ಲಿ ಮುಳುಗಿರುವವನಾಗಿದ್ದಾನೆ. ದೇವರು 'ಅನಂತ'ನೆಂದು ಒಪ್ಪಿದ ಪಕ್ಷದಲ್ಲಿ ಅವನ ಅನಂತತೆ [infinitude] ಅವನ ಅಂತರ್ಯಾಮಿತ್ವವನ್ನೂ, ಅತೀತನಾಗಿ ಇರುವಿಕೆಯನ್ನೂ ಒಟ್ಟಿಗೇ ವಿವರಿಸುತ್ತದೆ ಎಂಬುದು ಗಾಂಧೀ ದರ್ಶನದ ಬಹು ಮುಖ್ಯ ತಾತ್ತ್ವಿಕ ಅಂಶ.

೧೦

ದೇವರು ಎಷ್ಟು ದಯಾಮಯನೋ ಅಷ್ಟೇ ಕ್ರೂರಿ ಎಂದು ಗಾಂಧೀಜಿ ಅಭಿಪ್ರಾಯಪಟ್ಟಾಗ ಓದುಗನಿಗೆ ಆಶ್ಚರ್ಯವಾಗದೇ ಇರದು. ದೇವರು ಮಾನವನಿಗೆ ಇಚ್ಛಾಸ್ವಾತಂತ್ರ್ಯವಿದೆ ಎಂಬ ನೆಪದಲ್ಲಿ ಮಾನವನ ಕೈಗೆ ಬಂದದ್ದನ್ನು ಬಾಯಿಗೆ ಬರದಂತೆ ಮಾಡಿ ಮಾನವ ಕಷ್ಟಪಡುವುದನ್ನು ನೋಡಿ ಸುಖಿಸುತ್ತಾನೆ ಎಂದು ಗಾಂಧೀಜಿ ಅಭಿಪ್ರಾಯ ಪಟ್ಟಾಗ[16] ಇನ್ನೂ ಆಶ್ಚರ್ಯವಾಗುತ್ತದೆ. ಹಿಂದೂಧರ್ಮದ ಕರ್ಮಸಿದ್ಧಾಂತದಲ್ಲಿ ಅಚಲ ನಂಬಿಕೆಯನ್ನಿಟ್ಟಿದ್ದ ಗಾಂಧೀಜಿ ದೇವರು ಮಾನವನ ಇಷ್ಟಾನಿಷ್ಟಗಳಿಗೆ ಕಾರಣನೆಂದು ಕರೆಯುವುದು ಎಳ್ಳಷ್ಟೂ ಸಮಂಜಸವಲ್ಲ. ದೇವರು ಎಷ್ಟು ದೊಡ್ಡ ಪ್ರಜಾಪ್ರಭುತ್ವವಾದಿಯೋ ಅಷ್ಟೇ ನಿರಂಕುಶ ಪ್ರಭುವೂ [tyrant] ಹೌದು ಎಂದು ಸ್ಪಷ್ಟವಾಗಿ ಬರೆಯುತ್ತಾರೆ. ದೇವರ ಬಗ್ಗೆ ಗಾಂಧೀಜಿ ಕೊಡುವ ಈ ವಿವರಣೆ ದೈವಾಸ್ತಿಕ್ಯವಾದಿಗೆ ಸಮಾಧಾನವನ್ನುಂಟುಮಾಡುವುದಿಲ್ಲ. ಅವನೆಂದಿಗೂ ದೇವರ ಮೇಲೆ ಎಂಥ ಕನಿಷ್ಠ ತಪ್ಪನ್ನೂ ಹೇರಲು ಸಿದ್ಧನಿರುವುದಿಲ್ಲ.

೧೧

ದೇವರ ಅಸ್ತಿತ್ವದ ನಂಬಿಕೆಯ ಅಂತರಾಳವನ್ನೇ ಅಲುಗಾಡಿಸುವ ಇನ್ನೊಂದು ಪ್ರಶ್ನೆ ಪ್ರಪಂಚದಲ್ಲಿ ಅನಿಷ್ಟ [Evil] ಏಕೆ ಇದೆ ಎಂಬುದು. ಪರಿಶುದ್ಧನಾದ ದೇವರು ಪ್ರಪಂಚದಲ್ಲಿ ಅನಿಷ್ಟ

(ಪಾಪ) ಇರಲು ಹೇಗೆ ಅನುಮತಿ ನೀಡುತ್ತಾನೆ ಎಂಬುದು ಸಂಪೂರ್ಣವಾಗಿ ಉತ್ತರಿಸಲಾಗದೆ ತೊಳಲುತ್ತಿರುವ ಅತಿ ಗಹನವಾದ ಪ್ರಶ್ನೆ. ಗಾಂಧೀ ದರ್ಶನದಲ್ಲಿ ಈ ಒಗಟಿಗೆ ಬಹಳ ಸರಳವಾದ ಆದರೆ ಒಂದು ರೀತಿಯ ' ಜಾರಿಕೆಯ ಉತ್ತರ 'ವನ್ನು[17] ನೀಡಲಾಗಿದೆ. ಈ ಪ್ರಶ್ನೆಯನ್ನು ಕೇಳುವುದು ಮಾನವನಿಗೆ ಉಚಿತವಲ್ಲ; ಏಕೆಂದರೆ ದೇವರಿಗೆ ಸರಿಸಮಾನನಾದವನು ಮಾತ್ರ ಅಂತಹ ಪ್ರಶ್ನೆಯನ್ನು ಕೇಳಲು ಅರ್ಹನು. ಅಪರಿಪೂರ್ಣನೂ ದೋಷಪೂರಿತನೂ ಮಿತಿಯುಳ್ಳವನೂ ಆದ ಮಾನವ ಈ ಪ್ರಶ್ನೆಯನ್ನೇ ಕೇಳಬಾರದು ಎಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

ಇನ್ನೂ ಮುಂದುವರಿದು ಗಾಂಧೀಜಿ ಹೀಗೆ ಅಭಿಪ್ರಾಯ ಪಡುತ್ತಾರೆ: ಅನಿಷ್ಟ, ದೇವರ ಒಂದು ಅಂಶ; ದೇವರು ಅನಿಷ್ಟವನ್ನು ಸೃಷ್ಟಿಸುತ್ತಾನೆ; ಅದು ಪ್ರಪಂಚದಲ್ಲಿರುವಂತೆ ನೋಡಿಕೊಳ್ಳುತ್ತಾನೆ. ಹೀಗೆ ಮಾಡುವುದರಿಂದ ಅವನಲ್ಲಿ ನೀಚ ಉದ್ದೇಶ ಹಾಗೂ ಕೀಳು ಆಮಿಶಗಳಿವೆ ಎಂದು ತಿಳಿಯಬಾರದು. ಅಪರಿಪೂರ್ಣರಾದ ಮಾನವರು ತಮ್ಮ ಅಪರಿಪೂರ್ಣತೆಯನ್ನು ತಪ್ಪದೇ ಮೊದಲು ತಿಳಿಯಬೇಕು. ಈ ತಿಳುವಳಿಕೆಯನ್ನು ಮಾನವನಿಗೆ ಉಂಟುಮಾಡುವುದರಲ್ಲಿ ಅನಿಷ್ಟದ ಪ್ರಭಾವ ಅಪರಿಮಿತವಾದುದು. ದೇವರು ಪ್ರಪಂಚದಲ್ಲಿ ಅನಿಷ್ಟವನ್ನು ನೆಲಸಿರುವಂತೆ ಮಾಡಿರುವುದು, ಜೀವಿಗಳನ್ನು ಹುರಿದು ತಿಂದು ತೇಗುವುದಕ್ಕಲ್ಲ: ಅನಿಷ್ಟವನ್ನು ಎದುರಿಸುವ ಛಲ ಅವರಿಗೆ ಬರಲಿ ಎಂದು ಮಾತ್ರ, ಎಂದೂ ಗಾಂಧೀಜಿ ಬರೆಯುತ್ತಾರೆ.[18]

ಸಂಹಾರಕ್ರಿಯೆ ದೇವರ ವಿಶೇಷ ಹಕ್ಕು. ದೇವರ ಈ ಹಕ್ಕನ್ನು ಪ್ರಶ್ನಿಸುವ ಹಕ್ಕು ಮಾನವನಿಗಿಲ್ಲ. ಅವನು ವೈರದಿಂದಾಗಲೀ ಮಾತ್ಸರ್ಯದಿಂದಾಗಲೀ ಸಂಹಾರ ಮಾಡಲೆಳಸುವುದಿಲ್ಲ. ಗಾಂಧೀಜಿಯವರ ಪ್ರಕಾರ ಸಂಹಾರ [destruction] ಪೂರ್ಣ ನಾಶವಲ್ಲ [annihilation]; ಅವನು ಸಂಹಾರ ಮಾಡುವುದು ಪುನಃ ಸೃಷ್ಟಿಸುವುದಕ್ಕೆ. ಲೋಕೋದ್ಧಾರಕ್ಕೋಸ್ಕರ ಪ್ರೀತಿಯಿಂದಲೇ ಸಂಹಾರ ಮಾಡುತ್ತಾನೆ ಎಂದು ಗಾಂಧೀಜಿ ಅಚಲವಾಗಿ ನಂಬಿದ್ದರು.

ಅನಿಷ್ಟವನ್ನು ದೇವರು ಜಗತ್ತಿನಲ್ಲಿ ಏಕೆ ಇರುವಂತೆ ಮಾಡಿದ್ದಾನೆ ಎಂಬುದನ್ನು ವಿಶ್ಲೇಷಿಸುತ್ತಾ ಗಾಂಧೀಜಿ ದೇವರ ಉದ್ದೇಶ ಮಾನವನ ಬುದ್ಧಿಗೆ ಮೀರಿದುದರಿಂದ ತಿಳಿಯಲು ಕಷ್ಟವೆಂಬ ' ಅಜ್ಞೇಯ ' [Agnostic] ನಿಲುವನ್ನೂ ಹೊರತುಪಡಿಸುತ್ತಾರೆ.

ಅನಿಷ್ಟದ ಬಗ್ಗೆ ಗಾಂಧೀಜಿ ಒಂದು ಸ್ಪಷ್ಟತೆಯನ್ನು ನೀಡುತ್ತಾರೆ. ಅನಿಷ್ಟ ಈ ಪ್ರಪಂಚದಲ್ಲಿರುವುದು ಸತ್ಯ. ಆದರೆ ಅದಕ್ಕೆ ತನ್ನದೇ ಆದ ಸ್ವತಂತ್ರ ಅಸ್ತಿತ್ವವಿಲ್ಲ. ಅನಿಷ್ಟದ ಅಸ್ತಿತ್ವ ದೇವರ ಸರ್ವಶಕ್ತಿತ್ವದ [omnipotence] ಬಗ್ಗೆ ಮಾನವನನ್ನು ಸಂದೇಹಕ್ಕೆ ಎಡೆ ಮಾಡುವುದಿಲ್ಲ. ದೇವರು ಇಷ್ಟಪಟ್ಟರೆ ಅನಿಷ್ಟವನ್ನು ನಾಶ ಮಾಡಬಹುದು; ಆದರೆ ಅವನು ಹಾಗೆ ಮಾಡುವುದಿಲ್ಲ ಎಂಬ ಒಗಟನ್ನು ನಾವು ಗಾಂಧೀ ದರ್ಶನದಲ್ಲಿ ಕಾಣುತ್ತೇವೆ. ಮಾನವರ ನೈಜ ನಿಲುವನ್ನು ಅಂದರೆ, ಅವರು ಅಪರಿಪೂರ್ಣರು, ಅಸ್ವತಂತ್ರರು ಎಂಬುದನ್ನು ಮನಗಾಣಿಸಲೆಂದೇ ದೇವರು ಅನಿಷ್ಟವನ್ನು ಪ್ರಪಂಚದಲ್ಲಿ ಇಟ್ಟಿದ್ದಾನೆಯೇ ಹೊರತು ಅನಿಷ್ಟ, ದೇವರನ್ನು ಸರಿಸಮಾನಗಟ್ಟುವ ಸ್ವತಂತ್ರ ವಿರುದ್ಧ ತತ್ತ್ವವಲ್ಲ ಎಂದು ಸ್ಪಷ್ಟಪಡಿಸಲು ಗಾಂಧೀಜಿ ತುಂಬ ಹೆಣಗಿದ್ದಾರೆ. ಅನಿಷ್ಟದೊಡನೆ ಹೋರಾಡುತ್ತಿರುವ ಮಾನವ ಇಂದಲ್ಲ ನಾಳೆ ಜಯಶೀಲನಾಗಿಯೇ ಹೊರಬರುತ್ತಾನೆ; ಎಂದೆಂದಿಗೂ ಶ್ರೇಯಸ್ಸಿಗೇ ಜಯ ಎಂಬುದು ಗಾಂಧೀ ದರ್ಶನದ ಆಶಾವಾದ.

೧೨

ಗಾಂಧೀ ದರ್ಶನವನ್ನು ನಾವು ತಾತ್ತ್ವಿಕವಾಗಿ ಹೇಗೆ ಹೆಸರಿಸಬಹುದು ? ಗಾಂಧೀದರ್ಶನ ತಾತ್ತ್ವಿಕ ಅದ್ವೈತದರ್ಶನವೇ ? ಎಂಬ ಪ್ರಶ್ನೆಗೆ ಉತ್ತರ ಅಸ್ಪಷ್ಟವಾಗಿರುವಂತೆ ಕಾಣುತ್ತದೆ. ಅದ್ವೈತದರ್ಶನ

ವಲ್ಲಿ ಹೇಳಿರುವಂತೆ ಗಾಂಧೀದರ್ಶನದಲ್ಲಿಯೂ ದೇವರು ಅಪ್ರಮೇಯ, ನಿರಾಕಾರ, ನಿರ್ಗುಣ, ವಾಙ್ಮನಸ್ಸುಗಳನ್ನು ಮೀರಿನಿಲ್ಲುವ ತತ್ತ್ವ. ಸಾಮಾನ್ಯ ಅರ್ಥದಲ್ಲಿ ಗಾಂಧೀದರ್ಶನ ಅದ್ವೈತವೇ ಆಗಿದೆ. ಆದರೆ ತಾತ್ತ್ವಿಕವಾಗಿ ಪರಿಶೀಲಿಸಿದಾಗ, ಗಾಂಧೀದರ್ಶನ, ಅದ್ವೈತ ದರ್ಶನಕ್ಕಿಂತ ದೇವಾಸ್ತಿಕ್ಯ ದರ್ಶನಗಳಾದ ವಿಶಿಷ್ಟಾದ್ವೈತ, ನಿಂಬಾರ್ಕ ದರ್ಶನಗಳಿಗೆ ತೀರ ಹತ್ತಿರವಾಗಿದೆ ಎಂಬ ಅಂಶ ಹೊರಬೀಳುತ್ತದೆ. ಏಕೆಂದರೆ ಜೀವಾತ್ಮ, ಪರಮಾತ್ಮ ಅಥವಾ 'ದೇವರಾಗಲು' ಎಂದಿಗೂ ಸಾಧ್ಯವೇ ಇಲ್ಲ ಎಂಬುದು ಗಾಂಧೀಜಿಯವರ ದೃಢ ನಿಲುವಾಗಿತ್ತು. ಜೀವಾತ್ಮ, ಗಾಂಧೀ ದರ್ಶನದಲ್ಲಿ ಇತರ ದೇವಾಸ್ತಿಕ್ಯದರ್ಶನಗಳಲ್ಲಿರುವಂತೆ, ತನ್ನದೇ ಆದ ಅಸ್ತಿತ್ವವನ್ನು ಹೊಂದಿದೆ. ಜೀವ, ಅದ್ವೈತ ದರ್ಶನದಲ್ಲಿ ಹೇಳಿರುವಂತೆ, ಕೇವಲ ಉಪಾಧಿಗಳೊಡಗೂಡಿದ ಬ್ರಹ್ಮವಲ್ಲ. ಅದ್ವೈತ ದರ್ಶನದ ಪ್ರಕಾರ ಅಂತಿಮಾರ್ಥದಲ್ಲಿ, ಬ್ರಹ್ಮವೇ ಸತ್ಯವಾದುದರಿಂದ, ಅದನ್ನು ಬಿಟ್ಟು ಜೀವಾತ್ಮ ಎಂಬುದಾಗಲೀ ಪ್ರಪಂಚವೆಂದಾಗಲೀ ಬೇರೆ ಇಲ್ಲ. ನಿರಾಕಾರವೂ ನಿತ್ಯವೂ ನಿರ್ಗುಣವೂ ನಿರವಯವವೂ ನಿರ್ವಿಷಯಕವೂ ನಿರ್ವಿಶೇಷವೂ ಆದ ಬ್ರಹ್ಮವೇ ಜೀವಾತ್ಮನಾದಂತೆ, ಅವಿದ್ಯೆಯಿಂದ ಗೋಚರಿಸುತ್ತದೆ ಅಂದರೆ ಜೀವಾತ್ಮ ತಾನು ಸ್ವಭಾವತಃ ಬ್ರಹ್ಮವೇ ಆಗಿದ್ದರೂ, ಅವಿದ್ಯೆಯಿಂದ ತನ್ನ ನೈಜ ಸ್ವಭಾವವನ್ನು ಅರಿಯದೇ ಇರುತ್ತದೆ. ಜೀವಾತ್ಮ ಸಂಯಕ್ ಜ್ಞಾನದ ದೆಸೆಯಿಂದ ಅವಿದ್ಯಾವರಣದಿಂದ ಹೊರ ಬಂದು ತನ್ನ ನೈಜ ಸ್ವಭಾವವನ್ನು (ತಾನು ಬ್ರಹ್ಮವೇ ಆಗಿದ್ದೇನೆ ಎಂಬುದನ್ನು) ಅರಿಯುತ್ತದೆ. ಅದನ್ನೇ ಮೋಕ್ಷ ಅಥವಾ ಆತ್ಮಸಾಕ್ಷಾತ್ಕಾರ ಎನ್ನುವುದು. ಮೋಕ್ಷಸ್ಥಿತಿಯಲ್ಲಿ ಜೀವಾತ್ಮ ಬ್ರಹ್ಮವೇ ಆಗಿರುವುದರಿಂದ ಅಲ್ಲಿ ಬ್ರಹ್ಮವನ್ನು ಬಿಟ್ಟು ಬೇರೆ ಜೀವಾತ್ಮವೆಂಬುದಿಲ್ಲ. ಜೀವಾತ್ಮ ತನ್ನ ಜೀವತ್ವವನ್ನು ಕಳೆದುಕೊಳ್ಳುವುದರ ಮೂಲಕ ಮೋಕ್ಷ ಸ್ಥಿತಿಯಲ್ಲಿ ಬ್ರಹ್ಮವೆಂದೇ ಹೆಸರಿಸಲ್ಪಡುತ್ತದೆ. ಆದರೆ ಮೋಕ್ಷ ಸ್ಥಿತಿಯಲ್ಲಿ ಬ್ರಹ್ಮವನ್ನು ಬಿಟ್ಟು ಮಿಕ್ಕೆಲ್ಲವೂ ಮಿಥ್ಯೆ. ಸ್ಪಷ್ಟವಾದ ಮಾತುಗಳಲ್ಲಿ ಹೇಳುವುದಾದರೆ, ಬ್ರಹ್ಮವೊಂದೇ ಅಂತಿಮಾರ್ಥದಲ್ಲಿ ಸತ್ಯ ; ಜೀವಾತ್ಮ ಪ್ರಪಂಚಗಳಲ್ಲ.

ಗಾಂಧೀ ದರ್ಶನದಲ್ಲಿ ಅದ್ವೈತ ಬ್ರಹ್ಮದ ಲಕ್ಷಣಗಳು ಸ್ಪಷ್ಟವಾಗಿ ಕಂಡುಬಂದರೂ. ಅದು ಶಾಸ್ತ್ರೀಯ ಅಥವಾ ಪಾರಿಭಾಷಿಕ ಅರ್ಥದಲ್ಲಿ ಅದ್ವೈತವಲ್ಲ. ಗಾಂಧೀ ದರ್ಶನದಲ್ಲಿ ಜೀವ ದೇವರ ಒಂದು ಅಂಶ(particle) ; ಅಂಶವಾಗಿರುವುದರ ಮೂಲಕ ಅದು ದೈವಿಕವಾದುದಾದರೂ, ಅಂಶವಾಗಿರುವುದರಿಂದ, ದೇವರಿಗಿಂತ ಭಿನ್ನವಾಗಿರುತ್ತದೆ ಗಾಂಧೀ ದರ್ಶನದಲ್ಲಿ ಜೀವ ಮೋಕ್ಷಸ್ಥಿತಿಯಲ್ಲಿಯೂ ಕೂಡ ಜೀವವಾಗಿ ಮುಂದುವರಿಯುತ್ತದೆ ; ಅದೆಂದಿಗೂ ಪರಮಾತ್ಮನಲ್ಲಿ ಐಕ್ಯವಾಗಿ ತನ್ನ ಜೀವಸ್ವರೂಪವನ್ನು ಕಳೆದುಕೊಳ್ಳುವುದಿಲ್ಲ. ದೇವರ ಸಾನ್ನಿಧ್ಯ, ಸ್ಪರ್ಶ, ಸಾಂತ್ವನಗಳನ್ನು ಬಯಸುವ ಜೀವ, ಜೀವವಾಗಿದ್ದುಕೊಂಡೇ ಅನುಭವಿಸಿ, ದೇವರ ಮಹಾತ್ಮೆಯನ್ನು ಕೊಂಡಾಡುತ್ತದೆ. ಜೀವಾತ್ಮಗಳು ಸಂಖ್ಯೆಯಲ್ಲಿ ಅಪರಿಮಿತ : ಅವು ನಿತ್ಯ.

ಹಾಗೆಯೇ ದೇವಾಸ್ತಿಕ್ಯ [Theistic] ದರ್ಶನಗಳುಪ್ರತಿಪಾದಿಸುವಂತೆ, ಪ್ರಪಂಚ ಸತ್ಯವಾದುದು; ಅದು ದೇವರು ಹಾಗೂ ಜೀವಾತ್ಮಗಳ ಅಸ್ತಿತ್ವದಷ್ಟೇ ಸತ್ಯ. ಪ್ರಪಂಚದಲ್ಲಿ ಅನುಭವಿಸುವ ನೋವು, ನಲಿವು ಎಲ್ಲವೂ ಸತ್ಯ. ಪ್ರಪಂಚ ಒಂದು ಸೇವಾಕ್ಷೇತ್ರ ಎಂದು ಗಾಂಧೀಜಿ ಅಭಿಪ್ರಾಯಪಡುತ್ತಾರೆ.

ಹೀಗೆ ಬ್ರಹ್ಮದಷ್ಟೇ (ದೇವರು) ಜೀವಾತ್ಮ ಹಾಗೂ ಪ್ರಪಂಚಗಳು ಸತ್ಯ ಎಂದು ಪ್ರತಿಪಾದಿಸುವ ಮೂಲಕ, ಗಾಂಧೀ ದರ್ಶನ ತಾತ್ತ್ವಿಕವಾಗಿ ಶಾಸ್ತ್ರೀಯ ಅದ್ವೈತದ ನಿಲುವಿನಿಂದ ದೂರ ಸರಿಯುತ್ತದೆ.

ನಿಂಬಾರ್ಕ ಹಾಗೂ ವಿಶಿಷ್ಟಾದ್ವೈತ ವೇದಾಂತಗಳಂತೆ ಗಾಂಧೀದರ್ಶನ ಏಕತೆಯನ್ನು ಬೋಧಿಸುತ್ತದೆ. ದೇವರೂ ಸತ್ಯ ; ಜೀವ ಪ್ರಪಂಚಗಳೂ ಸತ್ಯ. ಜೀವ ಮತ್ತು ಪ್ರಪಂಚಗಳ ಅಸ್ತಿತ್ವ ಬ್ರಹ್ಮ (ದೇವರು)ದ ಅಸ್ತಿತ್ವಕ್ಕೆ ಯಾವ ವಿರೋಧವನ್ನು ಉಂಟುಮಾಡುವುದಿಲ್ಲ : ಅವು

ಗಳ ಅಸ್ತಿತ್ವ ಬ್ರಹ್ಮದ ಅಸ್ತಿತ್ವಕ್ಕೆ ಯಾವ ಸವಾಲನ್ನೂ ಒಡ್ಡುವುದಿಲ್ಲ. ದಯಾಮಯನಾದ ದೇವರು ಅವುಗಳ ಅಸ್ತಿತ್ವವನ್ನು 'ಉದಾರವಾಗಿಯೇ' ನೋಡುತ್ತಾನೆ. ದೇವರನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕಿಂತ ಬೇರೆಯಾದ, ಇನ್ನೂ ಹೆಚ್ಚಾದ ಗುರಿಯಂತೂ ಜೀವಾತ್ಮನಿಗಾಗಲೀ ತನ್ಮೂಲಕ ಪ್ರಪಂಚಕ್ಕಾಗಲೀ ಇಲ್ಲವೇ ಇಲ್ಲ. ಜೀವಾತ್ಮ ಮತ್ತು ಪ್ರಪಂಚಗಳು ದೇವರ ಅಂಶವೇ ಆಗಿರುವುದರಿಂದ, ಅವು ದೇವರಿಂದ **ಪೂರ್ಣವಾಗಿ** ಭಿನ್ನವೂ ಅಲ್ಲ ಅಥವಾ **ಪೂರ್ಣವಾಗಿ** ಐಕ್ಯವೂ ಅಲ್ಲ. ದೇವರೇ ಜೀವಾತ್ಮ ಮತ್ತು ಪ್ರಪಂಚಗಳ ಆಧಾರತತ್ತ್ವ; ಆದರೂ ಇದರಿಂದ ಜೀವ ಮತ್ತು ಪ್ರಪಂಚಗಳ ಅಸ್ತಿತ್ವಕ್ಕೆ ಯಾವ ಚ್ಯುತಿಯೂ ಇಲ್ಲ. ಈ ವಿಶಾಲಾರ್ಥದಲ್ಲಿ ಸತ್ಯ ಅಥವಾ ದೇವರು ಒಂದೇ ಆಗಿದೆ. ಆದರೆ ಅದು ಕೇವಲ ಒಂದಲ್ಲ; ಅನೇಕದಲ್ಲಿ ಏಕ; ಏಕದಲ್ಲಿ ಅನೇಕ. ಗಾಂಧೀಜಿಯವರ ತಾತ್ತ್ವಿಕ ಬರವಣಿಗೆಗಳನ್ನು ಪರಿಶೀಲಿಸಿದಾಗ ಈ ನಿಲುವು ಸ್ಪಷ್ಟವಾಗಿ ಗೋಚರಿಸುತ್ತದೆ. ದೇವರನ್ನು ಸೇರಲು ಅವನ ದಯೆ ಅಥವಾ ಪ್ರಸಾದ ಅತ್ಯಾವಶ್ಯಕ ಎಂದು ಪ್ರಬಲವಾಗಿ ಪ್ರತಿಪಾದಿಸುವ ಗಾಂಧೀ ದರ್ಶನದ ಮೇಲೆ ದೇವಾಸ್ತಿಕ್ಯ [Theistic] ದರ್ಶನಗಳ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು. ತಾತ್ತ್ವಿಕ ಪದಗಳನ್ನು ಶಾಸ್ತ್ರೀಯ ಹಾಗೂ ತಾತ್ತ್ವಿಕ ಅರ್ಥಗಳಲ್ಲಿ ಉಪಯೋಗಿಸದೆ, ತಮ್ಮದೇ ಆದ ಅರ್ಥದಲ್ಲಿ ಗಾಂಧೀಜಿ ಉಪಯೋಗಿಸಿರುವುದರಿಂದ ಅವರ ದರ್ಶನವನ್ನು ತಾತ್ತ್ವಿಕವಾಗಿ ಸೂಚಿಸುವುದು ಕಷ್ಟಸಾಧ್ಯವಾಗುತ್ತದೆ.

ಅಡಿಟಿಪ್ಪಣಿಗಳು

1. Bharatan Kumarappa (Ed): *Hindu Dharma* (Navajivan Publications), ಪು. 58.

2. ಅದೇ, ಪು. 63.

3. ಅದೇ, ಪು 55.

4. T. M. P. Mahadevan : *The Relevance of Mahatma Gandhi to the world of Thought* (University of Madras, 1969), ಪು. 4

5. V. S. Naravane : *Modern Indian Thought* (Asia Publishing House, 1964), ಪು. 182.

6. "ಶುದ್ಧ ಬುದ್ಧಿಯ ವಿಮರ್ಶೆ" ಎಂಬ ತನ್ನ ಉತ್ಕೃಷ್ಟ ಗ್ರಂಥದಲ್ಲಿ ಶುದ್ಧ ಬುದ್ಧಿ (Pure Reason) ಹೇಗೆ 'ದೇವರು' 'ಆತ್ಮ' ಮುಂತಾದವುಗಳ ಅಸ್ತಿತ್ವದ ಬಗ್ಗೆ ಕ್ಲಿಷ್ಟ ಪ್ರಶ್ನೆಗಳನ್ನು ಕೇಳಿಕೊಂಡು ಸಮರ್ಪಕವಾದ ಉತ್ತರಗಳನ್ನು ಕೊಡಲು ಸೋಲುತ್ತದೆ ಎಂಬುದನ್ನು ಕ್ಯಾಂಟ್, ಬಹಳ ಚೆನ್ನಾಗಿ ವಿಶ್ಲೇಷಿಸಿದ್ದಾನೆ. ನೋಡಿ: N. K. Smith: *Immanuel Kant's Critique of Pure Reason* (Macmillan and Co., London, 1929), I Edition, Preface. ಪು. 7.

7. ಅದೇ. ಪು. 183.

8. Bharatan Kumarappa (Ed) : *Hindu Dharma* (Navajivan Publishing House), ಪು. 221.

9. S. Radhakrishnan (Ed) *Mahatma Gandhi: Essays and Reflections on his life and works* (George Allen & Ltd, 1940), ಪು. 333–34

10. ತೈತ್ತಿರೀಯ, 2. 1.

11. ಬೃಹದಾರಣ್ಯಕ. 3. 9. 28.

12. 'ಯಥಾ ವಾಚೋಃ ನಿವರ್ತಂತೇಃ ಅಪ್ರಾಪ್ಯ ಮನಸಾಸಹ'

12 Radhakrishnan *: op. cit.* ಪು.16

14. Bharatan Kumarappa (Ed :) *Hindu Dharma* (Navjivan Publications), ಪು. 56.

15. ಅದೇ, ಪು. 54.

16. ಅದೇ, ಪು. 54

17. ಪ್ರಪಂಚದಲ್ಲಿ ಅನಿಷ್ಟವೇಕಿದೆ ಎಂಬ ಪ್ರಶ್ನೆಯನ್ನು 'ರಬೀಂದ್ರ ದರ್ಶನ'ದಲ್ಲಿ ಸಮರ್ಪಕವಾಗಿ ಉತ್ತರಿಸಲು ಪ್ರಯತ್ನಿಸಿದೆ. ನೋಡಿ *Sadhana,* (Macmillan and Co, London, 1961), ಪು. 47........"To question why there is evil in existence is the same as.........why there is creation at all."

18. R. S. Srivastava *: Contemporary Indian Philosophy* [Munshi Ram Manohar Lal, 1965], ಪು. 182

ಎನ್. ಸುಬ್ರಹ್ಮಣ್ಯ

ಮಕ್ಕಳ ಭಾಷಾ ಬೆಳವಣಿಗೆ

(ಬ್ರಾಹ್ಮೀತು ಭಾರತೀ ಭಾಷಾ ಗೀರ್ವಾಗ್ವಾಣೀ ಸರಸ್ವತೀ)

ದಾಂಪತ್ಯ ಜೀವನದಲ್ಲಿ ತಮ್ಮ ಪ್ರೀತಿಯ ಮಗು ಮೊದಲ ಬಾರಿಗೆ " ಅಮ್ಮ " " ಅಪ್ಪ " ಎಂದು ಕರೆದಾಗ ಆ ತಂದೆತಾಯಿಗಳಿಗೆ ಸ್ವರ್ಗವೇ ಸಿಕ್ಕಿದಂತಾಗುತ್ತದೆ. ಅದರ ತೊದಲು ನುಡಿಗಳನ್ನು ಕೇಳುವುದೇ ಅವರಿಗೆ ಅಮಿತಾನಂದ. ಆದರೆ ಆ ಮಗುವು ಅರ್ಥಗರ್ಭಿತ ಮಾತುಗಳನ್ನಾಡುವ ಸ್ಥಿತಿಗೆ ಬರುವ ಮೊದಲು ಅನೇಕ ಹಂತಗಳನ್ನು ದಾಟಿ ಹೋಗಬೇಕು. ಈ ಎಲ್ಲಾ ಹಂತಗಳಲ್ಲೂ ಮಗುವಿನ ಪ್ರತಿಕ್ರಿಯೆಗಳನ್ನು ಗಮನಿಸುವುದು ಮುಖ್ಯ ವಿಷಯವಾಗಿದೆ.

ಹುಟ್ಟಿದ ಮಗುವಿಗೆ ಶಬ್ದೋಚ್ಚಾರಣೆಗೆ ಬೇಕಾದ ಸಕಲ ಅಂಗಗಳನ್ನು ಮತ್ತು ಉಪಕರಣಗಳನ್ನು ದೇವರು ಕಲ್ಪಿಸಿರುತ್ತಾನೆ. ಈ ಅಂಗಗಳ ಪ್ರಯೋಜನವು ಪ್ರಾರಂಭದಲ್ಲಿ ದೊರಕುವುದಿಲ್ಲ. ಕೆಲವು ಕಾಲಾನಂತರ ಅವು ಅರ್ಥವುಳ್ಳ ಮಾತುಗಳನ್ನಾಡಲು ಸಹಕಾರಿಯಾಗುತ್ತವೆ. ಈ ಸ್ಥಿತಿಗೆ ಬರಬೇಕಾದರೆ ನರಗಳು ಮತ್ತು ಸ್ನಾಯುಗಳು ವಿಶೇಷ ಪಾತ್ರವನ್ನು ವಹಿಸುತ್ತವೆ. ಕೈಕಾಲು ಮತ್ತು ಇತರ ಅಂಗಗಳಂತೆ ಶಬ್ದೋಚ್ಚಾರಣೆಗೆ ಉಪಯುಕ್ತವಾದ ಅಂಗಗಳೂ ಸಹ ಮೊದಲು ಮಗುವಿನ ಹಿಡಿತದಲ್ಲಿ ಇರುವುದಿಲ್ಲ. ಕ್ರಮೇಣ ಈ ಅಂಗಗಳು ಮಗುವಿನ ಅಂಕೆಗೆ ಒಳಗಾಗುತ್ತವೆ. ಯಾವ ಯಾವ ಹಂತಗಳಲ್ಲಿ ಏನೇನು ಪ್ರತಿಕ್ರಿಯೆ ನಡೆಯುತ್ತವೆ ಎಂಬುದನ್ನು ಈಗ ವಿಮರ್ಶಿಸೋಣ.

ಅಳು : ಮಗುವು ಹುಟ್ಟಿದ ತತ್‌ಕ್ಷಣವೇ ಅಳುವುದು ಸಹಜ. ಅದು ಅಳುವುದರಿಂದಲೇ ಅದು ಬದುಕಿರುವುದು ವೇದ್ಯವಾಗುವುದು. ಮೊದಲ ಬಾರಿಗೆ ಶ್ವಾಸಕೋಶಗಳು ಕೆಲಸವನ್ನು ಪ್ರಾರಂಭಿಸುವುವು. ಹೊರಗಿನ ಗಾಳಿಯು ಶ್ವಾಸಕೋಶಗಳಿಗೆ ನುಗ್ಗಿ ಹೊರಗೆ ಬರುವಾಗ ಗಂಟಲಕುಹರದ (ಧ್ವನಿಪೆಟ್ಟಿಗೆ) ಮುಖಾಂತರ ಹಾದು ಬರುವುದು. ಆಗ ಧ್ವನಿತಂತುಗಳು ಕಂಪಿಸುವುವು. ಈ ಕಂಪನದಿಂದ ಶಬ್ದೋಚ್ಚಾರಣೆಯಾಗುವುದು. ಇದನ್ನು ನಾವು ಅಳು ಎಂದು ಕರೆಯುತ್ತೇವೆ. ಮಗುವಿನ ದೇಹದಲ್ಲೇ ಉಂಟಾದ ಪ್ರಚೋದನೆಗೆ ಮೊದಲಿನ ಪ್ರತಿಕ್ರಿಯೆಯೇ " ಅಳು ". ಇಹಲೋಕದ ವ್ಯಾಪಾರವು ಅಳುವಿನಿಂದಲೇ ಪ್ರಾರಂಭವಾಗುತ್ತದೆ. ಈ ಅಳುವು " ಅ " ಮತ್ತು " ಎ " ಸ್ವರಗಳಿಂದ ಕೂಡಿರುತ್ತದೆ. ಮಗುವು ಏತಕ್ಕೆ ಅಳುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ತಾಯಂದಿರಿಗೆ ಬಹಳ ಕಷ್ಟವಾಗುವುದು. ಇದೇ ತರಹ ಅಳು ಒಂದು ಅಥವಾ ಒಂದೂವರೆ ತಿಂಗಳ ತನಕ ಇರುವುದು.

ಮಗುವಿನ ಬೆಳವಣಿಗೆಗೆ ತಾಯಿಯ ಪ್ರೀತಿಯೇ ಮುಖ್ಯ. ತಾಯಿಯು ಮಗುವನ್ನು ಮುದ್ದಿಸುವುದು ಮತ್ತು ಸ್ತನ್ಯಪಾನ ಮಾಡಿಸುವುದು, ಅದನ್ನು ಅಪ್ಪಿಕೊಳ್ಳುವುದು, ಇವೇ ಮುಂತಾದ ಚಟುವಟಿಕೆಗಳು ಮಗುವಿನ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಉಂಟುಮಾಡು

ತ್ತವೆ. ಇದೇ ಸಂದರ್ಭದಲ್ಲಿ ಮಗುವಿಗೆ ತನ್ನ ತಾಯಿಯ ಮೇಲೆ ಅಚಲವಾದ ಪ್ರೇಮ, ವಿಶ್ವಾಸ, ನಂಬಿಕೆಗಳು ಬೆಳೆಯುತ್ತವೆ. ಸ್ವಲ್ಪ ಹೊತ್ತಾದರೂ ತಾಯಿಯ ಅಗಲುವಿಕೆಯನ್ನು ಸಹಿಸುವುದಿಲ್ಲ. ಅದರ ಅಸಹನೆಯನ್ನು ವ್ಯಕ್ತಪಡಿಸುವುದಕ್ಕೆ ಒಂದೇ ಮಾರ್ಗ—ಅಳು, ಕಿಟ್ಟನೆ ಕಿರಚುವುದು. ಈ ತರಹ ಕಿರುಚುವಿಕೆಯಿಂದ ತಾಯಂದಿರಿಗೆ ಅನೇಕ ಸಂದರ್ಭಗಳಲ್ಲಿ ಗಾಬರಿಯಾಗುವುದು ಸಹಜವೇ. ಮಗುವು ಅಳುವಾಗ ಉಸಿರುಕಟ್ಟುವ ತೊಂದರೆಯುಂಟು. ಇಂತಹ ಸನ್ನಿವೇಶ ಬಾರದ ಹಾಗೆ ತಾಯಂದಿರು ಎಚ್ಚರಿಕೆ ವಹಿಸಬೇಕು. ಮುಖದ ಮೇಲೆ ಹೆಚ್ಚು ಬೆಳಕು ಬಿದ್ದಾಗ, ಜೋರಾಗಿ ಶಬ್ದ ಮಾಡಿದಾಗ ಮಗುವು ಬೆಚ್ಚಿಬೀಳುತ್ತದೆ. ಈ ತೊಂದರೆಯನ್ನುಂಟುಮಾಡುವ ಪರಿಸರದಿಂದ ಬೇರೆಕಡೆ ಹೋಗಲು ಸಾಧ್ಯವಿಲ್ಲದ್ದರಿಂದ ಮಗುವು ಅಳುತ್ತದೆ. ಆದ್ದರಿಂದ ಅಳು ಒಂದು ಅನೈಚ್ಛಿಕ ಪ್ರತಿಕ್ರಿಯೆ. ಹಸಿವು, ಬಾಯಾರಿಕೆ, ನೋವು, ಛಳಿ, ತಾಯಿಯು ಹತ್ತಿರ ಇಲ್ಲದಿರುವುದು, ತನ್ನ ಕೈಕಾಲುಗಳನ್ನು ಆಡಿಸಲು ಅಡ್ಡಿಯಾಗಿರುವುದು—ಇಂಥವುಗಳಿಂದ ಆದ ಅಸಮಾಧಾನವನ್ನು ವ್ಯಕ್ತಪಡಿಸಬೇಕಾದರೆ ಅಳುವುದೊಂದೇ ಮಾರ್ಗ. ಆದರೆ ಈ ಅಳುವಿನಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಹೆಚ್ಚು ಪರಿಶ್ರಮವುಳ್ಳ ತಾಯಂದಿರು ಮಗುವು ಏತಕ್ಕೆ ಅಳುತ್ತದೆಂಬುದನ್ನು ಗ್ರಹಿಸಿ ಅದಕ್ಕೆ ಸಹಾಯವನ್ನು ಒದಗಿಸಿ ಅದರ ಕಷ್ಟವನ್ನು ನಿವಾರಿಸುತ್ತಾರೆ. ಅನೈಚ್ಛಿಕ ಪ್ರತಿಕ್ರಿಯೆಯಾದ ಅಳುವು ಕ್ರಮೇಣ ಐಚ್ಛಿಕಪ್ರತಿಕ್ರಿಯೆಯಾಗಿ ಪರಿಣಮಿಸುವುದು. ತಾನು ಅತ್ತಾಗಲೆಲ್ಲಾ ತಾಯಿಯು ತನಗೆ ನೆರವಾಗುತ್ತಾಳೆಂದು ಮಗುವಿಗೆ ಅರ್ಥವಾಗುತ್ತದೆ. ಹೀಗೆ ಅಳುವುದರಿಂದ ತನ್ನ ಇಚ್ಛೆಯು ಪೂರ್ಣವಾಗುವುದಲ್ಲದೆ ಎದೆ, ಕತ್ತು, ಮುಖಗಳಲ್ಲಿರುವ ಮಾಂಸಖಂಡಗಳಿಗೆ ಒಳ್ಳೆಯ ವ್ಯಾಯಾಮವಾಗುತ್ತದೆ.

ತೊದಲುವಿಕೆ : ತೊದಲುವಿಕೆ ಮಗುವಿನ ಎರಡನೇ ತಿಂಗಳ ಅಂತ್ಯದಲ್ಲಿ ಪ್ರಾರಂಭವಾಗುತ್ತದೆ. ಈ ಹಂತದಲ್ಲಿ ವಿಧವಿಧವಾದ ಶಬ್ದೋಚ್ಚಾರಣೆಯೇ ಮುಖ್ಯ ಗುರಿಯಾಗಿರುವುದು. ಮಗುವು ಉಚ್ಚರಿಸಿದ ಯಾವ ಶಬ್ದಕ್ಕೂ ಅರ್ಥವಿರುವುದಿಲ್ಲ. ಮುಂದಿನ ಜೀವನದಲ್ಲಿ ಅರ್ಥವುಳ್ಳ ಮಾತುಗಳನ್ನಾಡಲು ಈ ಹಂತವೇ ಭದ್ರವಾದ ತಳಹದಿ. ಸ್ವರಾಕ್ಷರ ಉಚ್ಚಾರಣೆಯೇ ಅತಿಯಾಗಿರುವುದು. ಅದರಲ್ಲೂ "ಅ"ಕಾರವೇ ಪ್ರಧಾನ. ಒಂದು ಬಾರಿ ಉಚ್ಚರಿಸಲು ಪ್ರಾರಂಭಿಸಿದರೆ ಅದೇ ಸ್ವರವನ್ನು ಬಹಳ ಹೊತ್ತು ಎಳೆಯುತ್ತಾ ಧ್ವನಿಮಾಡುತ್ತದೆ. ಈ ಧ್ವನಿಯು ಮಗುವಿನ ಕಿವಿಗೆ ಬಹಳ ಇಂಪಾಗಿರುತ್ತದೆ ಮತ್ತು ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತದೆ. ಇದನ್ನು ಮಗುವಿನ ಜೀವನದಲ್ಲಿ ಹರ್ಷದಾಯಕವಾದ ಘಟ್ಟವೆಂದು ಪರಿಗಣಿಸಬಹುದು. ಮಗುವಿನ ಗಮನಕ್ಕೆ ಬಾರದೆಯೇ ಅದು ತೊದಲುವುದು. ಈ ಅಭ್ಯಾಸ ಸತತವಾಗಿ ಐದನೇ ತಿಂಗಳ ಅಂತ್ಯದವರೆವಿಗೂ ನಡೆಯುವುದು. ಆರನೇ ತಿಂಗಳ ಪ್ರಾರಂಭದಲ್ಲಿ ಎಲ್ಲಾ ಅಂಗಗಳೂ ಮತ್ತು ನರಬಳ್ಳಿಗಳೂ ಬೆಳೆದು ಸ್ವಲ್ಪ ಶಕ್ತಿಯನ್ನು ಹೊಂದುತ್ತವೆ. ಈಗ ಇದರ ಧ್ವನಿಯು ಸ್ಪಷ್ಟತೆಗೆ ನಾಲ್ಕೈದು ಹೆಜ್ಜೆ ಹಿಂದೆ ಇರುತ್ತದೆ

ಧ್ವನಿ ಅನುಕರಣೆ : ಈಗ ಮಗುವು ಇಂಪಾದ ಮತ್ತು ಖಚಿತವಾದ ಧ್ವನಿಯನ್ನು ಉಚ್ಚರಿಸುತ್ತದೆ. ತನ್ನ ಧ್ವನಿಯನ್ನು ಕೇಳಿ, ಮುಖದಲ್ಲಿ ಮುಗುಳ್ನಗೆಯಿಂದ ಆನಂದವನ್ನು ವ್ಯಕ್ತಪಡಿಸಿ, ಅದೇ ಧ್ವನಿಯನ್ನು ಪದೇ ಪದೇ ಅನುಕರಿಸುತ್ತದೆ. ಈ ಅನುಕರಣದಲ್ಲಿಯೇ ಆ ಮಗುವಿಗೆ ಒಂದು ರೀತಿಯಾದ ಸಂತೋಷವು ಲಭಿಸುವುದು. ಈ ಘಟ್ಟದಲ್ಲಿ ಅನುಕರಣೆಯು ವಿಶೇಷವಾದ ಪಾತ್ರವನ್ನು ವಹಿಸುತ್ತದೆ. ಈ ಅಭ್ಯಾಸವೇ ಆಟವಾಗಿ ಪರಿಣಮಿಸುತ್ತದೆ. ಇದು ಒಂಬತ್ತನೇ ತಿಂಗಳ ಅಂತ್ಯದವರೆವಿಗೂ ಸಾಗುತ್ತದೆ. ಕಿವಿಕೇಳಿಸದ ಮಗುವಿಗೆ ಇದೇ ಕೊನೆಯ ಹಂತ. ತಾನೇ ಉಚ್ಚರಿಸಿದ ಧ್ವನಿಯನ್ನು ಕೇಳುವ ಸುಯೋಗ ಆ ಮಗುವಿಗೆ ಇಲ್ಲ. ಇದರಿಂದಾಗಿ ಅನುಕರಣೆಯ ಪ್ರಶ್ನೆಯೇ ಏಳುವುದಿಲ್ಲ. ಅಂತಹ ಮಗುವು ತನ್ನ ಜೀವನವೆಲ್ಲವನ್ನು ಮೂಕಪ್ರಾಣಿಯಂತೆ ಕಳೆಯಬೇಕು. ಇದೇ ಪ್ರಾಮುಖ್ಯವಾಗಿ ತಳಹದಿಯ ಘಟ್ಟ.

ಇಲ್ಲೇ ಮಗುವಿಗೆ ನ್ಯೂನತೆಯಿರುವುದರಿಂದ ಅದು ಮುಂದಿನ ಘಟ್ಟಕ್ಕೆ ಹೋಗಲು ಸಾಧ್ಯವೇ ಇಲ್ಲ. ಆದ್ದರಿಂದ ಕಿವುಡು ಮಗುವು ಸ್ವಾಭಾವಿಕವಾಗಿ ಮೂಗಿಯಾಗೇ ಇರುತ್ತದೆ. ಈ ಹಂತದಲ್ಲಿ ಪ, ಬ, ಮ ಎಂಬ ವ್ಯಂಜನಾಕ್ಷರ ಉಚ್ಚಾರಣೆಯೇ ಪ್ರಧಾನ. ಅದಲ್ಲದೆ ಹೇಳಿದ್ದನ್ನೇ ಹೇಳುತ್ತಿರುವುದು ಒಂದು ವಿಶೇಷ. ಮಗುವು ಹತ್ತನೇ ತಿಂಗಳಲ್ಲಿ ಮತ್ತೊಬ್ಬರ ಧ್ವನಿಯನ್ನು ಅನುಕರಿಸಲು ಪ್ರಾರಂಭಿಸುತ್ತದೆ. ಅವರು ಮಾತನಾಡಿದ ಪದಗಳ ಅರ್ಥವೇನೆಂಬುದು ಮಗುವಿಗೆ ಅರ್ಥವಾಗಿರುವುದಿಲ್ಲ. ಆದರೆ ಆ ಮಾತಿನ ಧ್ವನಿಯು ಅವರ ಕಿವಿಗೆ ಇಂಪಾಗಿರುತ್ತದೆ. ಆದುದರಿಂದ ಅದು ಅದೇ ಧ್ವನಿಯನ್ನು ಉಚ್ಚರಿಸಲು ಪ್ರಯತ್ನಿಸುತ್ತದೆ. ಒಂದು ವರ್ಷ ಮುಗಿಯುವುದರೊಳಗೆ ಧ್ವನಿಯ ಅನುಕರಣೆ ವಿಶೇಷವಾಗಿ ಮುಂದುವರೆದು ಮುಂದೆ ಸ್ಪಷ್ಟವಾಗಿ ಮಾತನಾಡಲು ಬೇಕಾದ ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತದೆ.

ಭಾವಗ್ರಹಣ : ಎರಡನೇ ವರ್ಷದ ಪ್ರಾರಂಭದಲ್ಲಿ ಇನ್ನೊಬ್ಬರು ಆಡಿದ ಮಾತುಗಳನ್ನು ಅರ್ಥಮಾಡಿಕೊಳ್ಳುತ್ತದೆ. ತನ್ನ ಮನೋಭಿಪ್ರಾಯಗಳನ್ನು ಮಾತುಗಳ ಮೂಲಕ ತಿಳಿಸಲು ಸಾಧ್ಯವಿರುವುದಿಲ್ಲ. ಆದರೂ ಕೈಸನ್ನೆ ಅಥವಾ ತಲೆ ಅಲ್ಲಾಡಿಸುವುದು ಇಂಥಾ ಸಂಜ್ಞೆಗಳಿಂದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ವಿಶ್ವಾಸ ಮತ್ತು ಪ್ರೀತಿಗಳಿಂದ ಆಡಿದ ಮಾತುಗಳ ಮತ್ತು ಕೋಪ ಮತ್ತು ಕಾಠಿಣ್ಯವಾಗಿ ಆಡಿದ ಮಾತುಗಳ ಭಾವವನ್ನು ಬಹಳ ಬೇಗ ಗ್ರಹಿಸುತ್ತದೆ. ಮುಖ ಹಿಂಡರಿಸುವುದು ಅಥವಾ ಮುಗುಳ್ನಗುವುದು ಇಂತಹ ಪ್ರತಿಕ್ರಿಯೆಯನ್ನು ತೋರಿಸುತ್ತದೆ. ತನಗೆ ಚೆಂಡು ಅಥವಾ ಬೊಂಬೆ ಬೇಕಾದಾಗ ಅದರ ಕಡೆ ಕೈ ತೋರಿಸಿ ಬೆರಳುಗಳನ್ನು ಆಡಿಸುತ್ತದೆ.

ಅರ್ಥಗ್ರಹಣ : ಹಿಂದೆಯೇ ತಿಳಿಸಿದಂತೆ ಮಗುವು ತನ್ನ ಧ್ವನಿ ಅನುಕರಣೆಯ ಸಂದರ್ಭದಲ್ಲಿ " ಪ, ಬ, ಮ " ವ್ಯಂಜನಾಕ್ಷರಗಳನ್ನು ಪದೇ ಪದೇ ಉಚ್ಚರಿಸುತ್ತದೆ. ತನ್ನ ಕಿವಿಗೆ ಬಹಳ ಇಂಪಾಗಿರುವುದರಿಂದ ಅದನ್ನೇ ಹೇಳುತ್ತಿರುತ್ತದೆ. ಈ ಉಚ್ಚಾರಣೆಗಳು ಮಾತುಗಳಲ್ಲ ಮತ್ತು ಅವುಗಳಿಗೆ ಯಾವ ಅರ್ಥವೂ ಇರುವುದಿಲ್ಲ. ಅದು " ಮ, ಮ, ಮ," ಎಂದು ಉಚ್ಚರಿಸುತ್ತಿದ್ದಾಗ ಆ ಮಗುವಿನ ತಾಯಿಯು ಅಕಸ್ಮಾತ್ತಾಗಿ ಅದನ್ನು ಕೇಳಿದಾಗ ತನ್ನ ಮಗುವು ತನ್ನನ್ನು " ಅಮ್ಮ " ಎಂದು ಕರೆಯುತ್ತಾ ಇದೆಯೆಂದು ಭಾವಿಸಿ ತತ್‍ಕ್ಷಣವೇ ಆ ಮಗುವನ್ನು ಅಪ್ಪಿ ಮುದ್ದಿಸುತ್ತಾಳೆ. ಈ ರೀತಿಯ ಅಪ್ಪುವಿಕೆಯು ಇಬ್ಬರಿಗೂ ಬಹಳ ಹಿತವೆನಿಸುತ್ತದೆ. ಈ ಸಂದರ್ಭದಲ್ಲಿ ತಾಯಿಯೂ ಸಹ ಮಗುವಿನ ಮುಖದ ಹತ್ತಿರ " ಅಮ್ಮ, ಅಮ್ಮ " ಎಂದು ಉಚ್ಚರಿಸುತ್ತಾಳೆ. ಆ ಮಗುವಿನ ಕಿವಿಗೆ ಈ ಶಬ್ದೋಚ್ಚಾರಣೆಯು ವಿಶೇಷವಾದ ಇಂಪನ್ನು ಕೊಡುತ್ತದೆ. ಇನ್ನೊಬ್ಬರ ಧ್ವನಿಯನ್ನು ಅನುಕರಿಸುವ ಘಟ್ಟದಲ್ಲಿರುವುದರಿಂದ ಆ ಮಗುವು ಪುನಃ " ಮ, ಮ " ಎಂದು ಉಚ್ಚರಿಸುತ್ತದೆ. ಆಗ ತಾಯಿಗೆ ಸ್ವರ್ಗಸೌಖ್ಯವೇ ಲಭಿಸಿದಂತಾಗುವುದು. ಅವಳು " ಅಮ್ಮಾ, ಅಮ್ಮಾ " ಎಂದು ಉಚ್ಚರಿಸಲು ಪ್ರಾರಂಭಿಸುತ್ತಾಳೆ. ಇದೇ ರೀತಿ ತಾಯಿ ಮಕ್ಕಳಿಬ್ಬರೂ ಪರಸ್ಪರ ಅನುಕರಿಸುತ್ತಾ ಸ್ವಲ್ಪ ಹೊತ್ತು ಕಾಲ ಕಳೆಯುತ್ತಾರೆ. ಪ್ರತಿ ಮಗುವಿನ ಮತ್ತು ತಾಯಿಯ ಜೀವನದಲ್ಲಿ ಈ ರಸಸನ್ನಿವೇಶವು ಒದಗುವುದು. ಅನೇಕ ಸಂದರ್ಭಗಳಲ್ಲಿ ಮಗುವಿನ " ಮ, ಮ " ಎಂಬ ಉಚ್ಚಾರಣೆಯು ತಾಯಿಯ ಗಮನಕ್ಕೆ ಬಾರದೇ ಇರಬಹುದು. ಆದರೆ ಯಾವಾಗಲಾದರೂ ಈ ದೈವಘಟನೆ ಬರಲೇಬೇಕು. ಈ ಸಂದರ್ಭದಲ್ಲಿ ತಾಯಿಯ ಪಾತ್ರ ಬಹಳ ಹಿರಿದು. " ಮ, ಮ " ಎಂಬ ಅರ್ಥವಿಲ್ಲದ ಶಬ್ದೋಚ್ಚಾರಣೆಗೆ " ಅಮ್ಮ " ಎಂಬ ಅರ್ಥವನ್ನು ಕಲ್ಪಿಸುವವಳು ತಾಯಿ. ಈ ಆಕರ್ಷಕ ಪ್ರಸಂಗ ಅನೇಕ ಬಾರಿ ನಡೆದ ಮೇಲೆ ಮಗುವಿಗೆ " ಮಾ " ಎಂದರೆ " ಅಮ್ಮಾ " ಎಂದು ಅರ್ಥವಾಗುತ್ತದೆ. " ಮಾ " ಎಂದು ಉಚ್ಚರಿಸಿದರೆ, ತಾಯಿಯು ಬಂದು ತನ್ನನ್ನು ಮುದ್ದಾಡುತ್ತಾಳೆಂದು ಮಗುವು ಗ್ರಹಿಸುತ್ತದೆ. ಈಗ " ಮಾ " ಎಂಬುದು ಕೇವಲ ಶಬ್ದೋಚ್ಚಾರಣೆಯಲ್ಲ. ಅರ್ಥಪೂರ್ಣವಾದ ಶಬ್ದ. ಅಂದರೆ ಈಗ ಮಗುವು ಮಾತನಾಡಲು ಪ್ರಾರಂಭಿಸಿದೆಯೆಂದು ಹೇಳ

ಬಹುದು. ಸಾಧಾರಣವಾಗಿ ಪ್ರತಿ ಮಗು ಒಂಬತ್ತನೆಯ ತಿಂಗಳಲ್ಲಿ "ಅಮ್ಮ" ಎಂಬ ಮಾತಿನ ಅರ್ಥವನ್ನು ಗ್ರಹಿಸಿ, ತನ್ನ ತಾಯಿಯು ಎದುರಿಗೆ ಕಾಣದಿದ್ದಾಗ "ಅಮ" ಎಂದು ಕರೆಯಲು ಉಪಕ್ರಮಿಸುತ್ತದೆ. ಮಗುವಿನ ಸ್ವಯಂಪ್ರೇರಿತ ಉಚ್ಚಾರಣೆ ಮತ್ತು ಆ ತಾಯಿಯ ಅರ್ಥಕಲ್ಪನೆ, ಇವುಗಳ ಸಂಯೋಜನೆಯಿಂದ ಮಗುವು ಅರ್ಥಪೂರಿತ ಮಾತುಗಳನ್ನಾಡಲು ಪ್ರಾರಂಭಿಸುತ್ತದೆ. ಅನೈಚ್ಛಿಕ ಪ್ರತಿಕ್ರಿಯೆಯಾದ "ಮಾ" ಎಂಬುದು "ಅಮ್ಮಾ" ಎಂದು ಐಚ್ಛಿಕ ಪ್ರತಿಕ್ರಿಯೆಯಾಗಿ ಮಾರ್ಪಾಡಾಗುತ್ತದೆ.

ಒಂಗೆ ಕ್ರಮೇಣ ಮಗುವು ಪದಗಳ ಭಾವ ಅರ್ಥಗಳನ್ನು ಗ್ರಹಿಸಿ, ಮಾತನಾಡಲು ಪ್ರಾರಂಭಿಸುತ್ತದೆ. ಆದರೂ ಪದಗಳನ್ನು ಪೂರ್ಣವಾಗಿ ಉಚ್ಚರಿಸಲು ಸಾಧ್ಯವಾಗುವುದಿಲ್ಲ. ಪದಗಳ ಮೊದಲನೆಯ ಅಕ್ಷರ ಅಥವಾ ಮೊದಲೆರಡಕ್ಷರಗಳನ್ನು ತಪ್ಪುತಪ್ಪಾಗಿ ಉಚ್ಚರಿಸುತ್ತದೆ. ಈ ರೀತಿಯಲ್ಲಿ ಮಗುವು ಹುಟ್ಟಿದಂದಿನಿಂದ ಎರಡನೇ ವರುಷದ ಪ್ರಾರಂಭದವರೆಗೆ ಮಾತುಗಳನ್ನು ಕಲಿಯಲು ಮೇಲೆ ತಿಳಿಸಿದ ಎಲ್ಲಾ ಹಂತಗಳನ್ನೂ ದಾಟಬೇಕು.

ಅರ್ಥಪೂರ್ಣ ಪದಗಳನ್ನು ಕಲಿಯುವಿಕೆ : ಮಗುವು ಹೊಸಪದಗಳನ್ನು ಯಾವ ರೀತಿ ಕಲಿಯುತ್ತದೆಂಬುದು ಬಹಳ ಸ್ವಾರಸ್ಯಕರವಾದ ವಿಷಯ. 'ಪ' ಎಂಬ ಒಂದು ಅಕ್ಷರವನ್ನು ತೆಗೆದುಕೊಳ್ಳೋಣ. ಮಗುವು ತನ್ನಷ್ಟಕ್ಕೆ ತಾನೇ "ಪ, ಪ, ಪ, ಪ—" ಎಂಬ ಧ್ವನಿಯನ್ನು ಮಾಡುತ್ತಾ ತನ್ನ ಧ್ವನಿಯನ್ನು ಕೇಳಿ ಸಂತೋಷಿಸಿರುತ್ತದೆ. ಇದಕ್ಕೆ ಯಾವ ಅರ್ಥವು ಇರುವುದಿಲ್ಲ. ಇದೇ ಸಂದರ್ಭದಲ್ಲಿ ಯಾರಾದರೂ (ತಂದೆ ಅಥವಾ ತಾಯಿ ಅಥವಾ ಹೊರಗಿನವರು) ಒಂದು 'ಪ' ಎಂಬ ಅಕ್ಷರದಿಂದ ಪ್ರಾರಂಭವಾಗುವ ಪದವನ್ನು ಉಪಯೋಗಿಸಬಹುದು. ಉದಾಹರಣೆಗೆ, ಬಂದವರು ಪಾತು (ಪಾರ್ವತಿಯೆಂಬುವಳ ಅಡ್ಡ ಹೆಸರು) ಎಲ್ಲಿ ಎಂದು ಕೇಳುತ್ತಾರೆಂದು ಭಾವಿಸೋಣ. ಆಗ ಮಗುವು "ಪಾತು" ಎಂಬ ಮೊದಲನೇ ಅಕ್ಷರವಾದ 'ಪ' ಎಂಬುದನ್ನು ಕೇಳಿ, ಹಿಂದಿನಂತೆಯೇ "ಪ, ಪ, ಪ,—" ಎಂದು ಧ್ವನಿಮಾಡಲು ಪ್ರಾರಂಭಿಸುತ್ತದೆ. ಇನ್ನೊಬ್ಬರ ಧ್ವನಿಯನ್ನು ಕೇಳಿ ಅದೇ ರೀತಿ ಅನುಕರಣೆಮಾಡಲು ಮಗುವಿಗೆ ಸಾಮರ್ಥ್ಯವಿದೆ. ಆಗ ಪಾತು ಎಲ್ಲಿ ಎಂದು ಕೇಳಿದವರು ಈ ಮಗುವಿನ "ಪ, ಪ, ಪ,—" ಎಂಬ ಧ್ವನಿಯನ್ನು ಕೇಳಿ ಅವರದೇ ಆದ ಅರ್ಥವನ್ನು ಕಲ್ಪಿಸಿ, "ಈ ಮಗುವಿಗೆ ಪಾಪ ಬೇಕು" ಎಂದು ವಿಮರ್ಶಿಸಿ, ಅಲ್ಲೇ ಇರುವ ಒಂದು ಬೊಂಬೆಯನ್ನು ಅದರ ಮುಂದಿಟ್ಟು "ಇದೇ ಪಾಪ ತೊಗೋ" ಎಂದು ಹೇಳುತ್ತಾರೆ. ಆ ಮಗುವು "ಪ, ಪ—" ಎಂದು ಹೇಳುವುದರ ಜೊತೆಗೆ ಆ ಬೊಂಬೆಯನ್ನೇ ನೋಡುತ್ತದೆ. ವಸ್ತು ಮತ್ತು ವಸ್ತುವಿನ ಹೆಸರು, ಮಗುವು ಗ್ರಹಿಸುತ್ತದೆ. ಸ್ವಲ್ಪ ಕಾಲಾನಂತರ ಬೊಂಬೆಯನ್ನು ನೋಡಿದಾಗಲೆಲ್ಲಾ "ಪಾಪಾ" ಎಂದು ಕರೆಯಲು ಪ್ರಾರಂಭಿಸುತ್ತದೆ. ಪ್ರಾರಂಭದಲ್ಲಿ "ಪ, ಪ" ಎಂಬ ಕೇವಲ ಅರ್ಥವಿಲ್ಲದ ಧ್ವನಿ ಉಚ್ಚಾರಣೆಯು ಈಗ ಅರ್ಥಪೂರಿತ ಶಬ್ದವಾಗುತ್ತದೆ. ಅಂದರೆ ಬೊಂಬೆಯೆಂದರೆ ಪಾಪಾ ಮತ್ತು ಬೊಂಬೆಯನ್ನು ಪಾಪ ಎಂದು ಕರೆಯಬೇಕು ಎಂಬುದು ಮಗುವಿಗೆ ಪೂರ್ಣವಾಗಿ ಅರ್ಥವಾಗುತ್ತದೆ. ಮಗುವು "ಪಾಪಾ" ಎಂಬ ಹೊಸಪದವನ್ನು ಕಲಿತಹಾಗಾಯಿತು. ಕಾಲಕ್ರಮೇಣ ಇದೇ ರೀತಿ, ವಿಧವಿಧ ಸಂದರ್ಭಗಳ ಸಂಯೋಗದಿಂದ ಮಗುವು ಅನೇಕ ಅರ್ಥಪೂರ್ಣ ಪದಗಳನ್ನು ಕಲಿಯುತ್ತದೆ.

ಗ್ರಂಥಋಣ

1. Gesell: *first Five Years of Life* (Yale Clinic of Child Development, 1940)

2. Watts: *Language and Mental Development of Children*(1944)

3. Kuppaswamy; *Makkala Manassu – Bhasha Belavanige*, Mysore University (1950)

4. Subhramanya : *Language Development of Children* (M.Ed. Thesis, 1961)

ಎಂ. ಎ. ನೀಲಾಂಬಿಕಾ

ಶರಣರು ಮತ್ತು ಕಲೆಗಳು

ಮಾನವ ತನ್ನ ಮನದ ಭಾವನೆಗಳನ್ನು ಹಲವು ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ. ಕೆಲವರು ನುಡಿಯ ರೂಪದಲ್ಲಿ ಕೃತಿಗಳನ್ನು ರಚಿಸಿ, ಕೆಲವರು ರೇಖೆ ಮತ್ತು ವರ್ಣದ ಮೂಲಕ ಚಿತ್ರಗಳ ರೂಪದಲ್ಲಿ, ಕೆಲವರು ಮಣ್ಣಿನ ವಸ್ತುಗಳ ಮತ್ತು ಲೋಹದ ಮೇಲೆ ಚಿತ್ರಗಳನ್ನು ಬರೆಯುವುದರ ಮೂಲಕ ವ್ಯಕ್ತಪಡಿಸುವುದನ್ನು ನಾವೆಲ್ಲರೂ ತಿಳಿದಿದ್ದೇವೆ. ಇವುಗಳೆಲ್ಲವು ಒಂದೊಂದು ಕಲೆಯೆನಿಸಿ ಶ್ರೇಷ್ಠತೆಯನ್ನು ಪಡೆದಿವೆ.

'ಕಲೆ ಜೀವನದ ಶೃಂಗಾರ ಸಂಸ್ಕೃತಿಯ ಬಂಗಾರ'. ಈ ಕಲೆಯ ಬೆಳವಣಿಗೆ ಒಂದು ರಾಷ್ಟ್ರದ ಅಳಿವು ಉಳಿವನ್ನು ಸಹ ಅವಲಂಬಿಸಿರುತ್ತದೆ. ಕಲೆ ಇಂದು ರೂಪಿತವಾದುದಲ್ಲ, ಪ್ರಾಚೀನವಾದುದು. ದೇವತೆಗಳೂ ಸಹ ಈ ಕಲೆಗೆ ಮಾರು ಹೋಗಿದ್ದರು. ಶಿವ, ತಾಂಡವ ನೃತ್ಯವನ್ನಾಡಿ ನಟರಾಜನೆನಿಸಿ, ಕಲೆಗೆ ಆರಾಧ್ಯದೈವವಾದನೆಂಬುದು ಇದಕ್ಕೆ ನಿದರ್ಶನವಾಗಿದೆ. ನಂದಿ ಷಣ್ಮುಖರ ಮದ್ದಳೆ, ಶಾರದೆ ನಾರದರ ವೀಣೆ, ಭೃಂಗಿಯ ನೃತ್ಯ ಇವುಗಳು ಪುರಾಣ ಪ್ರಸಿದ್ಧವಾಗಿವೆ. ಈ ಕಲೆಯು ಅಂದಿನಿಂದ ಇಂದಿನವರೆವಿಗೂ ಬೆಳೆದುಬಂದಿರುವುದನ್ನು ಕಾಣುತ್ತೇವೆ. ಇಲ್ಲಿ ನಾನು ಹೇಳ ಹೊರಟಿರುವುದು ೧೨ನೇ ಶತಮಾನದಲ್ಲಿ ಶಿವಶರಣರು ಯಾವ ಯಾವ ಕಲೆಗಳನ್ನು ಅನುಸರಿಸಿ ಶಿವನನ್ನು ಮೆಚ್ಚಿಸಿ ಬಯಲಿನಲ್ಲಿ ಬಯಲಾದರು ಎಂಬುದನ್ನು ಮಾತ್ರ.

ಕಲ್ಯಾಣಕ್ಕೆ ಕಾಲಿಟ್ಟ ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೊಂದು ಕಾಯಕವನ್ನನುಸರಿಸಲೇಬೇಕಿತ್ತು. ಬಸವಣ್ಣನವರು 'ಕಾಯಕವೇ ಕೈಲಾಸ' ಎಂದು ಸಾರಿ ಜನರೆಲ್ಲರ ಮನಸ್ಸನ್ನು ಕಾಯಕದತ್ತ ತಿರುಗಿಸಿದರು. ಪರಿಣಾಮವಾಗಿ ಒಂದು ಕಾಲದಲ್ಲಿ ಕೀಳಾಗಿ ಕಾಣುತ್ತಿದ್ದ ವೃತ್ತಿಗಳೆಲ್ಲವೂ ಕಾಯಕವೆನಿಸಿ, ಪರಮಾತ್ಮನನ್ನು ಕಾಣಲು ಸಾಧನವಾದವು. ವೇದಗಳಲ್ಲಿ ಉಕ್ತವಾದ ವೀಣಾ, ಕರ್ಕರೀ, ದುಂದುಭಿ ಮುಂತಾದ ವಾದ್ಯಗಳನ್ನು ನುಡಿಸುವ ಕಾಯಕವನ್ನು ಅನುಸರಿಸುದಲ್ಲದೆ ಇನ್ನೂ ಅನೇಕ ಕಲೆಗಳನ್ನು ಅನುಸರಿಸಿ, ಉಳಿಸಿ ಬೆಳೆಸಿದರು. ಕಲೆಗಳನ್ನು ಕಾಯಕದ ನೆಲೆಗೇರಿಸಿ ಶಿವನಿಗೆ ಪ್ರಿಯರಾದರು. ಸಕಲೇಶಮಾದರಸನ ವೀಣೆ, ಕಕ್ಕಯ್ಯನ ಕಂಕರೀ, ಬ್ರಹ್ಮಯ್ಯನ ಕಿನ್ನರಿ, ಚೌಡಯ್ಯನ ಬಹುರೂಪ, ಬ್ರಹ್ಮಯ್ಯನ ಕಲಕೇತ ವೇಷ, ಘಟ್ಟಿವಾಳಯ್ಯನ ಮದ್ದಳೆ ಇವೇ ಮುಂತಾದವು ಅವರ ಕಾಯಕಗಳಾಗಿದ್ದು ಅವರ ಹೆಸರಿನೊಡನೆ ಬೆರತು ಬಂದುವು. ಉದಾಹರಣೆಗೆ—ಕಂಕರೀ ಕಕ್ಕಯ್ಯ, ರಾಗದ ಸಂಕಣ್ಣ, ಕಿನ್ನರಿ ಬೊಮ್ಮಯ್ಯ, ಬಹುರೂಪಿ ಚೌಡಯ್ಯ, ಇತ್ಯಾದಿ.

ಸಂಗೀತ, ಕಲೆಗಳಲ್ಲೆಲ್ಲ ಪ್ರಾಚೀನವಾದುದು ಮತ್ತು ಪ್ರಮುಖವಾದುದು, ಇದಕ್ಕೆ ನಿದರ್ಶನ ಸಾಮವೇದ. ಸಂಗೀತವನ್ನು ಅಧ್ಯಾತ್ಮದ ನೆಲೆಗೇರಿಸಿದ್ದವರಲ್ಲಿ ಹರಿದಾಸರೂ ವಚನಕಾರರೂ ಪ್ರಮುಖರಾಗಿದ್ದಾರೆ. ಸಂಗೀತ ಮತ್ತು ಭಕ್ತಿ ಇವೆರಡನ್ನು ಒಳಗೊಳಿಸಿದ ಕೀರ್ತಿ ಇವರಿಗೆ ಸೇರಿದ್ದು. ಶರಣರ ವಚನಗಳು ಒಂದೊಂದೂ ಸಂಗೀತಾತ್ಮಕವಾಗಿದೆ ಎಂಬುದನ್ನು

ಡಾ| ಎಲ್. ಬಸವರಾಜುರವರು ತಮ್ಮ ಕೃತಿ 'ಶಿವದಾಸ ಗೀತಾಂಜಲಿ'ಯಲ್ಲಿ ಒಂದೊಂದು ವಚನವನ್ನು ಹಾಡಲು ಅನುಕೂಲವಾಗುವಂತೆ "ರಾಗ"ಗಳನ್ನು ಸಂಯೋಜಿಸಿ ತೋರಿಸಿದ್ದಾರೆ ಉದಾಹರಣೆಗೆ--

ರಚನೆ-ಅಲ್ಲಮ ಪ್ರಭು । ರಾಗ–ರಾಮಕ್ರಿ

ನುಡಿಯಲಾಗದಿನ್ನು, ನುಡಿಯಲಾಗದಿನ್ನು
ನುಡಿಯಲಾಗದಿನ್ನು, ಜಡಮರ್ತ್ಯರೊಡನೆ ।ಪಲ್ಲವಿ।
ಗಗನಾಕಾರದ ಮಂಟಪದೊಳಗೆ
ಹೊಗಲುಪಾಯವಿಲ್ಲೆಂದುದು ಘನ
ಕಂಗ[ಳ]ಲಿಂಗ ಕರಸ್ಥಲ ಜಂಗಮ
ಬಂದ ಸಂಬಂಧವನರಿಯದಾಗಿ । ೧ ।....

ಶರಣರಿಗೆ ಸಂಗೀತ ಕಲೆಯು ಕರತಲಾಮಲಕವಾಗಿತ್ತು. ಅವರ ವಚನಗಳನ್ನು ನೋಡಿದಾಗ ಅವರಿಗಿದ್ದ ರಾಗದ ಕಲ್ಪನೆ ತಿಳಿಯುತ್ತದೆ.

ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ನರವ ತಂತಿಯ ಮಾಡಯ್ಯ
ಎನ್ನ ಶಿರವ ಸೋರೆಯ ಮಾಡಯ್ಯ
ಎನ್ನ ಬೆರಳ ಕಡ್ಡಿಯ ಮಾಡಯ್ಯ
ಬತ್ತೀಸರಾಗವ ಹಾಡಯ್ಯ....

ಈ ಬಸವಣ್ಣನವರ ವಚನವನ್ನು ನೋಡಿದಾಗ ತಮ್ಮ ದೇಹವನ್ನು ದಂಡಿಗೆಯನ್ನಾಗಿ ರೂಪಿಸಿ 32 ರಾಗಗಳಿಂದ ಹಾಡುವೆ ಎಂದು ಹೇಳಿದ್ದಾರೆ. ಹರಿಹರನು ಲಿಂಗಾರ್ಚನೆಯ ರಗಳೆಯಲ್ಲಿ 'ಲಲಿತ, ಬಂಗಾಳ, ಮಲಹರಿ, ವರಾಳಿ, ದೇಶಿ, ಗುಜ್ಜರಿ, ದೇಶಾಕ್ಷಿ, ಗೌಳ ಮುಂತಾದ ಬತ್ತೀಸರಾಗಗಳಲ್ಲಿ ಕೆಲವೊಂದನ್ನು ಹೇಳುತ್ತಾನೆ.

ರಾಗದ ಸಂಕಣ್ಣ ವಿವಿಧರಾಗಗಳ ಮೂಲಕ ಹಾಡುವ ಕಾಯಕವನ್ನು ಕೈಗೊಂಡಿದ್ದ. ಈತನಿಗೆ ಈ ಕಲೆ ಹುಟ್ಟಿನಿಂದಲೇ ಮೈಗೂಡಿತ್ತು. ಪ್ರತಿದಿನವೂ ಶಿವಾಲಯಕ್ಕೆ ಹೋಗಿ ಭಕ್ತಿಯಿಂದ ಭಾವಪರವಶನಾಗಿ ಹಾಡುವುದು ಇವನ ದಿನಚರಿ. ಈತನ ರಾಗ ಮಾಧುರ್ಯಕ್ಕೆ ಮಾರುಹೋದ ಕಲ್ಯಾಣಚಾಲುಕ್ಯರ ದೊರೆ ವಿಕ್ರಮಾಂಕನು ಈತನನ್ನು ತನ್ನ ಅಸ್ಥಾನ ವಿದ್ವಾಂಸನನ್ನಾಗಿ ಮಾಡಿದ್ದಲ್ಲದೆ ದಿನಂಪ್ರತಿ ೧೨ ವರಹಗಳನ್ನು ಕೊಡುತ್ತಿರುತ್ತಾನೆ. ಆ ಹಣದಿಂದಲೇ ಸಂಕಣ್ಣ, ಗುರು ಲಿಂಗಜಂಗಮರನ್ನು ಸತ್ಕರಿಸುತ್ತಿದ್ದನು, ಒಮ್ಮೆ ಸಂಕಣ್ಣನಿಗೂ ಮತ್ತು ಗೌಳದೇಶದ ಗಾಯಕನಿಗೂ ಸ್ಪರ್ಧೆ ನಡೆಯುತ್ತದೆ. ಭಕ್ತಿಯಿಂದ ಭಾವಪರವಶನಾಗಿ ಹಾಡಿದ ಸಂಕಣ್ಣ ಸ್ಪರ್ಧೆಯಲ್ಲಿ ಗೆದ್ದು ದೊರೆಯಿಂದ 'ರಾಗದಸಾಂಕ' ಎಂಬ ಬಿರುದನ್ನು ಪಡೆಯುತ್ತಾನೆ.

ಬಹುರೂಪಿ ಚೌಡಯ್ಯನಿಗೆ ರಾಮಕ್ರಿಯ ರಾಗವೆಂದರೆ ಬಹಳ ಅಚ್ಚುಮೆಚ್ಚು. ಇನ್ನು ಶರಣ ಗಣೇಶ ಮಸಣಯ್ಯನಿಗೆ ದೇಶಾಕ್ಷಿರಾಗವೆಂದರೆ ಬಹಳ ಪ್ರಿಯವಾದುದು. ದೇಶಾಕ್ಷಿರಾಗವಿಲ್ಲದ ಸಂಗೀತ ಉಪ್ಪಿಲ್ಲದ ಊಟದಂತೆ ರುಚಿಸುವುದಿಲ್ಲ ಎನ್ನುತ್ತಾನೆ. ಶರಣೆ 'ವೀರದೇವನಮ್ಮ ಭಕ್ತರಿಗೆ ವಚನಗಳನ್ನು ಹೇಳಿಕೊಡುವ ಕಾಯಕವನ್ನೇ ಕೈಗೊಂಡಿದ್ದು ಉಗ್ಗಡಿಸುವಕನೆ, ವೀರಾದೇವಿ' ಎಂಬ ಕೀರ್ತಿಗೆ ಪಾತ್ರಳಾದಳು.

ಶರಣರು ವಾದ್ಯಗಳನ್ನು ನುಡಿಸುವ ಕಾಯಕವನ್ನು ಹೊಂದಿದ್ದರು. ಇವರು ಅನುಸರಿಸಿದ ಕಲೆಗಳು ಭಕ್ತಿಪೂರಕವಾಗಿದ್ದು ಉನ್ನತಿಯನ್ನು ಪಡೆದಿದ್ದವು. ಸಕಳೇಶಮಾದರಸನು ವೀಣೆಯನ್ನು ನುಡಿಸುವ ಕಾಯಕದಲ್ಲಿ ನಿರತನಾಗಿದ್ದ. ಈತ 'ಲಿಂಗ ಪೂಜೆಯ ಮಾಡಿದ

ಬಳಿಕ ಲಿಂಗಕ್ಕೆ ವೀಣೆಯಿಂದ ಮೂವತ್ತೆರಡು ರಾಗವಿಂ ಅಱುವತ್ತನಾಲ್ಕು ಗೀತ ಎಂಬತ್ತೆಂಟು ಪ್ರಬಂಧ, ನೂಱಱೊಂದು ತಾಳಂ' ಇವೇ ಮೊದಲಾದನೇಕ ರಾಗಗಳನ್ನು ವೀಣೆಯಿಂದ ಲಿಂಗಕ್ಕೆ ಕೇಳಿಸಿ ಪೂಜಿಸುತ್ತಿದ್ದನೆಂಬ ವಿಷಯ ಭೈರವೇಶ್ವರಕಥಾಮಣಿಸೂತ್ರರತ್ನಾಕರದಲ್ಲಿ ಉಕ್ತವಾಗಿದೆ. ಹಿಂದೆ ಈತ ರಾಜನಾಗಿದ್ದು ಕ್ಷಣಿಕನಾದ ಈ ಅಷ್ಟವೈಭವಗಳನ್ನು ಧಿಕ್ಕರಿಸಿ ಶಾಶ್ವತನಾದ ಶಿವನನ್ನು ಪಡೆಯಲು ಕಲಾಸಕ್ತನಾದವ. ಇಂದುಮೌಳಿಯನ್ನು ಭಜಿಸಲು ವೀಣೆಯನ್ನುಪಯೋಗಿಸಿ

ತಾಳಗಮುರುನಾಟ ಶಂಕರಾಭರಣಂ ಬಂ
ಗಾಳಂ ಗುರ್ಜರಿ ತೋಡಿವ
ರಾಳರೆ ಕಲ್ಯಾಣಿ ದೇಶಿ ಕನ್ನಡರಾಗಂ–
–ಮಾಳವಮಾಶ್ರೀರಾಗಂ

ಇವೇ ಮುಂತಾದ ರಾಗದ ಮೂಲಕ, ವೀಣೆಯನ್ನು ನುಡಿಸಿ, ಪುರಾರಿ ಈ ಸರಂ ಕೇಳ್ದು ಮೆಚ್ಚುವಂತೆ ಮಾಡುತ್ತಾನೆ.

ಕಿನ್ನರಿಯ ಬಾರಿಸುತ ಕಿನ್ನರಿಯ ರಾಗದಲಿ ನನ್ನಿಯಲಿ ಶಿವಲೀಲೆಯನ್ನು ಹಾಡುತ್ತಿರುವ ಶರಣನೇ ಕಿನ್ನರಿ ಬೊಮ್ಮಯ್ಯ.

ಕಿನ್ನರಿಯ ಬೊಮ್ಮಯ್ಯ ಬಾರಿಸಲು
ಕುನ್ನಿ ಹಸು ಮರೆತು ಕಿವಿಗೊಟ್ಟು ಕಲ್ಯಾಣ
ಚೆನ್ನಾತು ಲೋಕ ಚೆಲುವಾತು

ಜಾನಪದ ಕವಿಗಳ ನುಡಿ ಆಲಿಸುತ್ತಿದ್ದಂತೆ ತ್ರಿಪುರಾಂತಕೇಶ್ವರ ದೇವಾಲಯದಲ್ಲಿ ಕಿನ್ನರಿಯ ದನಿ ಕೇಳಿಬಂತೇನೋ ಎನಿಸುತ್ತದೆ. ಈತನ ಈ ಕಿನ್ನರಿಯ ದನಿಗೆ ಶಿವನೇ ಮಾರು ಹೋಗಿದ್ದ.

ಶಿವಕೊಟ್ಟ ಕಿನ್ನರಿಯ ಭವದೊಳಗೆ ನುಡಿಸುತಲಿ
ಶಿವಬೋಧೆ ಜನಕೆ ಮಾಡುತಲಿ ಬೊಮ್ಮಯ್ಯ
ಭವಿಗಳಿಗೆ ಊದಿ ಶಿವ ಮಂತ್ರ

ಕಿನ್ನರಿಯನ್ನು ನುಡಿಸುವುದರ ಮೂಲಕ ಜನರಿಗೆ ಶಿವಾನುಭವವನ್ನು ಹೇಳುತಿದ್ದ ಬೊಮ್ಮಯ್ಯ ಕಿನ್ನರಿ ನುಡಿಸುವುದರಲ್ಲಿ ಪ್ರಮುಖನಾಗಿದ್ದನು.

ಮತ್ತೊಬ್ಬ ಶರಣ ಢಕ್ಕೆಯ ಮಾರಯ್ಯ ಈತ ಜೇವಿನ ಸೊಪ್ಪನ್ನು ಕಟ್ಟಿಕೊಂಡು ತಲೆಯ ಮೇಲೆ ಮಾರಿಯನ್ನು ಹೊತ್ತುಕೊಂಡು ಶಿವಶರಣರ ಮನೆಗಳಿಗೆ ಬರುವ ಕಾಯಕವನ್ನು ಹೊಂದಿದ್ದನು. ಈತನ ಮಾರಿ, ಜ್ಞಾನದ ಸಂಕೇತ. ಢಕ್ಕೆ ಜನತೆಯನ್ನು ಸೇರಿಸಲು ಬಳಸುತಿದ್ದ ಸಾಧನವಾದರೂ ಅದಕ್ಕೆ ಆಧ್ಯಾತ್ಮದ ನೆಲಗಟ್ಟನ್ನು ಕೊಟ್ಟಿದ್ದನು. 'ಅಹಂಕಾರವೆಂಬ ಆತ್ಮ ಛಲದ ಮಾರಿಯನ್ನು ಹೊತ್ತುಕೊಂಡು ಉಲುಹೆಂಬ ಢಕ್ಕೆಯನ್ನು ಹಿಡಿದು, ಭವವೆಂಬ ಬಾಗಿಲಲ್ಲಿ ತಿರುಗಾಡುತ್ತಲಿದ್ದೇನೆ. ಢಕ್ಕೆಯ ದನಿ ಬಿಡಿಸಾ' ಎಂದು ಹೇಳುತ್ತಾ ಕಾಲವೆಂಬ ಮಾರಿಯನ್ನು ಎಲ್ಲರೂ ಗೆಲ್ಲಬೇಕೆಂದು ಸಾರುತ್ತಾನೆ.

ಕಂಕರೀ ಎಂಬುದು ಜಾಡಿಕೆಯಂಥ ವಾದ್ಯ. ಕಕ್ಕಯ್ಯನೆಂಬ ಶರಣ ಕಂಕರಿಯನ್ನು ಬಾರಿಸಿಕೊಂಡು ಕುಣಿದು ಶರಣರ ತತ್ತ್ವವನ್ನು ಜನರ ಮನದಲ್ಲಿ ಬಿತ್ತುವ ಕಾಯಕವನ್ನು ಹೊಂದಿದ್ದವನು. ಒಮ್ಮೆ ಶಿವನು ಇವನನ್ನು ಪರೀಕ್ಷಿಸಲು ಕಂಕರಿಯ ದನಿಗೆ ತಕ್ಕಂತೆ ಕುಣಿಯತೊಡಗುತ್ತಾನೆ. ಜನರು ಕಂಕರಿಯ ನುಡಿಸುವುದಕ್ಕೆ ಕಕ್ಕಯ್ಯ ಸೋತಾನೋ ಕುಣಿವುದಕೆ ಆ ಮರುಳು ರೂಪದ ಜಂಗಮ ಸೋತಾನೋ ಎಂದು ನೋಡುತಿರಲು ಮೂರು ದಿನಗಳವರೆಗೂ

ಸತತವಾಗಿ ಕಂಕರಿಯು ದನಿಗನುಗುಣವಾಗಿ ಕುಣಿಯುತ್ತಾನೆ. ಆದರೆ ಶಿವನ ನೃತ್ಯ ನಿಂತರೂ ಕಂಕರಿಯು ದನಿ ನಿಲ್ಲಲಿಲ್ಲ. ಕಥೆ ಏನೇ ಇರಲಿ, ಇಲ್ಲಿ ಕಕ್ಕಯ್ಯನ ಕಲಾಪ್ರೌಢಿಮೆ ವ್ಯಕ್ತವಾಗಿದೆ.

ನೃತ್ಯ ಕಲೆಗಳಲ್ಲಿ ಒಂದು. ಇದನ್ನು ಸದಾ ಕಾಯಕವನ್ನಾಗಿ ಅನುಸರಿಸಿದ್ದರು ಶರಣರು. ಇವರಲ್ಲಿ ಘಟ್ಟಿವಾಳಯ್ಯ, ಬಹುರೂಪಿ ಚೌಡಯ್ಯ ಇವರೇ ಮುಂತಾದವರು ಪ್ರಮುಖರು.

ಘಟ್ಟಿವಾಳಯ್ಯನ ಹಿಂದಣ ಹೆಸರು ಮುದ್ದಣನೆಂದು. ಈತ ಮದ್ದಳೆ ನುಡಿಸುತ್ತ ಶಿವಾನುಭವವನ್ನು ಹೇಳುತ್ತ ಗುರುಲಿಂಗಜಂಗಮರ ಸೇವೆ ಮಾಡುತ್ತಿದ್ದ. ಈತನ ಜೀವನದಲ್ಲಿ ನಡೆದ ಘಟನೆ ಇವನ ಮನವನ್ನು ಪರಿವರ್ತಿಸಿತು.

ಹೊನ್ನು ಹೆಣ್ಣು ಮಣ್ಣು ತನ್ನದೆಂಬುವ ಮೂರ್ಖ
ಹೊನ್ನು ಭೂಪಾಲರಿಗೆ ಹೆಣ್ಣೊಲಿದ ಕಾಮುಕಗೆ
ಮಣ್ಣು ಬಲವಂತಗಲ್ಲದೆ ಬರಿಯ ಭ್ರಾಂತಿಯೆಲ್ಲ

ಎಂದು ಸಾರುತ್ತ ತನ್ನ ಸಂಸಾರವನ್ನು ತ್ಯಜಿಸಿ ವಿಶ್ವಕುಟುಂಬಿಯಾಗಿ ಮದ್ದಳೆಯನ್ನು ಹಿಡಿದು ಕಲ್ಯಾಣಕ್ಕೆ ಬಂದು, ಹಿಂದೆ ಅನುಸರಿಸಿದ 'ನೃತ್ಯ' ಕಲೆಯನ್ನು ಬಿಟ್ಟು ಮದ್ದಳೆ ನುಡಿಸುವ ಕಾಯಕವನ್ನು ಅನುಸರಿಸುತ್ತಾನೆ. 'ಕಣಕಣಿಸಿ ಕರಡಿಗಳು ಝಣಝಣಿಸಿ ತಾಳಗಳು ಥಣ ಥಣ ಥಿತ್ತಮುತ್ತಲಿಯ ಕಿವಿಯೊಳಗೆ–' ಕುಂಬಾರ ಗುಂಡಯ್ಯನ ನೃತ್ಯದ ಸವಿಯನ್ನೇ ಸವಿಯುತಿದ್ದಂತೆ ಧಿಮ್ಮಯ್ಯ ಥಿತ್ತಯ್ಯ ದಮ್ಮಡಿಯು ಧುಮ್ಮೆಂದು ಧಿಮ್ಮ ಕಣಕಣಿಸಿ ಕುಣಿತದೊಳು ಝುಮ್ಮೆನ್ನುವಂತೆ ಚೌಡಯ್ಯನ ನೃತ್ಯದ ಇಂಚರ ಕೇಳಿಬರುತ್ತದೆ. ಚೌಡಯ್ಯನಿಗೆ ಚಿಕ್ಕಂದಿನಿಂದಲೂ ಸಂಗೀತ, ನೃತ್ಯದಲ್ಲಿ ಆಸಕ್ತಿ. ಅಂತೆಯೇ ಆತ ಬೆಳೆದ ಮೇಲೆ ಬಹುರೂಪಧರಿಸಿ ಜನರನ್ನು ಸಂತೋಷಪಡಿಸುವ ಕಾಯಕದಲ್ಲಿ ನಿಷ್ಣಾತನಾದ. ಅನಂತರ ಬಸವಣ್ಣನ ಮಹಿಮೆಯನ್ನು ಕೇಳಿ ಕಲ್ಯಾಣಕ್ಕೆ ಬಂದು–ಚಿತ್ರವಿಚಿತ್ರವಾದ ಬಹುರೂಪವನಾಡಿ ವಿದ್ಯೆಯ ತೋರಿ ಭಕ್ತರಲಿ ಕಾಯಕದ ತಂದು–ಜಂಗಮಾರ್ಚನೆ ಮಾಡುತ್ತಿರುತ್ತಾನೆ. ಒಟ್ಟಿನಲ್ಲಿ ಈತನಿಗೆ ಈ ಕಲೆ ಹುಟ್ಟಿದೊಡನೆ ಮೈಗೂಡಿಕೊಂಡು ಬಂದಿತ್ತು. 'ಹೆಸರಿಲ್ಲದ ಜನನಿಕೆಯ ಮರೆಯಲ್ಲಿ ಬಂದು ಆಸುವಿನಬಹುರೂಪನುಂ ತೊಟ್ಟು' ಪಶುಪತಿಯ ಅವತಾರವನ್ನಾಡುತ್ತಿರುತ್ತಾನೆ.

ಇದರಂತೆ ಕಲಕೇತನೆಂಬ ಕಲೆಯಲ್ಲಿ ಪ್ರಸಿದ್ಧನಾಗಿದ್ದವ ಬ್ರಹ್ಮಯ್ಯನೆಂಬ ಶರಣ. ಆತ ಹಣೆಯಲ್ಲಿ ಭಸ್ಮಧರಿಸಿ ಕಿವಿಯಲ್ಲಿ ಕೆಂಪಳಿರನಳವಡಿಸಿಕೊಂಡು ಕಾಗಿನಕಪ್ಪ ತವುಟ್ಟು ಒಂದು ಕಾಲಲಿ ಗೆಜ್ಜೆಯನು ಬಿಗಿದು ತಗರಿನ ಬಲಿದ ಕೊಂಬನ್ನು ಎಡದ ಕೈಯಲ್ಲಿ ಹಿಡಿದು 'ಅಳವಡಿದ ಕಲಕೇತ ವೇಷಂದಳೆದು ಶಿವಭಕ್ತನಿವಾಸಗಳಿಗೆ ಗಮಿಸಿ ತನ್ನ ಯೋಜಿತಿಯನಂತು ಮುಚ್ಚುಕಿಸುತ ಜನರನ್ನು ನಗಿಸಿಕೊಂಡಗದಾಟವಾಡುವ ಭೃಂಗಿಯಂತೆ ನೃತ್ಯವಾಡುತ್ತಾನೆ. ಈ ಕಲೆಯನ್ನು ನೋಡಿ ಸಂತೋಷಗೊಂಡು ಜನರು ಕೊಟ್ಟದ್ದನ್ನು ತೆಗೆದುಕೊಂಡು ಗುರುಲಿಂಗಜಂಗಮರ ಸೇವೆ ಮಾಡುತ್ತಿರುತ್ತಾನೆ.

ಹೀಗೆ ೧೨ನೇ ಶತಮಾನದಲ್ಲಿ ಪ್ರತಿಯೊಬ್ಬ ಶರಣ ಶರಣೆಯೂ ಒಂದೊಂದು ಕಾಯಕವನ್ನನುಸರಿಸಿ ಉನ್ನತಿಗೇರಿದ್ದರು. ಅಲ್ಲದೆ ಕಲೆಯನ್ನು ಉಳಿಸಿ ಬೆಳೆಸಿದರು. ನಿಕೃಷ್ಟವೆನಿಸಿದ್ದ ಕಲೆಗಳೂ ಸಹ ದೈವವನ್ನು ಕಾಣುವ ಮಾರ್ಗವಾಯಿತು. ಆದರೆ ಈ ಕಾಯಕವನ್ನನುಸರಿಸಿದ್ದ ಅವರ ಗುರಿ ದೈವವನ್ನು ಸಾಕ್ಷಾತ್ಕರಿಸಿಕೊಳ್ಳುವುದು, ಕಾಯಕ ಅವಕ್ಕೆ ಒಂದು ಮಾರ್ಗ.

ಪಿ. ಆರ್. ತಿಪ್ಪೇಸ್ವಾಮಿ

ಎಸ್. ಆರ್. ಐಯಂಗಾರ್

ಇಲ್ಲಿಗೆ ಕೆಲವು ವರ್ಷಗಳ ಹಿಂದಿನ ಮಾತು. ಮೈಸೂರಿನ ವಾಣಿವಿಲಾಸ ಮೊಹಲ್ಲಾದಲ್ಲಿ ಕಾರ್ಯಾರ್ಥವಾಗಿ ಹೋಗಿದ್ದ ನಾನು, ಹಾಗೆಯೇ ಶ್ರೀ ನಿರಂಜನರನ್ನೂ ನೋಡಿಬರೋಣವೆಂದು ಹೊರಟೆ. ನಾನು ಶ್ರೀಯುತರನ್ನು ಕಂಡಾಗಲೆಲ್ಲಾ ಕಲಾಸಂಬಂಧವಾದ ಚರ್ಚೆಯನ್ನು ನಡೆಸುವುದು ವಾಡಿಕೆ. ಅಂದು ಕಲಾವಿದರ ಮಾತು ಬಂದಾಗ ಅವರು ಎಸ್. ಆರ್. ಐಯಂಗಾರ್ಯರ ವಿಷಯವನ್ನು ಹೇಳಹೊರಟರು. ಶ್ರೀ ಐಯಂಗಾರ್ಯರು ಅವರ ಅಚ್ಚುಮೆಚ್ಚಿನ ಸ್ನೇಹಿತರು. ಆದರೆ ನನಗೆ ಮಾತ್ರ ಅವರ ಕಲಾಜೀವನದ ಪರಿಚಯ ಹತ್ತು ವರ್ಷಗಳಷ್ಟು ಮಾತ್ರ ಹಳೆಯದು. ಎಂತಲೇ ಅಲ್ಲಿಂದ ಶ್ರೀ ಐಯಂಗಾರ್ಯರನ್ನು ನೋಡಿಬರಲು ಹೊರಟೆ. ನಯವಾಗಿ ಹಿಂದೆ ಬಾಚಿದ ಕಪ್ಪುಮಿಶ್ರ ಬಿಳಿಯ ಕೂದಲಿನ ನಗೆಮೊಗದ ಐಯಂಗಾರ್ಯರು ನನ್ನ ಅನಿರೀಕ್ಷಿತ ಭೇಟಿಗೆ ಆಶ್ಚರ್ಯಪಟ್ಟರೂ, ಸಂತಸದಿಂದ ಸ್ವಾಗತವನ್ನು ಕೋರಿದರು. ಅವರು ಅಲ್ಲಿರುವುದು ನನಗೆ ಆ ಮೊದಲು ತಿಳಿದಿರಲಿಲ್ಲ ಅವರ ಕಲಾಪೂರ್ಣ ಭಾವಚಿತ್ರಗಳ ಪರಿಚಯ ನನಗೆ ಬಹಳ ವರ್ಷಗಳಿಂದ ಇದ್ದಿತಾದರೂ ಅವರೊಡನೆ ಅಷ್ಟು ಹತ್ತಿರದಿಂದ ಮಾತಾಡಿರಲಿಲ್ಲ. ಅವರೊಡನೆ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಅನೇಕ ವಿಷಯಗಳನ್ನು ಮಾತಾಡುವ ಸದವಕಾಶ ಶ್ರೀ ನಿರಂಜನರಿಂದಲೇ ಕೂಡಿಬಂದಂತಾಯಿತು.

ಶ್ರೀಯುತರು ಹುಟ್ಟಿದುದು ಅಕ್ಕಿಹೆಬ್ಬಾಳಿನ ಬಳಿ ಒಂದು ಹಳ್ಳಿಯಲ್ಲಿ. ಇವರ ತಂದೆಯವರಾದ ಶ್ರೀ ಕೆ ಶ್ರೀನಿವಾಸ ಐಯಂಗಾರ್ಯರು ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಅವರ ಏಳುಮಂದಿ ಮಕ್ಕಳಲ್ಲಿ ಶ್ರೀ ಎಸ್. ರಂಗಸ್ವಾಮಿ ಐಯಂಗಾರ್ಯರು ನಾಲ್ಕನೆಯವರು. ಏಳನೇ ವಯಸ್ಸಿನಲ್ಲಿಯೇ ಚಿತ್ರಕಲೆಯ ಮೇಲೆ ಮೋಹ ಅಂಕುರಿಸಿತು. ತೆಳು ಕಾಗದದ ಮೇಲೆ ಭೂಪಟಗಳನ್ನು ಬರೆದು ಅವಕ್ಕೆ ಬಣ್ಣ ಹಾಕುವುದು ಅವರಿಗೊಂದು ಚಟವಾಗಿದ್ದಿತು. "ಆಗ ನಾನೊಬ್ಬ ಹಳ್ಳಿಯ ಮುಕ್ಕನಾಗಿದ್ದೆ" ಎನ್ನುತ್ತಾರೆ. ಶ್ರೀಯುತರು ತಮ್ಮ ಹಟದ ಸ್ವಭಾವದಿಂದ, ಆಗಾಗ ಅವರ ತಂದೆಯವರಿಂದ "spare the rod and spoil a child" ಎಂಬಂತೆ ಚೆನ್ನಾಗಿ ಬೆತ್ತದ ಪೂಜೆಯನ್ನು ಪಡೆಯುತ್ತಿದ್ದ ಸವಿನೆನಪನು ಕುಳಿತೆಡೆಯಲ್ಲಿಯೇ ಶ್ರೀಯುತರು ಚಪ್ಪರಿಸಿದರು.

ಇವರ ಹೈಸ್ಕೂಲ್ ವಿದ್ಯಾಭ್ಯಾಸ 1916ರಲ್ಲಿ ಆರಂಭವಾಯಿತು. ಅಲ್ಲಿ ಹಲವರ ಸಹವಾಸದಿಂದ ಕುಂಚ ಹಿಡಿದು ಆಡಿಸುವಷ್ಟು ಅಲ್ಪಸ್ವಲ್ಪ ಅನುಭವ ಉಂಟಾಯಿತು. ಆಗ ತಾನೆ ಮೈಸೂರಿನಲ್ಲಿ ಹೊಸದಾಗಿ ತೆರೆಯಲಾಗಿದ್ದ 'ಗೃಹ ಕೈಗಾರಿಕಾ ಶಾಲೆ'ಯಲ್ಲಿ 'ಪಾರ್ಟ್ ಟೈಂ' ವಿದ್ಯಾರ್ಥಿಯಾಗಿ ಸೇರಿಕೊಂಡರು. ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಡ್ರಾಯಿಂಗ್ ಉಪಾಧ್ಯಾಯರಾಗಿದ್ದ ಇವರ ಅಣ್ಣನವರು ಕೈಗಾರಿಕಾ ಕಲಾಶಾಲೆಗೆ ಹೋಗಿ ಹೂಗೊಂಚ


ಲೊಂವನ್ನು ಬರೆದುಕೊಂಡು ಬಂದದ್ದು ಶ್ರೀಯುತರು ಅಲ್ಲಿಗೆ ಸೇರಲು ಮುಖ್ಯ ಆಕರ್ಷಣೆಯಾಯಿತು. ಶ್ರೀ ಬಾಪುರಾಯರು ಎನ್ನುವವರು ಅಲ್ಲಿ ಕಲಾವಿಭಾಗಕ್ಕೆ ಅಧ್ಯಾಪಕರಾಗಿದ್ದರು. ಆ ಶಾಲೆಯಲ್ಲಿ ಶ್ರೀಯುತರಿಗೆ ದೊರೆತ ತಳಹದಿ ಎಂದರೆ ಕುಂಚವನ್ನು ಧೈರ್ಯವಾಗಿ ಆಡಿಸುವುದು ಮತ್ತು ವರ್ಣಮಿಶ್ರಣ. ಅಲ್ಲಿ ಸರಿಯಾದ ಶಾಸ್ತ್ರೀಯ ಶಿಕ್ಷಣ ದೊರೆಯದಿದ್ದರೂ ಅವರಲ್ಲಿ ಸುಪ್ತವಾಗಿದ್ದ ಕಲಾಭಿಮಾನಕ್ಕೆ ಪ್ರೋತ್ಸಾಹ ದೊರಕಿದಂತಾಯಿತು. ಸ್ವಲ್ಪ ಕಾಲದಲ್ಲಿಯೇ ಆ ಶಾಲೆ ಮುಚ್ಚಲ್ಪಟ್ಟಿತು. ಅನಂತರ ಶ್ರೀಯುತರು ಸ್ವತಂತ್ರವಾಗಿ ಚಿತ್ರವನ್ನು ಅನುಕರಿಸಲು ಉಪಕ್ರಮಿಸಿದರು. ಕೊನೆಗೆ ಮೈಸೂರಿನ ಚಾಮರಾಜ ಕಲಾಶಾಲೆ ಇವರನ್ನು ಆಕರ್ಷಿಸಿತು. ಆದರೆ ಇನ್ನೂ ವಿದ್ಯಾರ್ಥಿದೆಸೆಯಲ್ಲಿದ್ದವರಿಂದ ಕಲಾಶಿಕ್ಷಣ ಸಮರ್ಪಕವಾಗಲಿಲ್ಲ.

ಕಾಲೇಜು ಜೀವನವನ್ನು ಕಂಡ ಕನ್ನಡದ ಅತ್ಯಲ್ಪ ಕಲಾವಿದರಲ್ಲಿ ಶ್ರೀಯುತರು ಮೊದಲಿಗರು. ಬಿ.ಎ. ತರಗತಿಯವರೆಗೂ ವ್ಯಾಸಂಗ ಮಾಡಿದ್ದಾರೆ. ವ್ಯಾಸಂಗ ಸಮಯದಲ್ಲಿ ಕಾಲೇಜಿನ ಪಾಠಪ್ರವಚನಗಳ ಜೊತೆಯಲ್ಲಿ ಚಿತ್ರರಚನೆಯನ್ನೂ ಅಭ್ಯಾಸವಾಗಿ ನಡೆಸಿಕೊಂಡೇ ಬಂದುದರಿಂದ 1924ರ ಹೊತ್ತಿಗೆ ಕಲೆಯಲ್ಲಿ ಅಭಿರುಚಿ ಕುದುರಿಕೊಂಡಿತು. ಅದೇ ವರ್ಷ ಬೊಂಬಾಯಿನ ಜೆ ಜೆ. ಕಲಾಶಾಲೆಯಲ್ಲಿ ಕಲಾಭ್ಯಾಸ ಮಾಡಲು ಇವರಿಗೆ ವಿದ್ಯಾರ್ಥಿ ವೇತನ ದೊರೆತು ಶ್ರೀ ಐಯಂಗಾರ್ಯರು ಕಲಾರಂಗದಲ್ಲಿ ದಿಟ್ಟತನದ ಹೆಜ್ಜೆ ಇಡಲು ದಾರಿ ವಿಶಾಲವಾಯಿತು. ಆಗ ಆ ಶಾಲೆಯ ಪ್ರಿನ್ಸಿಪಾಲರಾಗಿದ್ದ ಮಿ|| ಇ. ಗ್ಲಾಡ್‌ಸ್ಟನ್ ಸಾಲೋಮನ್ ಇವರ ಕಲಾಕೌಶಲವನ್ನು ಬಹಳವಾಗಿ ಮೆಚ್ಚಿಕೊಂಡರು. ಎರಡು ಮೂರು ವರ್ಷಗಳಲ್ಲಿ ಅದೇ ಶಾಲೆಯಲ್ಲಿಯೇ ಅಧ್ಯಾಪಕವೃತ್ತಿಯೂ ಪ್ರಾಪ್ತವಾಯಿತು. ಅದೇ ವರ್ಷ ಹಿಮಪ್ರದೇಶದ ದೃಶ್ಯಗಳನ್ನು ಚಿತ್ರಿಸಲು ಹಿಮಾಲಯ ಪರ್ವತದ ಡಾರ್ಜಿಲಿಂಗಿಗೆ ಕಳುಹಿಸಲ್ಪಟ್ಟರು. 1930ರಲ್ಲಿ ಕಲಾಡಿಪ್ಲೊಮಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸುರಿತ ಹಸ್ತದಿಂದ ಹೊರಬಂದರು. ಈಗ ಅವರ ಸ್ಥಿತಿ 'ಬತ್ತಿದ ಸರೋವರಕ್ಕೆ ನವಜಲವೊದಗಿದಂತೆ' ಮಾರ್ಪಾಟು ಹೊಂದಿತು. ಅವರು ಹೊಸ ಮನುಷ್ಯರಾದರು. ಅವರಲ್ಲಿ ಅಡಗಿದ್ದ ಸುಪ್ತಶಕ್ತಿ ವಿಕಸನಗೊಂಡಿತು. ಆದರೆ ಆ ಸಂತೋಷದ ಜೊತೆಗೆ ಅವರು ಅದೇ ವರ್ಷ ಮಾತೃವಿಯೋಗದ ತೀವ್ರ ದುಃಖವನ್ನೂ ಅನುಭವಿಸಬೇಕಾಯಿತು. ಆಗ ಅವರಾಗಲೇ ಇಪ್ಪತ್ತೆಂಟರ ಗಡಿಯನ್ನು ದಾಟಿದ್ದರು ಮೈಸೂರಿಗೆ ಮರಳಿದ ಮೇಲೆ ಸ್ವತಂತ್ರವಾಗಿ ವಿಹರಿಸುತ್ತಿದ್ದ ಪಕ್ಷಿಯನ್ನು ಪಂಜರದಲ್ಲಿ ಕೂಡಿಟ್ಟಂತೆ ಇವರಿಗೆ ಸಂಸಾರದ ಬಂಧನವು ಏರ್ಪಟ್ಟಿತು.

1933 34ರಲ್ಲಿ ಆಳಿದ ಮಹಾಸ್ವಾಮಿಯವರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಅಪ್ಪಣೆಯ ಕೆಲವು ಕನ್ನಡ ಕಲಾವಿದರಿಗೆ ದೊರೆತಂತೆ ಶ್ರೀಯುತರಿಗೂ ದೊರೆಯಿತು. ಅರಮನೆಯ ಕಲ್ಯಾಣಮಂಟಪದ ಅಲಂಕಾರಕ್ಕೆ ದಸರಾ ಮೆರವಣಿಗೆ ಚಿತ್ರಗಳನ್ನು ಚಿತ್ರಿಸುವ ಭಾಗ್ಯ ಇವರಿಗೂ ದೊರಕಿತು. ಅಲ್ಲಿಂದ ಮುಂದೆ ಎಂಟು ಹತ್ತು ವರ್ಷಗಳವರೆಗೆ ಶ್ರೀಯುತರಿಗೆ ರಾಜಾಶ್ರಯ ದೊರಕಿತು ಅದರ ಮುಂದೆ ಕೆಲಸವಿಲ್ಲದಾಗಿ ಅರಿವಾಗುವ ಪರಿಸ್ಥಿತಿ ಬಂದು ನಿರುತ್ಸಾಹ ವಾತಾವರಣ ಮೂಡಿತು. ಬದುಕಿನ ಬಾಳನ್ನು ಬೇರೆಡೆಗೆ ಗುರಿ ಮಾಡಿದರು. ಮಹಾರಾಜರಿಂದ ಆಗೊಮ್ಮೆ ಈಗೊಮ್ಮೆ ಭಾವಚಿತ್ರ ರಚಿಸುವ ಕೆಲಸಗಳು ದೊರೆತು ಹೇಗೋ ಜೀವನ ಸಾಗುತ್ತಿತ್ತು. "Failures are stepping stones for success" ಎಂಬ ತತ್ತ್ವದಂತೆ ಕಾಲಕ್ರಮದಲ್ಲಿ ಕೆಲವು ಗಣ್ಯವ್ಯಕ್ತಿಗಳ ನೆರವು ದೊರೆತು ಕೆಲವು ಉತ್ತಮ ಚಿತ್ರಗಳು ಬೆಳಕಿಗೆ ಬಂದುವು ಆಗ ಮೈಸೂರು ಕಲಾವಿದರೆಲ್ಲರೂ ಸೇರಿ ಒಂದು ಕಲಾ ಸಮಿತಿ (Arts Society) ಯನ್ನು ಏರ್ಪಡಿಸಿದ್ದರು. ಕಲಾವಿದರಲ್ಲಿ ಸಂಘಟನೆ ಸಹಕಾರ ಕಲಾ ಪ್ರದರ್ಶನಗಳನ್ನು ಏರ್ಪಡಿಸುವಿಕೆ ಮುಂತಾದುವನ್ನು ಸಾಗಿಸಲು ಒಂದು ಕಲಾಸಂಘ ಏರ್ಪಟ್ಟಿತು. 1934–35 ರಲ್ಲಿ ಶ್ರೀಯುತರೂ ಸಹ ಆ ಸಮಿತಿಯ ಕಾರ್ಯದರ್ಶಿಗಳಾಗಿ ಕೆಲಸ ಮಾಡಿದ್ದರು ಈ ಸಮಿತಿಯೇನೂ ಬಹಳ ದಿನ ಉಳಿಯಲಿಲ್ಲ. ಜೀವನದ ಸಮಸ್ಯೆ ಬೃಹತ್ತರವಾಗಿ ಕಲಾವಿದರು




ಸಂಗೀತಪಿತಾಮಹ ದಿ|| ವಾಸುದೇವಾಚಾರ್ಯರ ಕೃತಿರಚನೆಯಲ್ಲಿ
ಕಲಾವಿದ ಎಸ್. ಆರ್. ಐಯಂಗಾರ್ಯರು



ಲಾಲ್‌ಬಾಗಿನಲ್ಲಿರುವ ಶ್ರೀ ಜಯಚಾಮರಾಜ ಒಡೆಯರ ಶಿಲ್ಪಕೃತಿ
(ಜಲವರ್ಣದ ನಿಸರ್ಗಚಿತ್ರ)



ಕಲಾವಿದರ ಮಿತ್ರರು (ತೈಲವರ್ಣದ ರೂಪಚಿತ್ರ)



ಎಸ್. ಆರ್. ಐಯಂಗಾರ್ಯರ ತಂ
(ತೈಲವರ್ಣದ ರೂಪಚಿತ್ರ)

ಜುಗುಪ್ಸೆಗೊಂಡು ಜೀವನಕ್ಕಾಗಿ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಬೇಕಾಯಿತು. ಶ್ರೀಯುತರ ಜೀವನನೌಕೆಯು ಬದುಕಿನ ಬಿರುಗಾಳಿಯ ಹೊಡೆತಕ್ಕೆ ಸಿಕ್ಕು ತುಯಿದಾಡಿತು. ಇಷ್ಟಾದರೂ ಕಲೆಯಲ್ಲಿ ಇವರ ಅಭಿರುಚಿ ತಗ್ಗಲಿಲ್ಲ. ಅವರ ಕಲೋಪಾಸನೆ ಕುಂಠಿತವಾಗಲಿಲ್ಲ. ಎಂಥ ಹದಗೆಟ್ಟ ಕಾಲದಲ್ಲೂ ಚಿತ್ರರಚನೆಗೆ ಅವಕಾಶ ಕಲ್ಪಿಸಿಕೊಂಡು ನಿಲ್ಲುತ್ತಿದ್ದ ಸಾಹಸಿ ಇವರು. ದಸರಾ ವಸ್ತುಪ್ರದರ್ಶನದಲ್ಲಿ ಇವರು ರಚಿಸಿದ ಅನೇಕ ರೂಪಚಿತ್ರಗಳು ಕಾಣಿಸಿಕೊಳ್ಳುತ್ತಾ ಬಂದುವು. 1930ರಿಂದ ಇಲ್ಲಿಯವರೆಗೂ ಈ ಪ್ರದರ್ಶನಾಲಯಕ್ಕೆ ಚಿತ್ರಗಳನ್ನು ನೀಡುತ್ತಾ ಬಂದಿದ್ದಾರೆ. ಅನೇಕ ಪದಕಗಳನ್ನು ಪ್ರಶಸ್ತಿಗಳನ್ನು ಪಡೆದಿದ್ದಾರೆ. 1951ರಲ್ಲಿ ಇವರ ಒಂದು ಭಾವಚಿತ್ರಕ್ಕೆ ಸುವರ್ಣಪದಕವೂ, 1940 ಮತ್ತು 1944ರಲ್ಲಿ ರಜತಪದಕಗಳೂ ಅನೇಕ ಪ್ರಥಮ, ದ್ವಿತೀಯ ಬಹುಮಾನಗಳೂ ದೊರೆತಿವೆ. ಶ್ರೀಯುತರು ತಮ್ಮ ಕೃತಿಗಳಿಗೆ ಬಹುಮಾನಗಳನ್ನು ಪಡೆಯದ ವರ್ಷಗಳೇ ಅಪರೂಪ ಎನ್ನಬಹುದು.

ಇವರ ಸಾಧನೆ ತಪಸ್ಸುಗಳಿಂದ ಐಯಂಗಾರ್ಯರು ಈ ದಿನ ಓರ್ವ ಜನಪ್ರಿಯ ಕಲಾವಿದರಾಗಿದ್ದಾರೆ. ಭಾವಚಿತ್ರ ರಚನೆಯಲ್ಲಿ ಇವರು ಉನ್ನತ ಮಟ್ಟವನ್ನು ಮುಟ್ಟಿದ್ದರೂ “ ನಾನು ಕಲಿಯಬೇಕಾದುದು ಇನ್ನೂ ಇದೆ ” ಎನ್ನುತ್ತಾರೆ.

ಶ್ರೀಯುತರು ಬರೆದ ಭಾವಚಿತ್ರಗಳು ಅನೇಕ ಶಾಲಾಕಾಲೇಜುಗಳಲ್ಲಿ, ವಾಚನಾಲಯಗಳಲ್ಲಿ ಛತ್ರ, ದೇವಸ್ಥಾನಗಳಲ್ಲಿ ಈಗಲೂ ಬೆಳಗುತ್ತಿವೆ. ಅರಮನೆಯ ಮುಖ್ಯ ಸಂಗೀತ ವಿದ್ವಾಂಸರಾಗಿದ್ದ ದಿವಂಗತ ಬಿಡಾರಂ ಕೃಷ್ಣಪ್ಪನವರ ಭಾವಚಿತ್ರವೂ, ಅವರೇ ಕಟ್ಟಿಸಿದ ಶ್ರೀ ರಾಮಮಂದಿರದಲ್ಲಿ ಅಗ್ರಸ್ಥಾನದಲ್ಲಿ ಇರಿಸಲ್ಪಟ್ಟಿದೆ. ಆಸ್ಥಾನ ಸಂಗೀತ ವಿದ್ವಾನ್ ಶ್ರೀ ವಾಸುದೇವಾಚಾರ್ಯರ ಭಾವಚಿತ್ರವನ್ನೂ ಶ್ರೀಯುತರು ತೈಲವರ್ಣಗಳಲ್ಲಿ ರಚಿಸಿದ್ದಾರೆ. ಮೈಸೂರಿನ ಪಿತಾಮಹರೆಂದು ಪ್ರಸಿದ್ಧರಾಗಿದ್ದ ದಿವಂಗತ ವೆಂಕಟಕೃಷ್ಣಯ್ಯನವರ ಭಾವಚಿತ್ರವು ಮೈಸೂರಿನ ಪೌರಸಭಾ ಕಛೇರಿಯಲ್ಲಿ ಇಂದಿಗೂ ಶೋಭಿಸುತ್ತಿದೆ. ಈ ಚಿತ್ರಕ್ಕೆ ಇನ್ನೂರೈವತ್ತು ರೂಪಾಯಿಗಳ ದ್ರವ್ಯರೂಪವಾದ ಬಹುಮಾನವೂ ದೊರೆತಿದೆ. ಕನ್ನಡ ರಂಗಭೂಮಿಯ ಶತಮಾನೋತ್ಸವದ ಬಹುಮಾನವೂ ದೊರೆತಿದೆ. ಆ ಶತಮಾನೋತ್ಸವದ ಸಂದರ್ಭದಲ್ಲಿ ಅನೇಕ ಸುಪ್ರಸಿದ್ಧ ಕಲಾವಿದರ ಭಾವಚಿತ್ರಗಳನ್ನು ರಚಿಸಿದ್ದಾರೆ. ಅವನ್ನು ಜಗನ್ಮೋಹನ ಚಿತ್ರ ಶಾಲೆಯಲ್ಲಿ ಈಗಲೂ ನೋಡಬಹುದು.

ಮೈಸೂರಿನಿಂದ ಬೆಂಗಳೂರಿಗೆ ಹೋಗಿ ನೆಲಸಿ ಕೆಲವು ವರ್ಷಗಳ ಕಾಲ ವಿಮಾನ ಕಾರ್ಖಾನೆಯ ಕಲಾವಿಭಾಗದಲ್ಲಿ ಕೆಲಸ ಮಾಡಿದರು. ಇದರ ಜೊತೆಗೆ ಖಾಸಗಿಯಾಗಿಯೂ ಭಾವಚಿತ್ರ ಕಲೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಈಗ ವಿಶ್ರಾಂತಿ ಹೊಂದುತ್ತಿದ್ದಾರೆ. ಬಿಡುವು ದೊರೆತರೆ ಮನಸ್ಸು ಶಾಂತವಾಗಿದ್ದರೆ ಭಾವಚಿತ್ರದಲ್ಲಿ ತೊಡಗುತ್ತಾರೆ.

ಶ್ರೀಯುತರ ಆಕಾರ ಕುಳ್ಳಾದರೂ ಅದಕ್ಕೊಂದು ಕಳೆ ಬಂದಿದೆ. ಹಣೆಯ ಮೇಲೊಂದು ಕೆಂಪು ನಾಮ, ನಗುಮುಖ, ಇವು ಎಂಥವರನ್ನೂ ಆಕರ್ಷಿಸುತ್ತವೆ. ತುಂಬಾ ಸರಳ ಜೀವಿಗಳು. ವಿಶಾಲ ಹೃದಯಿಗಳು. ತಮ್ಮ ಮನಸ್ಸಿನಲ್ಲಿದ್ದುದನ್ನೆಲ್ಲಾ ಬಚ್ಚಿಡದೆ ಆತ್ಮೀಯರಲ್ಲಿ ಹೇಳಿಬಿಡುವ ಸ್ವಭಾವದವರು. ಉತ್ತಮವಾದ ಕಲಾವಿದರನ್ನು ಮನಸಾರೆ ಹೊಗಳುವ ನೈಜಗುಣ ಈ ಕಲಾವಿದರಲ್ಲಿದೆ.

ನವ್ಯಕಲೆಯ ಬಗ್ಗೆ ಮಾತನಾಡುತ್ತ ಶ್ರೀಯುತರು “ ಅದು ನನಗೆ ಸೇರದ ತುತ್ತು ” ಎನ್ನುತ್ತಾರೆ. ಆ ಕಲೆಯಲ್ಲಿ ಪರಿಣತರು, ಅನೇಕ ಬಾರಿ ಆ ವಿಷಯವಾಗಿ ಇವರನ್ನು ಪ್ರಶ್ನಿಸಿದ್ದಾರೆ. ಬುದ್ಧಿವಂತರಾದ ಶ್ರೀ ಐಯಂಗಾರ್ಯರು ಆ ಕೃತಿಗಳ ಬಗ್ಗೆ ಕೇಳಲು ಬಂದ ಮಿತ್ರರಿಗೆ ಅವರ ಬಗ್ಗೆ ಪ್ರಶ್ನೆ ಹಾಕುತ್ತಾರೆ. ಉತ್ತರ ಕೊಡಲು ತಡವರಿಸುವ ಅನೇಕ ಸಂದರ್ಭಗಳನ್ನು ಅವರು ಕಂಡಿದ್ದಾರೆ “ ನವೀನ ಕಲೆಯ ಮೂಲಭೂತ ಅಂಶಗಳನ್ನು ತಿಳಿಯದವರೆಷ್ಟೋ ಮಂದಿ ತಾವೂ ಸೃಜಿಸಿಟ್ಟಿದ ನವೀನ ಚಿತ್ರಕಾರರೆಂದು ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಕಲೆ

ಒಲಿಯಬೇಕಾದರೆ ಅಪಾರ ಅಭ್ಯಾಸ ಬಲ, ಸುಶಿಕ್ಷಣ, ಅಂತರಂಗಪ್ರೇರಣೆ ಇವು ಮುಖ್ಯ. ನವೀನ ಕಲೆಗೆ ಕ್ರಮವಾದ ಯಾವ ಅಭ್ಯಾಸವೂ ಇದ್ದಂತಿಲ್ಲ. ಈ ಬಗೆಯ ಚಿತ್ರಗಳು ಹೆಚ್ಚು ನಗೆಯನ್ನುಂಟು ಮಾಡುತ್ತವಲ್ಲದೆ ಅದರ ಮೂಲ ಅರ್ಥವನ್ನು ಗ್ರಹಿಸಲು ಪೇಚಾಟವಾಗಿ ಇದರಿಂದ ಕೃತಿಯ ಆಕರ್ಷಣೆ ಕಡಿಮೆಯಾಗುತ್ತದೆ. ಈ ಬಗೆಯ ಚಿತ್ರಗಳ ಅನುಕರಣ ಸುಲಭವಾಗಿ ಅವುಗಳನ್ನು ದುರುಪಯೋಗಪಡಿಸಿಕೊಳ್ಳಬಹುದು. ಈ ಮಾದರಿಯ ಕಲೆಗಳಿಗೆ ನಾಲ್ಕಾರು ವರ್ಷಗಳ ಅಭ್ಯಾಸ ಬೇಕೆಂಬ ಅಂಶ ಕಾಣಬರುವುದಿಲ್ಲ. ಅರೆಸುರಿತವರೂ ಅಲ್ಪಾವಧಿಯಲ್ಲಿಯೇ ತಮ್ಮದೇ ಆದ ಪ್ರಾವೀಣ್ಯತೆಯನ್ನು ಪಡೆಯಬಹುದು. 'Art is universal language' ಎಂಬ ಅಭಿಪ್ರಾಯ ನವ್ಯಕಲೆಯಲ್ಲಿ ಕಂಡುಬರುತ್ತದೆ ಎನ್ನುವುದು ಸಂಶಯಾಸ್ಪದ. ಅನೇಕ ಸಂದರ್ಭಗಳಲ್ಲಿ ಆ ಕಲಾವಿದನೇ ತನ್ನ ಕೃತಿಗಳನ್ನು ವಿಮರ್ಶಿಸಲಾರ ಎಂದ ಮೇಲೆ ಹೇಳಬೇಕಾದದ್ದೇನಿದೆ?" ಎನ್ನುತ್ತಾರೆ ಅಯ್ಯಂಗಾರ್ಯರು.

"ನವ್ಯಕಲೆ ಅಪಭ್ರಂಶಗಳ ಮುದ್ದೆ ಇದ್ದಂತೆ ಕಾಣಿಸುತ್ತಿದೆ. 'A picture must tell its tale' ಎಂಬುದನ್ನು ನಾವು ನವ್ಯಕಲೆಯಲ್ಲಿ ಕಾಣುವಂತಿಲ್ಲ. ಈ ಕಲಾಕೃತಿಗಳನ್ನು ನೋಡಿದ ಒಂದೆರಡು ನಿಮಿಷಗಳಲ್ಲಿಯೇ ಮನಸ್ಸಿಗೆ ಜುಗುಪ್ಸೆಯುಂಟಾಗುತ್ತದೆ. ಇವುಗಳನ್ನು ದೈವಿಕ ಕೃತಿಗಳೆನ್ನಲು ಸಾಧ್ಯವಿಲ್ಲ. ಮಾರ್ಮಿಕ ಅಭಿಪ್ರಾಯಗಳಿಂದ ತುಂಬಿ ಇತರರಿಗೆ ಮಾರ್ಮಿಕ ವಿಮರ್ಶೆಗಳಿಂದಲೇ ತೃಪ್ತಿಗೊಳಿಸಲು ಈ ಕೃತಿಗಳು ಚಿರಕಾಲ ಬಾಳಲು ಸಾಧ್ಯವಿಲ್ಲ" ಎಂಬುದು ಶ್ರೀಯುತರ ಸ್ಪಷ್ಟ ಅಭಿಪ್ರಾಯ. "ಕ್ರಾಂತಿಯ ಮಾರ್ಗಾವಲಂಬಿಗಳಿಗೆ ಇದೊಂದು ಸುಯೋಗ; ಕವಿಗಳೂ ವಿಜ್ಞಾನಿಗಳೂ ಚಿತ್ರಾಭ್ಯಾಸ ಪರಿಚಯವಿಲ್ಲದೆ ತಾವೇ ಸ್ವತಃ ಚಿತ್ರಿಸಿದಂತಿದೆ. ಅವರ ದೋಷಗಳು ದೋಷಗಳಲ್ಲ. ಅಭಿಪ್ರಾಯವೇ ಅವರ ಕಲೆ. ಆದರೆ ಕಲೆಯ ಕೊಲೆ"—ಎಂದು ಶ್ರೀ ಐಯ್ಯಂಗಾರ್ಯರು ನವ್ಯಚಿತ್ರಕಲೆಯ ಬಗ್ಗೆ ಖೇದದಿಂದ ನುಡಿಯುತ್ತಾರೆ.

ಹೀಗೆ ಕಲಾಪ್ರಾವಿಣ್ಯದಲ್ಲಿ ಜನಪ್ರಿಯತೆಯಲ್ಲಿ ನೈತಿಕ ಜೀವನದ ಗುಣಾಢ್ಯತೆಯಲ್ಲಿ ಶ್ರೀ ರಂಗಸ್ವಾಮಿ ಐಯ್ಯಂಗಾರ್ಯರು ಅದ್ವಿತೀಯರೆನಿಸಿದ್ದಾರೆ. ಇವರ ಕಲಾಕೀರ್ತಿ ಇನ್ನೂ ದೇದೀಪ್ಯಮಾನವಾಗಿ ಬೆಳಗಲಿ.

ಎಸ್. ಎನ್. ಶಿವರುದ್ರಸ್ವಾಮಿ

ಭಾರತದಲ್ಲಿ ಬ್ಯಾಕ್ಟ್ರಿಯಾ ಗ್ರೀಕರ ನಾಣ್ಯಗಳು

ನಾಡಿನ, ಆಳರಸರ ಇತಿಹಾಸ ರಚಿಸುವಲ್ಲಿ ಸಾಹಿತ್ಯಕ ಬರವಣಿಗೆಗಳ ಶಾಸನಗಳ, ನಾಣ್ಯಗಳು ನೆರವು ಅವಶ್ಯಕ ಮತ್ತು ಪೂರಕ. ಸಾಹಿತ್ಯಕ ಬರವಣಿಗೆಗಳಲ್ಲಿ ಅರಸಿದ ಸತ್ಯವನ್ನು ಶಾಸನಗಳ, ನಾಣ್ಯಗಳ ಮತ್ತು ಇನ್ನಿತರ ಪುರಾತತ್ವ ಆಧಾರಗಳ ನೆರವಿನಿಂದ ಮತ್ತಷ್ಟು ದೃಢೀಕರಿಸುತ್ತೇವೆ. ಕೆಲವೊಮ್ಮೆ, ಅಪರೂಪವಾದರೂ, ಕೇವಲ ನಾಣ್ಯಗಳ ಆಧಾರದಿಂದಲೇ ನಾಡಿನ ಮತ್ತು ಅರಸರ ಸಮಗ್ರ ಇತಿಹಾಸ ರಚಿಸಿದ್ದಕ್ಕೆ ಉದಾಹರಣೆಗಳು ದೊರೆಯುತ್ತವೆ. ಇದಕ್ಕೆ ಭಾರತೀಯ ಮತ್ತು ಬ್ಯಾಕ್ಟ್ರೋ–ಗ್ರೀಕರ ನಾಣ್ಯಗಳೇ ನಿದರ್ಶನ. ನಮ್ಮ ನಾಡಿನ ವಾಯುವ್ಯ ಭಾಗದಲ್ಲಿ ಮತ್ತು ಬ್ಯಾಕ್ಟ್ರಿಯಾದಲ್ಲಿ ಸುಮಾರು ಮೂವತ್ತಾರಕ್ಕೂ ಹೆಚ್ಚು ಗ್ರೀಕ್ ಅರಸರು, ತುಂಡರಸರು ಆಳಿದ್ದುಂಟು, ಮೆರೆದದ್ದುಂಟು. ಅವರ ಬಗ್ಗೆ ಬಹಳಷ್ಟು ಸಾಹಿತ್ಯಾಧಾರಗಳು ಲಭಿಸಿಲ್ಲ. ಅವರಲ್ಲಿ ಡೆಮೆಟ್ರಿಯಸ್, ಅಪೊಲೋಡೊಟಸ್, ಮೆನಾಂಡರ್ ಮತ್ತು ಯುಕ್ರಟೈಡಸ್–ಈ ನಾಲ್ವರು ಗ್ರೀಕ್ ಅರಸರ ಇತಿಹಾಸವನ್ನು ಮಾತ್ರ ಗ್ರೀಕ್ ಮತ್ತು ರೋಮಿನ ಪ್ರಾಚೀನ ಇತಿಹಾಸಕಾರರು, ಮರುಕು–ಮುರುಕಾಗಿ ತಿಳಿಸುತ್ತಾರೆ. ಆದರೆ ಈಗ ಈ ಗ್ರೀಕ್ ಅರಸರ ನಾಣ್ಯಗಳಿಂದ ಅವರ ಏಳು–ಬೀಳುಗಳು, ಅವರು ನಡೆಸಿದ ಕದನಗಳು ಮುಂತಾದ ಹಲವಾರು ವಿಷಯಗಳು ತಿಳಿದು ಬಂದಿವೆ. ಅವರ ನಾಣ್ಯಗಳು ಅವರ ರಾಜಕೀಯ ಸಂಘಟನೆ, ಆಡಳಿತ ತಂತ್ರಗಳ ಮೇಲೂ ಸ್ವಾರಸ್ಯಕರವಾದ ಬೆಳಕನ್ನೂ ಚೆಲ್ಲುತ್ತವೆ; ಅವು ಗ್ರೀಕ್‌ಕಲೆಯ ಒಳ್ಳೆಯ ಮಾದರಿ ಹೌದು. ಇಂಡೋ ಗ್ರೀಕರ ಮತ್ತು ಬ್ಯಾಕ್ಟ್ರೋ-ಗ್ರೀಕರ ಇತಿಹಾಸವನ್ನು ರಚಿಸುವಲ್ಲಿ, ಪಾಶ್ಚಾತ್ಯ ವಿದ್ವಾಂಸರಾದ ಅಲೆಗ್ಸಾಂಡರ್ ಕನ್ನಿಂಗಾಹ್ಯಾಂ, ಇ. ಜೆ. ರ್‍ಯಾಪ್ಸನ್‌ರವರುಗಳೂ ಭಾರತೀಯರಲ್ಲಿ ಈಗ ವಿಸ್‌ಕಾನ್‌ಸಿನ್ ವಿಶ್ವವಿದ್ಯಾನಿಲಯದಲ್ಲಿ ಪೌರಸ್ತ್ಯ ಇತಿಹಾಸ ಮತ್ತು ಸಂಸ್ಕೃತಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಎ. ಕೆ. ನಾರಾಯಣ್‌ರವರು ಡಾ. ಎ. ಎನ್. ಲಾಹಿರಿ, (ಶ್ರೀಮತಿ) ಡಾ. ಬೇಲಾ ಲಾಹಿರಿ, ಡಾ. ವಿ. ಡಿ ಮೋಹನ್ ಮುಂತಾದವರು ಪ್ರಮುಖರು.

ಕ್ರಿ.ಪೂ. 326ನೆಯ ವರ್ಷ ಉತ್ತರಭಾರತದಲ್ಲಿ ರಾಜಕೀಯ ಪ್ರಕ್ಷುಬ್ಧತೆಯಿದ್ದು ಐಕಮತ್ಯವಿಲ್ಲದೆ ಸಣ್ಣ ಪುಟ್ಟ ರಾಜ್ಯಗಳು, ಗಣತಂತ್ರಗಳು ಮೆರೆದಾಡುತ್ತಿದ್ದ ಕಾಲ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮ್ಯಾಸಿಡೋನಿಯಾದ ದೊರೆ ಅಲೆಗ್ಸಾಂಡರನು ಭಾರತದ ಮೇಲೆ ಬಂದೆರಗಿದನು. ಹಠಾತ್ತನೆ ಕಾಣಿಸಿಕೊಂಡ ಹೊರಗಣ ದಾಳಿಯಿಂದ ಭಾರತೀಯ ರಾಜರು ಅವನ ಆಜ್ಞಾನುವರ್ತಿಗಳಾದರು. ಅವನು ಅತಿ ಕ್ಷಿಪ್ರಕಾಲದಲ್ಲಿ ಅಂದಿನ ಜಗತ್ತನ್ನೇ ಗೆದ್ದು ಗ್ರೀಕ್ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಅವನ ನಂತರ ಅವನ ಬೃಹತ್ಸಾಮ್ರಾಜ್ಯ ಒಡೆದು, ಅವನ ಅಧಿಕಾರಿಗಳಲ್ಲಿ, ಸೇನಾನಾಯಕರಲ್ಲಿ ಹರಿದು ಹಂಚಿಹೋಯಿತು. ಬ್ಯಾಕ್ಟ್ರಿಯಾ, ಸಿರಿಯಾ, ಮತ್ತು ಭಾರತದ ವಾಯುವ್ಯ ಭಾಗದಲ್ಲಿ ಅಲೆಕ್ಸಾಂಡರಿನ ಸೇನಾನಿಗಳಲ್ಲೊಬ್ಬನಾದ ಸೆಲ್ಯೂಕಸ್ ನಿಕೆಟರನು ಅಧಿಪತಿ

ಯೂವನು. ಆ ನಂತರ ಗ್ರೀಕರು ಅಭಿವೃದ್ಧಿಗೆ ಬಂದು ಆಳಿದರು. ಅಗಥೊಕ್ಲಿಯಾ ಮತ್ತು ಕ್ಯಾಲಿಯೋಪೆ–ಎಂಬಿಬ್ಬರು ರಾಣಿಯರು ಸೇರಿದಂತೆ ಸುಮಾರು ಮುವತ್ತಾರಕ್ಕೂ ಹೆಚ್ಚು ಅರಸರು ಆಳಿದರು. ಅದುವರೆಗೆ ಚಲಾವಣೆಯಲ್ಲಿದ್ದ ನಾಣ್ಯಗಳ ಜೊತೆಗೆ ಹಲವಾರು ಹೊಸ ಬಗೆಯ ನಾಣ್ಯಗಳನ್ನು ಇವರು ಚಲಾವಣೆಗೆ ತಂದರು. ಅವರ ನಾಣ್ಯಗಳಲ್ಲಿ ಹಲವಾರು ತಂತ್ರ ವಿನ್ಯಾಸಗಳನ್ನು ಕಾಣಬಹುದು.

ಸಾಹಿತ್ಯದಲ್ಲಿ ಚಿನ್ನದ ನಾಣ್ಯಗಳ ಬಗ್ಗೆ ಉಲ್ಲೇಖವಿದೆಯೇ ಹೊರತು ಸಿಕ್ಕಿಲ್ಲ. ಮೊಟ್ಟ ಮೊದಲಿಗೆ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದವರು ಗ್ರೀಕರು ಗ್ರೀಕ್ ಅರಸರಾದ ಡಯೊಡೋಟಸ್ I, ಯೂಥಿಡಿಮಸ್ I ಮತ್ತು ಯುಕ್ರಟೈಡಸರು ಬ್ಯಾಕ್ಟ್ರಿಯಾದಲ್ಲಿ ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದರು. ಭಾರತದಲ್ಲಿ ಮೊದಲಿಗೆ ಆಲೇಖಗಳಿಲ್ಲದ ಗ್ರೀಕರ ಚಿನ್ನದ ನಾಣ್ಯಗಳು ಸಿಕ್ಕಿವೆ. ಅವುಗಳ ಆಕೃತಿ ಮತ್ತು ವಿನ್ಯಾಸದ ಆಧಾರದ ಮೇಲೆ, ಅವು ಮೆನಾಂಡರನ ನಾಣ್ಯಗಳೆಂದು ನಾಣ್ಯಶಾಸ್ತ್ರಜ್ಞರು ತಿಳಿಸುತ್ತಾರೆ. ಇದರ ಮೇಲೆ ಆತನೇ ಮೊದಲಿಗೆ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದವನೆಂದು ತಿಳಿಯಬಹುದು. ಅವನ ರಾಣಿ ಅಗಥೊಕ್ಲಿಯಾ ಕೂಡ ಚಿನ್ನದ ನಾಣ್ಯಗಳನ್ನು ಟಂಕಿಸಿದ್ದಕ್ಕೆ ಆಧಾರಗಳಿವೆ ಇತರೆ ಗ್ರೀಕ್ ರಾಜರು ತಮ್ಮ ನಾಣ್ಯಗಳ ಚಲಾವಣೆಗೆ ಬೆಳ್ಳಿಯನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಕಡಿಮೆ ಮಾನದ ನಾಣ್ಯಗಳಿಗೆ ತಾಮ್ರವನ್ನು ಉಪಯೋಗಿಸುತ್ತಿದ್ದರು. ಯೂಥಿಡೆಮಸ್ II, ಪ್ಯಾಂಥಲಿಯನ್ ಮತ್ತು ಅಗಥೊಕ್ಲೆಸರು ನಿಕಲ (nickel)ನ್ನು ಉಪಯೋಗಿಸಿದರು. ಜಗತ್ತಿನಲ್ಲಿ ಮೊದಲಿಗೆ ಆ ಲೋಹದಲ್ಲಿ ನಾಣ್ಯ ಚಲಾವಣೆಯನ್ನು ತಂದವರು ಆ ಅರಸರೇ. ಸ್ಟ್ರಾಟೋ II ಮುಂತಾದವರು ಸೀಸವನ್ನು ಸಹ ನಾಣ್ಯಗಳಿಗೆ ಉಪಯೋಗಿಸಿದರು.

ಗ್ರೀಕರ ನಾಣ್ಯಗಳು ಅಧಿಕಮಾನ (higher denomination)ಕ್ಕಿಂತ ಹೆಚ್ಚಾಗಿ ಕಡಿಮೆಮಾನ (lower denomination) ದಲ್ಲೇ ದೊರೆಯುತ್ತವೆ. ಅಧಿಕಮಾನದಲ್ಲಿ ದೊರೆತಿರುವ ಚಿನ್ನದ 'ಸ್ಟಾಟರ್' (stater) ಗಳು ಮತ್ತು ಬೆಳ್ಳಿಯ ಡ್ರಾಕ್ಮ (drachma) ಮತ್ತು ಟೆಟ್ರಡ್ರಾಕ್ಮಗಳು ಅಟಿಕ್ (Attic) ಅಥವಾ ಅಥೆನ್ಸ್ ಗುಣಮಟ್ಟ (Standard)ಕ್ಕೆ ಸೇರಿದವು. ಇಪ್ಪತ್ತು ಸ್ಟಾಟರಗಳ ಚಿನ್ನದ ನಾಣ್ಯವೇ ಈಗ ತಿಳಿದಿರುವ ಮಟ್ಟಿಗೆ ಇಂಡೋ-ಗ್ರೀಕರ ಅತ್ಯಧಿಕ ಮಾನದ ನಾಣ್ಯ. ಅಟಿಕ್ ಗುಣಮಟ್ಟದ ಚಿನ್ನದ ನಾಣ್ಯಗಳು ಸುಮಾರು 132 ಗ್ರೈನ್‌ಗಳಷ್ಟು ತೂಗುತ್ತವೆ. ಅಟಿಕ್ ಪದ್ಧತಿಯನ್ನು ಬಳಕೆಗೆ ತಂದವರು ಸಿರಿಯಾ ದೇಶವನ್ನಾಳಿದ ಸೆಲ್ಯೂಕಸ್ ಮನೆತನದ ರಾಜರು. ಬೆಳ್ಳಿಯ ಅಟಿಕ್ ಪದ್ಧತಿಯ ನಾಣ್ಯಗಳು 66 ಗ್ರೈನ್ ತೂಗುತ್ತವೆ. ಈ ನಾಣ್ಯವನ್ನು ಡ್ರಾಕ್ಮ ಎಂದೂ–ಕರೆಯುತ್ತಾರೆ. ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳ ತೂಕ ಪ್ರಮಾಣ 1 : 10 ಆಗಿವೆ. ಬೆಳ್ಳಿಯ ನಾಣ್ಯಗಳಲ್ಲಿ ಅಧಿಕ ಮಾನದ ನಾಣ್ಯವೇ 'ಟೆಟ್ರಾಡ್ರಾಕ್ಮ'. ಒಬೋಲ್ (obol) –ಎಂಬುದು ಮತ್ತೊಂದು ಬೆಳ್ಳಿಯ ನಾಣ್ಯ. ಕಡಿಮೆ ಮಾನದ ನಾಣ್ಯಗಳು ಹೆಚ್ಚಾಗಿ ತಾಮ್ರದಲ್ಲಿ ದೊರೆಯುತ್ತವೆ. ತಾಮ್ರದ ನಾಣ್ಯವೇ ಹಲ್ಕಾನ್ (chelkon). ಎಂಟು ಹಲ್ಕಾನ್ ನಾಣ್ಯಗಳು ಒಂದು ಒಬೊಲ್‌ಗೆ ಸಮವಾಗುತ್ತವೆ. ಅಗಥೊಕ್ಲೆಸ್ ಮಾತ್ರವೇ ಅರ್ಧಒಬೋಲ್ [hemi obol] ನಾಣ್ಯಗಳನ್ನು ಚಲಾವಣೆ ತಂದ ಅರಸು.

ಗ್ರೀಕ್ ಸಂಪ್ರದಾಯವನ್ನು ಮುರಿದು, ಭಾರತೀಯ ನಾಣ್ಯಗಳ ತೂಕಪದ್ಧತಿಯನ್ನು ಅನುಸರಿಸಿದವನು ಯುಕ್ರಟೈಡಸ್. ಭಾರತೀಯ ನಾಣ್ಯಗಳ ತೂಕವು ಗ್ರೀಕ್ ನಾಣ್ಯಗಳಿಗಿಂತಲೂ ಕಡಿಮೆಯಾಗಿದೆ. ಭಾರತೀಯ ನಾಣ್ಯವನ್ನು 'ಪಣ'–ಎಂದು ಕರೆಯುತ್ತಾರೆ. ಇದು ಎಪ್ಪತ್ತು ಗ್ರೈನ್ ತೂಗುತ್ತದೆ. ಗ್ರೀಕರ ನಂತರ ಭಾರತಕ್ಕಾಗಮಿಸಿದ ಶಕರು, ಮತ್ತು ಪಹ್ಲವರು ಯುಕ್ರಟೈಡಸನನ್ನೇ ಅನುಸರಿಸಿದರು.

ಬಹುಮಟ್ಟಿನ ಬೆಳ್ಳಿಯ ನಾಣ್ಯಗಳು ಶುದ್ಧಸ್ಥಿತಿಯಲ್ಲೇ ದೊರೆಯುತ್ತವೆ. ಅನಂತರದ ನಾಣ್ಯಗಳಲ್ಲಿ ಶುದ್ಧ ಬೆಳ್ಳಿಯ ಪ್ರಮಾಣ ಕೆಡತೊಡಗಿದ್ದನ್ನು ಕಾಣಬಹುದು. ಕೆಲವೇ ಚಿನ್ನದ

ನಾಣ್ಯಗಳು ಸಹ ಸುಪ್ತ ಸ್ಥಿತಿಯಲ್ಲಿ ದೊರೆಯುತ್ತವೆ. ಪೂರ್ವ ಪಂಜಾಬಿನಲ್ಲಿ ಬಳಕೆಗೆ ಬಂದ ಬೆಳ್ಳಿಯ ನಾಣ್ಯಗಳು ಬಹುಮಟ್ಟಿಗೆ ಕೀಳುತರದವು.

ಗ್ರೀಕರ ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳೆಲ್ಲವೂ ಬಹುಮಟ್ಟಿಗೆ ವೃತ್ತಾಕಾರವಾಗಿವೆ. ಅಪೋಲೋಡೋಟಸನ ನಾಣ್ಯಗಳು ಚಚ್ಚೌಕವಾಗಿವೆ. ಅಗಥೊಕ್ಲೆಸ್ ಮತ್ತು ಪ್ಯಾಂಥಲಿಯಾನ್ ಎಂಬಿಬ್ಬರು ಭಾರತೀಯ ಮುದ್ರಾಂಕಿತ ನಾಣ್ಯಗಳನ್ನು ಅನುಕರಿಸಿ, ಚೌಕಾಕಾರದ ನಾಣ್ಯಗಳನ್ನು ಟಂಕಿಸಿದರು. ಅವರ ಹಿಮ್ಮುಖದಲ್ಲಿ ಬ್ರಾಹ್ಮೀಲಿಪಿಯನ್ನು ಕಂಡರಿಸಲಾಗಿದೆ. ಡಯೊಡೋಟಸ್, ಯೂಥಿಡಿಮಸ್ I, ಡೆಮಿಟ್ರಿಯಸ್ I ಇನ್ನು ಮುಂತಾದವರ ನಾಣ್ಯಗಳು ಅಂಚಿನಲ್ಲಿ ಬಿಂದು ವೃತ್ತವನ್ನು ಹೊಂದಿವೆ. ಯುಕ್ರೈಟಿಡಸ್ ಈ ಪದ್ಧತಿಯನ್ನು ಬದಲಿಸಿ ಸೆಲ್ಯೂಕಸ್ ವಂಶಸ್ಥರ ಪರಂಪರೆಯಾದ ಮಣಿ–ಮತ್ತು–ಉರುಳೆ (bead-and-reel) ಅಂಚನ್ನುಳ್ಳ ನಾಣ್ಯಗಳನ್ನು ಆಚರಣೆಗೆ ತಂದನು.

ಈ ನಾಣ್ಯಗಳು ಗ್ರೀಕ್‌ಕಲೆಯ ಒಳ್ಳೆಯ ನಮೂನೆಗಳಾಗಿವೆ ಮತ್ತು ಗ್ರೀಕ್ ಕಲೆಯನ್ನು ಸ್ಥೂಲವಾಗಿ ಪರಿಚಯಿಸುತ್ತವೆ. ಮುಂದೆ ಗಾಂಧಾರ ಪ್ರದೇಶದಲ್ಲಿ ಗ್ರೀಕ್ ಮತ್ತು ರೋಮನ್ ಪ್ರಭಾವವನ್ನು ಮೈಗೂಡಿಸಿಕೊಂಡು ಬೆಳೆದ ಬೌದ್ಧ ಕಲೆಯ ಮೂಲವನ್ನು ಈ ನಾಣ್ಯಗಳಲ್ಲಿ ಗುರುತಿಸಬಹುದು. ಗ್ರೀಕರು ಅಚ್ಚುಗಳಲ್ಲಿ ಟಂಕಿಸಿದ (die-struck) ನಾಣ್ಯಗಳನ್ನು ಚಲಾವಣೆಗೆ ತಂದರು. ಈ ತಂತ್ರ ಮೊದಲಿಗೆ ಭಾರತದಲ್ಲಿ ಆಚರಣೆಯಲ್ಲಿರಲಿಲ್ಲ. ಬ್ಯಾಕ್ಟ್ರಿಯಾದಲ್ಲಿ ಚಲಾವಣೆಗೆ ತಂದ ನಾಣ್ಯಗಳು ತೂಕದಲ್ಲಿ, ಆಕೃತಿಯಲ್ಲಿ, ಆಲೇಖಗಳಲ್ಲಿ ಗ್ರೀಕ್‌ತನವನ್ನೇ ಹೊಂದಿವೆ. ಭಾವಚಿತ್ರಗಳ ನಿರೂಪಣೆಯಲ್ಲಂತೂ, ಗ್ರೀಕ್ ಕಲೆಯ ಪ್ರತಿರೂಪವೇ ಆಗಿವೆ. ಯೂಥಿಡಿಮಸ್, ಡೆಮಿಟ್ರಿಯಸ್‌ರವರ ನೈಜ ಭಾವಚಿತ್ರಗಳ ನಿರೂಪಣೆಗೆ ಸರಿಸಮಾನವಾದ ಉದಾಹರಣೆ ಗ್ರೀಕ್ ಪ್ರಪಂಚದಲ್ಲೇ ದೊರೆಯಲಾರದು. ಕ್ರಮೇಣ ಭಾರತದಲ್ಲಿ ಉನ್ನತ ಸಂಸ್ಕೃತಿಯ ಸಂಪರ್ಕದಿಂದ ಅವರಲ್ಲಿ ಅನೇಕ ಬದಲಾವಣೆಗಳಾದವು. ಅದು ಕಲೆಯಲ್ಲೂ ವ್ಯಕ್ತವಾಯಿತು.

ಮೇಲೆ ತಿಳಿಸಿರುವಂತೆ ನಾಣ್ಯಗಳ ಮೇಲಿನ ಮಾನವನ ಚಿತ್ರವು ತೀರ ನೈಜವಾಗಿದ್ದು, ಅದರಲ್ಲಿ ಅವನ ಬೆಳವಣಿಗೆಯ ವಿವಿಧ ಹಂತಗಳನ್ನು ಗುರುತಿಸಬಹುದು ಬ್ಯಾಕ್ಟ್ರಿಯಾವನ್ನಾಳಿದ ಮೊದಲ ಯೂಥಿಡೆಮಿಸನ ದೀರ್ಘಕಾಲದ ಆಳ್ವಿಕೆಯನ್ನು ಅವನ ನಾಣ್ಯಗಳು ತಿಳಿಸುತ್ತವೆ. ಮೆನಾಂಡರ್ ಮತ್ತು ಎರಡನೆಯ ಸ್ಟ್ರಾಟೊ ತಮ್ಮ ಚಿಕ್ಕ ವಯಸ್ಸಿನಲ್ಲೆ ಅಧಿಕಾರಕ್ಕೆ ಬಂದರು. ಅವರ ನಾಣ್ಯಗಳು ಅವರ ಬಾಲ್ಯದ ಮುಗ್ಧತೆಯನ್ನು ಸ್ಪಷ್ಟವಾಗಿ ಚಿತ್ರಿಸುತ್ತವೆ. ಅರಸರ ಚಿತ್ರಗಳನ್ನು ಹೆಚ್ಚಾಗಿ ನಾಣ್ಯಗಳ ಮುಮ್ಮುಖದಲ್ಲಿ ಕಾಣಬಹುದು. ಶಿರಸ್ತ್ರಾಣದ ತಲೆ ಅಥವಾ ಎದೆಯವರೆವಿಗಿನ ಚಿತ್ರಗಳನ್ನು ಕಾಣಬಹುದು. ಡೆಮಿಟ್ರಿಯಸ್‌ನು ಆನೆಯ ತಲೆಯಿರುವ ಶಿರಸ್ತ್ರಾಣವನ್ನು ಧರಿಸಿರುವುದನ್ನು ಅವನ ಹಲವು ಬಗೆಯ ನಾಣ್ಯಗಳಲ್ಲಿ ಚಿತ್ರಿಸಿದೆ. ಅಂಟಿಯಾಕ್ಲಿಡ್‌ನು ಚಪ್ಪಟೆ ಟೋಪಿಯನ್ನು ಧರಿಸುತ್ತಿದ್ದನು.

ಗ್ರೀಕ್ ಅರಸರು ತಮ್ಮ ನಾಣ್ಯಗಳಲ್ಲಿ ತಮ್ಮ ಭಾವಚಿತ್ರಗಳನ್ನಷ್ಟೇ ಅಲ್ಲದೆ ಹಿಮ್ಮುಖದಲ್ಲಿ ತಾವು ಆರಾಧಿಸುವ ದೇವತೆಗಳ ಚಿತ್ರಗಳನ್ನೂ ಮೂಡಿಸುತ್ತಿದ್ದರು. ಜ್ಯೂಸ್, ಹೆರಾಕ್ಲೆಸ್ ಅಪೋಲೊ, ನೀಕೆ—ಮುಂತಾದ ಗ್ರೀಕ್‌ದೇವತೆಗಳನ್ನು ಕಾಣಬಹುದು. ಚಿತ್ರಗಳ ಕೆಳಗೆ ಆ ದೇವತೆಗಳನ್ನು ವರ್ಣಿಸುವ ಆಲೇಖಗಳೂ ಇವೆ. ಭಾರತದಲ್ಲಿ ಇಂತಹ ನಾಣ್ಯಗಳನ್ನು ಮೊದಲಿಗೆ ಚಲಾವಣೆಗೆ ತಂದವನು ಯೂಕ್ರಟೈಡಸ್. ಭಾರತದಲ್ಲಿ ಆಳಿ ಮೆರೆದ ಗ್ರೀಕ್ ರಾಜರು ಇಲ್ಲಿನ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದುದು ಅನಿವಾರ್ಯವೇ. ಆದ್ದರಿಂದ ಅವರು ತಮ್ಮ ಕೆಲವು ನಾಣ್ಯಗಳ ಮೇಲೆ ಆನೆ, ವೃಷಭ ಮುಂತಾದ ಭಾರತೀಯ ಪ್ರತಿಮಾ ಶಾಸ್ತ್ರದ, ವೈಲಕ್ಷಣಗಳನ್ನುಳ್ಳ ಚಿತ್ರಗಳನ್ನು ಅಚ್ಚಿಸಿದರು ಎರಡು ಲಿಪಿ ಹಾಗೂ ಭಾಷೆಗಳ ನಾಣ್ಯಗಳನ್ನೂ ಟಂಕಿಸಬೇಕಾಯಿತು. ಭಾರತದಲ್ಲಲ್ಲದೆ ಬೇರೆಲ್ಲೂ ಗ್ರೀಕರು ಸ್ಥಳೀಯ ಭಾಷೆಗಳನ್ನು ತಮ್ಮ ನಾಣ್ಯ

ಗಳಿಗೆ ಅಳವಡಿಸಿಕೊಳ್ಳಲಿಲ್ಲ. ಅವರು ಖರೋಷ್ಠಿ ಲಿಪಿ ಪ್ರಾಕೃತ ಭಾಷೆಯನ್ನು ಉಪಯೋಗಿಸಿದರು. ವಿರಳವಾಗಿಯಾದರೂ ಬ್ರಾಹ್ಮೀ ಲಿಪಿಯನ್ನು ಉಪಯೋಗಿಸಿದ್ದಕ್ಕೆ ಉದಾಹರಣೆಗಳುಂಟು. ಬೆಸೆಲಿಯೋಸ್ (ದೊರೆ), ಸೊಟೊರೊನ್ (ಸಂರಕ್ಷಕ), ಮೆಗಲೊವ್ (ಮಹಾಶಯ)—ಮುಂತಾದ ಗ್ರೀಕ್ ಭಾಷೆಯ ಬಿರುದುಗಳನ್ನು ಮತ್ತು ಅವುಗಳ ಸಮಾನ ಪ್ರಾಕೃತ ಪದಗಳನ್ನು ಈ ನಾಣ್ಯಗಳ ಮೇಲೆ ಕಾಣಬಹುದು. ಕೆಲವೊಮ್ಮೆ ಕೆಲವರ ನಾಣ್ಯಗಳನ್ನು ಪುನರ್ ಟಂಕಿಸಿ, ಚಲಾವಣೆಗೆ ತಂದದ್ದುಂಟು. ಯುಕ್ರೆಟೈಡಸನು ಅಪಲೋಡೊಟಸನ ನಾಣ್ಯಗಳನ್ನು ಪುನರ್ ಟಂಕಿಸಿದನು ಇದು ಅಪಲೋಡೊಟಸನ ಮೇಲೆ ಯುಕ್ರೆಟೈಡಸನ ವಿಜಯವನ್ನು ಸೂಚಿಸುತ್ತವೆ.

ವಂಶದ ಘನತೆಯನ್ನು ಎತ್ತಿಹಿಡಿಯುವುದಕ್ಕೆ, ಇಲ್ಲದ ಘನತೆಯನ್ನು ಸೃಷ್ಟಿಸಿ ಪ್ರದರ್ಶಿಸುವುದಕ್ಕೆ, ಹಿರಿಮೆಯನ್ನು ವೃದ್ಧಿಸುವುದಕ್ಕೆ ಗ್ರೀಕ್ ಅರಸರು ನಾಣ್ಯಗಳನ್ನು ಒಂದು ಮಾಧ್ಯಮವನ್ನಾಗಿ ಉಪಯೋಗಿಸಿದರು. ಆದುದರಿಂದಲೇ ವಂಶಾವಳಿ ಪ್ರದರ್ಶಕ, ಹಾಗೂ ಪ್ರಾಸಾರಿಕ ನಾಣ್ಯಗಳನ್ನು ಜಾರಿಗೆ ತಂದರು. ಯೂಥಿಡಿಮಸ್ ಮತ್ತು ಯುಕ್ರೆಟೈಡಸ್ ಮನೆತನದ ಅರಸರಿಬ್ಬರು ಈ ನಾಣ್ಯಗಳನ್ನು ಚಲಾವಣೆಗೆ ತರುವಲ್ಲಿ ಸ್ಪರ್ಧಿಸಿದರು. ಈ ತೆರನಾದ ನಾಣ್ಯಗಳು ಕೇವಲ ರಾಜಕೀಯ ಪ್ರಣಾಳಿಕೆಗಳಾಗಿ ಪರಿಣಮಿಸಿದವು.

ಕೆಲವೊಮ್ಮೆ ಇಬ್ಬರು ಅರಸರು ಜೊತೆಗೂಡಿ ನಾಣ್ಯಗಳನ್ನು ಚಲಾವಣೆಗೆ ತಂದಿರುವುದುಂಟು. ಉದಾ :– ತಾಯಿ ಮತ್ತು ಮಗ, ಅಜ್ಜ ಮತ್ತು ಮೊಮ್ಮಗ. ಮೆನಾಂಡರನು ಮೃತನಾದಾಗ ಆಳ್ವಿಕೆಯ ಹೊರೆಯೆಲ್ಲವೂ, ಅವನ ರಾಣಿಯಾದ ಅಗಥೊಕ್ಲಿಯಾ ಮತ್ತು ಕಿರಿಯ ವಯಸ್ಸಿನ ಮಗ ಒಂದನೆಯ ಸ್ಟ್ರಾಟೋ—ಇಬ್ಬರ ಮೇಲೆ ಬಿತ್ತು. ಅವಳು ರಾಜಪ್ರತಿನಿಧಿಯಾಗಿ ರಾಜ್ಯಾಡಳಿತವನ್ನು ನಿರ್ವಹಿಸಿ, ತನ್ನ ಮತ್ತು ಮಗನ ಹೆಸರಿನಲ್ಲಿ ಜೋಡಿಯಾಗಿ ನಾಣ್ಯಗಳನ್ನು ಚಲಾವಣೆಗೆ ತಂದಳು. ಇಜ್ಜೋಡಿ ನಾಣ್ಯಗಳ ಚಲಾವಣೆಗೆ ಮತ್ತೊಂದು ಉದಾಹರಣೆಯೆಂದರೆ ಒಂದನೇ ಸ್ಟ್ರಾಟೋ ಮತ್ತು ಎರಡನೆಯ ಸ್ಟ್ರಾಟೋ ಅರಸರು. ಒಂದನೇ ಸ್ಟ್ರಾಟೋ ತನ್ನ ಅಂತ್ಯಕಾಲದಲ್ಲಿ ತನ್ನ ಮೊಮ್ಮಗನಾದ ಎರಡನೆ ಸ್ಟ್ರಾಟೋವಿನ ನೆರವಿನಿಂದ ರಾಜ್ಯಾಡಳಿತವನ್ನು ನಿರ್ವಹಿಸಬೇಕಾಯಿತು. ಇದನ್ನು ಆ ನಾಣ್ಯಗಳ ಮೇಲಿನ ಗ್ರೀಕ್ ಮತ್ತು ಖರೋಷ್ಠಿ ಲಿಪಿಯಿಂದ ತಿಳಿಯಬಹುದು. ಎರಡನೆಯ ಸ್ಟ್ರಾಟೋನನ್ನು ಮೊದಲನೇ ಸ್ಟ್ರಾಟೋನ 'ಪೌತ್ರ' ಅಥವಾ ಪೌತ್ರನೆಂದು ನಾಣ್ಯಗಳು ತಿಳಿಸುತ್ತವೆ.

ನಮ್ಮೀ ಗ್ರೀಕರ ನಾಣ್ಯಗಳು ಅವರ ಇತಿಹಾಸವನ್ನು ಪದರ ಪದರವಾಗಿ ವಿವರಿಸುತ್ತವೆ. ಇದರ ನೆರವಿಗೆ ಅವರ ಇನ್ನಿತರ ಸಾಹಿತ್ಯಾಧಾರಗಳು ಅತ್ಯಲ್ಪವೇ. ಅಂದು ಆಳಿದ ರಾಜವಂಶಗಳ ಬಗ್ಗೆಯೂ ಸಾಕಷ್ಟು ವಿಷಯವನ್ನು ತಿಳಿಯಬಹುದು. ಬಲಿಷ್ಠರಾದ ಭಾರತೀಯ ಗ್ರೀಕರಲ್ಲಿ ಎರಡು ಬಣಗಳುಂಟಾದವು. ಅವರಿಬ್ಬರೂ ತಮ್ಮ ಹಿರಿಮೆ–ಗರಿಮೆಗಳನ್ನು ಕೊಂಡಾಡುವ ಸಲುವಾಗಿ ನಾಣ್ಯಗಳನ್ನು ಚಲಾಯಿಸಿದರು. ಆದ್ದರಿಂದ ಎರಡು ಪ್ರತಿಸ್ಪರ್ಧಿ ಗ್ರೀಕ್ ವಂಶಗಳು ಅಸ್ತಿತ್ವಕ್ಕೆ ಬಂದು ಆಳಿದುದನ್ನು ಕಾಣುತ್ತೇವೆ. ಒಂದು ಯೂಥಿಡಿಮಸನದು, ಮತ್ತೊಂದು ಯೂಕ್ರೆಟೈಡಸನದು. ಈ ಎರಡು ವಂಶಗಳ ಅರಸರಿಬ್ಬರೂ ತಾವು ಮೂಲತಃ ಸೆಲ್ಯುಕಸ್ ವಂಶಕ್ಕೆ ಸೇರಿದವರೆಂದು ತಮ್ಮ ನಾಣ್ಯಗಳ ಮೂಲಕ ಪ್ರಚಾರ ಮಾಡಿದರು. ಸೆಲ್ಯೂಕಸ್ ವಂಶದ ಮೂರನೇ ಅಂಟಿಯೋಕ್‌ನೊಂದಿಗೆ ಯೂಥಿಡಿಮಸನ ಮಗನಾದ ಡೆಮಿಟ್ರಿಯಸ್‌ನು ವೈವಾಹಿಕ ಸಂಬಂಧವನ್ನು ಬೆಳಸಿ ತನ್ನ ವಂಶದ ಹಿರಿಮೆಯನ್ನು ಹೆಚ್ಚಿಸಿಕೊಂಡನು. ಯುಕ್ರೆಟೈಡ್ ಎಂಬುವನು ಮತ್ತೊಂದು ವಂಶವನ್ನು ಸ್ಥಾಪಿಸಿದನು. ಇವನು ಬ್ಯಾಕ್ಟ್ರಿಯಾದಲ್ಲಿ ಬಂಡೆದ್ದು ಸ್ವತಂತ್ರನಾದನು. ಅವನ ಮಗ ಹೆಲಿಯೋಕ್ಲೆಸ್ ತಂದೆಯನ್ನು ಕೊಂದು ಸಿಂಹಾಸನವನ್ನೇರಿದನು. ಇವನ ಮನೆತನದ ಅಂಟಿಯಾಲ್ಸಿಡಸ್ ಎಂಬುವವನು ಮಗಧದ ಅರಸ

ರಾದ ಶುಂಗರೊಂದಿಗೆ ರಾಜತಾಂತ್ರಿಕ ಸಂಬಂಧವನ್ನಿಟ್ಟುಕೊಂಡಿದ್ದನು. ಇವನು ಶುಂಗರ ಆಸ್ಥಾನಕ್ಕೆ ಹೆಲಿಯೊಡೊರಸ್ ಎಂಬ ರಾಯಭಾರಿಯನ್ನು ಕಳಿಸಿದ್ದನ್ನು ಬೆಸ್ನಗರ್ ಗರುಡಸ್ತಂಭ ಶಾಸನವು ತಿಳಿಸುತ್ತದೆ. ಈ ನಾಣ್ಯಗಳ ನೆರವಿನಿಂದ ಅಂದಿನ ಕಾಲದ ರಾಜಕೀಯ ಚರಿತ್ರೆಯನ್ನು ಪುನರಚಿಸಿರುವುದು ತಿಳಿದ ವಿಷಯವೇ.

ಗ್ರಂಥ ಋಣ

R. C. Majumdar : *The Age of Imperial Unity.*

V. D. Mohan : *The Indo Greek Coins.*

A. K. Narain : *The Indo Greeks.*

E. J. Rapson : *The Cambridge History of India, Vol* I

ಮೌರ್ಯ ಸಾಮ್ರಾಜ್ಯದ ಪತನಾನಂತರ ಬ್ಯಾಕ್ಟ್ರಿಯದ ಗ್ರೀಕರು ಭಾರತದ ವಾಯುವ್ಯ ಪ್ರದೇಶದ ಮೇಲೆ ದಾಳಿ ಪ್ರಾರಂಭಿಸಿದರು. ಬ್ಯಾಕ್ಟ್ರಿಯ ಸಿರಿಯ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಮೊದಲ ಅಂಟಿಯೊಕಸ್ ಸಮ್ರಾಟ ಕ್ರಿ ಪೂ. 3ನೆಯ ಶತಮಾನದ ಪ್ರಾರಂಭದಲ್ಲಿ (ಕ್ರಿ. ಪು. ಸು. 280) ಡಯೋಡಟಸ್ ಎಂಬುವನನ್ನು ಸಂಪದ್ಭರಿತವಾದ ಬ್ಯಾಕ್ಟ್ರಿಯ ಪ್ರಾಂತದ ಸತ್ರಪನನ್ನಾಗಿ ನೇಮಿಸಿದ. ಡಯೋಡಟಸ್ ಕ್ರಮೇಣ ಪ್ರಬಲವಾಗಿ ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದ...................... ಅಲೆಕ್ಸಾಂಡರನ ದಂಡಯಾತ್ರೆಗಿಂತಲೂ ಬ್ಯಾಕ್ಟ್ರಿಯನ್ನರ ಭಾರತದ ಆಕ್ರಮಣ ಮತ್ತು ಆಳ್ವಿಕೆ ಬಹಳ ಪರಿಣಾಮಕಾರಿಯಾದದ್ದು................ ....ಭಾರತದಲ್ಲಿ ಗ್ರೀಕರ ನಾಣ್ಯ ಪದ್ಧತಿ ಜಾರಿಗೆ ಬಂತೆಂದು ಹಲವರ ನಂಬುಗೆ. ಗ್ರೀಕ್ ನಾಣ್ಯಗಳು ಕಲಾತ್ಮಕವಾಗಿದ್ದುವು. ಹಲವು ಕಾಲ ಭಾರತದ ಉತ್ತರ ಭಾಗದಲ್ಲಿ ಆಳಿದ ರಾಜರು ಅವುಗಳನ್ನು ಚಲಾವಣೆಗೆ ತಂದರು. ಆದರೆ ಗುಪ್ತ ಸಂತತಿಯು ಸ್ಥಾಪನೆಯಾದ ಅನಂತರ ಈ ಪದ್ಧತಿಯನ್ನು ತ್ಯಜಿಸಲಾಯಿತು.

(ಸಂಗ್ರಹ: ಕನ್ನಡ ವಿಶ್ವಕೋಶ
ಸಂಪುಟ ಎರಡು, ಪು. ೨೮೭—೨೮೯)

ಎನ್. ಎಸ್. ಶಾರದಾ ಪ್ರಸಾದ್

ಕಾದಂಬರಿ ಅನುವಾದ: ಕೆಲವು ಸಮಸ್ಯೆಗಳು

(ವಿಶೇಷವಾಗಿ 'ಸಂಸ್ಕಾರ' ಕಾದಂಬರಿಗೆ ಸಂಬಂಧಿಸಿದಂತೆ)

ಕಾದಂಬರಿ, ಸಣ್ಣಕತೆ—ಇವು ಪಾಶ್ಚಾತ್ಯ ಸಾಹಿತ್ಯದಿಂದ ಕನ್ನಡಕ್ಕೆ ಬಂದವು ಎಂದು ಹೇಳಬಹುದಾದಷ್ಟು ಮಟ್ಟಿಗೆ ಪ್ರಭಾವಿತವಾದುವು. 1842ರಲ್ಲಿ ಜಾನ ಬನಯನನ 'ದಿ ಪಿಲಿಗ್ರಿಮ್ಸ್ ಪ್ರೋಗ್ರೆಸ್', 1857ರಲ್ಲಿ ಡ್ಯಾನಿಯಲ್ ಡೆಫೋನ 'ರಾಬಿನಸನ್ ಕ್ರೂಸೋ' ಕನ್ನಡಕ್ಕೆ ಅನುವಾದಗೊಂಡವು. ಇತರ ಭಾಷೆಗಳಿಂದ ಅನುವಾದಗೊಂಡ ಪ್ರಥಮ ಕಾದಂಬರಿಗಳೆಂದರೆ: ಮರಾಠಿಯಿಂದ ಪೂಮಂಜಿಯವರು 'ಯಮುನಾ ಪರ್ಯಟನ' (1869), ಬಂಗಾಲಿಯಿಂದ ಬಂಕಿಮಚಂದ್ರರ 'ದುರ್ಗೇಶ ನಂದಿನಿ' (1885), ತೆಲುಗಿನಿಂದ ವೀರೇಶಲಿಂಗಂ ಪಂತುಲರವರ 'ವಿವೇಕ ಚಂದ್ರಿಕೆ' (1885), ಮಲಯಾಳಂನಿಂದ ಮುಳಿಯಿಲೆ ಅವರ 'ಸುಕುಮಾರಿ' (1899). ಈ ರೀತಿಯಲ್ಲಿ ವಿವಿಧ ಭಾಷೆಗಳಿಂದ ಕಾದಂಬರಿ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿತು. ಮರಾಠಿಯಿಂದ ಗಳಗನಾಥರು ಹರಿನಾರಾಯಣ ಆಪ್ಟೆಯವರ ಅನೇಕ ಕಾದಂಬರಿಗಳನ್ನು ಅನುವಾದಿಸಿರುವರು.

ಕಾದಂಬರಿಯ ಅನುವಾದದ ವಿಷಯ ಪ್ರಸ್ತಾಪಿಸುವಾಗ ಬಿ. ವೆಂಕಟಾಚಾರ್ಯರ ಸೇವೆಯ ಬಗ್ಗೆ ಸ್ವಲ್ಪಮಟ್ಟಿನ ವಿವರಣೆಯನ್ನು ನೀಡಬಹುದು. ಬಂಕಿಮಚಂದ್ರರನ್ನು ಕನ್ನಡಕ್ಕೆ ಪರಿಚಯಿಸಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. 'ದುರ್ಗೇಶನಂದಿನಿ'ಯ ಅನುವಾದದ ನಂತರ (1885) ಮುಂದಿನ ಎರಡು ದಶಕಗಳಲ್ಲಿ ಬಂಕಿಮರ ಎಲ್ಲ ಕಾದಂಬರಿಗಳನ್ನೂ ಇವರು ಅನುವಾದಿಸಿದರು.

ಕಾದಂಬರಿ ಕ್ಷೇತ್ರದಲ್ಲಿ, ವಿಶೇಷವಾಗಿ ಬಂಗಾಳಿಯಿಂದ ಅನುವಾದಿಸಿರುವವರು : ಅಹೋಬಲ ಶಂಕರ, ಎಚ್. ವಿ ಸಾವಿತ್ರಮ್ಮ, ಅಂಬುಜಾಕ್ಷಿ, ನಾರಾಯಣಸಂಗಮ, ಎಚ್. ಕೆ. ವೇದವ್ಯಾಸಾಚಾರ್ಯ, ವೀರಭದ್ರ, ಗುರುನಾಥ ಜೋಶಿ, ಮೇವುಂಡಿ ಮಲ್ಲಾರಿ, ಎಂ. ಎ. ಕುಪ್ಪಮ್ಮ, ಎಸ್. ಎ. ಬುರ್ಲಿ, ರಾಮಚಂದ್ರ ಕೊಟ್ಟಲಗಿ, ಸಿ. ಕೆ. ನಾಗರಾಜರಾವ್. ಇವರಲ್ಲಿ ಹೆಚ್ಚಿನ ಅನುವಾದಕರು ಗಮನಹರಿಸಿರುವುದು ಟಾಗೂರರು ಮತ್ತು ಶರತ್‌ಚಂದ್ರರ ಕೃತಿಗಳ ಬಗ್ಗೆಯೇ. ಇತರ ಭಾಷೆಗಳಿಂದಲೂ ಸಾಕಷ್ಟು ಪ್ರಮಾಣದಲ್ಲಿ ಅನುವಾದ ಕಾರ್ಯ ನಡೆದಿದೆ.

ಕಾದಂಬರಿಯ ಅನುವಾದ ಕಾರ್ಯಗಳಲ್ಲಿ ಎದುರಾಗುವ ಸಮಸ್ಯೆಗಳು—ತೊಡಕುಗಳು ಅನೇಕ. ಸಾಹಿತ್ಯದ ಎಲ್ಲ ಪ್ರಕಾರಗಳ ಅನುವಾದಗಳಲ್ಲಿಯೂ ಸಮಸ್ಯೆಗಳು ತಲೆದೋರಿಯೇ ತೀರುತ್ತವೆ. ಕಾವ್ಯದ ಅನುವಾದದಲ್ಲಿ ಛಂದಸ್ಸು, ಲಯಭಾವಗಳ ತೊಡಕು ಪ್ರಧಾನವಾಗುವುದಾದರೆ, ನಾಟಕಗಳ ಅನುವಾದದಲ್ಲಿ ಸಂಭಾಷಣೆಯ ಅನುವಾದದಲ್ಲಿ ಸಂಕೀರ್ಣತೆ ಎದುರಾಗುತ್ತದೆ.

ವಿವಿಧ ಸಂಸ್ಕೃತಿಗಳಿಂದಾಗಿ ಅನುವಾದ ಕಾರ್ಯ ಮತ್ತೂ ಜಟಿಲವಾಗಿ ಪರಿಣಮಿಸುತ್ತದೆ. ಕಾದಂಬರಿಗಳ ಅನುವಾದ, ಅದರ ಅಗತ್ಯ, ಈ ಕ್ಷೇತ್ರದಲ್ಲಿ—ವಿಶೇಷವಾಗಿ ಭಾರತೀಯ ಭಾಷೆಗಳಿಂದ ಇಂಗ್ಲಿಷ್ ಭಾಷೆಗೆ—ನಡೆದಿರುವ ಕಾರ್ಯ ಮತ್ತು ಆ ಕಾರ್ಯದಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ಸ್ವಲ್ಪ ಮಟ್ಟಿಗೆ ವಿವೇಚಿಸುವ ಕಾರ್ಯ ಇಲ್ಲಿ ಮಾಡಲಾಗಿದೆ.

ಕಾದಂಬರಿಯು ಯಾವ ರೀತಿಯದಾಗಿರಲಿ—ಅದು ಸಾಮಾಜಿಕವಾಗಿರಲಿ, ಐತಿಹಾಸಿಕವಾಗಿರಲಿ, ಮನೋವೈಜ್ಞಾನಿಕ ಕಾದಂಬರಿಯಾಗಿರಲಿ ಅಥವಾ ವೈಜ್ಞಾನಿಕ ಹಿನ್ನೆಲೆಯ ಕಾದಂಬರಿಯೇ ಆಗಿರಲಿ-ಭಾಷಾಂತರಿತವಾಗುವಾಗ ಸಮಸ್ಯೆಗಳ ಮಹಾಪೂರವೇ ಉದ್ಭವಿಸುವುದು ಸಹಜವಾಗಿದೆ. ಕೆಲವು ಸಮಸ್ಯೆಗಳಿಗೆ ಪರಿಹಾರವಿದೆ ಮತ್ತು ಕೆಲವು ಸಮಸ್ಯೆಗಳಿಗೆ ಪರಿಹಾರ ದೊರೆಯದೆ, ಕೇವಲ 'ರಾಜಿ' ಸೂತ್ರ ಅನುಸರಿಸಿ ಸಮಸ್ಯೆಯನ್ನು ಪರಿಹರಿಸಬೇಕಾಗುತ್ತದೆ. ಭಾರತೀಯ ಭಾಷೆಗಳಲ್ಲಿಯೇ ಕಾದಂಬರಿಗಳ ಅನುವಾದ ಮತ್ತು ಭಾರತೀಯ ಭಾಷೆಗಳಿಂದ ಇಂಗ್ಲಿಷಿಗೆ ಅನುವಾದ ಈ ಎರಡು ಅಂಶಗಳ ಬಗ್ಗೆಯೂ ಪ್ರಸ್ತಾಪ ಅಗತ್ಯವೆನಿಸುತ್ತದೆ. ಭಾರತೀಯ ಭಾಷೆಗಳಲ್ಲಿಯೇ ಅನುವಾದ ಕಾರ್ಯ ಭಾರತದ ಸಾಂಸ್ಕೃತಿಕ ಏಕೀಕರಣಕ್ಕೆ, ಬೇರೆ ಬೇರೆ ಪ್ರಾಂತಗಳ ಜನರ ಜೀವನದ ರೀತಿನೀತಿಗಳನ್ನು ಅರಿಯುವುದಕ್ಕೂ ಸಾಧಕವಾಗಿ ಪರಿಣಮಿಸುತ್ತದೆ. ಪರಸ್ಪರ ಭಾರತೀಯ ಭಾಷೆಗಳಲ್ಲಿಯೇ ಅನುವಾದಿಸುವವರ ಸಂಖ್ಯೆ ಅಷ್ಟಾಗಿ ಹೆಚ್ಚಾಗಿಲ್ಲದಿರುವ ಕಾರಣ ಈ ಕಾರ್ಯ ಇಂಗ್ಲಿಷಿನ ಮೂಲಕ ನಡೆಯಬೇಕಾಗುತ್ತದೆ ಇಂಗ್ಲಿಷ್ ಮೂಲಕ ಅನುವಾದ ನಡೆದಾಗ ಕೆಲವು ಭಾಷಿಕ ಹಾಗೂ ಸಾಂಸ್ಕೃತಿಕ ಸಮಸ್ಯೆಗಳು ತಲೆದೋರುವುದು ಸಹಜ. ಭಾರತೀಯ ವಾಚಕರಿಗೆ ಭಾರತೀಯ ಭಾಷೆಯೊಂದರಿಂದ ಅನುವಾದವಾದ ಕಾದಂಬರಿ ಸಾಂಸ್ಕೃತಿಕವಾಗಿ ಅಷ್ಟೊಂದು ಸಮಸ್ಯೆಯನ್ನು ಒಡ್ಡದಿರಬಹುದು. ಮೂಲಭೂತವಾಗಿ ಭಾರತದ ಸಂಸ್ಕೃತಿ ಒಂದೇ ಆಗಿರುವ ಕಾರಣ ಈ ಸಮಸ್ಯೆ ಪರಿಹಾರಗೊಳ್ಳುತ್ತವೆ. ಅದೇ ಹೊರದೇಶದವರಿಗೆ ನಮ್ಮ ಸಂಸ್ಕೃತಿ, ಧರ್ಮದ ಬಗ್ಗೆ ಅರಿವನ್ನು ಮೂಡಿಸುವ ಕಾರ್ಯ ಸಂಸ್ಕೃತಿ ಪ್ರಸಾರದ ಕಾರ್ಯ ಅಗತ್ಯವಾಗುವುದರಿಂದ, ಈ ಮಾಧ್ಯಮದ ಮರೆಹೋಗುವುದು ಉಚಿತವಾಗುತ್ತದೆ.

ಕಾದಂಬರಿಯು, ಕಥಾ ಸಾಹಿತ್ಯದ ವಾಚಕವರ್ಗ ಮೂಲಭೂತವಾಗಿ ಮನರಂಜನೆಗಾಗಿಯೇ ಓದುವವರದಾಗಿದೆ. ತೀವ್ರವಾಗಿ ವಿಚಾರಮಾಡುವ, ಆಳವಾಗಿ ಚಿಂತಿಸುವಂಥ ವಾಚಕವರ್ಗ ಈ ಕ್ಷೇತ್ರದಲ್ಲಿ ಕಡಮೆ. ಆದ್ದರಿಂದ ಅನುವಾದ ಸಮರ್ಪಕವಾದ ಹೊರತು, ಸುಲಭವಾಗಿ ಓದಿಸಿಕೊಂಡುಹೋದಹೊರತು ಅನುವಾದ ಯಶಸ್ವಿಯಾಗುವುದಿಲ್ಲ. ಹಾಗಾಗಿ ಈ ಕ್ಷೇತ್ರದ ಓದುಗ ಇತರ ಕ್ಷೇತ್ರಗಳ ಓದುಗರಿಗಿಂತ ಭಿನ್ನವಾಗಿರುತ್ತಾನೆ.

ಉದಾಹರಣೆಗೆ ಸಂಸ್ಕಾರ ಕಾದಂಬರಿಯಅನುವಾದವನ್ನೆ ಆರಿಸಿಕೊಳ್ಳಬಹುದು. "ಸಂಸ್ಕಾರ" ಎಂಬ ಶೀರ್ಷಿಕೆಯ ಅನುವಾದವೇ ಸಮಸ್ಯೆಗಳನ್ನು ಮುಂದಿಡುತ್ತದೆ ಅದು ಶವಸಂಸ್ಕಾರ ಎಂಬ ಅರ್ಥದಿಂದ (ಕಾದಂಬರಿಯಲ್ಲಿ ನಾರಣಪ್ಪನ ಸಂಸ್ಕಾರದಿಂದ) ಸುಧಾರಣೀಕರಣ (ಪ್ರಾಣೇಶಾಚಾರ್ಯ) ಎಂಬ ಅರ್ಥದವರೆಗೂ ವಿಶಾಲ ವ್ಯಾಪ್ತಿಯುಳ್ಳಂಥದ್ದು. ಹಾಗಾಗಿ ಈ ಶೀರ್ಷಿಕೆಯನ್ನು ಅದೇ ರೀತಿಯಿಟ್ಟುಕೊಂಡು, ಅದಕ್ಕೆ ವಿವರಣಾ ನೀಡುವುದೊಂದೇ ಇರುವ ಮಾರ್ಗವಾಗಿದೆ. ಭಾರತೀಯ ಧಾರ್ಮಿಕ ಹಿನ್ನೆಲೆಯನ್ನೇ ಪ್ರಧಾನವಾಗಿ ಉಳ್ಳ ಸಂಸ್ಕಾರದ ಮೂಲ ಕಥಾವಸ್ತುವನ್ನು ಸಂಕ್ಷೇಪವಾಗಿ ಈ ರೀತಿ ಸೂಚಿಸಬಹುದು: ಧರ್ಮಶಾಸ್ತ್ರಗಳನ್ನೆಲ್ಲ ಬಲ್ಲವರಾಗಿ, ಕಾಯಿಲೆಯ ಹೆಂಡತಿಯನ್ನು ಆದರದಿಂದ ಆರೈಕೆ ಮಾಡಿ, ಸೌಂದರ್ಯವೆಲ್ಲ ಲಕ್ಷ್ಮೀದೇವಿಯದು, ರತಿಯೆಲ್ಲ ಶ್ರೀ ಕೃಷ್ಣನದು ಎಂದು ಬಾಳು ನಡೆಸುತ್ತಿದ್ದ ಪ್ರಾಣೇಶಾಚಾರ್ಯರಿಗೆ ನಿಸ್ಸಂಕೋಚವಾಗಿ ಭೋಗಜೀವನ ನಡೆಸುವ ನಾರಣಪ್ಪ ಪ್ರತಿಸ್ಪರ್ಧಿಯಾಗುತ್ತಾನೆ. ನಾರಣಪ್ಪ ಸತ್ತಾಗ ಅವನ ಶವಸಂಸ್ಕಾರದ ಗೊಂದಲದಲ್ಲಿ, ಪ್ರಾಣೇಶಾಚಾರ್ಯರನ್ನು ನಾರಣಪ್ಪನ ಪ್ರೇಯಸಿ ಚಂದ್ರಿ ಸ್ಪರ್ಶಿಸುತ್ತಾಳೆ, ಪ್ರಾಣೇಶಾಚಾರ್ಯರು

ದೇಹದ ಸುಖವನ್ನು ಅನುಭವಿಸುತ್ತಾರೆ. ತಾವು ತಮ್ಮ ವಿದ್ಯೆಯಿಂದ ಪಡೆದಿದ್ದ ಮೌಲ್ಯಗಳ ಮೇಲೆ ಕಟ್ಟಿದ್ದ ಬಾಳು ವಾಸ್ತವಿಕತೆಯ ಸ್ಪರ್ಶದಿಂದ ಉರುಳಿಬಿದ್ದಾಗ ಪ್ರಾಣೇಶಾಚಾರ್ಯರು ಹೊಸ ಜೀವನದ ಅನ್ವೇಷಣೆಗೆ ಹೊರಡುತ್ತಾರೆ. ಪ್ರಾಣೇಶಾಚಾರ್ಯರು ಪ್ರಾಮಾಣಿಕತೆಗೇ ಸಂಸ್ಕಾರ ಬರುತ್ತದೆ 'ಸಂಸ್ಕಾರ' ದಲ್ಲಿ.

ಈ ರೀತಿ ಕಾದಂಬರಿಯಲ್ಲಿ ಮೂಲಭೂತವಾಗಿ ಅಡಗಿರುವ ಸಮಸ್ಯೆಗಳು: ಸಂಸ್ಕಾರ, ಲೈಂಗಿಕಜೀವನ ಹೊರದೇಶದ ವಾಚಕನಿಗೆ, ಆ ಸಂಸ್ಕೃತಿಯವನಿಗೆ ಈ ಸಮಸ್ಯೆಗಳು ಸಮಸ್ಯೆಗಳಾಗಿಯೇ ತೋರದಿರಬಹುದು. ಆದರೆ ಅವುಗಳ ಬಗ್ಗೆ ನಮ್ಮ ಸಂಸ್ಕೃತಿಯಲ್ಲಿರುವ ಪ್ರಾಧಾನ್ಯ ಪ್ರಾಮುಖ್ಯವನ್ನು ಪರಿಣಾಮಕಾರಿಯಾಗಿ ಮನದಟ್ಟುಮಾಡಿಕೊಟ್ಟಾಗ ಮಾತ್ರವೇ ಅನುವಾದ ತನ್ನ ಕಾರ್ಯದಲ್ಲಿ ಯಶಸ್ವಿಯಾಗುವುದು. ಈ ದೃಷ್ಟಿಯಿಂದ 'ಸಂಸ್ಕಾರ' ತನ್ನ ಅನುವಾದದಲ್ಲಿ ವಿದೇಶೀ ವಾಚಕರನ್ನು ತನ್ನತ್ತ ಸಾಕಷ್ಟು ಆಕರ್ಷಿಸಿತು ಎಂದಾಗ ಅನುವಾದದ ಸಫಲತೆಯು ಮನದಟ್ಟಾಗುತ್ತದೆ. ಈ ಕಾದಂಬರಿಯ ಅನುವಾದಕನಿಗೆ ಎದುರಾಗುವ ಕೆಲವು ಸಮಸ್ಯೆಗಳ ಬಗ್ಗೆ ಮುಂದೆ ಪ್ರಸ್ತಾಪಿಸಲಾಗುವುದು.

ಕಾದಂಬರಿಯ ಅನುವಾದ ಕಾರ್ಯದಲ್ಲಿ ತೊಡಗಿರುವವರು ಎರಡು ಪಂಥಗಳವರಾಗಿದ್ದಾರೆ. ಒಂದು ಪಂಥ ಮೂಲಲೇಖಕ ಏನನ್ನು ಬರೆದಿದ್ದಾನೋ ಅದನ್ನು ಸಂಪೂರ್ಣವಾಗಿ ಅನುವಾದಿಸಬೇಕೆಂಬುದಾಗಿದೆ. ಎರಡನೆಯ ವರ್ಗ ಸಂಪೂರ್ಣವಾಗಿ ಅನುವಾದಿಸದೆ, ಭಾವ ಗ್ರಹಣವಾಗಲು ಅಗತ್ಯವಾಗುವ, ಕಥಾಭಾಗಕ್ಕೆ ಅಗತ್ಯವಾದಷ್ಟನ್ನು ಉಳಿಸಿಕೊಂಡು ಉಳಿದ ಭಾಗವನ್ನು ಬಿಡಬಹುದು ಎಂಬುದಾಗಿದೆ. ಹೀಗೆ ಮಾಡಿದಲ್ಲಿ ವಾಚಕರ ಆಸಕ್ತಿ ಕುತೂಹಲ ವನ್ನು ಕೆರಳಿಸಿಕೊಂಡು, ಅನುವಾದದ ಕಥೆಯನ್ನು ಓದಿಸಿಕೊಂಡುಹೋಗುತ್ತದಾದರೂ ಮೂಲ ಲೇಖಕನ ಆಶಯಕ್ಕೆ ಭಂಗವುಂಟುಮಾಡಬಹುದಾಗುವ ಸಾಧ್ಯತೆಯೂ ಇದೆ, ಏಕೆಂದರೆ ಮೂಲ ಲೇಖಕನ ದೃಷ್ಟಿಯಲ್ಲಿ ಯಾವುದು ಮುಖ್ಯವೋ ಅದು ಅನುವಾದಕನ ದೃಷ್ಟಿಯಲ್ಲಿ ಮುಖ್ಯ ವಾಗದಿರಬಹುದು. ಅದೂ ಅಲ್ಲದೆ ಕೆಲವು ಲೇಖಕರ ಹಿತ–ಮಿತ ಪದಪ್ರಯೋಗ, ಅವುಗಳ ಸಾಂಸ್ಕೃತಿಕ ಹಿನ್ನೆಲೆಯ ದೃಷ್ಟಿಯಿಂದ ಕೆಲವು ಪದಗಳನ್ನು ಬಿಟ್ಟರೇನೇ ಮೂಲದ ಸ್ವಾರಸ್ಯಕ್ಕೆ ಭಂಗವುಂಟಾಗುವ ಸಾಧ್ಯತೆಯಿದೆ ಆದ್ದರಿಂದ ಲೇಖಕನೇ ಅನುವಾದಕನಾದ ಹೊರತು ಈ ಕಾರ್ಯಮಾಡುವ ಸಾಧ್ಯವಿರುವುದಿಲ್ಲ. ಪ್ರತಿಯೊಂದು ಘಟನೆಯನ್ನೂ ನಿರ್ದಿಷ್ಟ ಪ್ರಾಮುಖ್ಯ ದಿಂದ ಬರೆಯುವ ಶರತ್, ಟಾಗೂರರಂಥ ಲೇಖಕರ ಕೃತಿಗಳ ಅನುವಾದದಲ್ಲಿ ಸ್ವಾತಂತ್ರ್ಯ ವಹಿಸುವುದಕ್ಕೆ ಅವಕಾಶವೂ ಇರುವುದಿಲ್ಲ.

ಎಲ್ಲ ರೀತಿಯ ಕಾದಂಬರಿಗಳಲ್ಲೂ ಸಮಸ್ಯೆ ಒಂದೇ ರೀತಿಯದಾಗಿರುವುದಿಲ್ಲ. ಐತಿಹಾಸಿಕ ಕಾದಂಬರಿಗಳ ಸಮಸ್ಯೆಯೇ ಬೇರೆ, ಸಾಮಾಜಿಕ ಕಾದಂಬರಿಗಳ ಸಮಸ್ಯೆಗಳೇ ಬೇರೆಯಾಗಿರುತ್ತವೆ. ಐತಿಹಾಸಿಕ ಕಾದಂಬರಿಯ ಅನುವಾದಕ ಐತಿಹಾಸಿಕ ಘಟನೆಯ ಕಾಲದ ಭಾಷಾಪ್ರಯೋಗದ ಬಗ್ಗೆಯೂ ಗಮನವಿಸಬೇಕು. ಉದಾಹರಣೆಗೆ ಮರಾಠರ ಇತಿಹಾಸಕ್ಕೆ ಸಂಬಂಧಿಸಿದ ಕೃತಿಯೊಂದರಲ್ಲಿ 'ಗುಸಲ್‌ಖಾನ್' ಎಂಬ ಶಬ್ದ ಬಂದಿದೆ ಅನುವಾದಕ ನಿಘಂಟಿನ ಮರೆಹೊಕ್ಕಾಗ ಗುಸಲ್‌ಖಾನಾಕ್ಕೆ ಸ್ನಾನದ ಮನೆ ಎಂಬ ಅರ್ಥ ನೀಡಲಾಗಿತ್ತು. ಶಿವಾಜಿಯಂಥ ವೀರ ಅಫಜಲ್‌ಖಾನನನ್ನು ಸ್ನಾನದ ಮನೆಯಲ್ಲಿ ಭೇಟಿಯಾಗುವುದೆಂದರೆ ಹಾಸ್ಯಾಸ್ಪದವೆಂದು ಭಾವಿಸಿದ ಅನುವಾದಕ 17ನೇ ಶತಮಾನದ ಪರ್ಷಿಯನ್ ನಿಘಂಟಿನ ಮರೆ ಹೊಕ್ಕಾಗ ಆ ಪದಕ್ಕೆ "ಗುಪ್ತ ಸಭೆಗಳು ನಡೆಯುವ ಸ್ಥಳ ಒಳಕೊಠಡಿ" ಎಂಬ ಅರ್ಥವಿರುವುದೂ ಕಂಡುಬಂದಿತಂತೆ. ಈ ರೀತಿ ಸಮಕಾಲೀನ ಪದಪ್ರಯೋಗದ ಬಗ್ಗೆ ಪರಿಜ್ಞಾನವೂ ಅಗತ್ಯ ವಾಗುತ್ತದೆ. ಒಂದು ರೀತಿಯಲ್ಲಿ ಭಾಷಾಂತರದ ಕೆಲಸವೇ ಹಗ್ಗದ ಮೇಲೆ ಸಮತೋಲನ ಮಾಡಿಕೊಂಡು ನಡೆಯುವ ಕಾರ್ಯವಾಗಿದೆ. ಈ ಮಾತು ಸಾಹಿತ್ಯದ ಎಲ್ಲ ಪ್ರಕಾರಗಳ ಅನುವಾದಗಳಿಗೂ ಅನ್ವಯಿಸುತ್ತದೆ.

ಭಾಷೆಯಲ್ಲಿನ ಉಪಭಾಷೆ, ವ್ಯಕ್ತಿ ಭಾಷೆಗಳ ಬಗ್ಗೆಯೂ ಗಮನಹರಿಸಬೇಕಾದುದು ಅಗತ್ಯವಾಗುತ್ತದೆ. ಪ್ರಾದೇಶಿಕತೆಯ ಸೊಗಡಿನ ಸೊಬಗನ್ನು ಅನುವಾದದಲ್ಲಿ ತರುವುದೂ ಕಷ್ಟ. ಕನ್ನಡದ ಉದಾಹರಣೆಯನ್ನೇ ತೆಗೆದುಕೊಂಡರೆ ಧಾರವಾಡದ ಕನ್ನಡ, ಮಂಗಳೂರು ಕನ್ನಡ, ಮೈಸೂರು ಕನ್ನಡಗಳ ನಡುವಣ ವ್ಯತ್ಯಾಸವನ್ನು ಯಾವ ರೀತಿ ಅನುವಾದದಲ್ಲಿ ತೋರಿಸುವುದು ; ವಿವಿಧ ಸಾಮಾಜಿಕ ಸ್ತರಗಳ ಭಾಷೆಯನ್ನು ಸೂಚಿಸುವುದು ಹೇಗೆ ? ಗ್ರಾಮ್ಯ ಭಾಷೆಯನ್ನು, ವ್ಯಕ್ತಿ ವಿಶಿಷ್ಟಭಾಷೆಯಲ್ಲಿರುವ ಸಂಭಾಷಣಾಂಶಗಳನ್ನು ನೇರವಾಗಿ ಅನುವಾದಿಸುವುದು ಸಾಧ್ಯವೇ ? ಈ ಸಮಸ್ಯೆಗಳಿಗೆಲ್ಲ ಕೇವಲ ರಾಜಿಸೂತ್ರದಲ್ಲಿಯೇ ಪರಿಹಾರವಡಗಿದೆ.

ಧಾರ್ಮಿಕ ಹಿನ್ನೆಲೆಯುಳ್ಳ 'ಸಂಸ್ಕಾರ'ದಂಥ ಕಾದಂಬರಿಯಲ್ಲಿ ಎದುರಾದ ಕೆಲವು ಸಮಸ್ಯೆಗಳನ್ನು ಅನುವಾದಕರು ಯಾವ ರೀತಿ ಪರಿಹರಿಸಲು ಪ್ರಯತ್ನಿಸಿರುವರು ಎಂಬುದನ್ನು ಸ್ವಲ್ಪಮಟ್ಟಿಗೆ ನೋಡೋಣ.

ತ್ರಿಮತಸ್ಥರ ಕಲ್ಪನೆ ನಮಗೆಲ್ಲ ಪರಿಚಯವಿದ್ದೇ ಇದೆ. ಪ್ರಾಣೇಶಾಚಾರ್ಯ ಎಂದ ತಕ್ಷಣವೇ ಈತ ಮಾಧ್ವ ಎಂಬ ಅಂಶ ಮನದಟ್ಟಾಗುತ್ತದೆ. ಈ ವ್ಯಕ್ತಿನಿಷ್ಠವಾದ ಹೆಸರುಗಳ ಅನುವಾದವೂ ಕಷ್ಟ. ಅನ್ಯಸಂಸ್ಕೃತಿಯವನಿಗೆ ಅದು ಕೇವಲ ಹೆಸರು ಮಾತ್ರವಾಗಿಯೇ ಉಳಿಯುತ್ತದೆ. ಅದಕ್ಕಿಂತ ಹೆಚ್ಚಿನದೇನನ್ನೂ ಸಾಧಿಸಲಾಗುವುದಿಲ್ಲ. ಇದೊಂದು ಭಾಷಾಂತರಿಸಲಾಗದ ಅಂಶ. ಮಾಧ್ವರು, ಸ್ಮಾರ್ತರು ಎಂಬುದನ್ನು a sect called Madhwa, a sect called Smartha ಎಂಬಂಥ ವಿವರಣಕಗಳ ಮೂಲಕ (classifiers) ವಿವರಿಸಬೇಕಾಗುತ್ತದೆ ಅಷ್ಟೆ. ಇದರ ಒಳಭೇದಗಳನ್ನು ಸೂಚಿಸುವುದು ಕಷ್ಟಕರವಾದ ಸಮಸ್ಯೆಯಾಗಿಯೇ ಉಳಿಯುತ್ತದೆ.

ಸಮಾಜದಲ್ಲಿ ಒಂದು ವರ್ಗದವರು ಮತ್ತೊಂದು ವರ್ಗದವರನ್ನು ಸಂಬೋಧಿಸುವ, ಕೆಲವೊಮ್ಮೆ ಅಣಕಕ್ಕಾಗಿ ಕರೆಯುವ ಕೆಲವು ಕ್ರಮಗಳುಂಟು. ಇದಕ್ಕೆ ನಮ್ಮ ಸಮಾಜವೇನೂ ಅಪವಾದವಲ್ಲ. ಮಾಧ್ವರು ಸ್ಮಾರ್ತರನ್ನು ಅಡ್ಡಪಂಕ್ತಿ ಬ್ರಾಹ್ಮಣರು ಎಂದು ಕರೆಯುವುದುಂಟು, ಇದನ್ನು cross lined brahmins ಎಂದು ಅನುವಾದಿಸಿದಾಗ ತುಂಬಾ literal ಎನಿಸಿದರೂ ಇದೇ ಉತ್ತಮವಾದ ಮಾರ್ಗವೂ ಹೌದು ಎನಿಸುತ್ತದೆ. ಅದರ ಬದಲು ಅದನ್ನೇ lower caste brahmins ಎಂದು ಅನುವಾದಿಸಿದಾಗ ಅಷ್ಟು ಸಮರ್ಪಕವೆನಿಸುವುದಿಲ್ಲ. ಕೆಲವೊಂದು ಕಡೆ ತುಂಬಾ ಪದಶಃ ಅನುವಾದ ಮಾಡಿದರೂ ಅವು ಉತ್ತಮವಾಗಿರುವ ಅಂಶ ಮನದಟ್ಟಾಗುತ್ತದೆ. ಇವುಗಳ ಅನುವಾದ ಕಷ್ಟವೂ ಹೌದು. ಉದಾ :

(1) ಜುಗ್ಗಾತಿಜುಗ್ಗ : niggard of niggards
ಜಿಪುಣಾಗ್ರೇಸರ : emperor of pennypinchers
ತಾಯಿಗ್ಗಂಡ mother deceiver

(ತಾಯಿಗ್ಗಂಡ ಎಂಬ ಅಂಶವನ್ನು ಮಾತ್ರ ಬೇರೆ ರೀತಿಯಲ್ಲಿ ವಿವರಿಸಬಹುದಿತ್ತೇನೋ !)

(2) ಲಾಭ–ಲಾಭ gain O gain
ಮತ್ತೊಂದು–ಮತ್ತೊಂದು one more O one more

(3) ಏಳು ನಾರಾಯಣ wake wake O Narayana
ಏಳು ಲಕ್ಷ್ಮೀರಮಣ wake O Lord Lakshmi
ಏಳಯ್ಯ ಬೆಳಗಾಯಿತು wa wa Ke its morning

ಸುಪ್ರಭಾತದ ಪರಿಚಯವೇ ಇಲ್ಲದ ಪರದೇಶಿಗನಿಗೆ ಈ ಕೊನೆಯ ಅಂಶ ತಿಳಿಸುವ ಕ್ರಮ ಬೇರೆ ಇಲ್ಲವೇ ಇಲ್ಲ; ಇದೇ ಕೆಲವು ಧರ್ಮಸೂಕ್ಷ್ಮಗಳ ಅನುವಾದ ಯಾವ ರೀತಿ ತೊಡ

ಕುಂಟುಮಾಡುತ್ತದೆ ನೋಡೋಣ: ಮುತ್ತೈದೆ, ಸಕೇಶಿ, ವಿಧವೆ. ಮುತ್ತೈದೆ auspicious brahmins wife ಆದರೆ ಸಕೇಶಿ–widow. ವಿಧವೆ–shaven widow ಆಗಿದೆ ಇಂಥದಲ್ಲಿ ಇದೇ ಸುವರ್ಣಮಾಧ್ಯಮವಾಗುತ್ತದೆ.

ಇನ್ನು ಪೂಜಾವಿಧಾನಗಳಿಗೆ, ಧರ್ಮಸಂಸ್ಕಾರಗಳಿಗೆ ಸಂಬಂಧಿಸಿದಂತೆ ಗಮನಿಸುವುದಾದರೆ; ತುಳಸೀ ಮಣಿಮಾಲೆ, ರುದ್ರಾಕ್ಷಿ ಎಂಬ ಎರಡು ಪದಗಳನ್ನೇ ನೋಡಿ. ತುಳಸೀಮಣಿ ಮಾಲೆ, ಎಂದ ತಕ್ಷಣ ಮಾಧ್ವ ಎಂಬ ಅಂಶ ನೆನಪಿಗೆ ಬರುತ್ತದೆ. ಬಿಲ್ವಪತ್ರೆ ಎಂದ ತಕ್ಷಣ ಈಶ್ವರನ ನೆನಪು ಮುಂದಾಗುತ್ತದೆ. ಅನೆಲ್ಲನನ್ನು ಅನುವಾದದಲ್ಲಿ ತರುವುದು ಸಾಧ್ಯವಿಲ್ಲ. ಮಹಾಮಂಗಳಾರತಿ, ನೈವೇದ್ಯ, ಜಾಗಟೆ ಹೊಡೆಯುವುದು, ಶಂಖ ಊದುವುದು, ವಿಭೂತಿ ಹಚ್ಚಿಕೊಳ್ಳುವುದು, ಮುದ್ರಧಾರಣೆ, ನಾಮ ಹಾಕಿಕೊಳ್ಳುವುದು ಇವೆಲ್ಲ ಅನುವಾದದಲ್ಲಿ ಸತ್ವಹೀನವಾಗುತ್ತವೆ. ಮಡಿ, ಪಟ್ಟೆಸೀರೆ ಇವುಗಳ ಅನುವಾದ riftually washed saris and clothes ಎಂದಾಗ ಅಷ್ಟು ಪರಿಣಾಮಕಾರಿಯಾಗುವುದಿಲ್ಲ ಇವು ಕೇವಲ ಒಂದು ಕ್ರಿಯೆಯಾಗಿ ಅಂತ್ಯಗೊಳ್ಳುತ್ತವೆಯೇ ವಿನಾ ಇವಕ್ಕೆ ಯಾವ ಮಹತ್ತ್ವವೂ ಬರುವುದಿಲ್ಲ. ಪ್ರತಿಯೊಂದಕ್ಕೂ ವಿವರಣೆಗಳನ್ನು ನೀಡುವುದು ಕಷ್ಟಕರವಾಗುತ್ತದೆ. ಎಲ್ಲಿ ಅತ್ಯಗತ್ಯವೋ ಅಲ್ಲಿ ಅಡಿಟಿಪ್ಪಣಿಯ ಮರೆಹೋಗಬೇಬೇಕಾಗುತ್ತದೆ.

ಇನ್ನು ಶ್ಲೇಷೆಯಿರುವಂಥ, ಗಾದೆಮಾತುಗಳನ್ನು–ಅದಕ್ಕೆ ಸಂವಾದಿಯಾದ ಗಾದೆಯಿದ್ದರೆ ನೇರವಾಗಿ ಅದೇ ಗಾದೆಯನ್ನು ಬಳಸುವ ಸಂದರ್ಭ ಬಿಟ್ಟರೆ–ಅನುವಾದಿಸುವುದು ಕಷ್ಟವೇ. ಉದಾಹರಣೆಗೆ ಶಿವಪೂಜೆಯ ನಡುವೆ ಕರಡಿ ಬಿಟ್ಟಂತೆ ಎಂಬುದನ್ನು like a bear let loose in the middle of service for Shiva ಎಂದು ಅನುವಾದಿಸಿದಾಗ ಒಂದು ರೀತಿಯಲ್ಲಿ ಸಮರ್ಥನೀಯವಾದರೂ, ಇದು ತಪ್ಪು ಎಂದೂ ಹೇಳಬಹುದು. (ಕರಡಿಯ ಬದಲು ಕರಡಿಗೆಂಬುದಾಗ!) ಆದರೆ ಅನುವಾದಕ ಮೂಲಲೇಖಕನ ತಪ್ಪನ್ನು ತಿದ್ದಬಾರದೆಂಬ ವಿಧೇಯತಾ ತತ್ತ್ವಕ್ಕೆ ಅನುಗುಣವಾಗಿ ಇದು ಸರಿಯಾಗುತ್ತದೆ, ಅಷ್ಟೆ.

ಹಿಂದೂ ಧರ್ಮದ ಮೂಲಭೂತ ಅಂಶವಾಗಿ ನಿಂತಿರುವ ಮಂತ್ರಗಳ ಅನುವಾದವೂ ಕಷ್ಟವೇ. ಗಾಯತ್ರೀ ಮಂತ್ರದ ಮಹತ್ತ್ವವನ್ನು ಯಾವ ರೀತಿ, ತಿಳಿಸುವುದು? 'ಪಾಪೋಽಹಂ ಪಾಪಕರ್ಮೋಽಹಂ ಪಾಪಾತ್ಮ ಪಾಪಸಂಭವ' ಎಂಬುವನ್ನು I am sin, my work is sin my soul is sin, my birth is in sin ಎಂದಾಗ ಪಾಪಕ್ಕೆ sin ಎಂಬುದು ಸಂವಾದಿಯಾಗಿ ಕಂಡು ಬಂದರೂ ಪಾಪದ ಪರಿಹಾರಕ್ಕೆ ದೇವರಲ್ಲಿ ಮೊರೆಯಿಡುವ ಭಕ್ತನ ಆರ್ತತೆ ವ್ಯಕ್ತವಾಗುವುದೇ ಇಲ್ಲ.

ಏಕಾದಶಿಯ ಉಪವಾಸ, ದ್ವಾದಶಿಯ ಪಾರಣೆ–ಇವುಗಳ ಹಿನ್ನೆಲೆಯಲ್ಲಿ ಅಡಗಿರುವ ಪ್ರಾಮುಖ್ಯವನ್ನು ಅನುವಾದಿಸುವುದು ಹೇಗೆ ಸಾಧ್ಯ? ಉಪವಾಸದ ಅಂಶ ಅಭಾವನಿಂದಲ್ಲ, ಅದು ಸ್ವತಃ ವಿಧಿಸಿಕೊಳ್ಳಲಾದ ಒಂದು ಅಂಶ ಎಂಬುದನ್ನು ಯಾವ ರೀತಿ ವಿವರಿಸುವುದು? ಇವು ಪರಿಹರಿಸಲಾಗದ ಸಮಸ್ಯೆಗಳೇ. ಆದರೆ ಇವನ್ನು fasting on the eleventh day of moon ಇತ್ಯಾದಿಯಾಗಿ ವಿವರಿಸುವುದಷ್ಟೇ ಇರುವ ಮಾರ್ಗ. ಸಂಧ್ಯಾವಂದನೆಯನ್ನು prayer ಎಂದಷ್ಟೇ ಅನುವಾದಿಸಿದಾಗ ತ್ರಿಕಾಲಗಳಲ್ಲಿ ಸೂರ್ಯದೇವನಿಗೆ ಅರ್ಘ್ಯ ನೀಡುವ ಪದ್ಧತಿಯ ಅರ್ಥ ಬರೆಯುವುದಿಲ್ಲ. ಹಾಗಾಗಿ prayer ಪ್ರಾರ್ಥನೆಯಾದರೂ, ಇದರಲ್ಲಿ ಅಷ್ಟೇ ಅಡಗಿಲ್ಲ.

ಪಶುಪತಿ, ಶಿವ, ರುದ್ರ, ನಟರಾಜ ಇತ್ಯಾದಿ ಪದಗಳು ಬಂದಾಗ ಕೇವಲ Lord Shiva ಎಂದಷ್ಟೇ ವಿವರಿಸಿದಾಗ ಕೋಶದ ದೃಷ್ಟಿಯಿಂದ ಇದು ಸರಿಯಾದ ಅಂಶವಾಗಬಹುದಾದರೂ ಇವುಗಳಲ್ಲಿ ಯಾವುವೂ ಸರಿಯಾದ ಪರ್ಯಾಯಶಬ್ದಗಳಲ್ಲ. ಒಂದೊಂದು ಶಬ್ದದ

ಅರ್ಥ ಛಾಯೆಯೂ ಬೇರೆಯಾಗುತ್ತದೆ. ಇವುಗಳ ಅನುವಾದವೂ ಸಮಸ್ಯೆಯಾಗಿಯೇ ಉಳಿಯುತ್ತವೆ.

ಈ ರೀತಿಯಲ್ಲಿ ಸಾಂಸ್ಕೃತಿಕವಾಗಿ ಬೇರೆಯಾದ ಭಾಷೆಗೆ ಕಾದಂಬರಿಯನ್ನು–ಅಥವಾ ಸಾಹಿತ್ಯದ ಯಾವುದೇ ಪ್ರಾಕಾರವನ್ನು–ಅನುವಾದಿಸಿದಾಗ ಮುಂದೆ ನಿಲ್ಲುವ ಸಮಸ್ಯೆಗಳು ಅನೇಕವು, ಎಂದ ಮಾತ್ರಕ್ಕೆ ಇವನ್ನು ಸ್ವಲ್ಪಮಟ್ಟಿಗಾದರೂ ಪರಿಹರಿಸಿ, ವಿದೇಶೀ ಓದುಗನಿಗೆ ನಮ್ಮ ಸಂಸ್ಕೃತಿಯ ಪರಿಚಯ, ಸಾಹಿತ್ಯದ ಪರಿಚಯ ಮಾಡಿಕೊಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಎ. ಕೆ. ರಾಮಾನುಜನ್‌ರವರ ಅನುವಾದ ಚೆನ್ನಾಗಿದೆಯೆಂದೇ ಹೇಳಬಹುದು. ಅದು ತನ್ನ ಧ್ಯೇಯವನ್ನು ಸಾಧಿಸಿದೆ. ಭಾರತೀಯ ಭಾಷೆಗಳಿಂದ ಇಂಗ್ಲಿಷಿಗೆ ಅನುವಾದಗೊಂಡಿರುವ ಕಾದಂಬರಿಗಳು ಅನೇಕವಿವೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಯು. ಆರ್. ಅನಂತಮೂರ್ತಿಯವರ ‘ಸಂಸ್ಕಾರ’ವನ್ನು ಎ. ಕೆ. ರಾಮಾನುಜನ್‌ರವರು ‘Samsakar’ ಎಂದೂ, ಶಿವರಾಮ ಕಾರಂತರ ‘ಮರಳಿ ಮಣ್ಣಿಗೆ’ಯನ್ನು ಎ. ಎನ್. ಮೂರ್ತಿರಾಯರ ‘Return to the soil’ ಎಂಬ ಶೀರ್ಷಿಕೆಯಲ್ಲಿಯೂ ಅನುವಾದಿಸಿರುವರು. ನಿರಂಜನರ ‘ವಿಮೋಚನೆ’ಯನ್ನು ದಾಷ್ಕೋ ಕನ್ನಡದಿಂದ ‘ವ್ರೋರ್’ ಎಂಬ ಶೀರ್ಷಿಕೆಯಲ್ಲಿ ರಷ್ಯನ್ ಭಾಷೆಗೆ ಅನುವಾದಿಸಿರುವರು.

ಭಾರತೀಯ ಭಾಷೆಗಳಿಂದ ಇಂಗ್ಲಿಷಿಗೆ ಈ ಕೆಳಕಂಡವರ ಕಾದಂಬರಿಗಳು ಅನುವಾದಗೊಂಡಿವೆ: ಅಜ್ಞೇಯ (ಹಿಂದಿ), ವಿಭೂತಿಭೂಷಣ ಬ್ಯಾನರ್ಜಿ (ಬಂಗಾಳಿ), ಮಾಣಿಕ್ಯ ವಂದ್ಯೋಪಾಧ್ಯಾಯ (ಬಂಗಾಳಿ), ತಾರಾಶಂಕರ ವಂದ್ಯೋಪಾಧ್ಯಾಯ (ಬಂಗಾಳಿ), ಮನೋಜ್ ಬಸು (ಬಂಗಾಳಿ), ಶಾಂತಿನಾಥ ಭಾದುರಿ (ಬಂಗಾಳಿ), ಜೈನೇಂದ್ರ ಕುಮಾರ (ಹಿಂದಿ), ಕರ್ತಾರ ಸಿಂಗ್ ದುಗ್ಗಲ್ (ಪಂಜಾಬಿ), ಕೃಷ್ಣ ಚಂದರ್ (ಉರ್ದು), ವೆಂಕಟೇಶ ಮುದ್ಗಲಕರ್ (ಮರಾಠಿ) ಟಿ. ಜಾನಕಿರಾಮನ್ (ತಮಿಳು), ಪ್ರೇಮೇಂದ್ರ ಮಿತ್ರ (ಬಂಗಾಳಿ), ಎನ್. ಎಸ್. ಫಡ್ಕೆ (ಮರಾಠಿ), ಅಮೃತ ಪ್ರೀತಮ್ (ಪಂಜಾಬಿ) ರಾಜಿಂದರ್ ಸಿಂಗ್ ಬೇಡಿ (ಉರ್ದು), ತಕಳಿ ಶಿವಶಂಕರ ಪಿಳ್ಳೈ (ಮಲಯಾಳಂ)–ಈ ಲೇಖಕರ ಕಾದಂಬರಿಗಳು ಇಂಗ್ಲಿಷಿಗೆ ಅನುವಾದಗೊಂಡಿವೆ.

ಇವೇ ಅಲ್ಲದೆ ಯುನೆಸ್ಕೋ ಯೋಜನೆಯನ್ವಯವೂ ಕೆಲವು ಕಾದಂಬರಿಗಳು ಭಾರತೀಯ ಭಾಷೆಗಳಿಂದ ಇಂಗ್ಲಿಷಿಗೆ ಅನುವಾದಗೊಂಡಿವೆ.

ಬಿ. ವಸಂತ ಶೆಟ್ಟಿ

1465ರಲ್ಲಿ ಮಲ್ಲಿಕಾರ್ಜುನ ಪದಚ್ಯುತನಾಗಿದ್ದನೆ?

ವಿಜಯನಗರ ಸಾಮ್ರಾಜ್ಯವನ್ನಾಳಿದ ಸಂಗಮವಂಶದ ಕೊನೆಯ ದಿನಗಳಲ್ಲಿ ಒಂದು ರೀತಿಯ ರಾಜಕೀಯ ಗೊಂದಲವೇರ್ಪಟ್ಟಿತ್ತು. ಸಿಂಹಾಸನಕ್ಕಾಗಿ ಮಗನಿಂದ ತಂದೆಯ ಕೊಲೆಯೂ ಕೂಡಾ ನಡೆದ ಕಾಲವದು.[1] ಅಂತೆಯೇ ಇಮ್ಮಡಿ ದೇವರಾಯನ ತಮ್ಮ ಪ್ರತಾಪ ದೇವರಾಯನ ಮಗ ವಿರೂಪಾಕ್ಷನು ಮಲ್ಲಿಕಾರ್ಜುನನನ್ನು ಪದಚ್ಯುತಿಗೊಳಿಸಿ ತಾನೇ ವಿಜಯನಗರ ಸಿಂಹಾಸನವನ್ನು 1465ರಲ್ಲಿ ಆಕ್ರಮಿಸಿಕೊಂಡಿದ್ದನೆಂಬುದು ಇತಿಹಾಸಕಾರರ ಅಭಿಪ್ರಾಯ. ಪ್ರೊ. ನೀಲಕಂಠ ಶಾಸ್ತ್ರಿಯವರು, ಮಲ್ಲಿಕಾರ್ಜುನನು 1465ರ ಜೂನ್ ಹಾಗೂ ಅಕ್ಟೋಬರ್ ತಿಂಗಳುಗಳ ಮಧ್ಯೆ ಕಾಲವಾದನೆಂದು ಬರೆದಿದ್ದರೆ[2] ಇನ್ನು ಕೆಲವರು ವಿರೂಪಾಕ್ಷನು ಮಲ್ಲಿಕಾರ್ಜುನನನ್ನು ಕೊಲೆಗೈದು ಸಿಂಹಾಸನವನ್ನು ಆಕ್ರಮಿಸಿದನೆಂದಿದ್ದಾರೆ.[3] ಆದರೆ ಮಲ್ಲಿಕಾರ್ಜುನನನ್ನು ವಿರೂಪಾಕ್ಷನು ಕೊಲೆಗೈದನೆಂಬುದಕ್ಕೆ ಯಾವ ಶಾಸನಾಧಾರವೂ ದೊರೆತಿಲ್ಲ.

ಡಾ. ಪಿ. ಬಿ. ದೇಸಾಯಿ, ಡಾ. ಬಾ. ರಾ. ಗೋಪಾಲ್ ಹಾಗೂ ಡಾ. ಶ್ರೀನಿವಾಸ ರಿತ್ತಿಯವರು ತಾವು ಬರೆದ ' ಕರ್ನಾಟಕದ ಇತಿಹಾಸ 'ದಲ್ಲಿ, ಮಲ್ಲಿಕಾರ್ಜುನನ ಮಗ ರಾಜಶೇಖರನ ಪಕ್ಷನ್ನೂ ಬದಿಗೊತ್ತಿ ವಿರೂಪಾಕ್ಷನು ಸಿಂಹಾಸನವನ್ನು ಆಕ್ರಮಿಸಿದನೆಂದೂ, ಈ ಮಹಾವಿಪತ್ತಿನ ನಂತರ ಮಲ್ಲಿಕಾರ್ಜುನನು ಕ್ರಿ. ಶ. 1487ರಲ್ಲಿ ಸಾಯುವವರೆಗೆ ದಕ್ಷಿಣದಲ್ಲಿ ದೇಶಭ್ರಷ್ಟನಾಗಿದ್ದನೆಂದೂ ತಿಳಿಸುತ್ತಾರೆ.[4] ಅಂತೂ 1465ರಲ್ಲಿ ಅವನು ತೀರಿಕೊಂಡಿರಲಿಲ್ಲ. ಆದರೆ ಸಿಂಹಾಸನವನ್ನು ಮಾತ್ರ ಕಳೆದುಕೊಂಡಿದ್ದನೆಂಬುದು ಅವರ ಅಭಿಪ್ರಾಯ.

ಕೆಲವು ತಿಂಗಳ ಹಿಂದೆ ಡಾ. ಪಿ. ಗುರುರಾಜ ಭಟ್ ಮತ್ತು ನಾನು ಹೊಸ ಶಾಸನಗಳ ಅನ್ವೇಷಣೆಗಾಗಿ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ ಬಾರಕೂರಿಗೆ ಹೋದಾಗ ಹೆಚ್ಚಿನ ಭಾಗ ಮಣ್ಣಿನಲ್ಲಿ ಹೂತುಹೋಗಿದ್ದು ಮೇಲ್ಭಾಗ ಮಾತ್ರ ಕಾಣಿಸುತ್ತಿದ್ದ ಒಂದು ಶಾಸನ ಕಣ್ಣಿಗೆ ಬಿತ್ತು. ಕೆಲವು ದಿನಗಳ ನಂತರ ನಾವು ಈ ಶಾಸನವನ್ನು ಮೇಲೆತ್ತಿ ಅಭ್ಯಸಿಸಿದಾಗ ಮಲ್ಲಿಕಾರ್ಜುನನ ಆಳ್ವಿಕೆಗೆ ಸಂಬಂಧಿಸಿದಂತೆ ಕೆಲವು ಪ್ರಮುಖ ಅಂಶಗಳು ಬೆಳಕಿಗೆ ಬಂದವು.

ಗಣೇಶ ಹಾಗೂ ಶಿವನ ಸ್ತುತಿಯೊಂದಿಗೆ ಪ್ರಾರಂಭವಾಗುವ ಈ ಶಾಸನವು ಕನ್ನಡದಲ್ಲಿ ಬರೆಯಲ್ಪಟ್ಟಿದ್ದು, ಇಪ್ಪತ್ತೊಂದು ಸಾಲುಗಳನ್ನು ಹೊಂದಿದೆ. ತೇದಿಯನ್ನು ಮೂರನೆಯ ಸಾಲಿನಲ್ಲಿ ಕೊಡಲಾಗಿದೆ. ತೇದಿಯು ಶಕವರುಷ 1390ನೆಯ ಪ್ರಮಾಥಿಸಂವತ್ಸರದ ಶ್ರಾವಣ ಶುದ್ಧ 12 ಎಂದಿದೆ. ಅಂದರೆ 1468ರಲ್ಲೂ ಮಲ್ಲಿಕಾರ್ಜುನನೇ ಆಳುತ್ತಿದ್ದನೆಂದಾಯಿತು. ಅವನನ್ನು ಮಹಾರಾಜಾಧಿರಾಜ, ರಾಜಪರಮೇಶ್ವರ, ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ ಚತುಸ್ಸಮುದ್ರಾಧಿಪತಿ, ಶ್ರೀ ವೀರಪ್ರತಾಪ ಎಂಬುದಾಗಿ ವಿವರಿಸಲಾಗಿದೆ. ಶಾಸನವು ಮುಂದ ರಿಸು " ಮಲ್ಲಿಕಾರ್ಜುನ ಮಹಾರಾಯರು ವಿಜಯನಾಗರಿಯಲ್ಲಿ ಸುಖಸಂಕಥಾವಿನೋದದಿಂದಿರುತಿಹ ಕಾಲದಲ್ಲಿ ಅವರ ಆಗ್ನಾ (ಆಜ್ಞಾ) ಪ್ರತಿಪಾಲಕ ದೇವಪ್ಪದಂಣಾಯಕರು ಸರ್ವರಾಜ್ಯದ

ಪಾರುಪತ್ಯವ” ನಡೆಸುತ್ತಿದ್ದನೆಂಬುದಾಗಿ ತಿಳಿಸುತ್ತದೆಯಲ್ಲದೆ ದೇವಪ್ಪದಂಣಾಯಕರು ನಿರೂಪದಿಂದ ಬಾರಕೂರ ರಾಜ್ಯವನ್ನು ಗುರುವಪ್ಪವಡೆಯರು ಆಳುತ್ತಿದ್ದರೆಂದು ಹೇಳುತ್ತದೆ.


ಶಾಸನದ ಉದ್ದೇಶವು “ಮಲ್ಲಿಕಾರ್ಜುನರಾಯನಿಗೆ ಆಯುಷ್ಯಾಭಿವೃದ್ಧಿಯಾಗಬೇಕೆಂದು ಕೋಟಿಯ ಕೇರಿಯ ಮಾರ್ಕಂಡೇಶ್ವರ ದೇವರ ಸಂನಿಧಿಯಲ್ಲಿ ಗೋಪೆ (ವೆ?)ಯಲ್ಲಿದ್ದ ಗ್ನ್ಯಾ(ಜ್ಞಾ)ನ ಸಾಗರ ಶ್ರೀಪಾದಂಗಳಿಗೆ” ಕೊಟ್ಟ ದಾನವನ್ನು ವಿವರಿಸುವುದಾಗಿದೆ. ಶ್ರೀಪಾದಂಗಳು ಶಿಕ್ಷಣ ಸಂಸ್ಥೆ ನಡೆಸುತ್ತಿದ್ದುದಾಗಿಯೂ, ಆ ಕಾರ್ಯಕ್ಕಾಗಿ ಅವರಿಗೆ ದಾನ ನಿತ್ತದ್ದೆಂದೂ ಶಾಸನದಿಂದ ತಿಳಿಯಬಹುದು. ಈ ಶಾಸನದಲ್ಲಿ ‘ಮನುವ ಕೋಣನಾಡು ಹದಿನಾಱರ ವೊಪ್ಪ’ ವೆಂಬ ಉಲ್ಲೇಖ ಬರುವುದರಿಂದ ಮನುವಕೋಣನಾಡು ಹದಿನಾರು ವಿಭಾಗಗಳನ್ನು (ಪ್ರಾಯಶ ಗ್ರಾಮಗಳನ್ನು) ಹೊಂದಿತ್ತೆಂದು ತಿಳಿಯಬಹುದು

ರಾಜಕೀಯ ಇತಿಹಾಸದ ದೃಷ್ಟಿಯಿಂದ ಈ ಶಾಸನವು ಎರಡು ರೀತಿಯಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಈ ಶಾಸನದಿಂದಾಗಿ ಅವನ ಆಳ್ವಿಕೆ ಮೂರುವರ್ಷ ಮುಂದರಿದಂತಾಗಿದೆ. ಅದರೊಂದಿಗೆ 1468ರಲ್ಲಿಯೂ ಗುರುವಪ್ಪ ಒಡೆಯನನ್ನು ಬಾರಕೂರಿನ ರಾಜ್ಯಪಾಲನೆಂಬುದಾಗಿ ತಿಳಿಸುವುದರಿಂದ ಬಾರಕೂರಿನ ರಾಜ್ಯಪಾಲರ ಸಂಖ್ಯೆ 83ಕ್ಕೆ ಏರಿದೆ. ಆದರೆ 1459ರಲ್ಲಿ ಬಾರಕೂರಿನಲ್ಲಿ ಆಳುತ್ತಿದ್ದ[5] ಗುರುವಪ್ಪ ಒಡೆಯನೇ ಪುನಃ 1468ರಲ್ಲಿ ಅಧಿಕಾರಕ್ಕೆ ಬಂದಿರುವ ಸಾಧ್ಯತೆಯೂ ಇದೆ.

ಮಲ್ಲಿಕಾರ್ಜುನನ ಆಳ್ವಿಕೆ ಮೂರು ವರ್ಷ ಮುಂದರಿಯಿತೆಂದು ತಿಳಿಯುವ ಮೊದಲು, ವಿರೂಪಾಕ್ಷನದೆಂದು ಹೇಳಲಾದ 1466 ರ ಬಾರಕೂರಿನ ಒಂದು ಶಾಸನದ ಬಗ್ಗೆ ಸ್ವಲ್ಪ ವಿವೇಚಿಸಬೇಕು.[6] ಈ ಶಾಸನದಲ್ಲಿ ಸಾಮ್ರಾಜ್ಯದ ಹೆಸರನ್ನಾಗಲೀ ಬಿರುದುಗಳನ್ನಾಗಲೀ ತಿಳಿಸಲಾಗಿಲ್ಲ ಮಾತ್ರವಲ್ಲ ‘ವಿರೂಪಾಕ್ಷ’ ಎಂಬ ಹೆಸರನ್ನು ಆವರಣದೊಳಗೆ ಕೊಟ್ಟು ಪ್ರಕಟಿಸಲಾಗಿದೆ. ಬಾರಕೂರಿನ ಮೂಡುಕೇರಿಯ ಸೋಮನಾಥ ದೇವಾಲಯದ ಪ್ರಾಕಾರದ ಪಶ್ಚಿಮ ಭಾಗದ ಗೋಡೆಗೆ ತಾಗಿ ನಿಲ್ಲಿಸಲಾದ ಶಾಸನಗಳ ಪೈಕಿ ಇದು ಹದಿನೈದನೆಯದು ಎಂದು ಪ್ರಕಟಣಾದೆಡೆ ತಿಳಿಸಲಾಗಿದೆ. ಅದೇ ಸುಳಿವಿನ ಮೇರೆ ಅದನ್ನು ಪುನಃ ಅಚ್ಚು ತೆಗೆದು ಪರಿಶೀಲಿಸುವ ದೃಷ್ಟಿಯಿಂದ ಅಲ್ಲಿಗೆ ಹೋದಾಗ ದುರಾದೃಷ್ಟವಶಾತ್ ಅಲ್ಲಿ ಕಂಡು ಬಂದುದು ಕೇವಲ 14 ಕಲ್ಲುಗಳು ಮಾತ್ರ. ಅಲ್ಲೆಲ್ಲಿ ಹುಡುಕಿದರೂ ಆ ಹದಿನೈದನೇ ಕಲ್ಲು (slab) ದೊರೆಯಲೇ ಇಲ್ಲ. ಅಷ್ಟೇ ಅಲ್ಲದೆ ಮಲ್ಲಿಕಾರ್ಜುನನ ಮಗ “ರಾಜಶೇಖರ ಮಹಾರಾಯ”ನ ಶಾಸನವು[7] ಸಹ ಇಲ್ಲಿ ದೊರೆತಿದ್ದು ಅದು 1469 ರಲ್ಲಿ ಬರೆಯಲ್ಪಟ್ಟದ್ದಾಗಿದೆ. ಅದರಲ್ಲಿ ರಾಜಶೇಖರನು ಎಲ್ಲಾ ರಾಜ ಬಿರುದುಗಳೊಂದಿಗೆ ಉಲ್ಲೇಖಿಸಲ್ಪಟ್ಟಿದ್ದಾನೆ.[8] ಈ ಎಲ್ಲಾ ಅಂಶಗಳು ಮೂಡುಕೇರಿಯ 1466 ರ ಶಾಸನದ ಮೊದಲ ಸಾಲಿನಲ್ಲಿ ಬರುವ ‘ವಿರೂಪಾಕ್ಷ’ ಎಂಬ ಶಬ್ದ ತಪ್ಪಾಗಿ ಓದಲ್ಪಟ್ಟಿರಬೇಕು ಎಂಬ ಅಂಶವನ್ನು ದೃಢಪಡಿಸುತ್ತವೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು 1468ರ ಕೋಟಿಕೇರಿಯ ಶಾಸನವನ್ನು ಅಭ್ಯಸಿಸಿದಾಗ ಮಲ್ಲಿಕಾರ್ಜುನನು 1465 ರಲ್ಲಿ ಪದಚ್ಯುತನಾಗಿರಲಿಲ್ಲ, ಕ್ರಿ.ಶ. 1468 ರಲ್ಲೂ ಅವನೇ ಆಳುತ್ತಿದ್ದನೆಂದು ತಿಳಿಯಬಹುದು.

ಆದರೆ ಮಲ್ಲಿಕಾರ್ಜುನನಿಗೆ ಆಯುಷ್ಯಾಭಿವೃದ್ಧಿಯಾಗಬೇಕೆಂದು ದಾನವಿತ್ತದ್ದರಿಂದಲೂ, ದೇವಪ್ಪ ದಂಣಾಯಕ ಸಾಮ್ರಾಜ್ಯದ ಸರ್ವ ಪಾರುಪತ್ಯ ಮಾಡುತ್ತಿದ್ದುದರಿಂದಲೂ ಮಲ್ಲಿಕಾರ್ಜುನನು ಅಸೌಖ್ಯದಿಂದಿದ್ದನೆಂದು ತಿಳಿಯುವುದೂ ಸಾಧ್ಯವಿದೆ. ಅಂತೂ ದೇವಪ್ಪ ದಂಣಾಯಕರ ನಿರೂಪದಿಂದ ಬಾರಕೂರು ರಾಜ್ಯವನ್ನು ಗುರುವಪ್ಪ ಒಡೆಯ ಆಳುತ್ತಿದ್ದುದರಿಂದ ದೊರೆ ಮಲ್ಲಿಕಾರ್ಜುನನು ಆ ಸಮಯದಲ್ಲಿ ಆಡಳಿತದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸುತ್ತಿದ್ದಿರಲಿಲ್ಲವೆಂಬುದು ವಿದಿತವಾಗುತ್ತದೆ.[9]



ಬಾರಕೂರಿನ ಮಲ್ಲಿಕಾರ್ಜುನನ ಶಾಸನ

ಮೂಲಪಾಠ

1. ಶ್ರೀ ಗಣಾಧಿಪತಯೆ ನಮ ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರ
2. ವೆ ತ್ರಯಿಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ ಸ್ವಸ್ತಿ ಶ್ರೀ ಜಯಾ ಭ್ಯುದ
3. ಯ ಶಕವರುಷ 1390ನೆಯ ಪ್ರಮಾಥಿಸಂವತ್ಸರದ ಶ್ರಾವಣ ಶುದ್ಧ ೧೨ ಸಲು[ವ]
4. [ಲ್ಲಿ][10] ಮಹಾರಾಜಾಧಿರಾಜ ರಾಜಪರಮೇಶ್ವರ ಪೂರ್ವದಕ್ಷಿಣಪಶ್ಚಿಮಉತ್ತರ ಚತುಸ್ಸಮು
5. ದ್ರಾಧಿಪತಿ ಶ್ರೀ ವೀರಪ್ರತಾಪ ಮಲ್ಲಿಕಾರ್ಜುನಮಹಾರಾಯರು ವಿಜಯನಾಗರಿಯ
6. [ಲು] ಸುಖಸಂಕಥಾವಿನೋದದಿಂದಿರುತಿಹ ಕಾಲದಲ್ಲಿ ಅವರ ಆಗ್ನಾ(ಜ್ಞಾ) ಪ್ರತಿಪಾ
7. ಲಕ ದೇವಪ್ಪದಂಣಾಯಕರು ಸರ್ವರಾಜ್ಯದ ಪಾರಿಪತ್ಯವ........[11] ತಿಪ್ಪ
8. ಲ್ಲಿ ಅವರ ನಿರೂಪದಿಂ ಬಾರಕೂರರಾಜ್ಯವನು ಗುರುವಪ್ಪವೊಡೆಯರು ಸವರ್ಮ್ಮ [ದಿಂ]
9. [ವಾಳು]ತಿಸಲ್ಲಿ ಮಲ್ಲಿಕಾರ್ಜುನರಾಯರಿಗೆ ಆಯುಷ್ಯಾಭಿವೃದ್ಧಿಯಾಗಬೇಕೆಂದುಕೋ
10. ಟಿಯಕೇರಿಯ ಮಾರ್ಕಂಡೇಶ್ವರದೇವರ ಸಂನಿಧಿಯಲ್ಲಿ ಗೋಪಿ (ವೆ) ಯಲಿಹ ಗ್ನಾ(ಜ್ಞಾ)ನಸಾಗರ ಶ್ರೀಪಾ
11. ದಗಳಿಗೆ ಶಿಕ್ಷಾ ಸ್ವಾ(?)ಸ್ಥೆಗೆ ದ್ವಾದಶಿಯ ಪುಂಣ್ಯಕಾಲದಲ್ಲಿ ಧಾರೆಯನೆಱದು ಬರದು ನಟ್ಟ ಶಿ
12. ಲಾಶಾಸನದಕ್ರಮವೆಂತೆಂದರೆ ಪಡುಕೋಣೆನಾಡು ಅ . . ಅರಮನೆಗೆ ತಾಱತಿಯ ಬಿ ಶಿರಲೂ
13. ರ ಗ್ರಾಮ ನಾಡಿಗೆ ತೆಱ ಸಿದಾಯ ಪಯಿಕದಿಂ ಕಾಟಿಗ 30 ಉಪ್ಪೂರಹಳಿಯ. .
14. ಗಣ ಉಡುವರ ಬಳಿಯಪರ ಬಗೆಯಿಂ ಬಂದ ಹರವರಿ ಅಕ್ಕಿಮು . . ಸಿಂಗಾರ (ಪೂ)
15. ಹರವರಿ ಅಕ್ಕಿ ಮು. ೩ ಅಂತು ಮೂವತ್ತು ಕಾಟಿಯ ಅಱವತ್ತು ಹಾನೆಯಲಿ ಅಱ
16. ಮೂಡೆ ಅಕ್ಕಿಯಾ ಅಕ್ಕಿ ಹೊಂನಿಗೆ ಅಸಾಧ್ಯ ಪಾರಿಪತ್ಯ ಕೋಟೆಯ ಕೇರಿಯ ಹಲ
17. ರಿಗೆಂದು ಧಾರೆಯನೆಱದು ಬರದು ನಟ್ಟ ಶಿಲಾಶಾಸನ ಯಿದಕ್ಕೆ ಕರಣಿಕ ಲಿಂಗರ (?)
18. ಸರ ವೊಪ್ಪ ಪಡುವಕೋಣನಾಡು ಹದಿನಾಱರ ವೊಪ್ಪ ತಾಱತಿಯ ಭಿ ಶಿರಲೂರ ವೊ
19. ಪ್ಪ ಗುರುವಪ್ಪಗಳ ಬರಹ ಯೀ ಧರ್ಮಕ್ಕೆ ಶುಭಮಸ್ತು ಮಂಗಳಮಹಾ [ಶ್ರೀಶ್ರೀ]
20. ದಾನಪಾಲನಯೋರ್ಮಧ್ಯೆ ದಾನಾಚ್ಛ್ರೇಯೋನುಪಾಲನಂ
21. ದಾನಸ್ವರ್ಗಮವಾಪ್ನೋತಿ ಪಾಲನಾದಚ್ಯುತಂಪದಂ ಶ್ರೀ.

ಅಡಿಟಿಪ್ಪಣಿಗಳು

1. K. A. Nilakanta Sastri: *A History of South India*, (Oxford University Press 1955): p 262.

2. *Ibid*; p. 261

3. A. S. Nanjunda Swami: *Vijayanagarada Itihasa*, (Samaja Pustakalaya, Dharwar, 1972) p. 46.

4. P. B. Desai, B. R. Gopal, S. H. Ritti: A *History of Karnataka* (K R I. Dharwar) p. 359.

5. Dr. P. Gururaja Bhat: *Studies in Tuluva History and culture* (Kallianpur, 1975) p. 47.

6. *S. I. I.* VII No. 320.

7. *Ibid*: No. 371

8. K. V. Ramesh; *A History of South Kanara* (Karnataka University) p. 181

9. ವಾಸ್ತವಿಕವಾಗಿ ಲೇಖಕರು ಶಾಸನ ಪಾಠ ಓದುವಲ್ಲಿ ಎಡವಿದ್ದಾರೆ. ಅದು " ಶಕ ವರುಷ ೧೩೮೧ನೆಯ ಪ್ರಮಾಥಿ ಸಂವತ್ಸರದ ಶ್ರಾವಣ ಶುದ್ಧ ೧೨ ಗುರು " (ಸಾಲು 3) ಎಂದಿದೆ. ಇದಕ್ಕೆ ಸರಿಯಾದ ಕ್ರಿಶ್ಚಿಯನ್ ವರ್ಷ ೧೪೫೯ ಆಗಿದೆ. ಆ ವರ್ಷ ಅಧಿಕ ಶ್ರಾವಣ ಮಾಸ ಬಂದಿದ್ದು ಅಂದು (ಜುಲೈ ೧೨) ಗುರುವಾರವಾಗಿತ್ತು. ಆದ್ದರಿಂದ ಲೇಖಕರ ಇತರ ವಾದಗಳು ನಿಲ್ಲುವುದಿಲ್ಲ. ಆದರೂ ಮಲ್ಲಿಕಾರ್ಜುನನು ಕ್ರಿ.ಶ. ೧೪೬೫ ನಂತರವೂ ಆಳಿದ ನೆಂಬುದು ಇತರ ಆಧಾರಗಳಿಂದ ತಿಳಿದಿದೆ. (ನೋಡಿ—ಎ. ಕ. ಸಂಪುಟ V (ಪರಿಷ್ಕೃತ) 1976; ಪೀಠಿಕೆ ಪು. Lxiii–iv)—ಬಾ. ರಾ. ಗೋ.

10. ಇಲ್ಲಿನ ಸರಿಯಾದ ಪಾಠ: " ೧೩೮೧ ನೆಯ ಪ್ರಮಾಥಿ ಸಂವತ್ಸರದ ಶ್ರಾವಣ ಶುದ್ಧ ೧೨ ಗುರು ಶ್ರೀಮನ್ಮಹಾರಾಜಾಧಿರಾಜ " (ಬಾ. ರಾ. ಗೋ.)

11. ' ಪಾರುಪತ್ಯವ ಚಿತ್ತೈಯಿಸುತಿಪ್ಪಲ್ಲಿ ' ಎಂಬುದು ಸರಿಯಾದ ಶಾಸನಪಾಠ.

(ಬಾ. ರಾ. ಗೋ.)

ರು. ಮ. ಷಡಕ್ಷರಯ್ಯ ಎಂ. ಎ

ಉಜ್ಜಿನಿಯ ಮರುಳಸಿದ್ಧದೇವಾಲಯದಲ್ಲಿರುವ ಶಿಲಾಶಾಸನ

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕು, ಉಜ್ಜಿನಿಯ ಶ್ರೀ ಮರುಳಸಿದ್ಧ ದೇವಾಲಯದಲ್ಲಿ 13ನೆಯ ಶತಮಾನದಿಂದ 16ನೆಯ ಶತಮಾನದವರೆಗಿನ ಮೂರು ಶಿಲಾಶಾಸನಗಳಿವೆ. ಈ ದೇವಾಲಯದ 13ನೆಯ ಶತಮಾನದ ಒಂದು ಕನ್ನಡ ಶಾಸನ ಹಿಂದೆಯೇ ಪ್ರಕಟವಾಗಿದೆ.[1] ಆದರೆ ಅದರ ಹೆಚ್ಚು ಭಾಗವೆಲ್ಲ ಸವೆದು ಹೋಗಿರುವುದಾಗಿ ತಿಳಿಸಿ ಮಾಸಿದ ಭಾಗಗಳನ್ನು ಚುಕ್ಕೆಗಳಿಂದ ತೋರಿಸಲಾಗಿದೆ. ಆಗಸ್ಟ್ 77ರಲ್ಲಿ ನಾನು ಆ ಶಾಸನ ಮತ್ತು ದೇವಾಲಯದ ಪ್ರದೇಶದಲ್ಲಿ ಪಶ್ಚಿಮಾಭಿಮುಖವಾಗಿಟ್ಟಿರುವ ಇತರ ಶಾಸನಗಳ ಪ್ರತಿಗಳನ್ನು ಶ್ರೀ ವಿಶ್ವಲಿಂಗಾರಾಧ್ಯರ ಸಹಾಯದಿಂದ ತೆಗೆದೆನು. ಪ್ರಕಟಣೆಯಾಗಿದ್ದ ಶಾಸನವನ್ನು ಪರೀಕ್ಷಿಸಿದಾಗ ಅಳಿಸಿ ಹೋಗಿದೆ ಎನ್ನಲಾದ ಭಾಗವನ್ನೂ ಓದಬಹುದಾಗಿದ್ದು, ಅದರ ಪೂರ್ಣಪಾಠವನ್ನು ಕೆಳಗೆ ಕೊಡಲಾಗಿದೆ.

೧. ....ಶ್ರೀಮತು ಯಾದವನಾರಾಯಣಂ ಭುಜಬಳಪ್ರತಾಪಚಕ್ರವರ್ತ್ತಿ
೨. ....ಶ್ರೀ ವೀರ ಮಹಾದೇವರಾಯ ವಿಜಯರಾಜ್ಯೋದಯದ
೩. [ಒ]ಂಭತ್ತನೆಯ ವಿಭವ ಸಂವಛರದ ಕಾರ್ತ್ತಿಕ ಬಹು[ಳ]
೪. [ಪ]ಮವಾಸೆ ಸೋಮವಾರ ಸೂರಿಯಗ್ರಹಣದಲು ಸ್ವಸ್ತಿ ಶ್ರೀ
೫. [ಮ]ನುಮಹಾಪ್ರಧಾನಂ ಸರ್ವ್ವಾಧಿಕಾರಿ ತಿಪ್ಪರಸರ ಅಳಿ
೬. [ಯ] ಚವುಂಡರಸರು ಪಾಂಡ್ಯನಾಡ ಸರ್ವ್ವಾಧಿಕಾರವಂ
೭. ಮಾಡುತಿರ್ದ್ದಲ್ಲಿ ಅವರ ಕೆಯಲು ಪಡಿಕೇಣಿಯಾಗಿ ಸುಂಕಾಧಿಕಾ
೮. ರವಂ ಮಾಡುತಿರ್ದ್ದ ಚಿಗುಟೇಱ ಸುಂಕದ ಚವುಡರ್ಸ್ಸವು
೯. ಜ್ಜೆನಿಯ ಸೇನಬೋವ ಗೋವಿಂದರ್ಸ್ಸನ ಮಗ ಸುಂಕದ ಬೋಗಯನೂ
೧೦. ಅಳಿಯ ಚಉಡರ್ಸ್ಸರ ನಿರೂಪದಿಂ ಉಜ್ಜೆನಿಯ ಶ್ರೀ ಮಲ್ಲಿಕಾರ್ಜುನ
೧೬. ದೇವರ ಶ್ರೀಕಾರ್ಯ್ಯಕ್ಕೆ ಬಿಟ್ಟ ಧರ್ಮ್ಮ ಪುರದ ಗುಡುಗಳು ಕಗರ ಗೋಪಯ್ಯ
೧೨. ಎಸ ಬ್ಯವಹಾರವಂ ತಂಡಡೆ ಸುಂಕ ಶ್ರೀ ಮಾಂನ್ಯ ದೇವಂಗೆ
೧೩. ಧಾರಾಪೂರ್ವ್ವಕವಾಗಿ ಕೊಟ್ಟರು ಯೀ ಧರ್ಮ್ಮವನು ಆರು ಮೀಱಿ
೧೪. ದಡಂ ಮಹಾಗಣಂಗಳು ನಡಸುವರು ॥ ಸ್ವದತ್ತಂ ಪರದತ್ತಂವಾ
೧೫. ಯ್ಯೋ ಹರೇತಿ ವಸುಂಧರ ಸಷ್ಟಿರ್ವ್ವರುಶಸಹಸ್ರಾಣಿ ಯಿಷ್ಟಾಯಾಂ
೧೬. ಜಾಯತೇ ಕ್ರಿಮಿ ।।।

ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಸಭಾಮಂಟಪದ ಬಲಭಾಗದ ಕರಿಕಲ್ಲಿನ ಕಂಬದ ಮೇಲೆ ಈ ಶಾಸನವನ್ನು ಕೆತ್ತಲಾಗಿದೆ. ಇದು ಸೇವುಣ ವಂಶದ ಯಾದವ ಮಹಾದೇವ ರಾಯನ ಕಾಲದ್ದು. ಶಾಸನದ ಬಲಬದಿಯ ಮೇಲ್ಭಾಗ ಸ್ವಲ್ಪ ಒಡೆದಿದೆ. ಇದರ ಕಾಲ ರಾಜನ ಆಳ್ವಿಕೆಯ ಒಂಭತ್ತನೆಯ ವರ್ಷ ವಿಭವ ಸಂವತ್ಸರದ ಕಾರ್ತೀಕ ಬಹುಳ ಅಮಾವಾಸ್ಯೆ ಸೋಮವಾರ ಅಂದರೆ ಕ್ರಿ.ಶ. ೧೨೬೮ನೆಯ ನವಂಬರ್ ೬ ಮಂಗಳವಾರವಾಗುತ್ತದೆ. ದೇವಾಲಯದಲ್ಲಿರುವ ದೇವರನ್ನು "ಉಜ್ಜನಿಯ ಶ್ರೀ ಮಲ್ಲಿಕಾರ್ಜುನದೇವ"ರೆಂದು ಕರೆಯಲಾಗಿದೆ. ಈ ದೇವರ ಶ್ರೀಕಾರ್ಯಕ್ಕೆ ಅಳಿಯ ಚಾವುಂಡರಸರ ನಿರೂಪದ ಮೇರೆಗೆ ಪಾಂಡ್ಯನಾಡ ಸರ್ವಾಧಿಕಾರಿಯಾದ ಚಾವುಂಡರಸರ ಕೈಕೆಳಗಿನ "ಪಡಿಕೇಣಿ"ಯಾಗಿ ಸುಂಕಾಧಿಕಾರ ಮಾಡುತ್ತಿದ್ದ ಚಿಗಟೇರಿಯ ಸುಂಕದ ಚವುಡರಸರು ಮತ್ತು ಉಜ್ಜಿನಿಯ ಸೇನಬೋವ ಗೋವಿಂದರಸನ ಮಗೆ ಸುಂಕದ ಬೋಗಯ್ಯನು, ಆ ಊರಿನ "ಗುಡು" (ಗೌಂಡು)ಗಳು ಮತ್ತು ಕಗರ ಗೋಪಯ್ಯ ಏನೇ ವ್ಯವಹಾರ ಮಾಡಿದರೂ ಅದರ ಸುಂಕವನ್ನು ಶ್ರೀ ಮಲ್ಲಿಕಾರ್ಜುನ ದೇವರ ಶ್ರೀಕಾರ್ಯಕ್ಕೆ ಕೊಟ್ಟರೆಂದು ಮತ್ತು ಇದಕ್ಕೆ ಯಾರಾದರೂ ತಪ್ಪಿ ನಡೆದರೆ ಮಹಾಗಣಂಗಳ ಕಾರ್ಯವನ್ನು ನಡೆಸಬೇಕೆಂದು ಶಾಸನದಲ್ಲಿ ವಿಧಿಸಲಾಗಿದೆ.

ಡಾ. ಶ್ರೀನಿವಾಸ ರಿತ್ತಿಯವರು ಮಹದೇವ ಮಹಾರಾಜನು ೧೨೫೯ರಿಂದ ತನ್ನ ಆಳ್ವಿಕೆಯನ್ನು ಆರಂಭಿಸಿದನೆಂದು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ಇದಕ್ಕೂ ಪೂರ್ವದಲ್ಲಿ ಇವನ ಆಳ್ವಿಕೆಯು ೧೨೬೧ರಿಂದ ಆರಂಭವಾಯಿತೆಂದು ತಿಳಿಯಲಾಗಿತ್ತು. ರಿತ್ತಿಯವರ ಪ್ರಮಾಣವನ್ನು ಮೇಲಿನ ಶಾಸನವು ಪುಷ್ಟೀಕರಿಸುತ್ತದೆ. (ಪಡಿಕೇಣಿ ಶಬ್ದದ ಅರ್ಥವಾಗಬೇಕಾಗಿದೆ.)

ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಸಭಾಮಂಟಪದಲ್ಲಿರುವ ಕರಿಯ ಕಂಬಗಳು ಮೊದಲಿನಿಂದಲೂ ಅಲ್ಲಿಯೇ ಇದ್ದ ಕಂಬಗಳಾಗಿರುತ್ತವೆ. ದೇವಾಲಯದ ಪ್ರವೇಶದಲ್ಲಿ ವಿಜಯನಗರದ ಒಂದು ಶಾಸನವಿದೆ. ಇದು ವಿಜಯನಗರದ ವೀರ ಸದಾಶಿವ ರಾಯನ ಕಾಲದ್ದು. ಈ ಕನ್ನಡಶಾಸನದಲ್ಲಿಯ ಕಾಲನಿರ್ದೇಶನ ಶಾಲಿವಾಹನ ಶಕ ವರುಷ ೧೪೮೪ ನೆಯ ದುಂದುಭಿ ಸಂವತ್ಸರದ ಮಾಘ ಶುದ್ಧ ದಶಮಿಯ ಸೋಮವಾರ (ಕ್ರಿ.ಶ ೧೫೬೩ರ ಮಾರ್ಚ್ ೨ ಮಂಗಳವಾರ). ಈ ದೇವಾಲಯದಲ್ಲಿಯ ದೇವರಿಗೆ "ಶ್ರೀ ಉಜ್ಜಿನಿ ಮಲ್ಲಿಕಾರ್ಜುನ" ದೇವರೆಂದು ಈ ಶಾಸನದಲ್ಲಿಯೂ ತಿಳಿಸಿದೆ. ಆದ್ದರಿಂದ ಈ ಶಾಸನವನ್ನು ಬೇರೆ ಕಡೆಯಿಂದ ಇಲ್ಲಿಗೆ ವರ್ಗಾಯಿಸಿರುವುದಿಲ್ಲ.

ಈ ದೇವಸ್ಥಾನದ ಹೊರ ಬಾಗಿಲ ಎಡ ಮತ್ತು ಬಲಬದಿಗಳ ಕಟ್ಟೆಗಳ ಕಡೆ ಪೂರ್ವಾಭಿಮುಖವಾಗಿ ಗೋಡೆಯಲ್ಲಿಟ್ಟು ಕಟ್ಟಿದ ಶಾಸನಗಳಿವೆ. ಎಡಬದಿಯ ಕನ್ನಡ ಶಾಸನವನ್ನು ಹಿಂದೆಯೇ ಪ್ರಕಟಿಸಲಾಗಿದೆ.[3] ಆದರೆ ಬಲಬದಿ ಗೋಡೆಯಲ್ಲಿರುವ ಸುಮಾರು 16ನೆಯ ಶತಮಾನದ ಕನ್ನಡ ಶಾಸನವು ಹೆಚ್ಚು ಮಾಸಿ ಹೋಗಿದೆ. ಎಡಬದಿಯಲ್ಲಿರುವ ಶಾಸನವು ವಿಜಯನಗರ ಅಚ್ಯುತರಾಯನ ಕಾಲದ ಕನ್ನಡ ಶಾಸನ.

ಸುಮಾರು 13ನೆಯ ಶತಮಾನದಿಂದ 16ನೆಯ ಶತಮಾನದವರೆಗೆ ಈ ದೇವಾಲಯದಲ್ಲಿರುವ ದೇವರಿಗೆ ಶ್ರೀ ಮಲ್ಲಿಕಾರ್ಜುನ ದೇವರೆಂದು ಕರೆದಿರುವುದು ಇಲ್ಲಿರುವ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಅಡಿಟಿಪ್ಪಣಿಗಳು

1. *S I I.* IX Pt. I, No. 375
2. Srinivas Ritti : *The Seunas* (1972, Dharwar) p. 154.
3. *S I I.*, IX , pt..II.

ಕೆ. ಎಸ್. ಸದಾಶಿವಯ್ಯ

ಪ್ರಶಿಕ್ಷಣ ಮತ್ತು ಶೈಕ್ಷಣಿಕ ಪ್ರಯೋಗಗಳು

ಶಿಕ್ಷಣದಲ್ಲಿ ಬದಲಾವಣೆ

ಭಾರತದಲ್ಲಿ ಪ್ರಶಿಕ್ಷಣ ಮತ್ತು ಪ್ರಯೋಗಗಳು, ನಾವೀನ್ಯಗಳು ಒಟ್ಟಿಗೆ ಗಮಿಸಲಾರವು ಮತ್ತು ಕೂಡಿ ಬಾಳಲಾರವು. ನಮ್ಮ ಶಿಕ್ಷಣತಜ್ಞರ, ಆಡಳಿತಾಧಿಕಾರಿಗಳ, ಪ್ರಶಿಕ್ಷಕರ ಮತ್ತು ಅಧ್ಯಾಪಕ ಸಮೂಹದವರ ಮುಂದಿರುವ ಸಮಸ್ಯೆ ಎಂದರೆ ಅನೂಚಾನವಾಗಿ ನಡೆದು ಬಂದ ಶಿಕ್ಷಣ ಸಂಸ್ಥೆಗಳನ್ನು ಸಂಪ್ರದಾಯದ ಮಾರ್ಗದಲ್ಲೇ ಮುಂದುವರಿಸಿಕೊಂಡು ಹೋಗುವುದು ಮತ್ತು ಅವುಗಳ ಆಡಳಿತವನ್ನು ನಿರ್ವಹಿಸುವುದು. ಈ ಕಾರಣದಿಂದ ಶಿಕ್ಷಣವನ್ನು ಕುರಿತ ನವ ಪ್ರಯೋಗಗಳು, ಸಂಶೋಧನೆಗಳು ಮತ್ತು ಬದಲಾವಣೆಗಳಿಗೆ ಪಾಶ್ಚಿಮಾತ್ಯರನ್ನು ಅನುಸರಿಸುವುದು ಅನುಕರಿಸುವುದು ಪ್ರಖರವಾಗಿ ಕಂಡುಬರುತ್ತಿದೆ. ಉನ್ನತ ಶಿಕ್ಷಣವನ್ನು ಕುರಿತು ಅಧಿಕಾರಯುತವಾಗಿ ಮಾತನಾಡಬಲ್ಲ ಡಾ. ಇರಿಕ್ ಅಪ್ಪೆಯವರು ಇಂತು ನುಡಿದಿದ್ದಾರೆ : “ ಭಾರತವು ಬೌದ್ಧಿಕವಾಗಿ ಇನ್ನೂ ವಿದೇಶಗಳ ವಸಾಹತುವಾಗಿ ಉಳಿದಿದೆ.” ನಮಗೆ ಭೌತಿಕ ಸ್ವಾತಂತ್ರ್ಯ ಪ್ರಾಪ್ತವಾಗಿ ಮೂರು ದಶಕಗಳು ಕಳೆದರೂ ಬೌದ್ಧಿಕವಾದ ಸ್ವಾತಂತ್ರ್ಯ ಇನ್ನೂ ಕೈಗೆಟಕಿಲ್ಲ ಎಂಬುದನ್ನು ಅಪ್ಪೆಯವರ ಮಾತುಗಳು ಸಮರ್ಥಿಸುತ್ತವೆ. ನಾವು ಬೌದ್ಧಿಕವಾಗಿ ಇನ್ನೂ ಪಶ್ಚಿಮಾಭಿಮುಖವಾಗಿದ್ದೇವೆ ಎಂಬುದಕ್ಕೆ ಪೋಷಕವಾದ ಕೆಲವು ನಿದರ್ಶನಗಳನ್ನು ಕೊಡಬಹುದು.

1. ಇಂಗ್ಲೆಂಡಿನಲ್ಲಿ ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಕರನ್ನು ತರಬೇತಿಸಲು ಪ್ರಶಿಕ್ಷಣ ಸಂಸ್ಥೆಗಳು ಸ್ಥಾಪಿತವಾದವು. ಮೊದಲು ಈ ಸಂಸ್ಥೆಗಳನ್ನು ಶಿಕ್ಷಕರ ತರಬೇತಿ ಕಾಲೇಜುಗಳೆಂದು ನಾಮಕರಣ ಮಾಡಲಾಯಿತು. ಆಂಗ್ಲರ ಕಾಲದಲ್ಲಿ ಭಾರತದಲ್ಲಿ ಸ್ಥಾಪಿತವಾದ ಈ ಪ್ರಶಿಕ್ಷಣ ಸಂಸ್ಥೆಗಳಿಗೂ ಇವೇ ಹೆಸರನ್ನು ಕೊಡಲಾಯಿತು. ಕೆಲವು ದಶಕಗಳ ನಂತರ ಇಂಗ್ಲೆಂಡು ಮತ್ತು ಅಮೆರಿಕಗಳಲ್ಲಿ ಈ ಸಂಸ್ಥೆಗಳಿಗೆ ‘ ಶಿಕ್ಷಕರ ಕಾಲೇಜು ’ ಗಳೆಂದು ಪುನಃ ನಾಮಕರಣ ಮಾಡಲಾಯಿತು. ಈ ಬದಲಾವಣೆಯನ್ನೇ ಕಾಯುತ್ತಿದ್ದ ಭಾರತೀಯ ಶಿಕ್ಷಣತಜ್ಞರು ನಮ್ಮ ಪ್ರಶಿಕ್ಷಣ ಕಾಲೇಜುಗಳ ನಾಮಫಲಕಗಳನ್ನು ಕೂಡಲೆ ಬದಲಾಯಿಸಿದರು. 1963ರಲ್ಲಿ ಲಾರ್ಡ್ ರಾಬಿನ್ಸ್ ವರದಿಯು ಈ ಶಿಕ್ಷಕರ ಕಾಲೇಜುಗಳನ್ನು ‘ ಶೈಕ್ಷಣಿಕ ಕಾಲೇಜುಗಳು ’ ಎಂದು ಬದಲಾಯಿಸಬೇಕೆಂದು ಶಿಫಾರಸು ಮಾಡಿತು. ಸೂಕ್ಷ್ಮಮತಿಗಳಾದ ನಮ್ಮ ಶಿಕ್ಷಣನೇತ್ತರು ನಮ್ಮಲ್ಲಿನ ಶಿಕ್ಷಕರ ಕಾಲೇಜುಗಳನ್ನು ‘ ಶೈಕ್ಷಣಿಕ ಕಾಲೇಜುಗಳು ’ ಎಂದು ಬದಲಾಯಿಸಿದರು. ಕೇವಲ ಯಃಕಶ್ಚಿತ ಶಿಕ್ಷಣ ಸಂಸ್ಥೆಗಳ ನಾಮ ಬದಲಾವಣೆಗೂ ನಾವು ಪರಾಶ್ರಯಿಗಳಾಗತೊಡಗಿದರೆ ನಮ್ಮ ಚಿಂತನಾ ಹೀನತೆ ಪ್ರದರ್ಶಿತವಾಗುವುದಿಲ್ಲವೆ ? ನಮ್ಮ ಪ್ರಶಿಕ್ಷಣ ಸಂಸ್ಥೆಗಳ ನಾಮಕರಣ ಮಹೋತ್ಸವಕ್ಕೆ

ಪರದೇಶೀ ಪುರೋಹಿತರನ್ನು ಬರಮಾಡಿಕೊಳ್ಳಬೇಕೆ; ನಮ್ಮಲ್ಲಿ ಪುರೋಹಿತರಿಗೇನು ಅಭಾವವೇ ?

2. ನಮ್ಮ ಪ್ರಶಿಕ್ಷಣ ಸಂಸ್ಥೆಗಳ ನಾಮಕರಣಕ್ಕೆ ಮಾತ್ರವಲ್ಲದೆ ಶಾಲಾ ತರಗತಿಗಳಲ್ಲಿ ಅನುಸರಿಸುವ ಬೋಧನವಿಧಾನಗಳಿಗೂ ಅನ್ಯರನ್ನು, ಪರದೇಶೀಯರನ್ನು ಹಿಂಬಾಲಿಸುತ್ತಿರುವುದು ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಪ್ರಚಲಿತವಲ್ಲಿರುವ ಒಲವುನಿಲವುಗಳನ್ನು ಸಮೀಕ್ಷಿಸಿದರೆ ವೇದ್ಯವಾಗುತ್ತದೆ. ಬಹು ದಶಕಗಳಿಂದ ನಮ್ಮ ಪ್ರಶಿಕ್ಷಣ ಸಂಸ್ಥೆಗಳು ಮಹಾರಾಯ ಹರ್ಬಾರ್ಟನ ಪಂಚ ಸೋಪಾನಗಳನ್ನು ಬೋಧನ ವಿಧಾನವನ್ನಾಗಿ ಅಳವಡಿಸಿಕೊಂಡಿರುವುದು ನಮ್ಮ ತರಬೇತಿ ಪಡೆದ ಶಿಕ್ಷಕರಿಗೆ ಅನುಭವವೇದ್ಯವಾಗಿದೆ. ಆದರೆ ಎಷ್ಟೊಂದು ದಿನ ಈ ಹಳೆಯ ಬೋಧನ ಪದ್ಧತಿಗೆ ಜೋತು ಬೀಳುವುದು ಎಂದು ನಮ್ಮ ಹಿರಿಯ ನಿಸ್ಸೀಮ ಶಿಕ್ಷಣ ಸಂಶೋಧಕರು ಉದ್ಗಾರ ತೆಗೆಯತೊಡಗಿದರು. ಈವರೆಗೆ ಅಚ್ಚುಕಟ್ಟಾಗಿ ಆಂಗ್ಲೇಯರನ್ನು ಅನುಸರಿಸುತ್ತಿದ್ದ ವಯೋವೃದ್ಧ ಶಿಕ್ಷಕರು ಅಮೆರಿಕೆಯತ್ತ ತಮ್ಮ ದೃಷ್ಟಿಯನ್ನು ಹೊರಳಿಸತೊಡಗಿದರು. ಅಮೆರಿಕೆಯು ಸಂಶೋಧನೆಗಳಿಗೆ ಪ್ರಯೋಗಗಳಿಗೆ ಬದಲಾವಣೆಗಳಿಗೆ ಮಾತೃಭೂಮಿಯಾಗಿದೆ. ಬಹುತೇಕ ನೋಬೆಲ್ ಬಹುಮಾನಗಳನ್ನು ಅಮೆರಿಕೆಯ ಸಂಶೋಧಕರು ಬಾಚಿಕೊಳ್ಳುತ್ತಿದ್ದಾರೆ. ಬೋಧನ ಕ್ಷೇತ್ರದಲ್ಲಿ ಅಮೆರಿಕನ್ನರು ಅದ್ಭುತ ಪವಾಡಗಳನ್ನು ಮೆರೆದಿದ್ದಾರೆ. ಇವುಗಳಲ್ಲಿ ಮುಖ್ಯವಿವು: ಪೂರ್ವ ಯೋಜಿತ ಬೋಧನೆ, ಸಮೂಹ ಬೋಧನೆ, ರೇಡಿಯೋ ಪಾಠ, ಟೆಲಿವಿಷನ್ ಪಾಠ, ಧ್ವನಿ ಮುದ್ರಿಕೆಯ ಪಾಠ, ಚಿತ್ರಪ್ರದರ್ಶನದ ಪಾಠ, ಸೂಕ್ಷ್ಮತಾ ಬೋಧನೆ, ಬೃಹತ್ ಬೋಧನೆ, ಹೀಗೆ ಅಮೆರಿಕೆಯಲ್ಲಿ ಒಂದು ವಿಧಾನದಿಂದ ಮತ್ತೊಂದಕ್ಕೆ ಮಗದೊಂದಕ್ಕೆ ಮುನ್ನಡೆಯುತ್ತಿರುತ್ತಾರೆ. ಅವರ ಮುನ್ನಡೆಯ ಹೆಜ್ಜೆಯ ಗುರುತುಗಳನ್ನೇ ನಾವು ಅನುಸರಿಸುವ ಮಹತ್ ಸಾಧನೆಯಲ್ಲಿ ತೊಡಗಿದ್ದೇವೆ. ಅಲ್ಲಿ ನಡೆದ ಪ್ರಯೋಗಗಳನ್ನು ಇಲ್ಲಿಯೂ ನಡೆಸಿ, ಸದ್ಯಕ್ಕೆ ಸೂಕ್ಷ್ಮತಾಬೋಧನೆಯನ್ನು ಕುರಿತು (Micro Teaching) ಭರ್ಜರಿಯಾಗಿ DSERT-NCERT ಇನ್ನೂ ಅನೇಕ ಪ್ರಶಿಕ್ಷಣ ಸಂಸ್ಥೆಗಳಲ್ಲಿ, ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನ ಸಂಸ್ಥೆಗಳಲ್ಲಿ ಏಕರೂಪವಾದ ಬೋಧನ ವಿಧಾನಕ್ಕೆ ನೇತು ಬಿದ್ದಿದ್ದ, ಮಾಮೂಲಿ ಶಿಕ್ಷಕ ವೃತ್ತಿಯಿಂದ ಬೇಸರಗೊಂಡಿದ್ದ ಸಹಸ್ರಾರು ಶಿಕ್ಷಕರಿಗೆ ಅದ್ದೂರಿಯಾಗಿ ತರಬೇತಿ ನೀಡಲಾಗುತ್ತಿದೆ. ಹೀಗೆ ವಿದೇಶಗಳಲ್ಲಿ ಆವಿಷ್ಕರಣಗೊಂಡ ಬೋಧನ ಕ್ರಮಗಳನ್ನು ನಮ್ಮ ಪ್ರಶಿಕ್ಷಕರು ಅರ್ಥವಿಸಿಕೊಂಡು ಪ್ರಶಿಕ್ಷಣಾರ್ಥಿಗಳಿಗೆ ವಿವರಿಸುವಲ್ಲಿ ತೊಡಗಿರುವುದು ಪ್ರಶಂಸನೀಯವಾಗಿದೆ.

ಪಠ್ಯವಿಷಯ ಬೋಧನ, ಶಿಕ್ಷಕ ಶಿಕ್ಷಕನಿಗೂ, ವಿಷಯ ವಿಷಯಕ್ಕೂ, ಸನ್ನಿವೇಶ ಸನ್ನಿವೇಶಕ್ಕೂ, ಮಕ್ಕಳ ಹಿನ್ನೆಲೆಗೂ ಬದಲಾಗುತ್ತಾ ಹೋಗುವುದು ಸಹಜ. ಶಾಲೆಯಲ್ಲಿ ನೂರು ಶಿಕ್ಷಕರಿದ್ದರೆ ನೂರು ಬೋಧನ ವಿಧಾನಗಳಿರುತ್ತವೆ. ಮಕ್ಕಳ ಸಂಸ್ಕಾರಕ್ಕೆ, ತರಗತಿಯ ಸನ್ನಿವೇಶಕ್ಕೆ, ವಿಷಯದ ಗಹನತೆಗೆ ತಕ್ಕ ಬೋಧನ ವಿಧಾನವನ್ನು ಆವಿಷ್ಕರಿಸಿಕೊಳ್ಳುವ ಶಕ್ತಿಯನ್ನು ಶಿಕ್ಷಕರಲ್ಲಿ ಸ್ಫುರಿತಗೊಳಿಸಬೇಕೇ ವಿನಾ ಯಾರೋ ಸೃಜಿಸಿದ ವಿಧಾನವನ್ನು ಶಿಕ್ಷಕರ ಮೇಲೆ ಹೇರುವುದು ಅಶೈಕ್ಷಣಿಕವಾಗುತ್ತದೆ ಈ ಪರದೇಶಿ ಬೋಧನ ವಿಧಾನಗಳನ್ನು ಕುರಿತು ನಮ್ಮ ಶಿಕ್ಷಕರಿಗೆ ತರಬೇತಿಯನ್ನು ನೀಡುತ್ತಿರುವುದು ನಮ್ಮ ಶಿಕ್ಷಣ ಮಟ್ಟವನ್ನು ಸೂಚಿಸುತ್ತದೆ. ನಮ್ಮ ಪರಿಸರಕ್ಕೆ ಅನ್ಯವಾದ ವಿಧಾನಗಳನ್ನು ಅನುಸರಿಸಲು ಪ್ರಯತ್ನಿಸುವುದರಿಂದಲೇ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳು ಅಪೂರ್ವವಾಗುತ್ತವೆ.

3. ಪಠ್ಯವಿಷಯವನ್ನು ಶಾಲಾಕಾಲೇಜುಗಳಿಗೆ, ಪ್ರಶಿಕ್ಷಣ ಸಂಸ್ಥೆಗಳಿಗೆ ರೂಪಿಸುವಾಗ ಪ್ರಚಲಿತದಲ್ಲಿನ ಪಠ್ಯವಿಷಯಗಳನ್ನು ಮೌಲ್ಯಮಾಪನ ಮಾಡಿ ಸಂಶೋಧನ ಮತ್ತು ಪ್ರಯೋಗಗಳ ಮೂಲಕ ಬದಲಾಯಿಸುವುದು ಕಂಡುಬರುವುದಿಲ್ಲ. ಪಠ್ಯವಿಷಯವನ್ನು ಬದಲಿಸುವಾಗ ಸಂಶೋಧನೆ ನಡೆಸುವುದು ಸಮಾಜದ ಮತ್ತು ಮಕ್ಕಳ ಮಕ್ಕಳ ಅವಶ್ಯಕತೆಗಳನ್ನು

ಹಾಗೂ ಶಿಕ್ಷಕರ ಸಮಸ್ಯೆಗಳನ್ನು ತಿಳಿಯುವುದಕ್ಕೋಸ್ಕರ. ಈ ವೈಜ್ಞಾನಿಕ ವಿಧಾನದ ಮೂಲಕ ಪಠ್ಯರಚನಾ ವಿನ್ಯಾಸವನ್ನು ಕೈಗೊಳ್ಳುವುದನ್ನು ಇಂದು ವರ್ಜಿಸಲಾಗಿದೆ. ಅತ್ಯಂತ ಲಘುವಾದ ವಿಧಾನವನ್ನು ವಿವಿಧ ಹಂತಗಳಲ್ಲಿನ ಶಿಕ್ಷಣ ಮುಖ್ಯರು ಕೈಗೊಂಡಿರುವುದು ಕಂಡು ಬರುತ್ತದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಧ್ಯಾಪಕ ಮುಖ್ಯರು ನೆರೆಹೊರೆಯ ವಿಶ್ವವಿದ್ಯಾಲಯಗಳ ಮತ್ತು ವಿದೇಶೀಯ ಪಠ್ಯವಿಷಯ ಪುಸ್ತಕಗಳನ್ನು ಮತ್ತು ಪಠ್ಯಪುಸ್ತಕಗಳ ಆಧಾರದಿಂದ ತಮ್ಮ ವಿಭಾಗಗಳಿಗೆ ಉಚಿತವಾದ ಪಠ್ಯವಿಷಯವನ್ನು ತಯಾರಿಸುತ್ತಾರೆ. ಇದು ಸಾಮಾನ್ಯವಾಗಿ ವಿಭಾಗದ ಹಿರಿಯ ಇಲ್ಲವೆ ವಿಭಾಗ ಮುಖ್ಯರ ಕೃಪೆಗೆ ಪಾತ್ರರಾದವರಿಂದ ರಚಿಸಲ್ಪಡುತ್ತದೆ. ಆಯಾ ವಿಷಯಗಳಿಗೆ ಸಂಬಂಧಿಸಿದ ಶಿಕ್ಷಕರು ಪಾಲುಗಾರಿಕೆಗೆ ಅವಕಾಶವಿಲ್ಲದೆ ಶಿಕ್ಷಣ ಇಲಾಖೆಯ ಮುಖ್ಯಾಧಿಕಾರಿಗಳು ಮತ್ತು ಅವರ ಕೃಪೆಗೆ ಪಾತ್ರರಾದ ಇತರ ಅಧಿಕಾರಿಗಳಿಂದ ಕೂಡಿದ ಸಮಿತಿ ಈ ಪಠ್ಯವಿಷಯ ರಚನಾ ಕಾರ್ಯವನ್ನು ನಿರ್ವಹಿಸುತ್ತದೆ. ಈ ಸಮಿತಿಯ ವಯೋವೃದ್ಧರು ಪಠ್ಯವಿಷಯವನ್ನು ರಚಿಸುವಾಗ ಪೋಷಕರ, ಸಮಾಜಕರ ಆಶೋತ್ತರಗಳನ್ನೂ, ಜನಜೀವನ ಶೈಲಿಯನ್ನೂ, ರಾಷ್ಟ್ರದ ರಾಜಕೀಯವಾದ ತತ್ತ್ವಗಳನ್ನೂ, ಮಕ್ಕಳ ಅಭಿರುಚಿಗಳನ್ನೂ ಅವರ ಹಿನ್ನೆಲೆಗಳನ್ನೂ ಲೆಕ್ಕಿಸದೆ ತಮಗೆ ತೋಚಿದ, ಹಿಂದಣ ಪಠ್ಯವಿಷಯಗಳಲ್ಲಿ ಕೆಲವನ್ನು ತೆಗೆದು ಹಾಕಿ ಮತ್ತೆ ಕೆಲವನ್ನು ಸೇರಿಸಿ ಹೊಸದನ್ನು ಯಾವ ಸಂಶೋಧನೆಯ ಸಂಸ್ಕಾರವೂ ಇಲ್ಲದೆ ಹೊಸದೇ ಬಿಡುತ್ತಾರೆ. ಈ ಅವೈಜ್ಞಾನಿಕವಾದ ಪಠ್ಯವಿಷಯ ಮಕ್ಕಳನ್ನು ಶಿಕ್ಷಕರನ್ನು ಪೇಚಿಗೆ ಸಿಲುಕಿಸುತ್ತದೆ. ಈ ತೆರನಾದ ಪಠ್ಯವಿಷಯ ರಚನೆ ಶಿಕ್ಷಣದಲ್ಲಿ ಬದಲಾವಣೆಗಳನ್ನು ತರಲು ನಾಂದಿಯಾದೀತೆ?

4. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪಠ್ಯಪುಸ್ತಕ, ಆಧಾರಗ್ರಂಥಗಳ ಮತ್ತು ಇನ್ನಿತರ ಶಿಕ್ಷಣ ಸಾಹಿತ್ಯಕ್ಕೆ ಅನ್ಯದೇಶೀಯರನ್ನೇ ಅವಲಂಬಿಸಿರುವುದು ಕಂಡುಬರುತ್ತದೆ. ನಮ್ಮ ಸ್ನಾತಕೋತ್ತರ ಶಿಕ್ಷಣ ವಿಭಾಗಗಳು ಮತ್ತು ಶಿಕ್ಷಕರ ಕಾಲೇಜುಗಳು ಇನ್ನೂ ಜೀವಂತವಾಗಿರುವುದು ವಿದೇಶೀಯ ಪ್ರಕಟನ ಸಂಸ್ಥೆಗಳಾದ ಮ್ಯಾಗ್ರ್‌ಹಿಲ್ ಬುಕ್ ಕಂಪನಿ, ದಿ ಮ್ಯಾಕ್‌ಮಿಲನ್ ಕಂಪನಿ, ಜಾರ್ಜ್ ಅಲನ್ ಅಂಡ್ ಅನುವಿನ್, ಜಾರ್ಜ್ ಹರಪ್ ಅಂಡ್ ಕೊ—ಮೊದಲಾದುವುಗಳು ನಮಗೆ ಅಗತ್ಯವಾದ ಸಾಹಿತ್ಯವನ್ನು ನಿರ್ಮಿಸುತ್ತಿರುವುದರಿಂದಲೇ ಈ ಪರದೇಶಿ ಪ್ರಕಾಶನ ಸಂಸ್ಥೆಗಳು ಸಾಹಿತ್ಯವನ್ನು ನಿರ್ಮಿಸಿದಂತೆಲ್ಲ ನಾವು ನಮ್ಮ ಪಠ್ಯವಿಷಯಗಳನ್ನು, ಬೋಧನ ವಿಧಾನಗಳನ್ನು ಮಾರ್ಪಡಿಸುತ್ತಾ ಹೋಗುತ್ತೇವೆ. ವಿದೇಶೀಯ ಗ್ರಂಥಕರ್ತರು, ಸಾಹಿತ್ಯ ರಚಕರು ತಮ್ಮ ಸಂಸ್ಕೃತಿಗೆ, ತಮ್ಮ ಮಕ್ಕಳ ವಿದ್ಯಾರ್ಥಿಗಳ ಅಭಿರುಚಿ ಆಸಕ್ತಿಗಳಿಗೆ ಅನುಗುಣವಾಗಿ ಪುಸ್ತಕಗಳನ್ನು ರಚಿಸುವರೇ ಹೊರತು ನಮ್ಮ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಮಟ್ಟಗಳನ್ನು ಮತ್ತು ಹಿನ್ನೆಲೆಯನ್ನು ಕುರಿತು ಅಲ್ಲ. ಈ ಕಾರಣದಿಂದಲೇ ಈ ವಿದೇಶೀ ಗ್ರಂಥಗಳು ನಮ್ಮ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಮಹೋಪಾಧ್ಯಾಯರಿಗೂ ಅರ್ಥವಿಸಿಕೊಳ್ಳಲು ಕಷ್ಟವಾಗುತ್ತವೆ. ಆದರೂ ನಮ್ಮ ಅಧ್ಯಾಪಕ ವರ್ಗದವರು ಮತ್ತು ವಿದ್ಯಾರ್ಥಿಗಳು ಆ ವಿದೇಶೀ ಗ್ರಂಥಗಳಿಗೆ ಹೊಂದಿಕೊಳ್ಳುತ್ತಿದ್ದಾರೆ. ಅವು ಇಲ್ಲಿನ ಪರಿಸರಕ್ಕೆ ಅತೀತವಾಗಿರುವುದರಿಂದ ಈ ಶಿಕ್ಷಣ ಸಾಹಿತ್ಯಕ್ಕೆ ಅನ್ಯಾಶ್ರಯಿಗಳಾಗಿರುವುದು ನಮ್ಮ ಅಧ್ಯಾಪಕ ಶಿಕ್ಷಕರು ನಮಗುಚಿತವಾದ ಸಾಹಿತ್ಯ ನಿರ್ಮಿತಿಯಲ್ಲಿ ತೊಡಗಿರುವುದರಿಂದ.

ನಮ್ಮ ಈ ಅಧ್ಯಾಪಕ ಶಿಕ್ಷಕರು ಶಿಕ್ಷಣ ಇಲಾಖೆಯವರು ಮತ್ತು ವಿಶ್ವವಿದ್ಯಾನಿಲಯದವರು ಒದಗಿಸಿರುವ ಸೌಲಭ್ಯಗಳನ್ನು ಪೂರ್ಣವಾಗಿ ಅನುಭವಿಸುತ್ತಿದ್ದರೂ ಆದೇಕೆ ಇವರು ಸಾಹಿತ್ಯ ನಿರ್ಮಿತಿಯಲ್ಲಿ ಸಂಶೋಧನೆಯಲ್ಲಿ ಅನ್ವೇಷಣೆಯಲ್ಲಿ ತೊಡಗಿಲ್ಲ! ತೊಡಗಿದ್ದರೂ ಆದೇಕೆ ಇವರ ಸಂಶೋಧನೆಗಳು ಮುದ್ರಣದ ಮೂಲಕ ದಿನದ ಬೆಳಕನ್ನು ಕಂಡಿಲ್ಲ! ಇವರ ಅಸಾಧಾರತನದಿಂದ ನಾವು ಇನ್ನೂ ಶಿಕ್ಷಣ ಸಾಹಿತ್ಯಕ್ಕೆ ವಿದೇಶೀ ಕರ್ತೃಗಳನ್ನು ಆಶ್ರಯಿಸಬೇಕಾಗಿದೆ. ಬೌದ್ಧಿಕವಾಗಿ ಸ್ವತಂತ್ರರಲ್ಲದ ನಾವು ನಾಚಿಕೆಯಿಂದ ತಲೆತಗ್ಗಿಸುವಂತಹ ಪ್ರಸಂಗವಿದು. ಹೀಗೆ

ಯಾಂತ್ರಿಕವಾದ ಮಾತಿನ ಮಟ್ಟದಲ್ಲಿಯೇ ಇರುವ ಶಿಕ್ಷಣತಜ್ಞರಿಂದ ಶಿಕ್ಷಣ ಭೂಮಿಕೆಯಲ್ಲಿ ನೂತನ ಬದಲಾವಣೆಗಳು ಹೇಗೆ ಸಂಭವಿಸುತ್ತವೆ ?

5. ಬೋಧನೆ ಮತ್ತು ಕಲಿಕೆಗಳು ಶಿಕ್ಷಣ ಕಾಲೇಜುಗಳಲ್ಲಾಗಲಿ ಸ್ನಾತಕೋತ್ತರ ವಿಭಾಗಗಳಲ್ಲಾಗಲಿ ಮತ್ತು ಇನ್ನಾವ ಶಿಕ್ಷಣ ಸಂಸ್ಥೆಗಳಲ್ಲಾಗಲಿ ತೃಪ್ತಿಕರವಾಗಿ ನಡೆಯುತ್ತಿಲ್ಲ. ಇದಕ್ಕೆ ಬಹು ಮುಖ್ಯ ಕಾರಣ ಪರೀಕ್ಷಾ ದೃಷ್ಟಿಯಿಂದ ಬೋಧಿಸುತ್ತಿರುವುದರಿಂದ ನಿಯಮಿತ ಪಠ್ಯವಿಷಯಗಳನ್ನು ಮಾಡಿ ಮುಗಿಸುವತ್ತ ನಮ್ಮ ದೃಷ್ಟಿ ನೆಟ್ಟಿರುತ್ತದೆ, ಹೊರತು ಸಮರ್ಪಕವಾದ ಬೋಧನೆಯತ್ತಲ್ಲ. ನಿರ್ದಿಷ್ಟ ಸಂಖ್ಯೆಯ ಉಪನ್ಯಾಸಗಳನ್ನು ಬಿಗಿಯುವುದೆ ಅಧ್ಯಾಪಕನ ಮೂಲ ಗುರಿ. ಕಲಿಕೆಯ ಪ್ರತಿಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಒಳಗು ಮಾಡುವ ಪ್ರಯತ್ನ ಕಂಡು ಬರುವುದಿಲ್ಲ. ಉಪನ್ಯಾಸ ಕ್ರಮವೆಂದರೆ ವರುಷ ಒಂದರಲ್ಲಿ ಪಠ್ಯಪುಸ್ತಕದಲ್ಲಿರುವ ಅಂಶಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು. ಕೆಲವು ಉಪನ್ಯಾಸಕರು ವರ್ಷವಿಡೀ ತರಗತಿಯಲ್ಲಿ ನೋಟ್ಸ್ ಬರೆಸುವುದರಲ್ಲಿಯೇ ಕಳೆಯುತ್ತಾರೆ. ಭಾರತದಲ್ಲಿ ಶಿಕ್ಷಣವು ಏಕಮುಖವಾದುದು. ಚರ್ಚೆಗೆ ಅವಕಾಶವೇ ಇರುವುದಿಲ್ಲ. ನಮ್ಮ ಪ್ರಸ್ತುತ ಶಿಕ್ಷಣದ ಲಕ್ಷಣ ಇಂತಿದೆ : "ಶಿಕ್ಷಣವು ವಿಚಿತ್ರವಾದ ಒಂದು ಪ್ರಕ್ರಿಯೆ. ಬೋಧನ ವಿಷಯಗಳು ಪ್ರಾಧ್ಯಾಪಕನ ನೋಟ್ಸಿನಿಂದ ವಿದ್ಯಾರ್ಥಿಗಳ ನೋಟ್ ಬುಕ್ಕುಗಳಿಗೆ ಅವರ ಪೆನ್ನುಗಳ ಮೂಲಕ ರವಾನಿತವಾಗುತ್ತವೆ. ಈ ವಿಷಯಗಳು ಇವರೀರ್ವರಿಗೂ ಅರ್ಥವಾಗಿರುವುದಿಲ್ಲ" ಅದೇಕೆ ಬೋಧನ ವಿಷಯ ತಮ್ಮ ಪ್ರಾಧ್ಯಾಪಕನ ಮನಕ್ಕೆ ತಾಕಿರುವುದಿಲ್ಲ. ಇವನು ಬೋಧಿಸುವ ಜ್ಞಾನ ಆಗಲೆ ಅದೆಲ್ಲೋ ಬೆಳೆದಿರುತ್ತದೆ. ಈ ಜ್ಞಾನದ ಆವಿಷ್ಕಾರಕ್ಕೆ ನಮ್ಮ ಪ್ರಾಧ್ಯಾಪಕ ಮಹಾಶಯ ತಲೆ ಕೆಡಿಸಿಕೊಳ್ಳುವುದಿಲ್ಲ, ಚಿಂತಿಸುವುದಿಲ್ಲ, ಶ್ರಮ ತೆಗೆದುಕೊಳ್ಳುವುದಿಲ್ಲ. ಇವನ ಮುಖ್ಯ ವ್ಯವಹಾರವೆಂದರೆ ಆಗಲೆ ನಿರ್ಮಿತವಾದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ರವಾನಿಸುವುದೆ. ಅತ್ಯಂತ ಮೇಧಾವಿ ಪ್ರಾಧ್ಯಾಪಕನೆಂದರೆ ಗಹನವಾದ ವಿಷಯಗಳನ್ನು ಸಂಗ್ರಹಿಸಿಕೊಂಡವನು, ಚಿಂತಕನಲ್ಲ, ಆಲೋಚಕನಲ್ಲ, ಜ್ಞಾನದ ಸಂವರ್ಧನೆಗೆ ಕಾರಣನಾಗತಕ್ಕವನಲ್ಲ. ಪ್ರಾಧ್ಯಾಪಕನು ಅಂಗೀಕೃತ ಪಠ್ಯಪುಸ್ತಕಗಳನ್ನು ಕುರಿತು ವ್ಯಾಖ್ಯಾನಿಸುವವನು. ಇವನ ವ್ಯಾಖ್ಯಾನವನ್ನು ತರಗತಿಯಲ್ಲಿ ಯಾರೂ ಪ್ರಶ್ನಿಸಕೂಡದು, ಸವಾಲ್ ಹಾಕಕೂಡದು. ಇಂತಹ ಪ್ರಾಧ್ಯಾಪಕರಿರುವಾಗ ಬೋಧನ ಕ್ಷೇತ್ರದಲ್ಲಿ ನವ್ಯ ಪ್ರಯೋಗಗಳನ್ನು ನಡೆಸುವುದೆಂತು ?

ಪ್ರಚಲಿತವಲ್ಲಿರುವ ಉಪನ್ಯಾಸ ಕ್ರಮದಿಂದ ಆಗುವ ಕೊಂಚ ಲಾಭ ಶಿಕ್ಷಕನಿಗೆ ಹೊರತು ವಿದ್ಯಾರ್ಥಿಗಳಿಗಲ್ಲ. ತರಗತಿಯಲ್ಲಿ ಶಿಕ್ಷಕ ಉಪನ್ಯಾಸದಲ್ಲಿ ನಿರತನಾಗುವುದರಿಂದ ಮಾತುಗಾರಿಕೆಯ ಕಲೆಯಲ್ಲಿ ಪಳಗುತ್ತಾ ನಡೆಯುತ್ತಾನೆ. ವಿದ್ಯಾರ್ಥಿಗಳು ನಿಷ್ಕ್ರಿಯರಾಗಿ ಈ ವಿಷಯಗಳನ್ನು ಸಂಗ್ರಹಿಸುತ್ತಾರೆ. ಈ ತರಗತಿಯ ಶಿಕ್ಷಣ ಕ್ರಮ ವಿದ್ಯಾರ್ಥಿಗಳಿಗೆ ಸವಾಲಿನಂತಿರುವುದಿಲ್ಲ. ಅವರನ್ನು ಚಿಂತನೆಯಲ್ಲಿ ತೊಡಗಿಸುವುದಿಲ್ಲ. ಅವರ ಅಂತರ್ಗತ ಸೃಷ್ಟಿಕಾರಕ ಶಕ್ತಿಗಳನ್ನು ಜಾಗೃತಗೊಳಿಸುವುದಿಲ್ಲ. ಅವರ ಸ್ಮೃತಿಶಕ್ತಿಯನ್ನು ಪೋಷಿಸುವುದಿಲ್ಲ. ಅವರ ವ್ಯಕ್ತಿತ್ವವನ್ನು ವಿಕಸನಗೊಳಿಸುವುದಿಲ್ಲ. ಇವು ಯಾವು ಇಲ್ಲದಿದ್ದರೂ ನಮ್ಮ ವಿದ್ಯಾರ್ಥಿಗಳು ಪದವಿ ಪಡೆಯುವುದು ದಿಟ. ಈ ಜಡ ಬೋಧನ ವಿಧಾನವನ್ನು ನಮ್ಮ ತಜ್ಞರು ರಕ್ಷಿಸಿಕೊಂಡು ಬರುತ್ತಿದ್ದಾರೆ.

6. ಬೋಧನೆ ಮತ್ತು ಸಂಶೋಧನೆಗಳು ಪರಸ್ಪರ ವಿರೋಧಿಗಳು ಎಂದು ಕೆಲವರು ಅಭಿಪ್ರಾಯಿಸುವುದುಂಟು. ಈ ಎರಡು ಕಾರ್ಯಗಳನ್ನೂ ಒಬ್ಬನೇ ಮಾಡುವುದು ಅಸಾಧ್ಯವೆಂದು ಬಗೆಯುವವರೂ ಇದ್ದಾರೆ. ಈ ಕಾರಣದಿಂದಲೋ ಏನೋ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮಾಮೂಲಿ ಬೋಧನವು ತಾನೇ ತಾನಾಗಿ ವಿಜೃಂಭಿಸುತ್ತಿದೆ. ಈ ವಿವಾದವನ್ನು ಲಾರ್ಡ್ ರಾಬಿನ್ಸ್ ಇಂತು ಬಗೆಹರಿಸಲು ಪ್ರಯತ್ನಿಸಿದ್ದಾನೆ : "ಬೋಧನ ಮತ್ತು ಸಂಶೋಧನೆಗಳ ಮಧ್ಯೆ ಯಾವ ಗಡಿರೇಖೆಯೂ ನಿರ್ಮಿತವಾಗಿಲ್ಲ. ಇವು ಪರಸ್ಪರ ಪೂರಕ ಪೋಷಕವಾದವು

ಗಳು. ಇಲ್ಲಿನ ಚಟುವಟಿಕೆಗಳು ಅಲ್ಲಿ, ಅಲ್ಲಿನ ಚಟುವಟಿಕೆಗಳು ಇಲ್ಲಿ ಕಾಣಿಸಿಗುತ್ತಿವೆ." ಬೋಧನೆಯು ಸಂಶೋಧನೆಯಿಂದ ಪೋಷಿತವಾಗದಿದ್ದಲ್ಲಿ ಅದು ಬರಡಾಗುತ್ತದೆ, ನೀರಸವಾಗುತ್ತದೆ. ಸಂಶೋಧನೆಯು ಬೋಧನೆಯ ಪ್ರಚಾರದ ಮೂಲಕ ಜನತೆಯ ಅವಗಾಹನೆಗೆ ಬಾರದಿದ್ದಲ್ಲಿ ಸಂಶೋಧಕನ ಅಪಾರವಾದ ಶ್ರಮ ನಿರರ್ಥಕವಾಗುತ್ತದೆ.

ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ವಿಭಾಗಗಳ ಮುಖ್ಯೋದ್ದೇಶ ವಿಶೇಷವೂ ಗಹನವೂ ಆದ ಜ್ಞಾನವನ್ನು ಆರ್ಜಿಸುವುದೆ. ಈ ವಿಭಾಗಗಳು ಸಮರ್ಥರಾದ ಮೇಧಾವಿಗಳಾದ ವಿದ್ವಾಂಸರನ್ನೂ ವಿಜ್ಞಾನಿಗಳನ್ನೂ ತಯಾರಿಸಿ ವಿಶ್ವವಿದ್ಯಾಲಯಗಳ, ಸಂಶೋಧನಾಲಯಗಳ ಮತ್ತು ಇನ್ನಿತರ ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯವನ್ನು ನಿರ್ವಹಿಸುವಂತೆ ಮಾಡಬೇಕು. ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ ವಸ್ತುವಿಷಯವನ್ನು ಸ್ಪಷ್ಟವಾಗಿ ಅರ್ಥವಿಸಿಕೊಳ್ಳುವುದನ್ನೂ ವಿಮರ್ಶಾತ್ಮಕವಾಗಿ ಆಲೋಚಿಸುವುದನ್ನೂ ಸ್ವತಂತ್ರವಾಗಿ ತೀರ್ಮಾನಿಸುವುದನ್ನೂ ಬೌದ್ಧಿಕವಾಗಿ ಜಾಗ್ರತವಾಗಿರುವುದನ್ನೂ ಕಲಿಸಿದಲ್ಲಿ ಸಂಶೋಧನೆಗೆ ಭದ್ರ ಅಡಿಪಾಯ ಹಾಕಿದಂತಾಗುತ್ತದೆ. ಈ ಉದ್ದೇಶಗಳನ್ನು ಸಾಧಿಸುವುದೆಂತು ಮಾಮೂಲಿ ಕೆಲಸವನ್ನು ಜೀವನಯಾಪನೆಗೆ ಮಾತ್ರ ನಿರ್ವಹಿಸಲು ಶಕ್ತರಾಗಿರುವ ಅಧ್ಯಾಪಕ ಪ್ರಾಧ್ಯಾಪಕ ವರ್ಗದವರು ವಿಶ್ವವಿದ್ಯಾನಿಲಯಗಳಲ್ಲಿ ತುಂಬಿರುವಾಗ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪಿ ಎಚ್ ಡಿ ಪದವಿ ದಕ್ಕಿದನಂತರ ಸಂಶೋಧನೆಯನ್ನು ಕೈಗೊಳ್ಳುವುದು ಅಪೂರ್ವವೆ. ಎಷ್ಟೋ ಮುಷ್ಟಿಯಷ್ಟು ಜನ ಮಾತ್ರ ಪಿಎಚ್.ಡಿ. ನಂತರ ಸಂಶೋಧನೆಯನ್ನು ಕೈಗೊಂಡು ಡಿ. ಲಿಟ್ ಇಲ್ಲವೆ ಡಿ. ಎಸ್‌ಸಿ. ಪದವಿಗಳಿಗೆ ಸಂಶೋಧನ ಪ್ರಬಂಧಗಳನ್ನು ರಚಿಸುವುದುಂಟು. ಈ ಸಂಶೋಧನೆಯಿಂದ ಪ್ರಯೋಜನ ಪಡೆಯುವರಾರು? ಸಂಶೋಧನಾರ್ಥಿಗಳೆ. ಇವರು ಪದವಿಯನ್ನು ಪಡೆಯುವವರಲ್ಲದೆ ಉದ್ಯೋಗವನ್ನೂ ಪಡೆಯುತ್ತಾರೆ. ಸಂಶೋಧನೆಯನ್ನು ನಡೆಸುವುದು ವ್ಯಷ್ಟಿ ದೃಷ್ಟಿಯಿಂದ ಮಾತ್ರವಲ್ಲದೆ ಸಮಷ್ಟಿ ದೃಷ್ಟಿಯಿಂದಲೂ ಕೈಗೊಳ್ಳಬೇಕು. ಸಮಾಜದ, ರಾಜ್ಯದ ಮತ್ತು ರಾಷ್ಟ್ರದ ಸಮಸ್ಯೆಗಳನ್ನು ಪರಿಹರಿಸುವುದೇ ಸಂಶೋಧನೆಯ ಮೊದಲ ಗುರಿ. ಈ ಗುರಿ ಸಾಧಿತವಾಗದಿದ್ದರೆ ಅದು ಸಂಶೋಧನೆ ಎನ್ನಿಸಿಕೊಳ್ಳಲು ಅನರ್ಹ.

1951–1961ರ ದಶಕವೊಂದರಲ್ಲಿಯೇ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಒಟ್ಟು 5037 ಪಿಎಚ್ ಡಿ. ಪ್ರಬಂಧಗಳು ಅಂಗೀಕೃತವಾಗಿವೆ. ಇವುಗಳಲ್ಲಿ ಬಹುತೇಕ ಪ್ರಬಂಧಗಳು ಮುದ್ರಣಗೊಂಡು ದಿನದ ಬೆಳಕಿಗೆ, ಜನತೆಯ ಅವಗಾಹನೆಗೆ ಬಂದೇ ಇಲ್ಲ. ಸಂಶೋಧನೆಗಳು ಪ್ರಕಟಣಗೊಂಡು ಪರಿಣತರ, ಸಂಶೋಧಕರ ಸಾಮಾನ್ಯ ಜನತೆಯ ಅವಗಾಹನೆಗೆ ಬಾರದಿದ್ದರೆ ಸಂಶೋಧನೆಯ ಮುಖ್ಯೋದ್ದೇಶವೇ ವಿಫಲವಾದಂತೆ. ನಮ್ಮಲ್ಲಿನ ಸಂಶೋಧನ ಪ್ರಬಂಧಗಳು ಪ್ರಕಟಣಗೊಳ್ಳದಿರುವುದೇ ಅವು ಎಷ್ಟು ನಿಕೃಷ್ಟ ಮಟ್ಟಕ್ಕೆ ಸೇರಿದವು ಎಂಬುದು ನಿರ್ಣೀತವಾಗುತ್ತದೆ. ಪ್ರೊ 'ಫ್ರಾಂಕ್ ಜೊಟ್ಟೆ ಎಂಬುವರು ನಮ್ಮಲ್ಲಿ ನಡೆಯುತ್ತಿರುವ ಸಂಶೋಧನೆಯ ಗುಟ್ಟನ್ನು ರಟ್ಟು ಮಾಡಿದ್ದಾರೆ "ಸಂಶೋಧನೆ ಎಂದರೆ ಎಲುಬುಗಳನ್ನು ಒಂದು ಸ್ಮಶಾನದಿಂದ ಮತ್ತೊಂದು ಸ್ಮಶಾನಕ್ಕೆ ಸಾಗಣೆ ಮಾಡುವುದೆ." ಇದನ್ನು ಇನ್ನೂ ಸ್ಪಷ್ಟೀಕರಿಸುವುದಾದರೆ ಸಂಶೋಧನಾ ಪ್ರಬಂಧಗಳು ಅನ್ಯಕೃತಿಗಳಿಂದ ಆಯ್ದ ವಸ್ತು ವಿಷಯಗಳು ವ್ಯವಸ್ಥಿತ ರೂಪದಲ್ಲಿರುತ್ತವೆಯೇ ಹೊರತು ಸ್ವಂತಿಕೆಯಿಂದ, ಹೊಸದಾಗಿ ಸಂಶೋಧಿತ ವಿಷಯಗಳಿಂದ, ವಿನೂತನ ವಿಶ್ಲೇಷಣೆಯಿಂದ, ನವ್ಯ ದೃಷ್ಟಿಯ ವ್ಯಾಖ್ಯಾನದಿಂದ ಕೂಡಿರುವುದಿಲ್ಲ. ಈ ಕಾರಣದಿಂದಲೋ ಏನೋ ಸಂಶೋಧನಾ ಮಹಾ ಪ್ರಬಂಧಗಳು ಲಘು ಪ್ರಬಂಧಗಳು, ಪ್ರಕಟಣಗೊಳ್ಳುವುದೇ ಇಲ್ಲ. ವಿಶ್ವದ ಜ್ಞಾನಕ್ಕೆ ಭಾರತದ ಕೊಡುಗೆ ಶೇಕಡ ಒಂದಕ್ಕಿಂತಲೂ ಕಡಮೆ ಎಂದು ಡಾ. ಡಿ. ಎಸ್ ಕೊಠಾರಿಯವರು ಹೇಳಿರುವುದು ಸತ್ಯಸ್ಯ ಸತ್ಯವಾದುದು. ನಮ್ಮ

ಸಂಶೋಧನೆ ಈ ದಿಕ್ಕು ಒಡಿದಿರುವುದರಿಂದಲೆ ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳು ಕಾಣೆಯಾಗಿವೆ.

2

ನಮ್ಮ ಈ ವಿಫಲತೆಗೆ ಕಾರಣಗಳೇನು ?

ಈ ಮೇಲೆ ವಿವರಿಸಿದಂತೆ, ನಮ್ಮ ಪ್ರಶಿಕ್ಷಣ ಕಾಲೇಜುಗಳಿಗೆ ಕೊಟ್ಟ ಹೆಸರುಗಳು ನಮ್ಮವಲ್ಲ. ಅಧ್ಯಾಪಕ ಶಿಕ್ಷಕರಿಗೆ, ಶಿಕ್ಷಕ ವಿದ್ಯಾರ್ಥಿಗಳಿಗೆ ಸೃಜಿತವಾಗಿರುವ ಶಿಕ್ಷಣ ಸಾಹಿತ್ಯ ನಮ್ಮದಲ್ಲ, ಕಾಲೇಜುಗಳಲ್ಲಿ ಅನುಸರಿಸುವ ಬೋಧನ ವಿಧಾನಗಳು ಅನ್ಯರವು, ಪಠ್ಯವಿಷಯವನ್ನು ಅವೈಜ್ಞಾನಿಕವಾಗಿ ರಚಿಸಲಾಗುತ್ತಿದೆ, ತರಗತಿಯಲ್ಲಿ ಬೋಧನೆ ಮತ್ತು ಕಲಿಕೆಗಳು ತೃಪ್ತಿಕರವಾಗಿಲ್ಲ ಮತ್ತು ಸಂಶೋಧನೆ ಬದಲಾವಣೆಗಳನ್ನು ತರಲು ಸಹಾಯಕವಾಗಿಲ್ಲ. ಈ ಎಲ್ಲ ವಿಫಲತೆಗೆ ಕಾರಣಗಳೇನು ?

ನಮ್ಮ ಪ್ರಶಿಕ್ಷಣ ಯೋಜನೆಯು ಪಾಶ್ಚಾತ್ಯರ ಪ್ರಖರ ಪ್ರಭಾವದಿಂದ ತಪ್ಪಿಸಿಕೊಳ್ಳುವಲ್ಲಿ ವಿಫಲವಾಗಿರುವುದೇ ಒಂದು ನ್ಯೂನತೆ. ನಮ್ಮ ಘನ ಸರ್ಕಾರದವರು ನಮ್ಮ ಶಾಲೆಗಳಿಗೆ ಅವಶ್ಯಕವಾದ ತರಬೇತಿ ಪಡೆದ ಶಿಕ್ಷಕರ ಸಂಖ್ಯೆಯನ್ನು ಗಮನಿಸದೆ ಕೇಳಿದವರಿಗೆಲ್ಲ ಪ್ರಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅನುಮತಿ ಕೊಡುತ್ತಿದೆ ನಮ್ಮ ಮಹಾ ವಿಶ್ವವಿದ್ಯಾಲಯಗಳು ಎಲ್ಲ ದರ್ಜೆಯ ಪ್ರಶಿಕ್ಷಣ ಸಂಸ್ಥೆಗಳಿಗೂ ಮನ್ನಣೆ ನೀಡುತ್ತಿವೆ. ತತ್ಫಲವಾಗಿ ಅನೇಕ ನಿಷ್ಪ್ರಯೋಜಕ ಕಾಲೇಜುಗಳು ರಾಜ್ಯಾದ್ಯಂತ ನಾಯಿಕೊಡೆಗಳಂತೆ ಹುಟ್ಟಿಕೊಂಡಿವೆ. ಈ ಅಪ್ರಯೋಜಕ ಕಾಲೇಜುಗಳ ಸಂಸ್ಥಾಪಕರು ಪ್ರಶಿಕ್ಷಣ ಕಾಲೇಜುಗಳ ಉದ್ಧಾರಕ್ಕಿಂತಲೂ ತಮ್ಮ ಸ್ವಂತ ಉದ್ಧಾರಕ್ಕೆ ಕಾತರರಾಗಿದ್ದಾರೆ. ವ್ಯವಹಾರ ದೃಷ್ಟಿಯುಳ್ಳ ಸಂಸ್ಥಾಪಕರು ವಾರ್ಷಿಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರಿಸುವಲ್ಲಿಯೇ ಅಧ್ಯಾಪಕ ಶಿಕ್ಷಕರನ್ನು ತೊಡಗಿಸಿದ್ದಾರೆ. ಉತ್ತಮ ಫಲಿತಾಂಶಗಳಿಗೆ ಪ್ರಾಮುಖ್ಯವನ್ನಿತ್ತಿರುವ ಈ ಅಧ್ಯಾಪಕ ಶಿಕ್ಷಕರು ಸುಲಭ ಮಾಮೂಲಿ ಬೋಧನೆಗೆ ಹೆಚ್ಚಿನ ಗಮನ ಕೊಟ್ಟು ಸವಾಲಿನೋಪಾದಿಯಲ್ಲಿರುವ ಸಂಶೋಧನೆ ಮತ್ತು ಪ್ರಯೋಗಗಳ ಬಗ್ಗೆ ಆಸ್ಥೆವಹಿಸಿಲ್ಲ. ಮೇಲಾಗಿ ಬೋಧನ ಪ್ರಧಾನವಾದ ಈ ಶಿಕ್ಷಣ ಕಾಲೇಜುಗಳಲ್ಲಿನ ಗ್ರಂಥಾಲಯ, ಪ್ರಯೋಗಶಾಲೆ ಮತ್ತು ಇತರ ಸೌಲಭ್ಯಗಳು ಸಂಶೋಧನೆಯನ್ನು ನಡೆಸುವುದಕ್ಕೆ ಅನುಕೂಲಪ್ರದವಾಗಿರುವುದಿಲ್ಲ. ಇಷ್ಟೇ ಅಲ್ಲದೆ ಸ್ನಾತಕೋತ್ತರ ಮತ್ತು ಶಿಕ್ಷಣ ಕಾಲೇಜುಗಳಲ್ಲಿ ವೃತ್ತಿಪರವಾದ ಗೀಳನ್ನು ಹೊಂದಿ ಶಿಕ್ಷಣ ಸಾಹಿತ್ಯವನ್ನು ವಿಸ್ತರಿಸಲು ಪಣ ತೊಟ್ಟಿರುವ ಅಧ್ಯಾಪಕ ಶಿಕ್ಷಕರು ಕಂಡುಬರುವುದಿಲ್ಲ. ಶಿಕ್ಷಣ ವೃತ್ತಿ ಇವರಿಗೆ ಜೀವನಯಾಪನೆಗೊಂದು ಸರಳ ಮಾರ್ಗವಾಗಿದೆಯೇ ಹೊರತು ಮಹತ್ತರವಾದ ಸಂಶೋಧನೆಗಳನ್ನು ನಡೆಸಿಲಲ್ಲ ಮತ್ತು ಈ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಂಶೋಧನೆಗೆ ಯುಕ್ತವಾದ ಪ್ರಚೋದಕ ಪ್ರೋತ್ಸಾಹದಾಯಕ ಪರಿಸರ ಕಂಡು ಬರುವುದಿಲ್ಲ. ಇಲ್ಲಿನ ಸಂಸ್ಥೆಗಳಲ್ಲಿ ಒಡೆದು ಆಳುವ ನೀತಿಯನ್ನು ಪ್ರಾಚಾರ್ಯರು ವಿಭಾಗ ಮುಖ್ಯರು ಅನುಸರಿಸುವುದು ಕಂಡುಬರುತ್ತದೆ. ಮಾನವಿಕವಾದ ಸ್ನೇಹಸಂಬಂಧ ಸೌಹಾರ್ದತೆ ಮತ್ತು ಪರಸ್ಪರವಾದ ಸಹಕಾರಗಳು ಇಲ್ಲಿ ಕಾಣೆಯಾಗಿರುತ್ತವೆ. ಸಂಶೋಧನೆ ಕೇವಲ ಹಣದ ಕೊರತೆಯಿಂದ ಸ್ಥಗಿತಗೊಳ್ಳುವುದಿಲ್ಲ. ಸಹೋದ್ಯೋಗಿಗಳ ಅಮಾನವಿಕವಾದ ನಡುವಳಿಕೆಯಿಂದಲೂ ಕುಂಟುತ್ತದೆ. ವೃತ್ತಿಕವಾದ ದ್ವೇಷಾಸೂಯೆ, ಪೂರ್ವಗ್ರಹಪೀಡನೆ, ಸಂಶಯ ದೃಷ್ಟಿ, ಪಕ್ಷಪಾತ, ದಬ್ಬಾಳಿಕೆ, ಜಾತೀಯತೆ, ಆಡಳಿತದ ವಿಳಂಬ ನೀತಿ, ಕೆಲಸದ ಅಭದ್ರತೆ ಮೊದಲಾದವುಗಳು ಇಲ್ಲಿನ ಪರಿಸರದ ಹಾಸುಹೊಕ್ಕಾಗಿರುತ್ತವೆ.

ಶಿಕ್ಷಣದಲ್ಲಿ ಸ್ವದೇಶೀ ಚಳುವಳಿ

ನಾವು ನಮ್ಮ ಶಿಕ್ಷಣದಲ್ಲಿ ನವ್ಯ ಪ್ರಯೋಗಗಳನ್ನು ನಡೆಸಲು, ಹೊಸ ಬದಲಾವಣೆಗಳನ್ನು

ತರಲು ಅನ್ಯ ದೇಶೀಯ ತಜ್ಞರನ್ನು ಇನ್ನು ಎಷ್ಟು ಕಾಲ ಆಶ್ರಯಿಸುವುದು ? ಶಿಕ್ಷಣಕ್ಕೆ ಸಂಬಂಧಿಸಿದ ಮಾರ್ಗದರ್ಶನವನ್ನು ವಿದೇಶೀಯರಿಂದ ಪಡೆಯುವುದು ಸಾಧುವಾದುದಲ್ಲ. ಅದರಿಂದ ಆಗುವ ಪ್ರಯೋಜನ ಅತ್ಯಲ್ಪ. ಈ ಕಾರಣದಿಂದ ಸ್ವಂತವಾಗಿ ಆಲೋಚಿಸಿ ಪ್ರಶಿಕ್ಷಣ ಕ್ಷೇತ್ರದಲ್ಲಿ ನವ್ಯ ಪ್ರಯೋಗಗಳನ್ನು ಬಳಕೆಗೆ ತರಬೇಕಾಗಿದೆ. ಇದಕ್ಕೆ ಶಿಕ್ಷಣದಲ್ಲಿ ಸ್ವದೇಶೀ ಚಳುವಳಿ ಪ್ರಾರಂಭವಾಗಬೇಕು.

ನಮ್ಮ ಶೈಕ್ಷಣಿಕ ಕಾರ್ಯಕ್ರಮಗಳು ಸ್ವಂತವಾದ ಸೃಷ್ಟ್ಯಾತ್ಮಕವಾದ ದೇಶೀಯವಾದ ಚಿಂತನೆಯಿಂದ ಹೊಮ್ಮಬೇಕು. ಒಂದು ದೇಶದ ಶೈಕ್ಷಣಿಕ ಆಚರಣೆಗಳನ್ನು ಕಾರ್ಯಕ್ರಮಗಳನ್ನು ಇನ್ನೊಂದು ದೇಶದ ಭಿನ್ನ ಜೀವನ ಪರಿಸರದಲ್ಲಿ ಅಳವಡಿಸುವುದು ಅಸಾಧ್ಯವೆ. ಅಮೆರಿಕೆಯಲ್ಲಿನ ಚಾತುರ್ಮಾಸ ಪದ್ಧತಿಯನ್ನು ನಮ್ಮಲ್ಲಿ ಅಳವಡಿಸಿಕೊಂಡು ಪಡಬಾರದ ಪಾಡು ಪಡುತ್ತಿದ್ದೇವೆ. ಅನ್ಯರ ಶಿಕ್ಷಣ ಕ್ರಮ ನಮಗೆ ಸಹ್ಯವಾಗುವುದಿಲ್ಲ. ಈ ಕಾರಣದಿಂದಲೆ ನಮಗೆ ಯುಕ್ತವಾದ ಬೋಧನ ವಿಧಾನಗಳನ್ನು, ಶಿಕ್ಷಣ ಕ್ರಮಗಳನ್ನು ನಾವೇ ಸೃಜಿಸಿಕೊಳ್ಳಬೇಕು. ಸಂಶೋಧನಾ ಸಮಸ್ಯೆಗಳಿಗೆ, ಪುಸ್ತಕಗಳಿಗೆ, ನಮ್ಮ ಸಂಶೋಧನ ಪ್ರಬಂಧಗಳ ಮೌಲ್ಯಮಾಪನೆಗೆ, ಬೋಧನ ವಿಧಾನಗಳಿಗೆ, ಪರೀಕ್ಷಾ ಪದ್ಧತಿಗಳಿಗೆ, ವಿದೇಶೀಯರನ್ನು ಮರೆಹೋಗುವುದು ಇಲ್ಲವೆ ಯಾಚಿಸುವುದು ಸಲ್ಲದು.

ಶಿಕ್ಷಣದಲ್ಲಿ ಸ್ವದೇಶೀ ಚಳುವಳಿ ಎಂದರೆ ಅಂತರರಾಷ್ಟ್ರೀಯ ಬೌದ್ಧಿಕ ಜೀವನದಿಂದ ದೂರ ಸಿಡಿಯುವುದಲ್ಲ. ವಿದೇಶೀಯವಾದುದನ್ನೆಲ್ಲ ಬಹಿಷ್ಕರಿಸುವುದಲ್ಲ. ಸ್ವದೇಶೀ ಚಳುವಳಿ ಎಂದರೆ : 1) ವಿದ್ಯಾ ಸಮುದಾಯದ ಗುರುತ್ವಾಕರ್ಷಣೆಯನ್ನು ನಮ್ಮಲ್ಲಿಯೇ ಕಂಡುಕೊಳ್ಳುವುದು. 2) ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸ್ವಂತವಾದ ಸೃಷ್ಟ್ಯಾತ್ಮಕವಾದ ಚಿಂತನೆಯಲ್ಲಿ ತೊಡಗುವುದು ಮತ್ತು 3) ನಮಗೆ ಅಗತ್ಯವಾದ ಶಿಕ್ಷಣ ಸಾಹಿತ್ಯ ರಚನೆಯಲ್ಲಿ ನಾವೇ ತೊಡಗುವುದು.

"ಸ್ನಾತಕೋತ್ತರ ಶಿಕ್ಷಣ ವಿಭಾಗಗಳು ಮುಖ್ಯವಾಗಿ ಸಂಶೋಧನ ಮತ್ತು ಸೃಜನಾತ್ಮಕ ಕಾರ್ಯಗಳಲ್ಲಿ ತೊಡಗುತ್ತವೆ. ಶಿಕ್ಷಣ ಸಾಹಿತ್ಯವನ್ನು ಒದಗಿಸಲೆಂದೇ ಏನೆಲ್ಲ ಸೌಕರ್ಯ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ ಇಷ್ಟಾದರೂ ಶಿಕ್ಷಣ ಕಾಲೇಜಿನ ಅಧ್ಯಾಪಕ ವೃಂದದವರಾಗಲಿ ಸ್ನಾತಕೋತ್ತರ ಶಿಕ್ಷಣ ಕೇಂದ್ರಗಳಾಗಲಿ ಗಮನಾರ್ಹವಾದ ವೃತ್ತಿಸಾಹಿತ್ಯವನ್ನು ಸೃಷ್ಟಿಸುವಲ್ಲಿ ನಿರತರಾಗಿರುವುದು ಕಂಡುಬರುವುದಿಲ್ಲ. ಈ ಅಭಿಪ್ರಾಯ ಕರ್ನಾಟಕದ ಶಿಕ್ಷಕರ ತರಬೇತಿ ಸಂಸ್ಥೆಗಳಿಗೆ ಮಾತ್ರ ಅನ್ವಯಿಸದೆ ಭಾರತದ ಶಿಕ್ಷಕರ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ವಿಶ್ವವಿದ್ಯಾಲಯಗಳ ಇಲ್ಲವೆ ಶಿಕ್ಷಕರ ಕಾಲೇಜುಗಳ ಗ್ರಂಥ ಭಂಡಾರಗಳನ್ನು ಪ್ರವೇಶಿಸಿ ಅಪಾರ ಅಸಂಖ್ಯ ಶಿಕ್ಷಣ ಗ್ರಂಥಗಳತ್ತ ನಮ್ಮ ಕಣ್ಣನ್ನು ಹಾಯಿಸಿದರೆ ನಮಗೆ ಕಾಣಸಿಗುವುದು ಪರದೇಶೀಯರಿಂದ ಅಂದರೆ ಅಮೆರಿಕನರಿಂದ, ಸೃಷ್ಟಿಯಾದ ಗ್ರಂಥಗಳು. ಭಾರತೀಯರಿಂದ ಸೃಷ್ಟಿಯಾದ ಗ್ರಂಥಗಳು ಕೇವಲ ಶೇಕಡ ಹದಿನೈದರಿಂದ ಇಪ್ಪತ್ತರವರೆಗೆ ಮಾತ್ರ. ಇವುಗಳಲ್ಲಿ ಬಹುತೇಕ ಗ್ರಂಥಗಳು ಪಠ್ಯಪುಸ್ತಕಗಳು. ಸಂಶೋಧನಾತ್ಮಕ ಇಲ್ಲವೆ ವಿಮರ್ಶಾತ್ಮಕ ಶಿಕ್ಷಣ ಸಾಹಿತ್ಯವನ್ನು ಒಳಗೊಂಡ ಪುಸ್ತಕಗಳು ಅಪೂರ್ವವೆ."

ಇದೇ ಲೇಖಕರ 'ಶಿಕ್ಷಕ ನಡೆದು ಬಂದ ದಾರಿ' ಪುಸ್ತಕ, ಪು. ೨೪೨

ಮೂಲ: ಎಸ್. ಗೋವಿಂದ ಗೌಡ

ಅನುವಾದ: ಕೃಷ್ಣವೇಣಿ

ಭಾರತದಲ್ಲಿ ವರದಕ್ಷಿಣೆ ಪದ್ಧತಿಯ ಕಾರಣಗಳು ಮತ್ತು ಪರಿಣಾಮಗಳು

(ಒಂದು ಸಾಮಾಜಿಕ ವಿಶ್ಲೇಷಣೆ)

೧

ಭಾರತದಲ್ಲಿ ವರದಕ್ಷಿಣೆಯು ವಿವಾಹ ಸಂಪ್ರದಾಯದ ಅವಶ್ಯಕ ಅಂಗಗಳಲ್ಲಿ ಒಂದಾಗಿದೆ. ಯುವಕಾಂಗ್ರೆಸ್ಸು ಅನುಸರಿಸಿದ ಐದಂಶಗಳ ಕಾರ್ಯಕ್ರಮದ ಅಂಗವಾಗಿ ವರದಕ್ಷಿಣೆ ಪದ್ಧತಿಯನ್ನು ತಡೆಗಟ್ಟುವಂತಹ ನೀತಿಗೆ ಚಾಲನೆ ದೊರೆತಿತ್ತು. ಈ ಸಂದರ್ಭದಲ್ಲಿ ವರದಕ್ಷಿಣೆ ಪದ್ಧತಿಯ ಕಾರಣ ಮತ್ತು ಪರಿಣಾಮಗಳ ಸಾಮಾಜಿಕ ವಿಶ್ಲೇಷಣೆಯ ಅಗತ್ಯವಿದೆ.

ಭಾರತದ ಸಮಾಜಕ್ಕೆ ಸಂಬಂಧಿಸಿದಂತೆ ವರದಕ್ಷಿಣೆಯ ಅರ್ಥವನ್ನೂ ಅದರ ಲಕ್ಷಣಗಳನ್ನೂ ಸಾಕಷ್ಟು ವ್ಯಾಪಕವಾಗಿ ಕ್ರೋಢೀಕರಿಸುವುದು ಈ ಲೇಖನದ ಉದ್ದೇಶ. ವರದಕ್ಷಿಣೆಯು ಎಲ್ಲ ರೀತಿಯ ಅನುಗ್ರಹಗಳನ್ನೂ ಒಳಗೊಂಡಿದೆ. ಅದು ಕಾಲೇಜಿನಲ್ಲಿ ಪ್ರವೇಶವನ್ನು ದೊರಕಿಸಿಕೊಳ್ಳಲು ಇಲ್ಲವೇ ಉದ್ಯೋಗ ದೊರಕಿಸಿಕೊಳ್ಳಲು ಬೀರುವ ಪ್ರಭಾವರೂಪದಲ್ಲಿರಬಹುದು. ಅಥವಾ ವಿವಾಹಕ್ಕೆ ಮುಂಚೆ ಇಲ್ಲವೇ ವಿವಾಹ ಸಮಯದಲ್ಲಿ ವಧುವಿನ ತಂದೆತಾಯಿಯರು ವರನಿಗೆ ಕೊಡುವ ನಗದು ಹಣ ಅಥವಾ ಆಸ್ತಿಯ ರೂಪದಲ್ಲಿರಬಹುದು.

ವರದಕ್ಷಿಣೆ ಪದ್ಧತಿಯನ್ನು ನಿರಂತರವಾಗಿ ಪೋಷಿಸಿಕೊಂಡು ಬಂದಿರುವ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು ಯಾವುವು? ವರದಕ್ಷಿಣೆಯ ಗಾತ್ರವನ್ನು ನಿರ್ಣಯಿಸುವ ಮುಖ್ಯಾಂಶಗಳು ಯಾವುವು? ಸಾಂಪ್ರದಾಯಿಕವಾಗಿ ನಡೆದು ಬಂದಿರುವ ಈ ಪದ್ಧತಿಯಿಂದ ಸಮಾಜದಲ್ಲಿ ವ್ಯಕ್ತಿಗಳ ಮತ್ತು ಅವರ ಕುಟುಂಬಗಳ ಮೇಲುಂಟುಮಾಡುವ ಪ್ರಮುಖವಾದ ಅನಪೇಕ್ಷಿತ ಪರಿಣಾಮಗಳು ಯಾವುವು? ಎದುರಾಗುವ ಸಾಮಾಜಿಕ ಸಮಸ್ಯೆಗಳು ಯಾವುವು? ಆಶಾಭಂಗಗೊಂಡಿರುವ ವ್ಯಕ್ತಿ ಮತ್ತು ಕುಟುಂಬಗಳನ್ನು ಇದು ಎಷ್ಟರಮಟ್ಟಿಗೆ ಸಾಮಾಜಿಕ ಅವ್ಯವಸ್ಥೆಗೆ ಈಡುಮಾಡುತ್ತದೆ?–ಇವು ಈ ಪದ್ಧತಿಗೆ ಸಂಬಂಧಿಸಿರುವ ಮೂಲಭೂತ ಸಮಸ್ಯೆಗಳು.

೨

ವರದಕ್ಷಿಣೆ ಪದ್ಧತಿಯ ಅನುಸರಣೆಯಿಂದ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯಲ್ಲುಂಟಾಗುವ ಪ್ರಮುಖ ವ್ಯತ್ಯಾಸಗಳನ್ನು ವಿಶ್ಲೇಷಿಸಬಹುದು. ವ್ಯಕ್ತಿ ಮತ್ತು ಆತನ

ಕುಟುಂಬದ ಸಾಮಾಜಿಕ ಅಂತಸ್ತು, ಶಿಕ್ಷಣ, ಉದ್ಯೋಗ ಮತ್ತು ಶ್ರೀಮಂತಿಕೆಯನ್ನವಲಂಬಿಸಿರುತ್ತದೆ. ಆದುದರಿಂದ ಉತ್ತಮ ಶಿಕ್ಷಣ ಪಡೆಯಲು ಯತ್ನಿಸುವುದು, ಹೆಚ್ಚು ಆದಾಯ ಬರುವ ಉದ್ಯೋಗವನ್ನು, ಹೆಚ್ಚು ಹಣ ಸಂಪಾದನೆಗಾಗಿ ಮಾರ್ಗಗಳನ್ನೂ ಮಾಧ್ಯಮಗಳನ್ನೂ ಅರಸುವುದು ಮಾನವನ ಪ್ರವೃತ್ತಿ. ಹೆಚ್ಚಿನ ವಿದ್ಯಾಭ್ಯಾಸ ಪಡೆದು ತನ್ಮೂಲಕ ಒಳ್ಳೆಯ ವರಮಾನವುಳ್ಳ ಉದ್ಯೋಗವನ್ನು ಪಡೆದು ಶ್ರೀಮಂತಿಕೆಯನ್ನು ಗಳಿಸಲು ಕೆಲವರು ವರದಕ್ಷಿಣೆಯನ್ನು ಮಾಧ್ಯಮವಾಗಿ ಆರಿಸಿಕೊಳ್ಳುತ್ತಾರೆ.

ಪ್ರಸ್ತುತ ಅಧ್ಯಯನದಲ್ಲಿ ವರದಕ್ಷಿಣೆ ಎಂಬ ಪದವನ್ನು ವ್ಯಾಪಕವಾದ ಅರ್ಥದಲ್ಲಿ ಬಳಸಲಾಗಿದೆ. ಇದನ್ನು ಪ್ರಭಾವ ಇಲ್ಲವೇ ಹಣ ಅಥವಾ ಈ ಎರಡನ್ನೂ ಒಳಗೊಂಡಂತೆ ವರನ ಉನ್ನತ ವ್ಯಾಸಂಗಕ್ಕಾಗಿ ವಧುವಿನ ತಂದೆತಾಯಿಗಳಿಂದ ಕೊಡಲಾಗುವ ಸಾಧನಗಳೆನ್ನಬಹುದು. ಕೆಲವು ಸಂದರ್ಭಗಳಲ್ಲಿ ಪಾಂಡಿತ್ಯಕ್ಕಿಂತಲೂ ಮಿಗಿಲಾಗಿ ಪ್ರಭಾವ ಮತ್ತು ಹಣ ಎರಡೂ ವರನ ಉತ್ತಮ ಉದ್ಯೋಗಾವಕಾಶಕ್ಕೆ ಸಹಾಯಕವಾಗಬಲ್ಲುವು. ವರದಕ್ಷಿಣೆಯಿಂದ ಉನ್ನತ ವ್ಯಾಸಂಗದ ಅವಕಾಶಗಳನ್ನು ಮತ್ತು ಉತ್ತಮ ಉದ್ಯೋಗಗಳನ್ನು ಪಡೆದು ತನ್ಮೂಲಕ ತನ್ನ ಆರ್ಥಿಕ ವರಮಾನವನ್ನು ಹೆಚ್ಚಿಸಿಕೊಳ್ಳಬಹುದು. ಅಥವಾ ಕನ್ಯೆಯ ತಂದೆತಾಯಿಯರು ವಿವಾಹ ಸಮಯದಲ್ಲಿ ಕೊಡುವ ನಗದು ಹಣ ಇಲ್ಲವೇ ಆಸ್ತಿಯಿಂದಲೂ ಸಿರಿವಂತಿಕೆಯನ್ನು ಗಳಿಸಬಹುದು.

೩

ವರದಕ್ಷಿಣೆ ಪದ್ಧತಿ ಸಮಸ್ಯೆಯಲ್ಲ. ಆದರೆ ಕನ್ಯೆಯನ್ನು ಮದುವೆಯಾಗಲು ವರದಕ್ಷಿಣೆಯಾಗಿ ಪಡೆಯಬಹುದಾದ ಮೊತ್ತದ ಗಾತ್ರ ಮುಖ್ಯ ಸಮಸ್ಯೆ. ವರದಕ್ಷಿಣೆಯ ಮೊತ್ತವನ್ನು ನಿರ್ಣಯಿಸುವಲ್ಲಿ ಗಮನಿಸಬಹುದಾದ ಐದು ಪ್ರಮುಖ ಅಂಶಗಳು ಇವು—

ಮೊದಲನೆಯದಾಗಿ ವರನ ಶಿಕ್ಷಣದ ಮಟ್ಟ ಮತ್ತು ಶೈಕ್ಷಣಿಕ ವಿಷಯ ವರದಕ್ಷಿಣೆಯನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ. ಸಾಮಾನ್ಯ ಶಿಕ್ಷಣಗಳಾದ ವಿಜ್ಞಾನ ಮತ್ತು ಮಾನವಿಕ ವಿಭಾಗಗಳ ಪದವೀಧರರುಗಳಿಗಿಂತಲೂ ವೈದ್ಯಕೀಯ ಅಥವಾ ತಾಂತ್ರಿಕ ಶಿಕ್ಷಣ ಪಡೆದ ವರಗಳ ಬೇಡಿಕೆಯ ದರ ಹೆಚ್ಚಾಗಿರುವುದು ಅಸಹಜವೇನಲ್ಲ. ವರದಕ್ಷಿಣೆಯ ದರವು ವಿದ್ಯಾಭ್ಯಾಸದ ಮಟ್ಟವನ್ನವಲಂಬಿಸಿ ಹೆಚ್ಚು ಕಡಿಮೆ ಆಗುತ್ತದೆ. ಸ್ನಾತಕ ಪದವೀಧರನಿಗಿಂತಲೂ ಸ್ನಾತಕೋತ್ತರ ಪದವೀಧರನು ಹೆಚ್ಚಿನ ವರದಕ್ಷಿಣೆಯನ್ನು ಅಪೇಕ್ಷಿಸುತ್ತಾನೆ. ವರದಕ್ಷಿಣೆಯ ದರವು ವಧುವಿನ ಶಿಕ್ಷಣ ಮಟ್ಟ ಮತ್ತು ಶೈಕ್ಷಣಿಕ ವಿಷಯವನ್ನೂ ಅವಲಂಬಿಸಿಲ್ಲವೇ ಎಂದು ಕೇಳಬಹುದು. ಆದರೆ ಇಲ್ಲಿ ವರನ ಶಿಕ್ಷಣ ಮಟ್ಟ ಮತ್ತು ಶೈಕ್ಷಣಿಕ ವಿಷಯಕ್ಕೂ ವರದಕ್ಷಿಣೆಗೂ ಇರುವ ಸಂಬಂಧದಷ್ಟು ವಧುವಿನ ಶಿಕ್ಷಣಮಟ್ಟ ಹಾಗೂ ವರದಕ್ಷಿಣೆಯ ಸಂಬಂಧಗಳು ನಿಶ್ಚಿತವಾಗಿಲ್ಲ. ಅನೇಕ ಸಂದರ್ಭಗಳಲ್ಲಿ ಇವುಗಳ ಸಂಬಂಧ ನೇರವಾಗಿರಬಹುದು ಇಲ್ಲವೇ ಕೆಲವು ವೇಳೆ ವಿಪರ್ಯಯ ಸಂಬಂಧವೂ ಆಗಿದ್ದಿರಬಹುದು.

ಎರಡನೆಯದಾಗಿ, ವರದಕ್ಷಿಣೆಯ ಬೆಲೆಯು ವರನು ತನ್ನ ಉದ್ಯೋಗದಿಂದ ಗಳಿಸುತ್ತಿರುವ ಆದಾಯದ ಮೊತ್ತವನ್ನೂ ಅವಲಂಬಿಸಿರುತ್ತದೆ. ವರನ ಶಿಕ್ಷಣಮಟ್ಟ ಹಾಗೂ ಶೈಕ್ಷಣಿಕ ವಿಷಯ ಆತನ ಗಳಿಕೆಯನ್ನು ನಿರ್ಧರಿಸುತ್ತದೆಂಬುದು ನಿಜವಾದರೂ ಕೆಲವು ವೇಳೆ ಹಾಗಾಗದಿರಬಹುದು. ವ್ಯಕ್ತಿಯ ಆದಾಯವು ಆತನು ಕೈಗೊಂಡಿರುವ ವೃತ್ತಿಯನ್ನವಲಂಬಿಸಿರುತ್ತದೆಯಲ್ಲದೆ ಆತನು ಪಡೆದಿರುವ ಪದವಿಯನ್ನಲ್ಲ. ವರದಕ್ಷಿಣೆಯು ನೇರವಾಗಿ ವರಮಾನಕ್ಕೆ ಸಂಬಂಧಿಸಿರುವುದರಿಂದ ಅನೇಕ ಬಾರಿ ವಧುವಿನ ಗಳಿಕೆಯ ಶಕ್ತಿಯನ್ನನುಸರಿಸಿ ವರದಕ್ಷಿಣೆಯ ದರ ಕಡಿಮೆಯೂ ಆಗಬಹುದು. ಆಕೆಯ ಗಳಿಕೆಯು ಆದಾಯದ ಸಾಧನವಲ್ಲವೇ ?

ಇವಲ್ಲದೆ ವಧುವಿನ ಸೌಂದರ್ಯ ಸಹ ವರದಕ್ಷಿಣೆಯ ದರವನ್ನು ನಿರ್ಣಯಿಸುವಲ್ಲಿ ಸಹಾಯಕವಾಗಬಹುದು. ಆಕರ್ಷಕವಾದ ದೈಹಿಕ ಲಾವಣ್ಯ ವರದಕ್ಷಿಣೆಯ ದರವನ್ನು ಕಡಿಮೆಗೊಳಿಸುತ್ತದೆಂದೂ ಭಾವಿಸಬಹುದು. ಅದರಂತೆಯೇ ವರನ ರೂಪವೂ ಬೆಲೆಯ ನಿರ್ಣಯದ ಸಾಧನವಾಗಬಹುದು.

ನಾಲ್ಕನೆಯದಾಗಿ ವಧುವಿನ ತಂದೆತಾಯಿಗಳು ತಮ್ಮ ಮಗಳು ಯಾವ ರೀತಿ ಬಾಳಬೇಕೆಂದು ಬಯಸುತ್ತಾರೆಂಬುದನ್ನವಲಂಬಿಸಿ ವರದಕ್ಷಿಣೆಯನ್ನು ನಿರ್ಧರಿಸುವ ಸಂದರ್ಭಗಳೂ ಇವೆ. ತಂದೆತಾಯಿಗಳು ತಮ್ಮ ಮಗಳಿಗೆ ಎಲ್ಲ ರೀತಿಯ ಸುಖ ಮತ್ತು ಸಂಪದ್ಭರಿತ ಜೀವನ ನಡೆಸಲು ಬೇಕಾಗುವ ಅನುಕೂಲಗಳನ್ನು ಹೊಂದಿರುವ ವರನನ್ನು ದೃಷ್ಟಿಯಲ್ಲಿರಿಸಿಕೊಂಡು ವರದಕ್ಷಿಣೆಯ ಮೊತ್ತವನ್ನು ಅಧಿಕಗೊಳಿಸುವ ಸಂಭವವೂ ಉಂಟು.

ಐದನೆಯದಾಗಿ ಕೆಲವು ಬಾರಿ ವಿದ್ಯಾವಂತ ವಧುಗಳ ಸಂಖ್ಯೆಗಿಂತ ವಿದ್ಯಾವಂತ ವರಗಳ ಸಂಖ್ಯೆ ಕಡಿಮೆಯಾಗಿರುವುದೂ ಉಂಟು. ಇದು ಕೆಲವು ಜಾತಿಗಳಲ್ಲಿ ಮಾತ್ರ ಕಂಡು ಬರುತ್ತದೆ. ಆದುದರಿಂದ ವರಗಳ ಅಭಾವವೂ ವರದಕ್ಷಿಣೆಯ ಮೌಲ್ಯವನ್ನು ಹೆಚ್ಚಿಸಲು ಕಾರಣವಾಗಬಹುದು.

೪

ಅಪೇಕ್ಷಣೀಯವಾಗಲೀ, ಅನಪೇಕ್ಷಣೀಯವಾಗಲೀ ವರದಕ್ಷಿಣೆಯು ವ್ಯಕ್ತಿಯ ನಡವಳಿಕೆಯ ಮೇಲೆ, ಸಂಸಾರದ ಮೇಲೆ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಸಮಾಜದ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಅನಪೇಕ್ಷಣೀಯ ಪರಿಣಾಮವು ತನ್ನ ವಿಕೃತ ರೂಪವನ್ನು ತಲೆಎತ್ತಿದಲ್ಲೆಲ್ಲಾ ಜಿಗುಪ್ಸಿತರಾದ ವ್ಯಕ್ತಿಗಳನ್ನು ಕಾಣುವುದು ಅಸ್ವಾಭಾವಿಕವೇನಲ್ಲ. ತನ್ನ ಸಾಮರ್ಥ್ಯಕ್ಕಿಂತ ಹೆಚ್ಚಿನ ಮೊತ್ತವನ್ನು ವರದಕ್ಷಿಣೆಯಾಗಿ ಕೊಟ್ಟ ವ್ಯಕ್ತಿಯ ಸ್ಥಿತಿ ಸಮಾಜದಲ್ಲಿ ಅವ್ಯವಸ್ಥಿತಗೊಳ್ಳುತ್ತದೆ.

ವರದಕ್ಷಿಣೆ ಪದ್ಧತಿಯ ಪರಿಣಾಮಗಳ ವಿಶ್ಲೇಷಣೆ ಮಾಡಿದಾಗ ಅವು ಅನೇಕ ಒಳಸಂಬಂಧಗಳನ್ನೊಳಗೊಂಡಿವೆಯೆಂಬುದು ತಿಳಿಯುತ್ತದೆ. ಯಾರಿಗಾಗಿ ವರದಕ್ಷಿಣೆಯನ್ನು ಕೊಡಬೇಕೋ ಆ ವ್ಯಕ್ತಿಯ ಮೇಲಾಗುವ ಪರಿಣಾಮವನ್ನೂ ಅದರ ಭಾರವನ್ನು ಹೊರುವ ಸಂಸಾರದ ಸ್ಥಿತಿಯನ್ನೂ ಅದರಿಂದಾಗಿ ವಿಫಲತೆಯ ಮನೋಭಾವವನ್ನು ಹೊಂದಿರುವಂತಹ ವ್ಯಕ್ತಿ ಹಾಗೂ ಸಂಸಾರಗಳೊಂದಿಗೆ ವರ್ತಿಸುವ ಸಮಾಜದ ರೀತಿಯನ್ನು ಕೂಲಂಕಷವಾಗಿ ಪರಿಶೀಲಿಸಬಹುದು. ವಧುವು ಅವಿವಾಹಿತಳಾಗಿ ಉಳಿದರೆ ಇಲ್ಲವೇ ಬೇಡಿಕೆಯ ಹಣವನ್ನು ಆಕೆಯ ತಂದೆತಾಯಿಗಳಿಂದ ಭರಿಸಲು ಅಸಾಧ್ಯವಾದಾಗ ಮತ್ತು ಶಕ್ತಿಮೀರಿ ಬೇಡಿಕೆಯ ಹಣವನ್ನು ಪೂರೈಸಿದಾಗ ಇಲ್ಲವೇ ವ್ಯಕ್ತಿಯ ಸಾಮರ್ಥ್ಯ ಮೀರಿದಾಗ ಅನಪೇಕ್ಷಿತ ಪರಿಣಾಮಗಳುಂಟಾಗುವ ಸಾಧ್ಯತೆ ಇದೆ. ಈ ಪರಿಣಾಮಗಳು ಭಿನ್ನ ರೂಪಗಳನ್ನು ಹೊಂದಿರಬಹುದು. ಇಂತಹ ಸಂದರ್ಭಗಳು ಇಜ್ಜೋಡು ದಂಪತಿಗಳ ಸೃಷ್ಟಿಗೆ ಕಾರಣವಾಗುತ್ತವೆ. ಅಲ್ಲದೆ ಎರಡು ಸಂಸಾರಗಳ ಸಂಬಂಧದಲ್ಲಿ ವಿರಸ, ಅತ್ತೆಯ ಮನೆಯಲ್ಲಿ ತಿರಸ್ಕಾರ, ಮದುವೆಗಳ ಮುರಿಯುವಿಕೆ, ಹಣಸಂಪಾದನೆಗಾಗಿ ಅನೈತಿಕ ಸಾಧನಗಳ ಅನ್ವೇಷಣೆ, ಅನೈತಿಕ ಸಂಬಂಧ, ಆತ್ಮಹತ್ಯೆ—ಇತ್ಯಾದಿ ಪರಿಣಾಮಗಳಿಗೆ ಕಾರಣವಾಗುತ್ತವೆ. ತಾನು ವರಿಸಿದ ವರನ ಬೇಡಿಕೆಗಳನ್ನು ಪೂರೈಸಲು ತಂದೆತಾಯಿಗಳಿಂದ ಸಾಧ್ಯವಿಲ್ಲದಿದ್ದಾಗ ವಧುವು ತಂದೆತಾಯಿಗಳ ಸಾಮರ್ಥ್ಯಕ್ಕನುರೂಪನಾಗಿರುವ ವರನನ್ನು ಮದುವೆಯಾಗುತ್ತಾಳೆ. ಇದು ಇಜ್ಜೋಡು ದಂಪತಿಗಳ ಸೃಷ್ಟಿಗೆ ಕಾರಣವಾಗಿ ಬಾಂಧವ್ಯದಲ್ಲಿ ಕೊರತೆಯುಂಟಾಗುತ್ತದೆ. ಸಾಕಷ್ಟು ವರದಕ್ಷಿಣೆ ಇಲ್ಲದೆ ವಿವಾಹವಾದ ಕನ್ಯೆಯು ತನ್ನ ಅತ್ತೆಯ ಮನೆಯಲ್ಲಿ ಸತತವಾಗಿ ನರಕಸದೃಶಯಾತನೆಯನ್ನು ಎದುರಿಸಬೇಕಾಗುವುದರಿಂದ ಎರಡೂ

ಸಂಸಾರಗಳ ಮಧ್ಯೆ ಮಧುರವಾದ ಬಾಂಧವ್ಯವೇರ್ಪಡುವುದು ಅಸಾಧ್ಯವಾಗುತ್ತದೆ. ಒಂದು ವೇಳೆ ಸಂಬಂಧ ಹಾಗೆಯೇ ಮುಂದುವರಿದರೂ ಅದು ಅವ್ಯವಸ್ಥಿತ ಸಂಬಂಧವಾಗಿಯೇ ಉಳಿದು ವಿವಾಹ ವಿಚ್ಛೇದನಕ್ಕೆ ಕಾರಣವಾಗಬಹುದು. ಯಾವ ಸಂಸಾರದಲ್ಲಿ ಸತತವಾದ ನರಕಯಾತನೆ ಇರುತ್ತದೆಯೋ ಅಲ್ಲಿ ಪತಿಯಾದವನು ಯಾತನೆ ಅನುಭವಿಸುತ್ತಿರುವ ಪತ್ನಿಯ ಬಗೆಗೆ ಹಾಗೂ ಯಾತನೆಗೆ ಕಾರಣರಾದ ತಂದೆತಾಯಿಗಳ ಬಗೆಗೆ ಅಲಿಪ್ತ ಧೋರಣೆಯನ್ನು ತಾಳುತ್ತಾನೆ. ಅಂಥವನ ಅಸಹಾಯಕ ಪತ್ನಿಯು ಆತ್ಮಹತ್ಯೆಯ ಮೂಲಕ ಪರಿಹಾರ ಕಂಡುಕೊಳ್ಳುತ್ತಾಳೆ.

ಇಂತಹ ಅನಪೇಕ್ಷಿತ ಪರಿಣಾಮಗಳೆಲ್ಲವೂ ಮಾನಸಿಕವಾಗಿ ಧೈರ್ಯಸ್ಥೈರ್ಯಗಳನ್ನು ಕಳೆದುಕೊಂಡಿರುವ ವ್ಯಕ್ತಿ ಮತ್ತು ಸಂಸಾರಗಳಲ್ಲಿ ಉದ್ಭವಿಸುವ ಬಾಹ್ಯ ಸಮಸ್ಯೆಗಳು. ಮಾನಸಿಕ ಹಾಗೂ ಸಾಮಾಜಿಕವಾಗಿ ಇಂತಹ ವ್ಯಕ್ತಿ ಮತ್ತು ಆತನ ಸಂಸಾರ ಹೃದಯವಿದ್ರಾವಕ ಸನ್ನಿವೇಶಗಳಿಗೆ ಒಳಗಾಗುತ್ತವೆ. ಇಂತಹ ವ್ಯಕ್ತಿಗಳಿಂದಾಗಿ ಸಾಮಾಜಿಕ ಅವ್ಯವಸ್ಥೆ ತಲೆದೋರುತ್ತವೆ. ಸಮಾಜದಲ್ಲಿ ಹೆಣ್ಣು ಮಗುವಿನ ಜನ್ಮವು ವ್ಯಥೆಗೆ ಕಾರಣವಾಗುವುದಲ್ಲದೆ ಆರ್ಥಿಕ ಮುಗ್ಗಟ್ಟಿಗೂ ಕಾರಣವಾಗುತ್ತದೆ. ಗಂಡು ಮಗುವಿನ ಜನ್ಮವು ಆದಾಯಕರವೆಂದು ಭಾವಿಸಲಾಗುವುದು.

ವರದಕ್ಷಿಣೆಯನ್ನು ಕೊಡಲು ಸಾಮರ್ಥ್ಯವುಳ್ಳವರು ವರದಕ್ಷಿಣೆಯನ್ನು ಸಮರ್ಥಿಸುತ್ತಾರೆ. ಅಧಿಕಾರವುಳ್ಳ ವಧುವಿನ ತಂದೆ ಒಳ್ಳೆಯ ಕೆಲಸವನ್ನು ಕೊಡಿಸಬಲ್ಲರು. ವರದಕ್ಷಿಣೆ ರೂಪದಲ್ಲಿ ನೀಡಲಾದ ಹಣವು ನೂತನ ವಿವಾಹಿತ ದಂಪತಿಗಳ ಸುಖಸಂಸಾರದ ಆರಂಭಕ್ಕೆ ಸಹಕಾರವನ್ನು ನೀಡಬಲ್ಲುದು ಎಂಬುದು ಅವರ ವಾದದ ತಿರುಳು. ಆದರೆ ಒಂದು ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ. ಅದೆಂದರೆ ವರದಕ್ಷಿಣೆಯಿಂದಾಗುವ ಸತ್ಪರಿಣಾಮಗಳು ದುಷ್ಪರಿಣಾಮಗಳನ್ನು ನಿವಾರಿಸಬಲ್ಲವು ಭಾರತದ ಸಮಾಜದಲ್ಲಿ ಸಾಧ್ಯವೇ? ಎಂಬುದು.

೫

ವರದಕ್ಷಿಣೆಯ ಸಂಪ್ರದಾಯವು ಭಾರತೀಯ ವಿವಾಹ ಪದ್ಧತಿಯ ಅಂಗವಾಗಿ ಪರಿಣಮಿಸಿದ್ದು ಅದು ಸಮಾಜವನ್ನು ಆಕ್ರಮಿಸಿದೆ. ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳು ಈ ಪದ್ಧತಿಯ ಏಳಿಗೆಗೆ ಕಾರಣವಾಗಿವೆ. ವರದಕ್ಷಿಣೆಯು ಮೌಲ್ಯವನ್ನು ನಿರ್ಧರಿಸುವ ಸಾಧನಗಳನ್ನು ಮತ್ತು ಅದರಿಂದಾಗುವ ಅನಪೇಕ್ಷಿತ ಪರಿಣಾಮಗಳನ್ನು ಪ್ರಸ್ತುತ ಲೇಖನದಲ್ಲಿ ಪರಿಶೀಲಿಸಲಾಗಿದೆ. ಯಾವ ಸಮಾಜದಲ್ಲಿ ವಿದ್ಯೆ, ಉದ್ಯೋಗ ಸಂಪತ್ತುಗಳು ಘನತೆಯ ಸಂಕೇತವಾಗಿವೆಯೋ ಮತ್ತು ಅವುಗಳನ್ನು ಗಳಿಸಲು ವರದಕ್ಷಿಣೆ ಸಾಧನವಾಗಿ ಪರಿಣಮಿಸಿದೆಯೋ ಅಂತಹ ಕಡೆಗಳಲ್ಲಿ ಕೆಲವರು ವರದಕ್ಷಿಣೆಯನ್ನು ಸಾಧನದ ಮಾರ್ಗವಾಗಿ ಬಳಸಿಕೊಳ್ಳುತ್ತಾರೆ. ಅಂತಹ ಜನಗಳಿಗೆ ವರದಕ್ಷಿಣೆ ಅಪೇಕ್ಷಿತ ಸಾಧನ. ಆದರೆ ಅದರಿಂದೊದಗುವ ಅನಪೇಕ್ಷಿತ ಪರಿಣಾಮಗಳು ಅಪಾರವಾದುವು. ಅವು ಸಂಸಾರದಲ್ಲಿ ಮತ್ತು ಸಮಾಜದಲ್ಲಿ ಅವ್ಯವಸ್ಥೆಯನ್ನುಂಟುಮಾಡಿ ಸಮಸ್ಯೆಗಳನ್ನೊಡ್ಡುತ್ತವೆ. ಈಗಿನ ಸಾಮಾಜಿಕ ಪ್ರವೃತ್ತಿ ವರದಕ್ಷಿಣೆಯ ವಿರೋಧಿಯಾಗಿದೆ. ಅದನ್ನು ನಿರ್ಮೂಲಗೊಳಿಸಲು ಇದು ತಕ್ಕ ಸಮಯವಾಗಿದೆ. ಕಾಲ ಪಕ್ವವಾಗಿದೆ. ಆದರೆ ಅದನ್ನು ಯಾವ ರೀತಿ ಕೈಗೊಳ್ಳಬೇಕೆಂಬುದು ವಿವಾದದ ಪ್ರಶ್ನೆಯಾಗುಳಿದಿದೆ. ಅದನ್ನು ಇಲ್ಲಿ ಚರ್ಚಿಸುವುದು ಅಪ್ರಸ್ತುತ.

ಜಿ. ಆರ್. ಕುಪ್ಪುಸ್ವಾಮಿ

ನಮ್ಮ ವಿವಾಹ ಪದ್ಧತಿಯ ವಿಶಿಷ್ಟ ಸಂಪ್ರದಾಯಗಳು

ಅನಾದಿ ಕಾಲದಿಂದಲೂ ವಿವಾಹ ಶುಭ ಮುಹೂರ್ತದಲ್ಲಿ ವರನು ವಧುವಿಗೆ ತಾಳಿ ಕಟ್ಟುವ ವಿಧಿಯು[1] ನಮ್ಮ ಜನರಲ್ಲಿ ಮೂಡಿ ಬಂದಿರುವ ಒಂದು ವಿಶಿಷ್ಟ ಸಂಪ್ರದಾಯವಾಗಿದೆ. ಆದರೆ ಈ ಸಂಪ್ರದಾಯವು ದಕ್ಷಿಣ ಭಾರತಕ್ಕೆ ಮಾತ್ರ ಸೀಮಿತವಾಗಿದೆ. ಭಾರತದ ಇತರ ಭಾಗಗಳಲ್ಲಿ ಬಳೆ, ಮೂಗುತಿ, ಕಾಲುಂಗುರ ಹಾಗೂ ಕಂಠಹಾರವು ಸುಮಂಗಲಿಗೆ ಭೂಷಣವೆಂದು ಪರಿಗಣಿಸಲಾಗಿದ್ದು ತಾಳಿ ಕಟ್ಟುವುದರ ತಿಳುವಳಿಕೆ ಕಡಿಮೆ. ನಮ್ಮ ವಿವಾಹಗಳಲ್ಲಿ ಶಾಸ್ತ್ರೀಯವಾಗಿ ತಾಳಿ ಕಟ್ಟುವುದು ಒಂದು ಪ್ರಮುಖ ವಿಧಿಯಾಗಿದ್ದು ತಾಲಿಯನ್ನು ಕಟ್ಟಿಸಿಕೊಂಡವರ ಬಂಧನವನ್ನು ಎಂದಿಗೂ ಮುರಿದು ಹೋಗದಂತೆ ಸಂಬಂಧವನ್ನು ಶಾಶ್ವತಗೊಳಿಸುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ವಧೂವರರು ಮದುವೆಯ ಉಂಗುರವನ್ನು ಅದಲು ಬದಲು ಮಾಡಿಕೊಳ್ಳುವ ಸ್ಥಾನವನ್ನೇ ನಮ್ಮಲ್ಲಿ ತಾಳಿ ಕಟ್ಟುವ ಸಂಪ್ರದಾಯವು ಗಳಿಸಿದೆ. ತಾಲಿಯ ರಚನೆ, ಸ್ವರೂಪ ಅಥವಾ ಬಣ್ಣದಲ್ಲಿ ವ್ಯತ್ಯಾಸಗಳು ಕಂಡುಬಂದರೂ ಅದೊಂದು ದಾರದ ಎಳೆಯಿಂದ ಕೂಡಿದ್ದಲ್ಲದೆ ಅದನ್ನು ವರನು ಅಥವಾ ಅವನ ಪರವಾಗಿ ಯಾರಾದರೂ ಒಬ್ಬರು ವಿವಾಹ ಸಮಯದಲ್ಲಿ ವಧುವಿನ ಕೊರಳಿಗೆ ಗಂಟುಹಾಕಿ ಕಟ್ಟಬೇಕೆಂಬ ಸಂಪ್ರದಾಯವನ್ನು[2] ಎಲ್ಲ ಪಂಗಡದವರೂ ಅನುಸರಿಸುತ್ತಾರೆ. ಧಾರ್ಮಿಕ ದೃಷ್ಟಿಯಿಂದ ತಾಲಿಯನ್ನು ಗಂಟುಹಾಕಿ ಕಟ್ಟುವುದರ ಮಹತ್ವವೇನೆಂದು ತಿಳಿಯದಿದ್ದರೂ, ವಧುವನ್ನು ಕೊಂಡು ತಂದು[3] ವಿವಾಹ ನಡೆಸುವ ಜನಾಂಗಗಳಲ್ಲಿ ತಾಲಿ ಕಟ್ಟುವುದು ವ್ಯವಹಾರಿಕ ದೃಷ್ಟಿಯಿಂದ ಈ ವಿಕ್ರಯದ ದ್ಯೋತಕವನ್ನು ಸೂಚಿಸುತ್ತದೆಯೋ ಏನೋ ಎಂಬ ಸಂಶಯವು ಸಹಜವಾಗಿ ಮೂಡುತ್ತದೆ. ಆಕಳನ್ನು ವ್ಯಾಪಾರ ಮಾಡುವಾಗ ಮಾರುವವನು ಆಕಳಿನ ಕೊರಳಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿಕೊಳ್ಳುತ್ತಾನೆ. ಮತ್ತು ಕೊಂಡುಕೊಳ್ಳುವವನು ಬೇರೆ ಹಗ್ಗವನ್ನು ಕಟ್ಟುತ್ತಾನೆ. ಈ ಸಂಪ್ರದಾಯವು ತಮಿಳುನಾಡು ಮತ್ತು ಇತರ ಕಡೆಗಳಲ್ಲಿ ವಾಡಿಕೆಯಲ್ಲಿದೆ. ಆಕಳಿಗೆ ಪವಿತ್ರ ಸ್ಥಾನವನ್ನು ಕೊಟ್ಟು ಗೋಮಾತೆಯನ್ನು ಪೂಜಿಸುವ ನಮ್ಮ ದೇಶದಲ್ಲಿ ವಧುವನ್ನು ಸಹ ಕೊಂಡು ತರುವುದಕ್ಕೆ ಅದೇ ಕ್ರಮವನ್ನು ಅನುಸರಿಸುತ್ತ ಬಂದಿದ್ದರೆ ತಪ್ಪಾಗಲಾರದೆಂದು ಅಭಿಪ್ರಾಯ ಪಡಲಾಗಿದೆ.

ತಾಳಿ ಕಟ್ಟುವ ವಿಧಿಯು ಹಿಂದೂ ಸಂಪ್ರದಾಯಕ್ಕೆ ಸೇರಿದ್ದು ಅದರ ಉಗಮವು ಕೂಡ ಹಿಂದೂ ಜನರಿಗೆ ಸೇರಿದ್ದರಿಂದ ದಕ್ಷಿಣ ಭಾರತೀಯರ ಜನ ಜೀವನದಲ್ಲಿ ಅದು ವಿವಾಹದ ಪ್ರಮುಖ ಸಂಕೇತವಾಗಿದೆ. ಇಲ್ಲಿಗೆ ವಲಸೆ ಬಂದು ಅನಾದಿ ಕಾಲದಿಂದಲೂ ನೆಲಸಿರುವ ಇತರ ಮತಸ್ಥರು ಕೂಡ ತಮ್ಮ ವಿವಾಹ ಪದ್ಧತಿಗಳಲ್ಲಿ ತಾಳಿ ಕಟ್ಟುವ ವಿಧಿಯನ್ನು ಕೂಡಿಸಿಕೊಂಡು ಬಂದಿದ್ದಾರೆ. ಮಲಬಾರ್ ತೀರ ಪ್ರದೇಶದಲ್ಲಿ ವಾಸಿಸುತ್ತಿರುವ ಸಿರಿಯನ್ ಕ್ರಿಶ್ಚಿಯನ್ನರು,

ಭಾರತೀಯ ಮಹಿಳೆಯರನ್ನು ಮದುವೆಯಾಗಿ ಅದೇ ತೀರದಲ್ಲಿ ನೆಲಸಿರುವ ಯಹೂದ್ಯರು, ಅರಬ್ಬಿ ಜನರ ವಂಶಜರಾದ ಲಬ್ಬೆ, ಮರಕಾಯರ್, ರಾವುತರ್, ಮಾಪಿಳ್ಳೆ ಮತ್ತು ಇತರ ಕುಲದವರು ತಾಲಿ ಕಟ್ಟುವ ಸಂಪ್ರದಾಯಕ್ಕೆ ಇಂದಿಗೂ ಕೂಡ ಮನ್ನಣೆ ಕೊಟ್ಟಿದ್ದಾರೆ. ಕ್ಯಾಥೊಲಿಕ್ ಪಾದ್ರಿಗಳು, ಪೋರ್ಚುಗೀಸ್ ವಸಾಹತುಗಳನ್ನು ಸ್ಥಾಪಿಸುವಾಗ ಮತಾಂತರ ಗೊಂಡ ಹಿಂದುಗಳಿಗೆ ವಿವಾಹಸಮಯದಲ್ಲಿ ಉಂಗುರವನ್ನು ಅದಲು ಬದಲು ಮಾಡಿಕೊಳ್ಳುವ ವಿಧಿಗೆ ಬದಲಾಗಿ ತಾಲಿ ಕಟ್ಟುವ ವಿಧಿಯನ್ನು ಅನುಸರಿಸಲು ಅನುಮತಿ ನೀಡಿದರು. ಆದರೆ ಉತ್ತರದಿಂದ ವಲಸೆ ಬಂದಿರುವ ನಮ್ಮ ಜನರು ತಾಲಿ ಕಟ್ಟುವ ಪದ್ಧತಿಗೆ ಯೋಗ್ಯ ಪುರಸ್ಕಾರ ವನ್ನು ಕೊಟ್ಟಂತೆ ಕಂಡುಬರುವುದಿಲ್ಲ. ಅವರು ಅವರಲ್ಲಿಯೂ ಇತ್ತೀಚೆಗೆ ವಲಸೆ ಬಂದವರು ತಾಲಿ ಕಟ್ಟುವ ಸಂಪ್ರದಾಯವನ್ನು ತಮ್ಮ ವೈವಾಹಿಕ ಕ್ರಮಗಳಲ್ಲಿ ಕೂಡಿಸಿಕೊಳ್ಳಲು ಸಿದ್ಧ ವಿಲ್ಲ. ಕೆಲವರು ಮಾತ್ರ ದ್ವಿತೀಯ ಅಥವಾ ತೃತೀಯ ಸ್ಥಾನವನ್ನು ಕೊಟ್ಟಿದ್ದಾರೆ. ದಕ್ಷಿಣ ಭಾರತದಲ್ಲಿಯೇ ನೆಲಸಿರುವ ಆದಿವಾಸಿಗಳು ತಾಲಿ ಕಟ್ಟುವುದನ್ನು ನಿಷೇಧಿಸಿದ್ದಾರೆ. ಸ್ವತಂತ್ರ ಪ್ರವೃತ್ತಿಯವರಾಗಿದ್ದ ಜನರು ಮೊದಲಿಗೆ ತಮ್ಮ ತಮ್ಮ ಪ್ರಾಚೀನ ಪದ್ಧತಿಗಳನ್ನು ಬಿಟ್ಟು ಕೊಟ್ಟು ನಾಗರೀಕತೆಗೆ ಸೇರಿದ ತಾಲಿಕಟ್ಟುವ ಸಂಪ್ರದಾಯವನ್ನು ತಮ್ಮದಾಗಿಸಿಕೊಳ್ಳಲು ಸಿದ್ಧ ವಿರಲಿಲ್ಲ. ಇತ್ತೀಚೆಗೆ ಮಾತ್ರ ನೆರೆಹೊರೆಯ ಸಂಪ್ರದಾಯಗಳಿಗೆ ಒಲಿದು ಬಂದಿದ್ದಾರೆ.

ತಾಲಿ ಕಟ್ಟುವ ಸಂಪ್ರದಾಯವು ದಾಕ್ಷಿಣಾತ್ಯರಿಗೆ ಅಂದರೆ ದ್ರಾವಿಡ ಭಾಷೆಗಳನ್ನಾಡುವ ಕರ್ನಾಟಕ, ತಮಿಳುನಾಡು ಹಾಗೂ ಆಂಧ್ರದೇಶದ ಜನರಿಗೆ ಸೀಮಿತವಾಗಿದೆ. ಗಡಿನಾಡು ಪ್ರದೇಶಗಳಲ್ಲಿ ವಾಸಿಸುವ ಒರಿಯ ಹಾಗೂ ಕೊಂಕಣಿ ಜನರು ಆರ್ಯರ ಪ್ರಭಾವಕ್ಕೆ ಒಳಗಾಗಿ ದ್ದಾರೆ ಮತ್ತು ತಾಲಿ ಕಟ್ಟುವ ಸಂಪ್ರದಾಯಕ್ಕೆ ಅವರು ಮನ್ನಣೆ ಕೊಟ್ಟಿಲ್ಲ. ದ್ರಾವಿಡ ಅರಸರು ತಮ್ಮ ರಾಜ್ಯಗಳಲ್ಲಿ ಬೆಳೆಸಿಕೊಂಡು ಬಂದ ಸಂಸ್ಕೃತಿಯು ಉತ್ತರ ಭಾರತೀಯರಿಂದ ಭಿನ್ನವಾಗಿದೆ. ಆದ್ದರಿಂದ ದ್ರಾವಿಡರಲ್ಲಿ ಮಾತ್ರ ತಾಲಿ ಕಟ್ಟುವ ಸಂಪ್ರದಾಯಕ್ಕೆ ಪುರಸ್ಕಾರ ಸಿಕ್ಕಿದ್ದು ಸಹಜವೆ. ತಾಲಿ ಕಟ್ಟುವ ಸಂಪ್ರದಾಯವು ಸರ್ವಸಾಮಾನ್ಯವಾಗಿದ್ದರೂ ಕೂಡ, ಅದರ ಸ್ವರೂಪ ಹಾಗೂ ಉಪಯೋಗಿಸುವಿಕೆಯಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣುತ್ತೇವೆ. ಅವು ಉಪಜಾತಿಗಳ ಭಿನ್ನತೆಯನ್ನು ಕೂಡ ಸೂಚಿಸುವ ಸಂಕೇತಗಳಾಗಿವೆ.

ಉದಾಹರಣೆಗೆ :—

ತಮಿಳು ನಾಡಿನ ಬ್ರಾಹ್ಮಣೇತರರು ಉಪಯೋಗಿಸುತ್ತಿರುವ ತಾಲಿಯು ಕೆಳಗಿನಂತಿವೆ.

ಪೆರುಂತಾಲಿ, ಸಿರುಂತಾಲಿ, ತೊಂಗತಾಲಿ, ಬೊಟ್ಟುತಾಲಿ, ಶಂಖುತಾಲಿ, ರಸತಾಲಿ, ತೊಪ್ಪ ತಾಲಿ, ಉರುಂಡೈತಾಲಿ ಅಥವಾ ಉರುಂಡೈ ಮಣಿತಾಲಿ, ಇರುತಾಲಿ ಮತ್ತು ಕಡೆಯದಾಗಿ ತಾಲಿಕಟ್ಟಿ.

ಸರ್ವಸಾಮಾನ್ಯವಾಗಿ ಉಪಯೋಗದಲ್ಲಿರುವ ಪೆರುಂತಾಲಿ ಹಾಗೂ ಸಿರುಂತಾಲಿ ಕಟ್ಟುವ ಜಾತಿಗಳು ಇಂತಿವೆ.

ಪೆರುಂತಾಲಿ	ಸಿರುಂತಾಲಿ
ಅಗಂಬಡಿಯನ್	ಅಗಂಬಡಿಯನ್
—	ಅಂಬಟ್ಟನ್
—	ಚೆಟ್ಟಿ
ಇಡೈಯನ್ (81)	ಇಡೈಯನ್
ಕೈಕೋಳನ್	ಕೈಕೋಳನ್
ಕಳ್ಳನ್	ಕಳ್ಳನ್

ಕಮ್ಮಾಳ	ಕಮ್ಮಾಳ
ಕೊಂಗನ್	ಕೊರವ ಅಥವಾ ಯೆರುಕುಲ
—	—
—	ಮುತ್ರೈಯಾಳನ್ (81)
ಮರವ	ಮರವ
—	ಮುದಲಿ
—	ಪಳ್ಳಿ ಅಥವಾ ವಣ್ಣಿಯನ್
ಪಳ್ಳನ್ (81)	ಪಳ್ಳನ್ (81)
—	ಪನಿಕ್ಕನ್
—	ಪರೈಯ
—	ಪುಳ(ಟ್ಟ)ವನ್
ಸೆಂಬಡವನ್	ಸೆಂಬಡವನ್
—	ದೇವನ್ (ಕಳ್ಳನ್)
—	ಷಾನನ್
ತೊಟ್ಟಿಯನ್	ತೊಟ್ಟಿಯನ್
—	ಉಪ್ಪಲಿಯನ್
ವೆಲ್ಲಾಳ	ವೆಲ್ಲಾಳ (81)
ವಳ್ಳೈಯನ್	ವಳ್ಳೈಯನ್
ವಾಣಿಯನ್ (ವನಿಯಾನ್ ?)	ವಾಣಿಯನ್ (ವನಿಯಾನ್)
ವಣ್ಣಾನ್	ವಣ್ಣಾನ್
ವೇಟ್ಟುವನ್	ವೇಟ್ಟುವನ್

(81 ಪ್ರಜಾಗಣತಿ)

ಸಿರುಂತಾಲಿಯು 27 ಜಾತಿಗಳಲ್ಲಿಯೂ ಪೆರುಂತಾಲಿಯು 15 ಜಾತಿಗಳಲ್ಲಿಯೂ ರೂಢಿಯಲ್ಲಿದೆ. ಉಚ್ಚಕುಲಕ್ಕೆ ಸೇರಿದ ಜಮೀನುದಾರರು (ಮುದಲಿ) ಮೊದಲುಗೊಂಡು ಕೊರವರು ಹಾಗೂ ಇತರ ಅಲೆಮಾರು ಜನರಲ್ಲಿ ಇದರ ಉಪಯೋಗವು ಹರಡಿದ್ದು ಕಮ್ಮಾಳರು, ಅಲ್ಲದೆ ಕುರುಬರು, ಮೀನುಗಾರರು, ನೇಯ್ಗೆಯವರು, ಅಗಸರು, ನಾವಿದರು ಮತ್ತು ಕಳ್ಳು ಇಳಿಸುವವರಲ್ಲಿ ಕಂಡುಬರುತ್ತದೆ.

ಸಿರುಂತಾಲಿ ಹಾಗೂ ಪೆರುಂತಾಲಿಗಳ ನಡುವಿನ ಭೇದಕ್ಕೆ ಕಾರಣವನ್ನು ವಿಚಾರ ಮಾಡಬಹುದು. ಸೋದರ ಮಾವ ಅಥವಾ ಸೋದರತ್ತೆಯ ಮಗಳನ್ನು ಮದುವೆಯಾಗುವ ಸಂಪ್ರದಾಯವು ಬೇರೂರಿರುವ ಕೆಲವು ಜಾತಿಗಳಲ್ಲಿ ವೈವಾಹಿಕ ವಿಧಿಯನ್ನು ಸಂಪೂರ್ಣವಾಗಿ ಆಚರಿಸುವುದಕ್ಕೆ ಬದಲು ಸಣ್ಣ ಪ್ರಮಾಣದ ಮದುವೆ ಅಥವಾ ಸಿರುತಾಲಿ ಕಲ್ಯಾಣ ಪದ್ಧತಿಯನ್ನು ಅನುಸರಿಸುವ ವಾಡಿಕೆಯಿದೆ. ಅಕಸ್ಮಾತ್ ಎರಡು ಪಕ್ಷಗಳ ನಡುವೆ ವೈಮನಸ್ಸು ಹುಟ್ಟಿ ಮದುವೆಯನ್ನು ಮುಂದೂಡುವ ಪ್ರಮೇಯ ಉಂಟಾದಲ್ಲಿ ಅಥವಾ ವಧುವಿನ ತಂದೆ ತಾಯಂದಿರು ಮತ್ತೊಬ್ಬ ವರನಿಗೆ ಮದುವೆ ಮಾಡಿಕೊಡುವ ಪರಿಸ್ಥಿತಿಯು ಉದ್ಭವಿಸಿದಲ್ಲಿ ಆಗ ವರನು ವಧುವನ್ನು ಹಿಡಿದುಕೊಂಡು ಬಲಪ್ರಯೋಗದಿಂದ ತಾಲಿ ಅಥವಾ ಬಳ್ಳಿ ಹಾರವನ್ನೂ ಇಲ್ಲದಿದ್ದರೆ ಅವಳ ಸೀರೆಯ ತುಂಡನ್ನೆ ಹರಿದು ಅವಳ ಕೊರಳಿಗೆ ಹೊಸೆದು ಕಟ್ಟಿ ತನ್ನ ಪಕ್ಷವನ್ನು ನ್ಯಾಯಬದ್ಧವಾಗಿ ಸ್ಥಾಪಿಸುವನು. ಈ ಕ್ರಮದ ಅನುಸರಣೆಯಲ್ಲಿ ಬಲಪ್ರಯೋಗವಿಲ್ಲದೆ ವಧುವನ್ನು ಅಪಹರಿಸಿಕೊಂಡು ಹೋಗಿ ಮದುವೆಯಾಗುವ ಪದ್ಧತಿಯಿಂದ ಭಿನ್ನವಾಗಿರುತ್ತದೆ. ಸಿರುಂತಾಲಿ ಕಟ್ಟುವ ಸಂಪ್ರದಾಯವು ತಮಿಳುನಾಡಿನ ಕೆಲವು ಜನಾಂಗಗಳಲ್ಲಿ ಮಾತ್ರ ಸಹಜ ಬಂದಿದೆ.

ಪೆರುಂತಾಲಿಯು ಕೇವಲ ಬಳ್ಳಿಯ ಉದ್ದಳತೆಯಲ್ಲಿ ಕಂಡುಬರುವ ವ್ಯತ್ಯಾಸವನ್ನು ಮಾತ್ರ ಸೂಚಿಸುತ್ತದೆ. ತೋಂಗ ಹಾಗೂ ತೊಪ್ಪಿತಾಲಿಯು ಅವುಗಳ ಆಕಾರಗಳ ಸಂಕೇತವಾಗಿದ್ದು ಪೆರುಂತಾಲಿಯ ಭಾಗಗಳು, ತೋಂಗತಾಲಿಯು ಪದಕಾಕಾರವನ್ನು ಹೋಲುತ್ತದೆ. ತೊಪ್ಪಿ ತಾಲಿಯು ಉಬ್ಬು ಆಕಾರವನ್ನು ಹೊಟ್ಟೆ ಅಥವಾ ಮೊಲೆಯನ್ನು ಸೂಚಿಸುತ್ತದೆ. ಬಹುಶಃ ಶಂಖು ತಾಲಿಯು ಸಂಪ್ರದಾಯದ ಪ್ರಕಾರ ಶಂಖವನ್ನು ತಾಲಿಗೆ ಪೋಣಿಸುವಂತೆ ಕಾಣುತ್ತದೆ. ಇಲ್ಲವೆ ಶಂಖದಿಂದ ಸಿದ್ಧಪಡಿಸಿದ ಮಣಿಗಳನ್ನು ಉಪಯೋಗಿಸುತ್ತಾರೆ. ಆಕಳಿನ ಕುತ್ತಿಗೆಗೂ ಕೂಡ ಶಂಖ ಹಾಗೂ ಶಂಖದಿಂದ ಸಿದ್ಧಪಡಿಸಿದ ಮಣಿಗಳನ್ನು ಜೋಡಿಸಿ ಕಟ್ಟುವ ಸಂಪ್ರದಾಯವು ನಮ್ಮಲ್ಲಿದೆ. ಸಾಮಾನ್ಯವಾಗಿ ಪಶುವಿನ ಕೊಂಡುಕೊಳ್ಳುವಿಕೆಯನ್ನು ಸೂಚಿಸುತ್ತದೆಯೋ ಏನೋ? ಕುರುಬರು (ಇಡೈಯನ್), ಬೇಸಾಯಗಾರರು (ವೆಲ್ಲಾಳನ್), ಹೊಲೆಯರು (ಪರೈಯನ್) ಮತ್ತು ಕುಲುಮೆಗಾರರು (ಕಮ್ಮಾಳನ್) ಇವರಲ್ಲಿ ಶಂಖತಾಲಿಯ ಉಪಯೋಗವನ್ನೂ ಕಾಣಬಹುದು.

ಇರು ಅಥವಾ ಎರಡು ತಾಲಿ ಕಟ್ಟುವ ಸಂಪ್ರದಾಯವು ವಿಚಿತ್ರವೆನಿಸಿದ್ದು ವಿಧವಾ ವಿವಾಹಕ್ಕೆ ಸಂಬಂಧಿಸಿದಂತೆ ಕಂಡುಬರುವುದಲ್ಲ. ಸುಮಂಗಲಿಯು ತನ್ನ ಗಂಡನನ್ನು ಕಳೆದುಕೊಂಡ ಕೂಡಲೆ ಅವಳಿಗೆ ಕಟ್ಟಿರುವ ತಾಲಿಯನ್ನು ಹರಿದು ಹಾಕಿ ಮದುವೆಯ ಸಂಬಂಧವನ್ನು ಮುರಿದು ಹಾಕುತ್ತಾರೆ. ವಿಧವಾ ವಿವಾಹ ಪದ್ಧತಿಯು ರೂಢಿಯಲ್ಲಿರುವ ನೇಯ್ಗೆಯವರಲ್ಲಿಯೂ ಕೂಡ ಕೈಕೋಳನ್ ಅಥವಾ ನೇಯ್ಗೆಯ ವರನು ವಿಧವೆಯ ತಾಲಿಯನ್ನು ಹರಿದು ಅದೇ ತಾಲಿಯನ್ನು ಪುನಃ ಕಟ್ಟುವನು. ಅಂದರೆ ಅವರನ್ನು "ಅರುತ್ತು ಕಟ್ಟುಕಿರ ಕೈಕೋಳನ್" ಎಂದು ಕರೆಯುವ ವಾಡಿಕೆಯಿದೆ. ಅದೇ ಪರೈಯನ್ ಅಥವಾ ಹೊಲೆಯರು ಸಮಾಜದಲ್ಲಿ ತಮ್ಮ ಸ್ಥಾನವನ್ನು ಉತ್ತಮಗೊಳಿಸುವ ಸಲುವಾಗಿ ವಿಧವಾ ವಿವಾಹ ಪದ್ಧತಿಗೆ ಮನ್ನಣೆ ಕೊಟ್ಟಿಲ್ಲವಾದ್ದರಿಂದ ಅವರ ವರನನ್ನು "ಅರುತ್ತು ಕಟ್ಟಾದವನ್" ಎಂದು ಸಂಬೋಧಿಸಲಾಗುತ್ತಿದ್ದು ಇವೆಲ್ಲವುಗಳಿಂದ ವಿಧವೆಯನ್ನು ಮರುಮದುವೆಯಾದಲ್ಲಿ ಒಂದೇ ತಾಲಿಯನ್ನು ಕಟ್ಟಲಾಗುವುದೆಂದು ತಿಳಿದುಬರುತ್ತದೆ. ಅಲ್ಲದೆ, ಮರುಮದುವೆಯಾದ ವಿಧವೆಯರು ಒಂದೇ ತಾಲಿಯನ್ನು ಧರಿಸುತ್ತಾರೆ. ಎರಡು ತಾಲಿ ಸಂಪ್ರದಾಯವು ಬಹು ಪತ್ನಿತ್ವ ಸಂಪ್ರದಾಯವನ್ನು ಸೂಚಿಸುತ್ತದೆಯೋ ಏನೊ? ಎರಡು ತಾಲಿ ಕಟ್ಟುವ ಸಂಪ್ರದಾಯವು ಪಣ್ಣಾನ್ ಅಥವಾ ಅಗಸರ ಕೆಲವು ಉಪಜಾತಿಗಳಲ್ಲಿ ಮಾತ್ರ ಇರುವಂತೆ ಕಾಣುತ್ತದೆ.

ಕುತ್ತ ಅಥವಾ ತಾಲಿಯನ್ನು ಕಟ್ಟುವ ಸಂಪ್ರದಾಯವು ಎಂಟು ಜಾತಿಗಳಲ್ಲಿ ಮಾತ್ರ ಅಂದರೆ ಪಳ್ಳಿಯ, ಪನ್ನಿಯ. ಮರವ, ವೆಲ್ಲಾಳನ್, ಅಂಬುಟ್ಟನ್, ಪೆಸ್ಲಕನ್ (ರಜಪೂತರ ಒಂದು ಗುಂಪು) ಹಾಗೂ ತೆಲುಗರಲ್ಲಿ ಇದೆ. ಇವರಲ್ಲಿ ಕೆಲವರು ಉತ್ತರದವರಾಗಿದ್ದು ತಾಲಿ ಸಂಪ್ರದಾಯವನ್ನು ಸಂಪೂರ್ಣವಾಗಿ ಸ್ವೀಕರಿಸರು. ತಮ್ಮ ಮೂಲ ವೈವಾಹಿಕ ವಿಧಿಗಳನ್ನು ಬಿಟ್ಟುಕೊಡರು. ಆದರೂ ತಾಲಿಯನ್ನು ಕೂಡ ಔಪಚಾರಿಕವಾಗಿ ಕಟ್ಟುವರೆಂದು ಕಾಣುತ್ತದೆ. ರಜಪೂತರು ಉತ್ತರ ಭಾರತದಲ್ಲಿ ಅನುಸರಿಸುತ್ತಿದ್ದ ವಿಧಿಗಳನ್ನು ಉಳಿಸಿಕೊಂಡಿದ್ದರೂ ಅದರಲ್ಲಿ ತಾಲಿಯನ್ನು ಕಟ್ಟುವುದನ್ನು ಜೋಡಿಸಿಕೊಂಡಿದ್ದಾರೆ.

ಬೊಟ್ಟು ಅಥವಾ ಪೊಟ್ಟು ಮತ್ತು ಕರುಂತಾಲಿ ಕಟ್ಟ ಸಂಪ್ರದಾಯವನ್ನು ತಮಿಳುನಾಡಿನಲ್ಲಿ ಬಹುಕಾಲದಿಂದ ನೆಲಸಿದ ತೆಲುಗರಲ್ಲಿ ಕಾಣುತ್ತೇವೆ. ಬೊಟ್ಟು ಅಥವಾ ವರ್ತುಲಾಕಾರದ ಸಣ್ಣ ಆಭರಣವಾಗಲಿ ಅಥವಾ ಕರಿಮಣಿಯನ್ನು ಒಂದು ಬಳ್ಳಿ (ದಾರ)ಗೆ ಪೋಣಿಸಿ ಈ ತಾಲಿಯನ್ನು ಸಿದ್ಧಪಡಿಸಲಾಗುವುದು. ಬೊಟ್ಟು ಕಟ್ಟ ತಾಲಿ ಸಂಪ್ರದಾಯವು ಬೊಟ್ಟು ಕಟ್ಟದಾಸರಿ, ನಾಯಕನ್, ಕವರೈ, ರಜಪೂತ ಅಥವಾ (ರಾಜು) ವಡುಗನ್ ಮತ್ತು ತೆಲುಗು ಚೆಟ್ಟಿಯರಲ್ಲಿ ರೂಢಿಯಲ್ಲಿದ್ದು ತೆಲುಗು ಮೂಲವನ್ನು ಸೂಚಿಸುತ್ತದೆ. ಇವರಲ್ಲಿ ಬೊಟ್ಟು ಕಟ್ಟ ನಾವಿದರು ಅಥವಾ ಅಂಬಟ್ಟನ್ ಹಾಗೂ ಕಮ್ಮಾಳರು ಕೂಡ ಇದು ಕಡೆಯ ಎರಡು ಪಂಗಡದವರು ತಮ್ಮ ತೆಲುಗು ಮೂಲವನ್ನು ಮರೆತು ತಮಿಳರೆಂದು ಜನಗಣತಿಯಲ್ಲಿ ನೋಂದಾಯಿಸಿ

ಕೊಂಡಿದ್ದಾರೆ. ಆದರೂ ಇವರು ಬೊಟ್ಟು ತಾಲಿಯ ಉಪಯೋಗದಿಂದ ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಕರುಂತಾಲಿ ಕಟ್ಟುವ ತಮಿಳುನಾಡಿನ ತಮಿಳರ ಪೈಕಿ ಕರುಂತಾಲಿ ಕಟ್ಟಿ ಶಾನನ್ (ಕಳ್ಳು ಇಳಿಸುವವರು), ಕರುಪ್ಪು ಮಣಿ ಕಟ್ಟಿ ನೆಟ್ಟಿ ಮಾನ್, ಕೊರು (ಕರು ?) ಮಣಿರಜಪೂತರು, ಕರಮಣಿಯ್ಯೈತಿ, (ಮಣಿಕಟ್ಟಿ) ತೆಲುಗು, ಮಣಿಕಟ್ಟಿ ಇಡೈಯನ್, ಕರುಬರು, ಮತ್ತು ಮಣಿಕಟ್ಟಿ ಶೆಡ್ಡೈಯನ್ (ಕೈಕೋಳನ್) ಇವರನ್ನು ವರ್ಗಾಯಿಸಬಹುದು.

ಇತರ ತಾಲಿಕಟ್ಟಿ ಸಂಪ್ರದಾಯಕ್ಕೆ ಶರಣುಹೋಗಿರುವ ಜಾತಿಗಳ ಬಗ್ಗೆ ವಿವರಗಳಿರುವುದಿಲ್ಲ. ಉರುಂಡೈ (ಗುಂಡು) ತಾಲಿ ಹಾಗೂ ಮಣಿತಾಲಿಕಟ್ಟಿಯು ಕಮ್ಮಾಳರು, ರಸತಾಲಿ (ಪಾದರಸ) ಕಟ್ಟಿ ಸಂಪ್ರದಾಯವು ಕೊಶವನ್ ಅಥವಾ ಮಡಕೆ ತಯಾರಿಸುವವರಲ್ಲಿಯೂ ಜಗತಾಲಿ (? ಪ್ರಪಂಚ) ತಾಲಿಕಟ್ಟಿಯು ರಾಜು ಉಪಜಾತಿಯಲ್ಲಿಯೂ ಇರುತ್ತದೆ.

ತಾಲಿಯ ಪ್ರತೀಕವೇ ಆಗಿದ್ದ ಮಣಿಯನ್ನು ಪೋಣಿಸಿ ಕಂಠಸೂತ್ರವನ್ನು[6] ಧರಿಸುವ ಸಂಪ್ರದಾಯವು ಕೆಲವು ಉಪಜಾತಿಗಳ ಸ್ತ್ರೀಯರಲ್ಲಿ ಇದೆ. ಅದೇ ಆಧಾರದ ಮೇಲೆ ಕೆಲವು ಉಪಜಾತಿಗಳನ್ನು ವಿಂಗಡಿಸಬಹುದು :

ಸಂಪ್ರದಾಯ	ಉಪಜಾತಿಗಳು
ಮುತ್ತು ಕಟ್ಟಿ	ಪಣಿಕ್ಕನ್ (ಮಲಬಾರ್ ಜಾತಿ), ಮತ್ತು ವಣ್ಣಾನ್
ಪವಳವ್ (ಹವಳ)	ಆಂಡಿ, ಕೂತಾಡಿ, ವೆಲ್ಲಾಳ, ಇಡೈಯನ್, ಕಮ್ಮಾಳ ಮತ್ತು ಇಂಜೈಕುಲವ್
ಮಣಿಕಟ್ಟಿ	ಇಡೈಯನ್ ಶೆಡ್ಡೈಯನ್, ವೆಲ್ಲಾಳನ್
ತಂಬುಮಣಿಕಟ್ಟಿ	ವೆಲ್ಲಾಳ
ಪಾಶಿಕಟ್ಟಿ (ಮಣಿಕಟ್ಟಿ)	ವಲಿಯನ್, ಕೈಕೋಳನ್, ಕಮ್ಮಾಳನ್, ಇಡೆಯನ್
ಕೊಕ್ಕಿಕಟ್ಟಿ (ತಟ್ಟೆ ಮಣಿ)	ಇಡೆಯನ್, ವೆಲ್ಲಾಳನ್, ಮರವನ್
ಕೋಲಿಕಟ್ಟಿ (ಗೋಲಿಗಾತ್ರ)	ವೆಲ್ಲಾಳನ್, ಇಡೈಯನ್, ಕೋಲಿಪೆರುಂದ ತಾಲಿ ಕಮ್ಮಾಳನ್
ಕುಂಡು (ಗುಂಡು) ತಾಲಿ	ಇಡೈಯನ್
ಕಲ್ಲುಕಟ್ಟಿ	ಅಗಂಬಡಿಯನ್, ಇಡೈಯನ್, ಪಳ್ಳಿ ವೆಲ್ಲಾಳ, ಕವರೈ, ವೆಳ್ಳಯಾರ್ (ಮೊದಲಿ) ವೆಟ್ಟುವನ್
(16 ಮಣಿಗಳನ್ನು ತಾಲಿಯ ಎರಡು ಕಡೆ ಪೋಣಿಸುವುದು)	
ಪಲಿಂಗು ಕಟ್ಟಿ	ಇಡೈಯನ್, ಕನ್ನಡಯ್ಯನ್
ಪಂಚಾರವ್ ಕಟ್ಟಿ	ಅಗಂಬಡಿಯನ್, ಇಡೈಯನ್, ಉಡೈಯನ್
(ಚಿನ್ನದ ಪಂಚಾರವ್ ಕಂಠಾಹಾರ)	ಪಳ್ಳಿ, ಬಲಿಜ, ವಲ್ಲೈಯನ್

ಈ ಮೊದಲು ವಿವರಿಸಿದ ತಾಳಿ ಸಂಪ್ರದಾಯಗಳು ಇತ್ತೀಚಿಗೆ ಕಡಿಮೆಯಾಗುತ್ತಾ ಬಂದು ಕ್ರಮೇಣ ಮರೆಯಾಗಿಹೋಗಬಹುದು. ಆದರೆ ಈಗ ಸಾಮಾನ್ಯವಾಗಿ ಬಳಕೆಯಲ್ಲಿರುವ ತಾಳಿಗಳು ಎರಡು–ಹಳದಿ ಹಾಗೂ ಕಪ್ಪು. ದ್ರಾವಿಡರ ದಕ್ಷಿಣದವರಲ್ಲಿ ಹಳದಿ ಮತ್ತು ಉತ್ತರದವರಲ್ಲಿ ಕಪ್ಪು ತಾಳಿಗಳನ್ನು ಕಟ್ಟುತ್ತಾರೆ. ಇಲ್ಲಿಯವರೆಗೆ ವಿವರಿಸಿರುವ ತಾಳಿಗಳು ಹಳದಿದಾರದಿಂದ ಕೂಡಿದ್ದು ಹಳದಿ ವರ್ಗಕ್ಕೆ ಅಂದರೆ ತಮಿಳರ ಸಂಪ್ರದಾಯಕ್ಕೆ ಸೇರಿವೆ. ಕಪ್ಪು ತಾಳಿಯು ಕಪ್ಪು ಬಣ್ಣದ ಸಣ್ಣ ಸಣ್ಣ ಮಣಿಗಳಿಂದ ಮಾಡಲಾಗಿದ್ದು ಕೊರಳಿನ ಸುತ್ತಲೂ ಬಿಗಿದು ಕಟ್ಟಲಾಗುತ್ತದೆ. ಹಳದಿ ತಾಳಿಯನ್ನು ಪದಕಾಹಾರವನ್ನು ಧರಿಸುವ ರೀತಿಯಲ್ಲಿ ಕೊರಳಿನ ಸುತ್ತಲೂ ಧರಿಸಲಾಗುತ್ತದೆ.

ದ್ರಾವಿಡರು ತಾಳಿಕಟ್ಟುವ ಪದ್ಧತಿಯೊಡನೆ ದ್ರಾವಿಡೇತರ ಅದರಲ್ಲಿಯೂ ಬ್ರಾಹ್ಮಣರಲ್ಲಿ ಕಂಡುಬರುವ ಕೆಲವು ವಿಧಿಗಳನ್ನು ತಮ್ಮ ವಿವಾಹಗಳಲ್ಲಿ ಸೇರಿಸಿಕೊಂಡಿದ್ದಾರೆ. ಬ್ರಾಹ್ಮಣರು ಕೂಡ ಅನುಸರಿಸುತ್ತಿರುವ ತಮ್ಮ ವಿಧಿಗಳಲ್ಲಿ ತಾಳಿಕಟ್ಟುವ ದ್ರಾವಿಡ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಕ್ರಿಶ್ಚಿಯನ್ನರ ಪೈಕಿ ಭಾರತೀಯ ಕ್ರೈಸ್ತರು ಪರಸ್ಪರ ವಚನ ಸ್ವೀಕಾರಕ್ಕೆ ಪ್ರಥಮ ಸ್ಥಾನವನ್ನು ಕೊಟ್ಟು ತಾಳಿಕಟ್ಟುವ ವಿಧಿಗೆ ಎರಡನೆ ಸ್ಥಾನವನ್ನು ಕೊಟ್ಟಿದ್ದಾರೆ. ಅದೇ ರೀತಿ ಅರಬ್ ಮುಸಲ್ಮಾನರು ತಾಳಿ ಕಟ್ಟುವ ವಿಧಿಯನ್ನು ತಮ್ಮ ಇತರ ವಿಧಿಗಳೊಡನೆ ಕೂಡಿಸಿಕೊಂಡಿದ್ದಾರೆ. ಸ್ಪಷ್ಟವಾಗಿ ದಾಕ್ಷಿಣಾತ್ಯ ಹಿಂದೂ ವಿವಾಹಗಳಲ್ಲಿ ತಾಳಿಕಟ್ಟುವ ವಿಧಿಯೊಡನೆ ಉತ್ತರ ಭಾರತದ ಕೆಲವು ಸಂಪ್ರದಾಯಗಳನ್ನು ಕಾಣಬಹುದು–ಧಾರೆಯೆರೆಯುವುದು, ಈರ್ವರ ವಿವಾಹ ವಸ್ತ್ರಗಳಿಗೆ ಗಂಟುಹಾಕುವುದು, ಸಪ್ತಪದಿ ನಮ್ಮಲ್ಲಿ ಸರ್ವಸಾಮಾನ್ಯವಾಗಿದೆ. ಒರಿಸ್ಸದ ಕಮ್ಮಾರರು, ಮರಗೆಲಸದವರು, ದಕ್ಷಿಣಕನ್ನಡ ಜಿಲ್ಲೆಯ ಬಿಲ್ಲರು, ಬಂಟರು, ವೀರಶೈವರು, ಲಂಬಾಣಿಗಳು, ಮೊಗೇರ (ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರು), ಕನ್ನಡ ದೇಶದ ಕುರುಬರು, ಇನ್ನೈಯನ್, ತೀಯರು ವಿವಾಹಸಮಯದಲ್ಲಿ ತಾಳಿಯನ್ನು ಕಟ್ಟುವ ಸಂಪ್ರದಾಯದೊಡನೆ ಪಾಣಿಗ್ರಹಣದ ವಿಧಿಯನ್ನು ಕೂಡಿಸಿಕೊಂಡಿದ್ದಾರೆ. ಉತ್ತರದವರು ದ್ರಾವಿಡರೊಡನೆ ಅಂತರ್ಜಾತಿ ವಿವಾಹವನ್ನು ಮಾಡಿಕೊಂಡು ಬಂದುದು ಅವರು ತಾಳಿಕಟ್ಟುವ ಸಂಪ್ರದಾಯದ ಪ್ರಭಾವಕ್ಕೆ ಒಳಗಾಗಲು ಕಾರಣವನ್ನು ಒದಗಿಸಿಕೊಟ್ಟಿದೆ. ದ್ರಾವಿಡರ ಉತ್ತರ ಭಾಗದಲ್ಲಿ ಕ್ರಾಂತಿಯನ್ನೆಬ್ಬಿಸಿದ ವೀರಶೈವರು ಜಾತಿಪದ್ಧತಿಗೆ ಮಂಗಳವನ್ನು ಹಾಡಿದ್ದಲ್ಲದೆ ಸಮ್ಮಿಶ್ರ ಸಂಪ್ರದಾಯಗಳನ್ನು ಅಳವಡಿಸಿಕೊಂಡಿದ್ದರಲ್ಲಿ ಆಶ್ಚರ್ಯವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಬಿಲ್ಲರ ಗುಂಪಿನವರಾದ ತಿರುವಾಂಕೂರಿನ ಇಳವರು ಹಾಗೂ ರಜಪೂತರೆಂದು ಹೇಳಿಕೊಳ್ಳುವ ತೆಲುಗು ರಾಜು ಪಂಗಡದವರು ಸ್ವಕೀಯ ಮಹಿಳೆಯರನ್ನು ಮದುವೆಯಾಗಿ ಎರಡೂ ಸಂಪ್ರದಾಯಗಳನ್ನೂ ಅಳವಡಿಸಿಕೊಂಡು ಬಂದಿದ್ದಾರೆ. ಆದರೆ ಆದಿವಾಸಿಗಳು ಮಾತ್ರ ನಾಗರೀಕತೆಯಲ್ಲಿ ಮುಂದುವರಿದ ಜನಾಂಗದವರ ಸಂಪ್ರದಾಯಗಳನ್ನು ತಮ್ಮ ಪ್ರಾಚೀನ ವಿಧಿಗಳೊಡನೆ ಸೇರಿಸಿಕೊಂಡು ಸಮಾಜದಲ್ಲಿ ತಮ್ಮ ಸ್ಥಾನವನ್ನು ಉತ್ತಮಗೊಳಿಸಿಕೊಂಡಿದ್ದಾರೆ. ಅವರಲ್ಲಿ ಪ್ರಾಯಶಃ ಅಂತರ್ಜಾತಿ ವಿವಾಹವು ತಾಳಿಕಟ್ಟುವ ಸಂಪ್ರದಾಯಕ್ಕೆ ಕಾರಣವನ್ನು ಒದಗಿಸಿಕೊಟ್ಟಂತೆ ಕಾಣುವುದಿಲ್ಲ.

ಅತಿ ಶ್ರೇಷ್ಠ ವರ್ಗಕ್ಕೆ ಸೇರಿದ ಬ್ರಾಹ್ಮಣರಲ್ಲಿಯೂ ಕೂಡ ವಿವಾಹ ವಿಧಿಗಳ ಸಮ್ಮಿಶ್ರತೆಯನ್ನು ಕಾಣುತ್ತೇವೆ. ಅವರಲ್ಲಿ ತಾಳಿಕಟ್ಟುವ ವಿಧಿಯ ಜೊತೆಗೆ ಆರ್ಯಸಂಪ್ರದಾಯಗಳನ್ನು ಜೋಡಿಸಲಾಗಿದೆ. ಬ್ರಾಹ್ಮಣರು ಸ್ವಾಭಾವಿಕವಾಗಿ ಸುಧಾರಿಸಿದ ಹಾಗೂ ಅತ್ಯುತ್ತಮವಾದ ತಮ್ಮ ಧಾರ್ಮಿಕ ವಿಧಿಗಳೊಡನೆ ಕೇವಲ ಕೊಂಡುತರುವ ದ್ಯೋತಕವೆಂದೆನಿಸುವ ತಾಳಿ ಕಟ್ಟುವ ವಿಧಿಯನ್ನು ಸೇರಿಸಿಕೊಳ್ಳಲು ಇಷ್ಟಪಡದಿದ್ದರೂ ಇಂದು ದಾಕ್ಷಿಣಾತ್ಯ ಬ್ರಾಹ್ಮಣರಲ್ಲಿ ತಾಳಿ ಕಟ್ಟುವ ಸಂಪ್ರದಾಯವು ಸರ್ವಸಾಧಾರಣವಾಗಿದೆ. ಶುಭ ಮುಹೂರ್ತದಲ್ಲಿ ಬ್ರಾಹ್ಮಣರು ಇಂದು ವೈದಿಕ ಹಾಗೂ ತಾಳಿಕಟ್ಟುವ ವಿಧಿಗಳನ್ನು ಕ್ರಮವಾಗಿ ಅನುಸರಿಸಿ, ಮದುವೆಯನ್ನು ನೆರವೇರಿ

ಸುತ್ತಾರೆ. ಉತ್ತರ ಭಾರತದಿಂದ ವಲಸೆ ಬಂದ ಬ್ರಾಹ್ಮಣರು, ಹಿಂದೆ ಅರಬ್ಬಿ ಜನರು ಭಾರತೀಯ ಮಹಿಳೆಯರನ್ನು ಮದುವೆಯೊದಾಗ ಎದುರಿಸಿದ ಸಮಸ್ಯೆಯನ್ನು ಇತ್ಯರ್ಥ ಮಾಡಿಕೊಂಡಂತೆ, ದ್ರಾವಿಡ ಹೆಂಗಸರನ್ನು ಮದುವೆಯಾಗಿ ತಮ್ಮ ವೈವಾಹಿಕ ವಿಧಿಗಳೊಡನೆ ತಾಲಿಕಟ್ಟುವ ಸಂಪ್ರದಾಯವನ್ನು ಸೇರಿಸಿಕೊಂಡು ಪ್ರಸಕ್ತ ಸಮಸ್ಯೆಯನ್ನು ಪರಿಹರಿಸಿಕೊಂಡರು. ಅದೂ ಅಲ್ಲದೆ ಅವರಿಗೆ ಜನಿಸಿದ ಮಕ್ಕಳಿಗೆ ಬ್ರಾಹ್ಮಣರೆಂದು ಆರ್ಯರು ಮನ್ನಣೆಕೊಟ್ಟರು ಪುರಾತನ ಕಾಲದಲ್ಲಿ ಬ್ರಾಹ್ಮಣರಿಗೆ ಆರ್ಯ ಮಹಿಳೆಯರನ್ನೇ ಮದುವೆಯಾಗಿ ದಕ್ಷಿಣಕ್ಕೆ ಕೊಂಡ ತರುವುದು ಕಷ್ಟಸಾಧ್ಯವಾಗಿತ್ತು. ಆದ್ದರಿಂದ ವಿದೇಶಗಳಲ್ಲಿ ಅಪಾರ ಕೀರ್ತಿಗಳಿಂದ ದ್ರಾವಿಡ ಅರಸರ ಕನ್ಯೆಯರನ್ನು ಮದುವೆಯಾಗಲು ಹಿಂಜರಿಯುತ್ತಿರಲಿಲ್ಲ. ಅವರ ಮಕ್ಕಳಿಗೂ ಸಹ ಯೋಗ್ಯ ಪುರಸ್ಕಾರ ಸಿಕ್ಕುತ್ತಿತ್ತು.

ಇಂದು ತೆಲುಗು ಬ್ರಾಹ್ಮಣರು ಅನುಸರಿಸುವ ವಿವಾಹ ವಿಧಿಯು ಮೂರು ಹಂತಗಳಲ್ಲಿವೆ. ಮದುವೆಯ ಶುಭಮುಹೂರ್ತದಲ್ಲಿ ಮೊದಲಿಗೆ ಶಾಸ್ತ್ರೀಯ ವಿಧಿಗಳೊಡನೆ ಹಳದಿ ಬೊಟ್ಟುತಾಲಿ ಹಾಗೂ ನಾಲ್ಕುದಿವಸಗಳ ನಂತರ ಮಣಿ (ಕರೆ)ಗಳಿಂದ ಪೋಣಿಸಲ್ಪಟ್ಟ ಕರೆ ತಾಲಿಯನ್ನು ವಧುವಿನ ಕೊರಳಿಗೆ ಕಟ್ಟುತ್ತಾರೆ. ಕರೆತಾಲಿಯನ್ನು ಕಟ್ಟುವ ಸಂಪ್ರದಾಯವು ಬ್ರಾಹ್ಮಣೇತರ ಜನಾಂಗಗಳಲ್ಲಿ ಕೂಡ ರೂಢಿಯಲ್ಲಿದ್ದು ನಾಗಬಳ್ಳಿ ವ್ರತದ ಸಮಯದಲ್ಲಿ ಪಿತೃಗಳ ಆತ್ಮತೃಪ್ತಿಗಾಗಿ ವಧುವಿನ ಕೊರಳಿಗೆ ಕಟ್ಟಲಾಗುವುದು. ತೆಲುಗು ಪ್ರದೇಶದಲ್ಲಿ ಮೊಟ್ಟ ಮೊದಲು ನೆಲಸಿದ ಬ್ರಾಹ್ಮಣರು ಬ್ರಾಹ್ಮಣೇತರ ಕನ್ಯೆಯರನ್ನು ಮದುವೆಯಾದ ಕಾರಣ ಕರೆತಾಲಿ ಹಾಗೂ ನಾಗಬಲಿಯನ್ನು ತಮ್ಮದಾಗಿಸಿಕೊಂಡರು. ಆದರೆ ಕ್ರಮೇಣ ತೆಲುಗು ಪ್ರದೇಶವು ಚೋಳರ ಪ್ರಾಬಲ್ಯಕ್ಕೆ ಒಳಗಾಗಿದ್ದ ಕಾಲದಲ್ಲಿ ಹಳದಿ ತಾಲಿಯು ಕೂಡ ರೂಢಿಯಲ್ಲಿ ಬಂದಿರಬೇಕು. ನಂತರ ತೆಲುಗು ಹಾಗೂ ತಮಿಳು ಚೋಳ ದೇಶಗಳ ಬ್ರಾಹ್ಮಣರ ನಡುವೆ ಪರಸ್ಪರ ವಿವಾಹಗಳು ಹೇರಳವಾಗಿ ನಡೆದು ಬಂದು ಹಳದಿ ಮತ್ತು ಕರೆತಾಲಿಗಳೆರಡನ್ನು ಬಳಸಿಕೊಂಡು ತಮ್ಮ ವಿವಾದಗಳನ್ನು ಬಗೆಹರಿಸಿಕೊಂಡಂತೆ ಕಾಣುತ್ತದೆ. ಆದರೆ ತಮಿಳು ಚೋಳರು ವಿಜೇತರಾಗಿದ್ದ ಕಾರಣ ಹಳದಿ ತಾಲಿಗೆ ಮೊದಲನೆಯ ಸ್ಥಾನ ಹಾಗೂ ಕ್ರಮೇಣ ಹಿಂದೆ ಸರಿದುಹೋಗುತ್ತಿದ್ದ ಕರೆತಾಲಿ ಕಟ್ಟುವ ವಿಧಿಯನ್ನು ನಾಗಪೂಜೆಯೊಡನೆ ಕೂಡಿಸಿ ಅದಕ್ಕೂ ಯೋಗ್ಯ ಪುರಸ್ಕಾರವನ್ನು ಕೊಟ್ಟರು.

ಇಂದಿನವರೆಗೂ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರ ಪಂಗಡಗಳ ನಡುವೆ ಬೃಹದಾಕಾರವಾಗಿ ಉದ್ಭವಿಸಿರುವ ಭೇದಭಾವಗಳು ಕ್ರಮೇಣ ಕಡಿಮೆಯಾಗಿ ಪರಸ್ಪರ ಹೊಂದಾಣಿಕೆಯು ಬೆಳೆದು ಬರಬೇಕೆಂದು ಆಶಿಸಿದರೆ ತಪ್ಪಾಗಲಾರದು. ಇಲ್ಲಿಯವರೆಗೂ ವಿವರಿಸಿದ ಸಂಪ್ರದಾಯಗಳಲ್ಲಿ ಕಂಡು ಬರುವ ಸಮನ್ವಯತೆಯು ಜಾತಿಧರ್ಮಗಳ ವೈವಿಧ್ಯತೆಯನ್ನು ತೊಡೆದು ಹಾಕಿ ರಾಷ್ಟ್ರೀಯ ಸಂಘಟನೆಗೆ ಆಧಾರಸ್ತಂಭವಾಗಬಲ್ಲದು.

ಆಧಾರ-" The Tali in the Social History of Southern India , in L. A. Cammiade esq. *Mythic Society Quarterly Journal*, 1919-20 Vol X No. 2

ಟಿಪ್ಪಣಿಗಳು

1. ಶ್ರೀನಿವಾಸ್ ಎಮ್. ಎನ್. ಶ್ರೀನಿವಾಸ ಅವರು ತಮ್ಮ " Marriage and Family in Mysore " ಎಂಬ ಗ್ರಂಥದಲ್ಲಿ ಅಭಿಪ್ರಾಯ ಪಟ್ಟಿರುವಂತೆ ಬ್ರಾಹ್ಮಣರಲ್ಲಿ ತಾಲಿಯನ್ನು ವಧುವಿಗೆ ಕಟ್ಟುವುದಕ್ಕೆ ಮೊದಲು ವೇಶ್ಯೆಯ ಪಂಗಡಕ್ಕೆ ಸೇರಿದ ಹೆಣ್ಣುಮಗಳು

ಮತ್ತು ಬ್ರಾಹ್ಮಣೇತರರಲ್ಲಿ ಬಸವಿಯರು ಅಥವಾ ದೇವದಾಸಿಯರು ಪೋಣಿಸಿಕೊಡುತ್ತಾರೆ. ಇದರ ಕಾರಣವಿಷ್ಟೆ. ಮದುವೆಯಾದ ಹೆಣ್ಣು ಮಗಳು ವೈಧವ್ಯ ಪ್ರಾಪ್ತಿಯನ್ನನುಭವಿಸಬೇಕಾದ ಭೀತಿಯಿದೆ. ಆದರೆ ವೇಶ್ಯೆಯರು ನಿತ್ಯಸುಮಂಗಲಿಯರಾಗಿರುವುದರಿಂದ ಅವರು ಶುಭಸೂಚಕವೆಂದು ಹೇಳಿದ್ದಾರೆ. ಆದರೆ ಇತ್ತೀಚಿಗೆ ಈ ಪದ್ಧತಿಯು ವ್ಯವಹಾರದಲ್ಲಿರುವಂತೆ ಕಾಣುವುದಿಲ್ಲ. ಸಾಮಾನ್ಯವಾಗಿ ಹಿರಿಯ ಮುತ್ತೈದೆಯರು ತಾಲಿಯನ್ನು ಪೋಣಿಸುತ್ತಾರೆ. ಸುಮಂಗಲಿಯರು ಅದನ್ನು ಕಳೆದುಕೊಳ್ಳದಂತೆ ಅಥವಾ ಹರಿದು ಹೋಗದಂತೆ ಕಾಪಾಡಿಕೊಳ್ಳುತ್ತಾರೆ. ಅದು ಹರಿದರೆ ಅಮಂಗಲ ಸೂಚನೆ.

2. ತಾಲಿಯು 108 ಸಣ್ಣ ಸಣ್ಣ ಎಳೆಗಳಿಂದ ಸಿದ್ಧವಾಗಿದ್ದು ಗಂಡನ ಆಯುಷ್ಯವನ್ನು ವೃದ್ಧಿಗೊಳಿಸುವ ಸಂಕೇತ. ಮತ್ತು ಹೆಣ್ಣು ಮಕ್ಕಳು ಸುಮಂಗಲಿಯರಾಗಿ ಹೆಚ್ಚು ಕಾಲ ಬಾಳುವರು. ವಧುವಿನ ತಾಯಿಯು ಮತ್ತು ಇತರ ಸುಮಂಗಲಿಯರೂ ಕೂಡ ಆಶೀರ್ವಾದ ರೂಪದಲ್ಲಿ ತಾಲಿಗೆ ಗಂಟನ್ನು ಸೇರಿಸುತ್ತಾರೆ. ತಾಳಿಕಟ್ಟುವುದು ಮಂಗಳಕಾರ್ಯವಾಗಿದ್ದು ಆ ಸಮಯದಲ್ಲಿ ಅಶುಭವಾರ್ತೆಗಳಾಗಲಿ ದುಃಖಕರವಾದ ಸನ್ನಿವೇಶಗಳು ಕೇಳಿಬರಕೂಡದೆಂದು ಮಂಗಳವಾದ್ಯಗಳು ಮೊಳಗುತ್ತವೆ ಮತ್ತು ಮಂತ್ರಘೋಷಗಳನ್ನು ಅನ್ನುತ್ತಾರೆ. ಹೊಸ ಜೀವನವನ್ನು ಆರಂಭಿಸುವ ವಧೂವರರಿಗೆ ತಾಲಿಕಟ್ಟುವ ಸಮಯವು ಚಿರಸ್ಮರಣೀಯವಾಗಿದೆ. ಸ್ಫೂರ್ತಿದಾಯಕವಾಗಲೆಂದು ಕೂಡ ಇಂತಹ ವಾತಾವರಣವನ್ನು ಕಲ್ಪಿಸಲಾಗುತ್ತದೆ.

3. 'ವಧುಶುಲ್ಕ' ಅಥವಾ ವಧುವನ್ನು ಕೊಂಡು ತರುವ ಪದ್ಧತಿಯು ಆರ್ಥಿಕ ದೃಷ್ಟಿಯಿಂದ ಯೋಗ್ಯವೆಂದು ಪರಿಗಣಿಸಲಾಗಿದೆ. ಗ್ರಾಮ ಜೀವನದಲ್ಲಿ ಮದುವೆಯಾಗದ ಹೆಣ್ಣು ಮಕ್ಕಳು ಕೂಡ ದುಡಿದು ತಮ್ಮ ತಾಯಮನೆಯ ಏಳಿಗೆ ಹಾಗೂ ಗ್ರಾಮದ ಆರ್ಥಿಕ ಅಭಿವೃದ್ಧಿಗೂ ಕಾರಣರಾಗುತ್ತಾರೆ. ಅವರು ಮದುವೆಯಾದ ಕೂಡಲೆ ಬೇರೆಯವರ ಮನೆಗೆ ಅಥವಾ ಹಳ್ಳಿಗೆ ಹೋಗಿ ಸೇರುವುದರಿಂದ ತಾಯಮನೆಗೆ ನಷ್ಟವಾಗುವುದು. ಅದನ್ನು ದ್ರವ್ಯರೂಪ ಅಥವಾ ಬಳುವಳಿಯಲ್ಲಿ ತುಂಬಿಕೊಡುವುದು ವರನ ಕಡೆಯವರ ಮುಖ್ಯ ಕರ್ತವ್ಯ. ಆದರೆ ಇದರ ದುರ್ಲಾಭವನ್ನು ಪಡೆದುಕೊಳ್ಳುವ ಜನರು ಕೂಡ ಇದ್ದು ತಮ್ಮ ಮಕ್ಕಳ ವ್ಯಾಪಾರವನ್ನು ಮಾಡಿ ಹೆಣ್ಣುಮಕ್ಕಳನ್ನು ಅತೀವ ವೇದನೆ ಅಥವಾ ತೊಂದರೆಗೆ ಒಳಪಡಿಸುವ ಸನ್ನಿವೇಶಗಳೂ ಇವೆ. ಮುದ್ದಿನ ಆಸೆಗಾಗಿ ಅಲ್ಪವಯಸ್ಸಿನ ಹೆಣ್ಣುಮಕ್ಕಳನ್ನು ವಧುಶುಲ್ಕ ಸ್ವೀಕರಿಸಿ ಮುದುಕರಿಗೆ ಮಾರಿ ಅವರು ಜೀವ ಕಳೆದುಕೊಂಡ ನಿದರ್ಶನಗಳಿವೆ.

4. ಕರ್ನಾಟಕದ ಮಾಡಿಗರಲ್ಲಿ ಎರಡು ತಾಲಿ ಕಟ್ಟುವ ಸಂಪ್ರದಾಯವಿದೆ. ಒಂದನ್ನು ಗಂಡನು ಮತ್ತೊಂದನ್ನು ಸೋದರಮಾವನು ಕಟ್ಟುತ್ತಾರೆ—ಎಂದು M.N. Srinivas ಹೇಳುತ್ತಾರೆ.

5. ಜಾತಿ ಎಂಬ ಪದವು ರೂಢಿಯಲ್ಲಿರುವುದರಿಂದ ಮತ್ತು ಮೂಲಲೇಖನದಲ್ಲಿ caste ಪದವನ್ನು ಉಪಯೋಗಿಸಿರುವುದರಿಂದ ಅದನ್ನೇ ಉಳಿಸಿಕೊಳ್ಳಲಾಗಿದೆ. ಧರ್ಮ ಅಥವಾ ಮತ ಎಂಬ ಪದವು ಹೆಚ್ಚು ಯೋಗ್ಯವಾಗಿ ಕಂಡರೂ ಅವನ್ನು ಬೃಹತ್ ಧರ್ಮಗಳಿಗೆ ಸೀಮಿತಗೊಳಿಸುವುದು ಸಮಂಜಸವೆಂದೆನಿಸುತ್ತದೆ.

6. ಇತ್ತೀಚಿಗೆ ಸುಮಂಗಲಿಯರು ತಮ್ಮ ಕಂಠಹಾರದಲ್ಲಿ ಕರಿಮಣಿಯನ್ನು ಪೋಣಿಸಿ ಕಟ್ಟಿಕೊಳ್ಳುವ ಸಂಪ್ರದಾಯವು ಸರ್ವಸಾಮಾನ್ಯವಾಗಿದೆ. ಹಾಗೂ ಕೆಲವರಲ್ಲಿ ಹವಳದಿಂದ (ಕೆಂಪು) ಮಾಡಿದ ಹಾರವು ಕೂಡ ಬಹುಮಟ್ಟಿಗೆ ರೂಢಿಯಲ್ಲಿ ಬಂದಿದೆ. ಇವುಗಳಲ್ಲಿ ಕೆಲವು ಪ್ರಾಚೀನ ಪದ್ಧತಿಗಳ ಪುನರಾವರ್ತನೆಯೆಂದರೆ ಅತಿಶಯೋಕ್ತಿಯಲ್ಲ.

ಸಿ. ಕೆ. ರೇಣುಕಾರ್ಯ

ಆದಾನ-ವಿದಾನ ವಿಶ್ಲೇಷಣೆ-ಒಂದು ಸರಳ ಮಾದರಿ

ಇತ್ತೀಚಿನ ದಿನಗಳಲ್ಲಿ ಅನ್ವಯಿಕ ಅರ್ಥಶಾಸ್ತ್ರದಲ್ಲಿ (Applied Economics) ಆದಾನ-ವಿದಾನ ವಿಶ್ಲೇಷಣೆ (Input-output Analysis) ಬಹಳ ಮಾನ್ಯತೆಯನ್ನು ಪಡೆದುಕೊಂಡಿದೆ. ನೊಬೆಲ್ ಪ್ರಶಸ್ತಿ ವಿಜೇತ ಲಿಯಾನ್ಟಿಫ್ ಈ ವಿಶ್ಲೇಷಣೆ ಬಹು ಮಟ್ಟಿಗೆ ಬಳಕೆಗೆ ಬರುವಂತೆ ಮಾಡಿರುವವರು. ಈ ಲೇಖನದಲ್ಲಿ ಲಿಯಾನ್ಟಿಫ್‌ರವರ ಆದಾನ-ವಿದಾನ ವಿಶ್ಲೇಷಣ ಕ್ರಮವನ್ನು ಪರಿಚಯಿಸಲು ಯತ್ನಿಸಲಾಗಿದೆ.

ಆದಾನ-ವಿದಾನ ವಿಶ್ಲೇಷಣೆಯ ಅತಿ ಮುಖ್ಯ ಉದ್ದೇಶವೆಂದರೆ ಕೈಗಾರಿಕೆಗಳ ಪಾರಸ್ಪರ ಸಂಬಂಧವನ್ನು (Inter-industry relationship) ವಿಶ್ಲೇಷಿಸುವುದು. ನಾವು ಯಾವುದೇ ಆರ್ಥಿಕತೆ (economy)ಯಲ್ಲಿನ ಉತ್ಪಾದನೆಯನ್ನು ಗಮನಿಸಿದರೂ, ಅದು ಅನೇಕ ಉದ್ಯಮಗಳ ಪಾರಸ್ಪರ ಸಂಬಂಧಗಳಿಂದ ಉಂಟಾಗುತ್ತಿರುವುದು ಕಂಡುಬರುತ್ತದೆ. ಆದ್ದರಿಂದ ಆರ್ಥಿಕತೆಯೇ ನಾನಾ ಉತ್ಪಾದಕ ಕ್ಷೇತ್ರಗಳ (Producing sectors) ಸಮೂಹವೆಂದರೆ ತಪ್ಪಾಗುವುದಿಲ್ಲ. ಪ್ರತಿಯೊಂದು ಕ್ಷೇತ್ರವೂ ಉತ್ಪಾದಿಸುವ ಉತ್ಪಾದನೆಯನ್ನು ಮತ್ತೊಂದು ಕ್ಷೇತ್ರ ತನ್ನ ಆದಾನವಾಗಿ ಬಳಸಬಹುದು/ಅಥವ ಅದು ಅನುಭೋಗಿಗಳ ಬಯಕೆಯನ್ನು ತೃಪ್ತಿಪಡಿಸುವ ಸಿದ್ಧವಸ್ತು (Final good) ವಾಗಬಹುದು. ಉದಾಹರಣೆಗೆ ಕೃಷಿಕ್ಷೇತ್ರದಲ್ಲಿ ನಡೆಯುವ ಉತ್ಪಾದನೆಯಲ್ಲಿ ಸ್ವಲ್ಪ ಭಾಗವನ್ನು ಆಹಾರ ವಸ್ತುವಿನ ಉತ್ಪಾದನೆಗಾಗಿ ಬಳಸಬಹುದು (ಉದಾಹರಣೆಗೆ ಬ್ರೆಡ್ಡಿನ ಉತ್ಪಾದನೆಗಾಗಿ ಗೋಧಿ), ಮತ್ತೆ ಸ್ವಲ್ಪ ಭಾಗವನ್ನು ಹತ್ತಿ ಗಿರಣಿ ಬಳಸಬಹುದು (ಉದಾಹರಣೆಗೆ ಬಟ್ಟೆಯ ಉತ್ಪಾದನೆಗಾಗಿ ಹತ್ತಿಯ ಬೇಡಿಕೆ) ಮತ್ತೆ ಸ್ವಲ್ಪ ಭಾಗವನ್ನು ಅನುಭೋಗಿಗಳೇ ಅನುಭೋಗಕ್ಕಾಗಿ ನೇರವಾಗಿ ಬಳಸಬಹುದು. (ಉದಾಹರಣೆಗೆ ತರಕಾರಿ ಇತ್ಯಾದಿ). ಆದ್ದರಿಂದ ಬ್ರೆಡ್ಡಿನ ಉತ್ಪಾದನೆಗಾಗಿ ಬೇಕಾಗುವ ಗೋಧಿ, ಬಟ್ಟೆಯ ಉತ್ಪಾದನೆಗಾಗಿ ಬೇಕಾಗುವ ಹತ್ತಿ ಇವು ಮಾಧ್ಯಮಿಕ ಉತ್ಪನ್ನಗಳು (Intermediate outputs). ಅನುಭೋಗಿಗಳು ಬೇಕುವ ತರಕಾರಿ ಕೊನೆಯ ಘಟ್ಟದ ಉತ್ಪಾದನೆ (Final output). ಆದಾನ-ವಿದಾನ ವಿಶ್ಲೇಷಣೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ನಡೆಯುವ ಬೇಡಿಕೆಯ ಪರಸ್ಪರ ಸಂಬಂಧಗಳನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತದೆ. ಇದು ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ವಿವಿಧ ಕ್ಷೇತ್ರಗಳ ಸಂಬಂಧವನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ತುಂಬಾ ಮುಖ್ಯ.

ಪ್ರೊಫೆಸರ್ ಲಿಯಾನ್ಟಿಫ್‌ರವರ ಆದಾನ-ವಿದಾನ ವಿಶ್ಲೇಷಣೆ ಅದರ ಸ್ಥಿರ ವಿಶ್ಲೇಷಣ ಸ್ವರೂಪದಲ್ಲಿ (Static version) ಒಂದು ಮುಖ್ಯವಾದ ಪ್ರಶ್ನೆಯನ್ನು ಉತ್ತರಿಸಲು ಯತ್ನಿಸುತ್ತದೆ. ಈ ಪ್ರಶ್ನೆಯೆಂದರೆ, ಆರ್ಥಿಕತೆಯಲ್ಲಿ ಒಂದು ವಸ್ತುವಿನ ಇಡೀ ಬೇಡಿಕೆಯನ್ನು

ಪೂರೈಸಲು ಎಷ್ಟು ಪ್ರಮಾಣದ ಉತ್ಪಾದನೆಯನ್ನು ಪ್ರತಿಯೊಂದು ಕ್ಷೇತ್ರವೂ ಉತ್ಪಾದಿಸಬೇಕು? ಎನ್ನುವುದು. ಈ ಪ್ರಶ್ನೆ ಆರ್ಥಿಕತೆಯ ದೃಷ್ಟಿಯಿಂದ ಎಷ್ಟು ಮಹತ್ವವಾದುದು ಎಂಬುದನ್ನು ನಾವು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈಗ ಈ ಪ್ರಶ್ನೆಗೆ ಉತ್ತರವನ್ನು ನೋಡೋಣ.

ನಾವು ಮೇಲೆ ವಿವರಿಸಿದಂತೆ, ಯಾವುದೇ ಒಂದು ಕ್ಷೇತ್ರದ ಉತ್ಪಾದನೆಯನ್ನು, ಅದೇ ಕ್ಷೇತ್ರವಲ್ಲದೆ, ಆರ್ಥಿಕತೆಯ ಇತರ ಕ್ಷೇತ್ರಗಳೂ ಬೇಡುತ್ತಿರುತ್ತವೆ. ಆದ್ದರಿಂದ ಒಂದು ವಸ್ತುವಿನ ಇಡೀ ಬೇಡಿಕೆಯನ್ನು ನಾವು ಲೆಕ್ಕ ಹಾಕುವಾಗ, ಇದರ ಬೇಡಿಕೆ ನಡೆಯುವ ಎಲ್ಲ ಉದ್ಯಮಗಳನ್ನೂ ಗಮನಿಸಬೇಕಾಗುತ್ತದೆ. ಅಂದರೆ ಎಲ್ಲ ಕೈಗಾರಿಕೆಗಳ ಪರಸ್ಪರ ಅವಲಂಬನೆಯನ್ನು ಸಂಪೂರ್ಣವಾಗಿ ಲೆಕ್ಕ ಮಾಡಬೇಕಾಗುತ್ತದೆ. ಈ ರೀತಿಯ ಲೆಕ್ಕಾಚಾರಕ್ಕೆ ಅನುಕೂಲವಾಗುವಂತೆ 3 ಕಲ್ಪನೆಗಳನ್ನು ಮಾಡಿಕೊಳ್ಳೋಣ:

1. ಆರ್ಥಿಕತೆಯಲ್ಲಿ ಪ್ರತಿಯೊಂದು ಕೈಗಾರಿಕೆಯೂ ಒಂದೇ ಸ್ವರೂಪದ (homogeneous) ಒಂದು ವಸ್ತುವನ್ನು ಉತ್ಪಾದಿಸುತ್ತದೆ.

2. ಪ್ರತಿಯೊಂದು ಕೈಗಾರಿಕೆಯೂ ಬದಲಾಗದ ಒಂದು ಆದಾನ ಅನುಪಾತವನ್ನು (fixed input ratio) ತನ್ನ ಉತ್ಪಾದನೆಗೆ ಬಳಸುತ್ತದೆ.

3. ಪ್ರತಿಯೊಂದು ಕೈಗಾರಿಕೆಯಲ್ಲಿಯೂ ಸ್ಥಿರ ಪ್ರತಿಫಲ ನಿಯಮದನ್ವಯ (constant scales to return) ಉತ್ಪಾದನೆ ನಡೆಯುತ್ತದೆ.

ಅಂದರೆ, ಆದಾನ ಪ್ರಮಾಣವನ್ನು ‘k’ ಪ್ರಮಾಣದಷ್ಟು ಬದಲಿಸಿದರೆ ಉತ್ಪಾದನೆಯೂ ‘k’ ಪ್ರಮಾಣದಷ್ಟು ಬದಲಾಗುತ್ತದೆ.

ಈ ಮೇಲಿನ ಕಲ್ಪನೆಗಳು ಅವಾಸ್ತವವಾದುವು ಎನ್ನುವುದು ನಿಜ. ಈ ಕಲ್ಪನೆಗಳನ್ನು ಸಂಪೂರ್ಣವಾಗಿ ಸಡಿಲಿಸಿ ಸಹ ಆದಾನ-ಪ್ರದಾನ ವಿಶ್ಲೇಷಣೆಯನ್ನು ಸಿದ್ಧಾಂತಿಸಬಹುದು. ಆದರೆ, ಪ್ರಾರಂಭಿಕವಾದ ಮತ್ತು ಸರಳವಾದ ವಿಶ್ಲೇಷಣೆಗೆ ಈ ಕಲ್ಪನೆಗಳು ತುಂಬಾ ಸಹಾಯಕ. ಆದ್ದರಿಂದ ಈ ಕಲ್ಪನೆಗಳೊಡನೆ ಮುಂದುವರಿಯೋಣ.

ಈ ಕಲ್ಪನೆಗಳಿಂದ ಸ್ಪಷ್ಟವಾಗುವ ಅಂಶವೆಂದರೆ, ‘j’ ವಸ್ತುವಿನ ಪ್ರತಿಯೊಂದು ಘಟಕವನ್ನು ಉತ್ಪಾದಿಸಲು, ‘j’ ವಸ್ತುವಿನ ಉತ್ಪಾದನೆಗೆ ಬೇಕಾಗುವ ಆದಾನ ಒಂದು ಸ್ಥಿರ ಪ್ರಮಾಣವಾಗಿರಬೇಕು. ಈ ಸಂಬಂಧವನ್ನು ನಾವು a_{1j} ಎಂದು ಕರೆಯೋಣ.

ಇನ್ನೂ ನಿರ್ದಿಷ್ಟವಾಗಿ ಹೇಳಬೇಕಾದರೆ j ವಸ್ತುವಿನ ಒಂದು ಘಟಕವನ್ನು ಉತ್ಪಾದಿಸಲು, a_{1j} ಪ್ರಮಾಣದ ಮೊದಲನೆ ವಸ್ತು a_{2j} ಪ್ರಮಾಣದ ಎರಡನೇ ವಸ್ತು, a_{3j} ಪ್ರಮಾಣದ ಮೂರನೆ ವಸ್ತು ಮೊದಲಾಗಿ a_{nj} ಪ್ರಮಾಣದ n ವಸ್ತು ಬೇಕಾಗುತ್ತದೆ ಎಂದಿಟ್ಟುಕೊಳ್ಳೋಣ. a_{1j}, a_{2j} ಮುಂತಾದುವನ್ನು ಇನ್ನೂ ಸರಳವಾಗಿ ವಿವರಿಸುವುದಾದರೆ, ಮೊದಲನೆಯ ಕೆಳ ಅಂಕಿತ (subscript) ಆದಾನವನ್ನೂ, ಎರಡನೆಯ ಕೆಳ ಅಂಕಿತ ಪ್ರದಾನವನ್ನೂ ವ್ಯಕ್ತಪಡಿಸುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಉದಾಹರಣೆಗೆ a_{1j} ಎನ್ನುವುದು ಒಂದು ಘಟಕ ‘j’ ವಸ್ತುವಿನ ಉತ್ಪಾದನೆಗೆ ಎಷ್ಟು ಪ್ರಮಾಣದ j ಯನ್ನು ಉಪಯೋಗಿಸಲಾಗುತ್ತದೆ ಎಂಬುದನ್ನು ವ್ಯಕ್ತಪಡಿಸುತ್ತದೆ. ಸರಕುಗಳ ಬೆಲೆಗಳನ್ನು ಕೊಡಲಾಗಿದೆ ಮತ್ತು ಪ್ರತಿಯೊಂದು ಘಟಕದ ವಸ್ತುವನ್ನು ಅದರ ರೂಪಾಯಿ ಬೆಲೆಯಲ್ಲಿ ಅಳೆಯಲಾಗುತ್ತದೆ ಎಂದು ಭಾವಿಸೋಣ. ಆಗ $a_{52} = 0.50$ ಎಂದು ಬರೆದರೆ, ಅದರ ಅರ್ಥ, 50 ಪೈಸೆಯಷ್ಟು 5ನೇ ಸರಕು, ಒಂದು ರೂಪಾಯಿ ಬೆಲೆಬಾಳುವ 2ನೇ ವಸ್ತುವಿನ ಉತ್ಪಾದನೆ ಅಗತ್ಯ ಎಂದರ್ಥ. a_{1j} ಅಂಕಿತವನ್ನು ಆದಾನ ಗುಣಾಂಕ (input coefficient) ಎಂದು ಹೇಳಲಾಗುತ್ತದೆ.

ಆರ್ಥಿಕತೆಯಲ್ಲಿ 'n' ಕೈಗಾರಿಕೆಗಳಿವೆ ಎಂದು ಭಾವಿಸೋಣ. ಈ ಕೈಗಾರಿಕೆಗಳ ಅದಾನ ಗುಣಾಂಕಗಳನ್ನು ಮಾತೃಕೆಯ (matrix) ರೂಪದಲ್ಲಿ ಜೋಡಿಸಬಹುದು. ಈ ಮಾತೃಕೆ $A = (a_{ij})$ ಸ್ವರೂಪದ್ದಾಗಿರುತ್ತದೆ. ಕೆಳಗೆ ಈ ಮಾತೃಕೆಯನ್ನು ವ್ಯಕ್ತಪಡಿಸಲಾಗಿದೆ.

ವಿದಾನ

ಅದಾನ	I	II	III	....	N
I	a_{11}	a_{12}	a_{13}	....	a_{1n}
II	a_{21}	a_{22}	a_{23}	....	a_{2n}
A = III	a_{31}	a_{32}	a_{33}	....	a_{3n}
⋮	⋮	⋮	⋮		⋮
N	a_{n1}	a_{n2}	a_{n3}		a_{nn}

ಈ ಮಾತೃಕೆಯಲ್ಲಿ ಪ್ರತಿಯೊಂದು ನೀಟ ಸಾಲು (colounin), ಒಂದು ನಿರ್ದಿಷ್ಟ ಕೈಗಾರಿಕೆಯ ಒಂದು ಘಟಕ ಉತ್ಪಾದನೆಗೆ ಅವಶ್ಯವಾಗುವ ಆದಾನ ಅಗತ್ಯವನ್ನು ವ್ಯಕ್ತಪಡಿಸುತ್ತದೆ. ಉದಾಹರಣೆಗೆ 2ನೆಯ ನೀಟ ಸಾಲನ್ನು ಗಮನಿಸಿ. ಇದು ಒಂದು ಘಟಕದಷ್ಟು II ನೇ ವಸ್ತುವನ್ನು ಉತ್ಪಾದಿಸಲು, a_{12} ಪ್ರಮಾಣದಷ್ಟು I ನೇ ವಸ್ತು, a_{22} ಪ್ರಮಾಣದಷ್ಟು IIನೇ ವಸ್ತು, a_{32} ಪ್ರಮಾಣದಷ್ಟು IIIನೇ ವಸ್ತು ಇತ್ಯಾದಿ ಬೇಕೆಂದು ತಿಳಿಸುತ್ತದೆ. ಯಾವುದೇ ಕೈಗಾರಿಕೆ ತನ್ನದೇ ಉತ್ಪಾದನೆಯನ್ನು ಅದಾನವಾಗಿ ಬಳಸದಿದ್ದರೆ ಮೇಲಿನ ಮಾತೃಕೆಯ ಪ್ರಧಾನ ಕರ್ಣರೇಖೆಯ ಮೇಲಿನ ಧಾತುಗಳು (elemenis in the principal diagonal) ಸೊನ್ನೆಯಾಗಿರುತ್ತವೆ.

ಆರ್ಥಿಕತೆಯಲ್ಲಿ, ಈ 'n' ಕೈಗಾರಿಕೆಗಳು ಉತ್ಪಾದಿಸದ ಆದಾನ ಒಂದರ ಅಗತ್ಯವೂ (ಉದಾಹರಣೆಗೆ ಶ್ರಮ) ಕೈಗಾರಿಕೆಗಳಿಗೆ ಅಗತ್ಯವಾಗಿರುತ್ತದೆ ಎನ್ನುವುದು ನಿರ್ವಿವಾದ. ಕುಟುಂಬ ಘಟಕಗಳು ಕೊನೆಯ ಉತ್ಪಾದನೆಯ ಬೇಡಿಕೆಯನ್ನು ನಿರ್ಧರಿಸುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತವೆ ಮತ್ತು ಕುಟುಂಬ ಘಟಕಗಳಿಂದ ಶ್ರಮ ಅದಾನವಾಗಿ ಕೈಗಾರಿಕೆಯನ್ನು ಸೇರುತ್ತದೆ. ಆದ್ದರಿಂದ ಕುಟುಂಬ ಘಟಕ ಕ್ಷೇತ್ರ, ಆದಾನ–ವಿದಾನ ವಿಶ್ಲೇಷಣೆಯಲ್ಲಿ ಬಹಿರಂಗ ಕ್ಷೇತ್ರ (open sector) ಎಂದು ಪರಿಗಣಿತವಾಗುತ್ತದೆ. ಏಕೆಂದರೆ ಇದು ಒಂದು ಕೈಗಾರಿಕೆಯಾಗುವುದಿಲ್ಲ, ಆದರೆ ಇದು ನೀಡಿಕೆ ಮಾಡುವ ಶ್ರಮ ಅದಾನ, ಕೈಗಾರಿಕೆಗಳಿಗೆ ಮುಖ್ಯವಾಗುತ್ತದೆ.

ಬಹಿರಂಗ ಕ್ಷೇತ್ರವನ್ನು ನಾವು ಕೈಗಾರಿಕೆಗಳ ಪರಸ್ಪರ ಸಂಬಂಧದಲ್ಲಿ ಗಣನೆಗೆ ತೆಗೆದುಕೊಂಡರೆ, ಮಾತೃಕೆ 'A'ಯ, ಪ್ರತಿಯೊಂದು ನೀಟ ಸಾಲಿನ ಪ್ರತಿಯೊಂದು ಧಾತು (element)ವೂ 1 ಕ್ಕಿಂತ ಕಡಿಮೆ ಇರಬೇಕಾಗುತ್ತದೆ. ಈ ಸಂದರ್ಭದಲ್ಲಿ ಪ್ರತಿಯೊಂದು ನೀಟ ಸಾಲಿನ ಮೊತ್ತವೂ ಆದಾನ ವೆಚ್ಚದ (input cost) ಭಾಗಶಃ ವಿವರಣೆಯಾಗುತ್ತದೆ ಅಷ್ಟೆ. ಏಕೆಂದರೆ ನಾವು ಆದಾನ ವೆಚ್ಚದ ಸಂಪೂರ್ಣ ವೆಚ್ಚವನ್ನು ಗ್ರಹಿಸಬೇಕಾದರೆ, ಶ್ರಮ ಆದಾನ ವೆಚ್ಚವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಗಣಿತೋಕ್ತಿಯಲ್ಲಿ ಹೇಳುವುದಾದರೆ

$$\sum_{j=1}^{n} a_{1j} < (j = 1, 2 \ldots n)$$

ನಾವು ಮೇಲಿನ ವಿವರಣೆಯ ಮತ್ತೊಂದು ಮುಖವನ್ನು ಗ್ರಹಿಸುವುದಾದರೆ, ಒಟ್ಟು ಉತ್ಪನ್ನದ ಮೌಲ್ಯ (ರೂ. 1) ಉತ್ಪಾದನಾಂಗಗಳಿಗೆ ಸಂದಾಯವಾಗುವ ಆದಾಯಗಳೆಲ್ಲದರ ಮೊತ್ತವಾಗಬೇಕಾಗಿರುವುದರಿಂದ, ನೀಟಸಾಲಿನ ಮೊತ್ತ 1 ಕ್ಕಿಂತ ಎಷ್ಟು ಕಡಿಮೆಯಾಗುವುದೋ, ಅದು ಶ್ರಮ ಆದಾನದ ಮೌಲ್ಯವನ್ನು ವ್ಯಕ್ತಪಡಿಸಬೇಕು! ಆದ್ದರಿಂದ ಶ್ರಮ ಆದಾನದ ವೆಚ್ಚವನ್ನು ಸಹ ನಾವು ಸುಲಭವಾಗಿ ಕಂಡುಹಿಡಿಯಬಹುದೆಂದಾಯಿತು. ಈ ವಿವರಣೆಯ ಪ್ರಕಾರ, ಒಂದು ಘಟಕದಷ್ಟು *J* ವಸ್ತುವನ್ನು ಉತ್ಪಾದಿಸಲು ಅಗತ್ಯವಾಗುವ ಶ್ರಮ ಆದಾನದ ಮೌಲ್ಯ

$$1-\sum_{j=1}^{n} a_{1}j$$ ಗೆ ಸಮನಾಗಿರಬೇಕು.

ಈಗ ನಾವು ಕೈಗಾರಿಕೆಗಳ ಪರಸ್ಪರ ಸಂಬಂಧವನ್ನು ವಿವರಿಸಲು ಸಿದ್ಧರಾಗಿದ್ದೇವೆ. ಕೈಗಾರಿಕೆ I, 'n ಕೈಗಾರಿಕೆಗಳು ಮತ್ತು ಬಹಿರಂಗ ಕ್ಷೇತ್ರದ ಬೇಡಿಕೆಯನ್ನು ಪೂರೈಸಲು, ಅದರ x_1 ಉತ್ಪಾದನೆ ಕೆಳಗಿನ ಸಮೀಕರಣವನ್ನು ತೃಪ್ತಿಪಡಿಸಬೇಕು.

$$x_1 = a_{11}x_1 + a_{12}x_2 + \ldots\ldots + a_1n\,x_n + d_1$$

ಅಥವಾ $$(1-a_{11})x_1 - a_{12}x_2 - \ldots\ldots - a_1n\,x_n = d_1$$

ಈ ಸಮೀಕರಣದಲ್ಲಿ d_1 ಕೈಗಾರಿಕೆ I ರ ಕೊನೆಯ ಬೇಡಿಕೆಗಾಗಿ ನಡೆಸಬೇಕಾದ ಉತ್ಪಾದನ ಪ್ರಮಾಣವನ್ನು ವ್ಯಕ್ತಪಡಿಸುತ್ತದೆ $a_1j\ xj$, j ಕೈಗಾರಿಕೆಯ ಆದಾನ ಅಗತ್ಯವನ್ನು ವಿವರಿಸುತ್ತದೆ. ಇದೇ ವಿವರಣೆಯನ್ನು ಬಳಸುತ್ತಾ, ಅರ್ಥಿಕತೆಯ, ಎಲ್ಲ 'n' ಕೈಗಾರಿಕೆಗಳ ಅತ್ಯಂತ ಸಮರ್ಪಕವಾದ ಉತ್ಪಾದನ ಮಟ್ಟವನ್ನು ಕೆಳಗಿನ 'n' ಸರಳರೇಖೆ ಬಿಂಬಕ ಸಮೀಕರಣದಿಂದ (linear equations) ವ್ಯಕ್ತಪಡಿಸಬಹುದು :

$$\begin{aligned}
(1-a_{11})x_1 - a_{12}x_2 - \ldots\ldots\ldots\ldots - a_1n\,x_n &= d_1\\
-a_{21}x_1 + (1-a_{22})x_2 - \ldots\ldots\ldots\ldots - a_2n\,x_n &= d_2\\
\ldots\ldots\ldots\ldots\ldots\ldots\ldots\ldots\ldots\ldots\ldots\ldots &\\
-an_1\,x_1 - an_2\,x_2 - \ldots\ldots\ldots + (1-ann)\,x_n &= dn
\end{aligned}$$

ಈ ಸಮೀಕರಣಗಳನ್ನು ಮಾತೃಕೆ ರೂಪದಲ್ಲಿ ಬರೆಯುವುದಾದರೆ.

$$\begin{bmatrix}
(1-a_{11}) & -a_{12} & \cdots & -a_1n\\
-a_{21} & (1-a_{22}) & \cdots & -a_2n\\
\vdots & & & \\
-an_1 & -an_2 & \cdots & (1-ann)
\end{bmatrix}
\begin{bmatrix} x_1\\ x_2\\ \vdots\\ x_n \end{bmatrix}
=
\begin{bmatrix} d_1\\ d_2\\ \vdots\\ d_n \end{bmatrix}$$

ಪ್ರಧಾನ ಕರ್ಣರೇಖೆಯ ಮೇಲಿನ ಧಾತುಗಳಲ್ಲಿನ 1ನ್ನು ಅಲಕ್ಷಿಸಿದರೆ, ಈ ಮಾತೃಕೆ $-A = (-ai_j)$ ಆಗುತ್ತದೆ. ಅಥವಾ ಮೇಲಿನ ಮಾತೃಕೆ $(1-A)\quad x=d$, ಸಹ ಆಗುತ್ತದೆ. ಇದರಲ್ಲಿ x ಮತ್ತು d ಕ್ರಮವಾಗಿ ಚರ ನೀಟಸಾಲಿನ ಸದಿಶ (variable vector) ಮತ್ತು ಸ್ಥಿರಾಂಕ ನೀಟಸಾಲಿನ ಸದಿಶ (constant from vector) ಗಳಾಗಿವೆ

ಮೇಲಿನ ಮಾತೃಕೆ ವಿಪರ್ಯ ಮಾತೃಕೆ (inverse matrix) ಉಳ್ಳದ್ದಾದರೆ, ಅದಕ್ಕೆ ಉತ್ತರವನ್ನು ಕಂಡುಹಿಡಿಯುವುದು ಕಷ್ಟವಲ್ಲವಷ್ಟೆ. ಆದ್ದರಿಂದ ಇದರ ಉತ್ತರ

$\bar{x} = (I-A)^{-1}\, d$ ರೂಪದಲ್ಲಿ ವ್ಯಕ್ತವಾಗುತ್ತದೆ ಎನ್ನುವುದು ಸ್ಪಷ್ಟ.

ಸಂಖ್ಯೆಗಳನ್ನು ಬಳಸಿರುವ ಒಂದು ಉದಾಹರಣೆ: ಒಂದು ಅರ್ಥಿಕತೆಯಲ್ಲಿ ಕೇವಲ 3 ಕೈಗಾರಿಕೆಗಳಿವೆ ಎಂದು ಭಾವಿಸೋಣ. ಅವುಗಳ ಆದಾನ–ಗುಣಾಂಕ ಕೆಳಗಿನ ಮಾತೃಕೆಯಲ್ಲಿ ತೋರಿಸಿರುವಂತಿದೆ ಎಂದು ಭಾವಿಸೋಣ.[1]

$$A = \begin{bmatrix} a_{11} & a_{12} & a_{13} \\ a_{21} & a_{22} & a_{23} \\ a_{31} & a_{32} & a_{33} \end{bmatrix} = \begin{bmatrix} 0.2 & 0.3 & 0.2 \\ 0.4 & 0.1 & 0.2 \\ 0.1 & 0.3 & 0.2 \end{bmatrix}$$

ಹೀಗಿದ್ದರೆ, ನಮ್ಮ ಹಿಂದಿನ ವಿವರಣೆಯನ್ನು ಬಳಸಿಕೊಂಡು ಈ ಕೈಗಾರಿಕೆಗಳ ಪರಸ್ಪರ ಆದಾನ–ವಿದಾನ ಸಂಬಂಧವನ್ನು ಕೆಳಗಿನಂತೆ ಬರೆಯಬಹುದು.

$$\begin{bmatrix} 0.8 & -0.3 & -0.2 \\ -0.4 & 0.9 & -0.2 \\ -0.1 & -0.3 & 0.8 \end{bmatrix} \begin{bmatrix} x_1 \\ x_2 \\ x_3 \end{bmatrix} = \begin{bmatrix} d_1 \\ d_2 \\ d_3 \end{bmatrix}$$

ಮೇಲಿನ 3×3 ಮಾತೃಕೆಯ ವಿಪರ್ಯವನ್ನು [Inverse] ಕಂಡುಹಿಡಿದರೆ ಕೆಳಗಿನ ಉತ್ತರ ಬರುತ್ತದೆ.

$$\begin{bmatrix} \bar{x}_1 \\ \bar{x}_2 \\ \bar{x}_3 \end{bmatrix} = (I-A)^{-1} d = \frac{1}{0.384} \begin{bmatrix} 0.66 & 0.30 & 0.24 \\ 0.34 & 0.62 & 0.24 \\ 0.21 & 0.27 & 0.60 \end{bmatrix} = \begin{bmatrix} d_1 \\ d_3 \\ d_2 \end{bmatrix}$$

ಈಗ ಅರ್ಥಿಕತೆಯಲ್ಲಿ, x_1, x_2, x_3ಗಳ ಉತ್ಪಾದನೆಯನ್ನು, $\begin{bmatrix} 10 \\ 5 \\ 6 \end{bmatrix}$ ಕೋಟಿ ರೂಗಳಷ್ಟು ಉತ್ಪಾದಿಸಬೇಕೆಂದು ಯೋಚಿಸಲಾಗಿದೆ ಎಂದು ಭಾವಿಸೋಣ. ಆಗ x_1, x_2, x_3 ಗಳನ್ನು ನಿರ್ದಿಷ್ಟವಾಗಿ ಎಷ್ಟು ಉತ್ಪಾದಿಸಬೇಕಾಗುತ್ತದೆಂದರೆ :

$$\bar{x}_1 = \frac{1}{0.384} \left[0.66\,(10) + 0.30\,(5) + 0.24\,(6) \right]$$

$$= \frac{9.54}{0.384} = 24.84$$

ಹಾಗೆಯೇ, $\bar{x}_2 = \dfrac{7.94}{0.384} = 20.68$, $\bar{x}_3 = \dfrac{7.05}{0.384} = 18.36$

ಅಂದರೆ, ಅರ್ಥಿಕತೆ 10 ಕೋಟಿ, 5 ಕೋಟಿ ಮತ್ತು 6 ಕೋಟಿ ರೂಗಳ x_1, x_2, x_3 ವಸ್ತುಗಳನ್ನು ಉತ್ಪಾದಿಸುವ ಯೋಜನೆ ಹಾಕಿಕೊಂಡರೆ, ಅರ್ಥಿಕತೆಯು x_1, x_2, x_3ಗಳ

---

1. ಈ ಉದಾಹರಣೆಯನ್ನು : A. C. Chiang, Fundamental methods of Mathematical Economics ' ನಿಂದ ತೆಗೆದುಕೊಳ್ಳಲಾಗಿದೆ.

ಒಟ್ಟು ಬೇಡಿಕೆಯನ್ನು ಕರಾರುವಾಕ್ಕಾಗಿ ಪೂರೈಸಲು 24.84 ಕೋಟಿ ರೂಗಳ x_1, 20.68 ಕೋಟಿ ರೂಗಳ x_2, ಮತ್ತು 18.36 ಕೋಟಿ ರೂಗಳ x_3 ಯನ್ನು ಉತ್ಪಾದಿಸಬೇಕು.

ಈಗ ಪ್ರಾರಂಭಿಕ ಆದಾನ [Primary input] ಎಷ್ಟು ಅಗತ್ಯವಿದೆ ಎನ್ನುವುದನ್ನು ಸಹ ಕಂಡುಹಿಡಿಯುವುದು ಸುಲಭ.

$$\sum_{j=1}^{3} aoj\ \overline{xj} = 0.3\,(24.84) + 0.3\,(20.68)$$

$$+ 0.4\,(18.36) = 21.00$$

ಅಂದರೆ 21.00 ಕೋಟಿ ರೂಗಳಷ್ಟು ಪ್ರಾಥಮಿಕ ಆದಾನ ಲಭ್ಯವಿದ್ದರೆ ಮಾತ್ರ, ಆರ್ಥಿಕತೆ, 10, 5, 6 ಕೋಟಿ ರೂಗಳ x_1, x_2, x_3 ಉತ್ಪಾದನೆಯನ್ನು ಯೋಜಿಸಬಹುದು ಅಷ್ಟೆ.

ಮೇಲಿನ ವಿಶ್ಲೇಷಣೆಯ ಸೂಕ್ಷ್ಮ ವಿಚಾರವೆಂದರೆ, ಆದಾನ–ಗುಣಾಂಕಗಳು ಒಂದೇ ಆಗಿರುವವರೆಗೂ $(I-A)^{-1}$ ಬದಲಾಗುವುದಿಲ್ಲ. ಆದ್ದರಿಂದ ಆರ್ಥಿಕತೆ ತನಗೆ ಇಷ್ಟಬರುವ ಪ್ರಮಾಣದ ಉತ್ಪಾದನೆಗೆ ಅಗತ್ಯವಾದ, ಒಟ್ಟು ಉತ್ಪಾದನೆಯನ್ನು ಬಹಳ ಸರಳವಾಗಿ ಲೆಕ್ಕ ಹಾಕುತ್ತಾ ಹೋಗಬಹುದು.

ಮೇಲೆ ನಾವು ಕೇವಲ 3 ಕೈಗಾರಿಕೆಗಳಿಗೆ ಸಂಬಂಧಿಸಿದ, ಕೈಗಾರಿಕೆಗಳ ಆದಾನ–ವಿದಾನ ಸಂಬಂಧವನ್ನು ವಿವರಿಸಿದ್ದರೂ, ಅನೇಕ ಕೈಗಾರಿಕೆಗಳಿಗೆ ಈ ವಿಶ್ಲೇಷಣೆಯನ್ನು ವಿಸ್ತರಿಸುವುದಾಗಲೀ, ಲೆಕ್ಕ ಹಾಕುವುದಾಗಲೀ ಕಷ್ಟವಲ್ಲ. ಗಣಕ ಯಂತ್ರಗಳು (Computers) ಅನೇಕ ಕಾರ್ಖಾನೆಗಳ ಪರಸ್ಪರ ಆದಾನ–ವಿದಾನ ಸಂಬಂಧವನ್ನು ಕ್ಷಣಾರ್ಧದಲ್ಲಿ ಲೆಕ್ಕ ಮಾಡುವ ಶಕ್ತಿಯನ್ನು ಪಡೆದಿವೆ.

ಆದಾನ–ವಿದಾನ ವಿಶ್ಲೇಷಣೆಯ ಪ್ರಾಮುಖ್ಯ: ಆದಾನ–ವಿದಾನ ವಿಶ್ಲೇಷಣೆ ಇಂದು ಆರ್ಥಿಕ ಯೋಜನೆಯ ಅವಿಭಾಜ್ಯ ಅಂಗವಾಗಿದೆ. ರಾಷ್ಟ್ರೀಯ ಅರ್ಥವ್ಯವಸ್ಥೆಯ ವಿವಿಧ ಕ್ಷೇತ್ರಗಳ ಪರಸ್ಪರ ಸಂಬಂಧಗಳನ್ನು ಅರಿಯುವ ದೃಷ್ಟಿಯಿಂದ ಈ ವಿಶ್ಲೇಷಣೆ ತುಂಬಾ ಉಪಯುಕ್ತ. ಇಷ್ಟೇ ಅಲ್ಲದೆ, ಆರ್ಥಿಕ ಚಟುವಟಿಕೆಗಳನ್ನು ಸಮಗ್ರತೆಯಿಂದ ನೋಡುವ ಉದ್ದೇಶಕ್ಕೆ ಇಂತಹ ವಿಶ್ಲೇಷಣೆ ಬಹಳ ಸಹಾಯಕ. ಉದಾಹರಣೆಗೆ, ಆರ್ಥಿಕತೆಯ ಸಮಗ್ರ ಅನುಭೋಗ, ಸಮಗ್ರ ಹೂಡಿಕೆ ಮತ್ತು ಸರ್ಕಾರದ ಒಟ್ಟು ವೆಚ್ಚಗಳನ್ನು ವಿಶ್ಲೇಷಿಸಬೇಕಾದರೆ, ಆದಾನ–ವಿದಾನ ವಿಶ್ಲೇಷಣೆ ಬಹಳ ಉಪಯುಕ್ತವಾಗುತ್ತದೆ. ಆದ್ದರಿಂದ, ಯೋಜನೆಗಳನ್ನು ರೂಪಿಸುವಾಗ ಈ ವಿಶ್ಲೇಷಣೆಯನ್ನು ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಪ್ರತಿಯೊಂದು ಕೈಗಾರಿಕೆಯಲ್ಲೂ ಆದಾನ ಗುಣಾಂಕ ತಿಳಿದೇ ಇರುವುದರಿಂದ, ಕೈಗಾರಿಕೆಗಳ, ಪರಸ್ಪರ ಸಂಬಂಧವನ್ನು, ಆದಾನ–ವಿದಾನ ವಿಶ್ಲೇಷಣೆಯ ಮೂಲಕ ಲೆಕ್ಕ ಹಾಕುವುದು ಕಷ್ಟವಾಗುವುದಿಲ್ಲ. ಆದರೆ ಆದಾನ–ವಿದಾನ ವಿಶ್ಲೇಷಣೆಗಿರುವ ಮಿತಿಯನ್ನು ಸಹ ನಾವು ಮರೆಯಬಾರದು ಒಂದು ನಿರ್ದಿಷ್ಟ ಅವಧಿಯಲ್ಲಿನ ಆದಾನ–ವಿದಾನ ಸಂಬಂಧವನ್ನು ಇಂತಹ ವಿಶ್ಲೇಷಣೆ ಕೈಗೊಳ್ಳುತ್ತದೆ ಆದ್ದರಿಂದ, ಕ್ರಿಯಾತ್ಮಕವಾಗಿರುವ (dynamic) ಆರ್ಥಿಕ ಪರಿಸ್ಥಿತಿಗಳಲ್ಲಿ, ಪ್ರತಿಯೊಂದು ಆರ್ಥಿಕ ಚಟುವಟಿಕೆಯೂ ಬದಲಾಗುತ್ತಿರುವುದರಿಂದ, ಆದಾನ–ವಿದಾನ ವಿಶ್ಲೇಷಣೆ ಸಂಪೂರ್ಣವಾಗಿ, ಕೈಗಾರಿಕೆಗಳ ಪರಸ್ಪರ ಸಂಬಂಧವನ್ನು ವಿಶ್ಲೇಷಿಸುವುದಕ್ಕೆ ಶಕ್ತವಾಗುವುದಿಲ್ಲ. ಆದರೆ ಈ ಮಿತಿ ಆದಾನ–ವಿದಾನ ವಿಶ್ಲೇಷಣೆಯ ಮಹತ್ವವನ್ನು ಕುಗ್ಗಿಸುವುದಿಲ್ಲ ಎನ್ನುವುದನ್ನು ಮರೆಯಬಾರದು.

ಬಿ. ಕುಪ್ಪುಸ್ವಾಮಿ

ಯೋಗವಾಸಿಷ್ಠದ ಪ್ರಕಾರ ಪುರುಷಪ್ರಯತ್ನದ ಮಹತ್ವ*

ಯೋಗವಾಸಿಷ್ಠವು ಅದ್ವೈತಸಿದ್ಧಾಂತಕ್ಕೆ ಸೇರಿದ ಒಂದು ಪ್ರಕರಣದ ಗ್ರಂಥ. ಇದನ್ನು ಯಾರು ರಚಿಸಿದರು, ಯಾವ ಕಾಲದಲ್ಲಿ ರಚಿಸಿದರು ಎಂಬುದನ್ನು ನಿರ್ಣಯಿಸುವುದು ಕಷ್ಟ. ರಾಮಾಯಣವನ್ನು ರಚಿಸಿದ ಆದಿಕವಿ ವಾಲ್ಮೀಕಿಯೇ ಇದನ್ನೂ ಸಹ ರಚಿಸಿದರೆಂಬುದು ಸಾಂಪ್ರದಾಯಿಕವಾದ ಹೇಳಿಕೆ. ಆದರೆ ಸಾಹಿತ್ಯಚರಿತ್ರಜ್ಞರು ಈ ಗ್ರಂಥವು ಕ್ರಿ.ಶ. ಅರನೆಯ ಶತಮಾನದಲ್ಲಿ ರಚಿತವಾಗಿರಬಹುದೆಂದು ಊಹಿಸಿರುವರು.

ಇದರ ಗ್ರಂಥಕರ್ತರು ತಮ್ಮ ಮುಮುಕ್ಷು ವ್ಯವಹಾರ ಪ್ರಕರಣವೆಂಬ ಎರಡನೆಯ ಭಾಗದಲ್ಲಿ ಮಾನವ ಜೀವನದಲ್ಲಿ ಯಾವುದು ಪ್ರಬಲವಾಗಿರುವುದು; ಪೌರುಷವೇ ಅಥವಾ ದೈವವೇ ಎಂಬುದನ್ನು ಕುರಿತು ಕೂಲಂಕಷವಾಗಿ ವಿಚಾರಿಸಿರುವರು. ಈ ವಿಚಾರಣೆಯು ಆಧುನಿಕ ಮಾನವಜೀವನಕ್ಕೆ ಬಹಳ ಸಹಕಾರಿ. ಈ ವಿಚಾರಣೆ ವಾಸ್ತವಾಂಶದಿಂದ ಕೂಡಿದ್ದು ಅನುಭವದ ಆಧಾರದ ಮೇಲೆ ನಿಂತಿದೆ. ವ್ಯವಹಾರದಲ್ಲಿಯೂ ಮೋಕ್ಷ ಸಾಧನೆಯಲ್ಲಿಯೂ ಪುರುಷ ಪ್ರಯತ್ನವು ಅತಿ ಮಹತ್ವ ಪಾತ್ರವನ್ನು ವಹಿಸಿರುವುದೆಂದು ಗ್ರಂಥಕರ್ತರು ವಿಚಾರ ಪೂರ್ವಕವಾಗಿ ಸ್ಥಾಪಿಸಿರುವರು.

ಮನುಷ್ಯನು ಮಾಡುವ ಎಲ್ಲಾ ಕಾರ್ಯಗಳಿಗೂ ಅವನ ಬಯಕೆಗಳೇ ಕಾರಣ.

ಮನಸಾ ವಾಂಛ್ಯತೇ ಯಚ್ಚ ಯಥಾ ಶಾಸ್ತ್ರಂ ನ ಕರ್ಮಣಾ ।
ಸಾಧ್ಯತೇ ಮತ್ತ ಲೀಲಾಸೌ ಮೋಹನೀ ನಾರ್ಥ ಸಾಧನೀ

ಯಾವುದಾದರೊಂದು ಪ್ರಯೋಜನವನ್ನು ಮನಸ್ಸಿನಿಂದ ಬಯಸಿ, ಅದನ್ನು ಶಾಸ್ತ್ರ, ಅಂದರೆ ತಿಳುವಳಿಕೆಯ ಆಧಾರದ ಮೇಲೆ ಕರ್ಮವನ್ನು ಮಾಡಿ ಸಾಧಿಸದೆ ಬಿಡುವುದು ಹುಚ್ಚನಾಟವು! ಅದು ಕಾರ್ಯಸಾಧನೆಯ ಹಾದಿಯಲ್ಲಿ ಕೇವಲ ವ್ಯಾಮೋಹ ಕಾರಣವು (II. 5.2).

ಆದುದರಿಂದ ಒಬ್ಬ ಮನುಷ್ಯನು ತನ್ನ ಮನಸ್ಸಿಗೆ ತೋಚಿದಂತೆ ಮಾಡುವ ಕೆಲಸವು ಪುರುಷಪ್ರಯತ್ನವಾಗುವುದಿಲ್ಲ. ವಾಸ್ತವಿಕಾಂಶಗಳನ್ನೊಳಗೊಂಡ ತಿಳುವಳಿಕೆಯ ಆಧಾರದ ಮೇಲೆ ಬುದ್ಧಿಪೂರ್ವಕವಾಗಿ ಮಾಡುವ ಕೆಲಸವೇ ಸರಿಯಾದ ಪ್ರಯತ್ನ. ಪ್ರಯತ್ನದ ಫಲವು ಸನ್ನಿವೇಶವನ್ನೂ, ತಿಳುವಳಿಕೆಯನ್ನೂ, ಬುದ್ಧಿಯನ್ನೂ ಒಳಗೊಂಡಿರುವುದು.

---

* ಯೋಗವಾಸಿಷ್ಠ ಗ್ರಂಥವನ್ನು ದೇವುಡುರವರು ಕನ್ನಡಿಸಿ ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲೆಯಲ್ಲಿ 1946ರಲ್ಲಿ ಪ್ರಕಟಿಸಿದರು. ಈ ಪ್ರಬಂಧವು ದೇವುಡುರವರ ಕನ್ನಡ ಅನುವಾದವನ್ನವಲಂಬಿಸಿದೆ.

ಯಥಾ ಸಂಯತತೇ ಯೇನ ತಥಾ ತೇನಾನುಭೂಯತೇ ।
ಸ್ವಕರ್ಮೈವೇತಿ ಚಾಸ್ತೇಽನ್ಯಾ ವ್ಯತಿರಿಕ್ತಾ ನ ದೈವದೃಕ್ ॥

ಯಾವನು ಎಷ್ಟೆಷ್ಟು ಪ್ರಯತ್ನ ಮಾಡುವನೋ ಅಷ್ಟಷ್ಟು ಫಲವನ್ನು ಅನುಭವಿಸುವನು. ಹೀಗೆ ಇರುವುದೆಲ್ಲ ತನ್ನ ಕಾರ್ಯ ಮಾತ್ರವೇ! ಅದಕ್ಕಿಂತ ಬೇರೆಯಾಗಿ ದೈವವೆಂಬುದು ಇನ್ನೊಂದು ಇಲ್ಲ (II. 5. 3).

ಕಾರ್ಯಸಫಲತೆಯು ಎರಡು ಅಂಶಗಳನ್ನು ಒಳಗೊಂಡಿರುವುದು. ಒಂದು ತಾನು ಹಿಂದೆ ಮಾಡಿದ ಕಾರ್ಯಗಳ ಪರಿಣಾಮ. ಮತ್ತೊಂದು ಇತರರು ಈಗ ಮಾಡುವ ಪ್ರಯತ್ನಗಳ ಪರಿಣಾಮ.

ಈ [illegible] ಪ್ರಕಾರ ಕೆಲಸ ಕಾರ್ಯಗಳು, ಎರಡು ವಿಧ :
ದ್ವೌ ಹುಡಾವಿವ ಯುಧ್ಯೇತೇ ಪುರುಷಾರ್ಥೌ ಸಮಾಸಮೌ ।
ಪ್ರಾಕ್ತನಶ್ಚೈಹಿಕಶ್ಚೈವ ಶಾಮ್ಯತ್ಯತ್ರಾಲ್ಪವೀರ್ಯವಾನ್ ॥

ಪ್ರಾಕ್ತನ, ಐಹಿಕ ಎಂಬ ಎರಡು ಟಗರುಗಳಂತೆ ಹಿಂದೆ ಮಾಡಿದುದು ಈಗ ಮಾಡುವುದು ಸಮಾಸಮವಾಗಿ ಹೋರಾಡುತ್ತಿರುವುವು. ಅವರಲ್ಲಿ ಅಲ್ಪ ವೀರ್ಯವಾದುದು ಸೋಲುವುದು (II. 5. 5).

ಆದುದರಿಂದ ಇಂದಿನ ಪ್ರಯತ್ನ ಹಿಂದಿನ ಪ್ರಯತ್ನಗಳಿಗಿಂತ ಬಲವಾಗಿದ್ದರೆ ಫಲದಾಯಕವಾಗುವುದು. ಉದಾಹರಣೆಗೆ ಒಬ್ಬ ವ್ಯಕ್ತಿಯು ಸಿಗರೇಟು ಸೇದುವ ಅಭ್ಯಾಸವನ್ನು ಮಾಡಿರುವನು. ಈಗ ಆ ದುರಭ್ಯಾಸವನ್ನು ಬಿಡಬೇಕೆಂದು ಪ್ರಯತ್ನ ಮಾಡಬಹುದು. ಈ ಪ್ರಯತ್ನವು ಸಫಲವಾಗಬೇಕಾದರೆ ಹಿಂದೆ ತಾನು ಮಾಡಿದ ಅಭ್ಯಾಸದಿಂದ ಉಂಟಾದ ಪರಿಣಾಮಕ್ಕಿಂತಲೂ ಪ್ರಯತ್ನ ಹೆಚ್ಚು ಶಕ್ತಿಯುತವಾಗಿರಬೇಕು ಇಲ್ಲದಿದ್ದರೆ ಹಳೆಯ ಅಭ್ಯಾಸವು ಬಲವಾಗಿದ್ದು ಇಂದಿನ ಪ್ರಯತ್ನವು ನಿರರ್ಥಕವಾಗುವುದು. ಹೀಗೆಯೇ ಹಳ್ಳಿಯಲ್ಲಿ ಬೆಳೆದ ಹುಡುಗನು ಅಲ್ಲಿಯ ಭಾಷೆಯನ್ನು ಕಲಿತಿರುವನು. ಅವನ ಪದಪ್ರಯೋಗ, ಉಚ್ಚಾರಣೆ ಮುಂತಾದವು ತನ್ನ ಹಳ್ಳಿಯ ಬಳಕೆಯನ್ನು ಅನುಸರಿಸಿರುವುದು. ಆ ಬಳಕೆಯ ಬಲವು ಹೆಚ್ಚಾಗಿರುವುದರಿಂದ ಪ್ರೌಢಶಾಲೆಯಲ್ಲಿ ಅನೇಕ ತಪ್ಪುಗಳನ್ನು ಮಾಡಿ ಅನುತ್ತೀರ್ಣನಾಗುವನು. ಮತ್ತು ಅವನ ಜೀವನವು ಆಶಾಭಂಗದಿಂದ ಕೂಡಿರುವುದು. ಆ ಹಳೆಯ ವಾಸನಾಬಲವನ್ನು ತ್ಯಜಿಸಿ ಪ್ರಯತ್ನ ಪೂರ್ವಕವಾಗಿ ಹೊಸ ಅಭ್ಯಾಸಗಳನ್ನು ಮಾಡಿ ತನ್ನ ಭಾಷೆಯನ್ನು ಸರಿಪಡಿಸಿಕೊಳ್ಳಬೇಕು.

ಯೋಗವಾಸಿಷ್ಠವನ್ನು ರಚಿಸಿದ ಕವಿಯ ಈ ದೃಷ್ಟಿಯು ಬಹಳ ಆಧುನಿಕ ದೃಷ್ಟಿ. ಪ್ರಾಕ್ತನ ಕರ್ಮಕ್ಕೆ ಒಂದು ಹೊಸ ಅರ್ಥವನ್ನು ಈ ಕವಿಯು ಕೊಟ್ಟು ಹಿಂದುಳಿದ ಜನಾಂಗಗಳಿಗೆ ಉತ್ತೇಜನವನ್ನು ಮತ್ತು ಆತ್ಮಭರವಸೆಯನ್ನು ನೀಡಿರುವರು.

ಅತಃ ಪುರುಷಯತ್ನೇನ ಯತಿತವ್ಯಂ ಯಥಾ ತಥಾ ।
ಪುಂಸಾ ತಂತ್ರೇಣ ಸದ್ಯೋಗಾದ್ವ್ಯೇನಾಶ್ವದ್ಯತನೋ ಜಯೇತ್ ॥

ಆದುದರಿಂದ ಪುರುಷನು ಪ್ರಯತ್ನ ಮಾಡಬೇಕು. ಸರಿಯಾದ ಉಪಾಯವನ್ನು ಮಾಡಿ ಅದಕ್ಕೆ ತಕ್ಕ ವ್ಯಾಪಾರವನ್ನು ಮಾಡಿ, ಏನು ಮಾಡಿದರೆ ಐಹಿಕ ಪೌರುಷವೇ ಗೆಲ್ಲುವುದೋ ಅದನ್ನೆಲ್ಲ ಮಾಡಬೇಕು (II. 5.6).

ಈ ವಿಧವಾಗಿ ಈ ಪ್ರಾಚೀನ ಪ್ರಾಜ್ಞರ ಪ್ರಕಾರ ಹಿಂದಿನ ಕರ್ಮಗಳ ಪ್ರಭಾವವು ಬಹಳ ಬಲವಾದುದೆಂದು ನಿರುತ್ಸಾಹವನ್ನು ಹೊಂದದೇ ಆತ್ಮಭರವಸೆಯಿಂದ ಕೂಡಿದ ಪ್ರಯತ್ನವನ್ನು

ಮಾಡಬೇಕು. ಮತ್ತು ಸನ್ನಿವೇಶವನ್ನು ಚೆನ್ನಾಗಿ ಪರಿಶೀಲಿಸಿ ಬುದ್ಧಿಪೂರ್ವಕವಾಗಿ ಪ್ರಯತ್ನ ಮಾಡಬೇಕು.

ಎರಡನೆಯದಾಗಿ ನಮ್ಮ ಪ್ರಯತ್ನವು ನಮ್ಮ ಎದುರುಗೊಳ್ಳುವ ಪರಿಸ್ಥಿತಿಯಲ್ಲಿ ಇತರರ ಪ್ರಯತ್ನಕ್ಕೂ ಸಹ ಒಳಪಟ್ಟಿರುವುದೆಂದು ಯೋಗವಾಸಿಷ್ಠವೂ ಪ್ರತ್ಯೇಕಿಸಿರುವುದು.

> ದ್ವೌ ಹುಡಾವಿವ ಯುಧ್ಯೇತೇ ಪುರುಷಾರ್ಥೌ ಸಮಾಸಮೌ
> ಆತ್ಮೀಯಶ್ಚಾನ್ಯದೀಯಶ್ಚ ಜಯತ್ಯತಿ ಬಲಸ್ತಯೋಃ ॥

ನಮ್ಮದು, ಇತರರದು ಎಂಬ ಎರಡು ಪ್ರಯತ್ನಗಳು ಎಂಬ ಎರಡು ಟಗರುಗಳು ಸಮಾಸಮವಾಗಿ ಹೋರಾಡುತ್ತಿರುವುವು. ಇವುಗಳಲ್ಲಿ ಬಲವಾದುದು ಗೆಲ್ಲುವುದು (II. 5. 7).

ಆದುದರಿಂದ ಒಂದು ಕೆಲಸವನ್ನು ಮಾಡುವಾಗ ಆ ಕೆಲಸಕ್ಕೆ ಅಡಚಣೆಯನ್ನುಂಟು ಮಾಡುವ ಇತರ ವ್ಯಕ್ತಿಗಳು ಯಾರು, ಅವರ ಬಲಾಬಲಗಳೇನು, ಎಂಬುದನ್ನೂ ಸಹ ಚೆನ್ನಾಗಿ ಪರಿಶೀಲಿಸಬೇಕು. ನಮ್ಮ ಕಾರ್ಯವು ಫಲವತ್ತಾಗಬೇಕಾದರೆ ಇತರರು ಮಾಡುವ ಪ್ರಯತ್ನಗಳನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕು. ಈ ಅಂಶವನ್ನು ದೃಷ್ಟಿಯಲ್ಲಿಡದೇ ಹೋದರೆ ನಿರಾಶೆಯೂ ಉಂಟಾಗಬಹುದು ನಮ್ಮ ಪ್ರಯತ್ನವೂ ವ್ಯರ್ಥವಾಗಬಹುದು.

ಇಷ್ಟೆಲ್ಲ ಮಾಡಿದರೂ ಸಹ ನಮ್ಮ ಪ್ರಯತ್ನವೂ ನಿಷ್ಫಲವಾಗಬಹುದು. ನಮ್ಮ ಪ್ರಯತ್ನಗಳು ನಿಷ್ಫಲವಾದರೆ ಸಾಧಾರಣವಾಗಿ ನಾವು ನಿರಾಶೆಯನ್ನು ಹೊಂದುವೆವು. ಆಗ ಆತ್ಮ ಭರವಸೆಯನ್ನು ನಾವು ಕಳೆದುಕೊಳ್ಳಬಹುದು. ಅಥವಾ ಇತರ ವ್ಯಕ್ತಿಗಳ ಮತ್ತು ಇತರ ಗುಂಪುಗಳ ಒಳಸಂಚಿನಿಂದ ನಮಗೆ ದುಸ್ಥಿತಿ ಉಂಟಾಯಿತೆಂದು ಅವರ ಮೇಲೆ ಕೋಪ ಬಂದು, ಅವರನ್ನು ನಿಂದಿಸುವೆವು ಇಂತಹ ಮನೋಭಾವಗಳು ಸರಿಯಾದುವಲ್ಲವೆಂದು ಯೋಗವಾಸಿಷ್ಠವು ತೋರಿಸಿರುವುದು.

> ತಸ್ಮಾತ್ ಪುರುಷಯತ್ನೇನ ವಿವೇಕಂ ಪೂರ್ವಮಾಶ್ರಯೇತ್ ।
> ಆತ್ಮಜ್ಞಾನ ಮಹಾರ್ಥಾನಿ ಶಾಸ್ತ್ರಾಣಿ ಪ್ರವಿಚಾರಯೇತ್ ॥
> ಚಿತ್ತೇ ಚಿಂತಯತಾಮರ್ಥಂ ಯಥಾ ಶಾಸ್ತ್ರಂ ನಿಜೇ ಹಿತೈಃ ।
> ಅಸಂಸಾಧಯ ತಾಮೇವ ಮೂಢಾನಾಂ ಧಿಗ್ದುರೀಪ್ಸಿತಂ ॥

ಆದುದರಿಂದ ಪುರುಷನು ಪ್ರಯತ್ನಪೂರ್ವಕವಾಗಿ ಮೊದಲು ವಿವೇಕವನ್ನು ಆಶ್ರಯಿಸಬೇಕು. ಆತ್ಮಜ್ಞಾನವೆಂಬ ಉತ್ತಮ ಲಾಭವನ್ನು ಸಂಪಾದಿಸಿಕೊಡುವ ಶಾಸ್ತ್ರಗಳನ್ನು ಚೆನ್ನಾಗಿ ವಿಚಾರ ಮಾಡಬೇಕು. ಕಾರ್ಯವನ್ನು ಸಾಧಿಸಬೇಕೆಂದು ಮನಸ್ಸಿನಲ್ಲಿಯೇ ಚಿಂತಿಸಿಕೊಳ್ಳುತ್ತ, ಅದರ ಸಾಧನೆಗೆ ಬೇಕಾದ ಶಾಸ್ತ್ರಜ್ಞಾನದಿಂದ ನಿರ್ಣಯಿಸಿದ ಕೆಲಸವನ್ನು ಮಾಡದಿರುವ ಮೂಢರ ಬರಿಯಾಶೆಗಳಿಗೆ ಧಿಕ್ಕಾರವಿರಲಿ (II.5. 21–22).

ಇದಲ್ಲದೆ ಯೋಗವಾಸಿಷ್ಠದ ಪ್ರಕಾರ

> ಯುಕ್ತಃ ಸದ್ಭಿಃ ಪೃಥಾಭ್ಯಾಸ್ಯೈಃ ಪ್ರಜ್ಞೋತ್ಸಾಹ ಸಮನ್ವಿತೈ ।
> ಮೇರವೋಽಪಿ ನಿಗೀರ್ಯಂತೇ ಕೈವ ಪ್ರಾಕ್ ಪೌರುಷೇ ಕಥಾ
> ಶಾಸ್ತ್ರ ನಿಯಂತ್ರಿತ ಪೌರುಷ
> ಪರಮಾ ಪುರುಷಸ್ಯ ಪುರುಷತಾ ಯಾ ಸ್ಯಾತ್ ।
> ಅಭಿಮತ ಫಲಭರ ಸಿದ್ಧ್ಯೈ
> ಭವತಿ ಹಿ ಸೈವಾನ್ಯಥಾತ್ವನರ್ಥಾಯ ॥

ಸತತವಾಗಿ ಯುಕ್ತಿ, ಮಾನುತ್ತ, ಪ್ರಜ್ಞೆ, ಉತ್ಸಾಹಗಳಿಂದ ಕೂಡಿದವರಾಗಿ ದೃಢವಾಗಿ

ಪಟ್ಟು ಹಿಡಿದು ಕೆಲಸ ಮಾಡಿದರೆ, ಮೇರು ಪರ್ವತಗಳನ್ನಾದರೂ ನುಂಗಿಬಿಡಬಹುದು ಎಂದ ಮೇಲೆ ಪ್ರಾಕ್ತನದ ಕಥೆಯೇನು ?

ಶಾಸ್ತ್ರ ಜ್ಞಾನದ ಆಧಾರವನ್ನೊಳಗೊಂಡು ಮಾಡುವ ಪೌರುಷವು ಅಭೀಷ್ಟಸಿದ್ಧಿಯನ್ನು ಉಂಟುಮಾಡುವುದು. ಅದೇ ಪೌರುಷವು ಅಶಾಸ್ತ್ರೀಯವಾದರೆ (ಅಂದರೆ ತಿಳುವಳಿಕೆಯನ್ನು ಒಳಗೊಳ್ಳದೇ ಇದ್ದರೆ) ಅನರ್ಥಕಾರಿಯಾಗುವುದು (II. 4, 18–19).

ಈ ವಿಧವಾಗಿ ನಮ್ಮ ಪ್ರಯತ್ನವು ನಿಷ್ಫಲವಾದರೆ ಅದಕ್ಕೆ ಕಾರಣವು ನಮ್ಮಲ್ಲಿರುವ ನ್ಯೂನತೆಯೇ ಎಂದು ತಿಳಿದುಕೊಳ್ಳಬೇಕು. ನಮ್ಮ ಪ್ರಯತ್ನವೂ ನಿರಂತರವಾಗಿಲ್ಲದಿದ್ದರೆ, ಪ್ರಜ್ಞಾಪೂರ್ವಕವಾಗಿಲ್ಲದಿದ್ದರೆ, ಜ್ಞಾನಪೂರ್ವಕವಾಗಿಲ್ಲದಿದ್ದರೆ, ಉತ್ಸಾಹದಿಂದ ಕೂಡದೇ ಇದ್ದರೆ ಫಲಕಾರಿಯಾಗದೇ ಇರುವುದು ಆಶ್ಚರ್ಯಕರವಲ್ಲ. ಆದುದರಿಂದ ಕಾರ್ಯಸಿದ್ಧಿಯಾಗದೇ ಇದ್ದರೆ ಎದೆಗುಂದದೇ ಮೇಲೆ ಹೇಳಿದ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ಪರ್ಯಾಲೋಚಿಸಿ ನಮ್ಮ ವೃತ್ತಿಯಲ್ಲಿ ಬದಲಾವಣೆಯನ್ನು ಹೊಂದಿ ಸರಿಯಾದ ಪ್ರಯತ್ನವನ್ನು ಮಾಡಬೇಕು. ತಿಳಿವಳಿಕೆಯ ಆಧಾರವನ್ನು ಒಳಗೊಳ್ಳದ ಪ್ರಯತ್ನವೂ ಅನರ್ಥಕಾರಿಯಾಗುವುದು. ಆದುದರಿಂದ ವಿವೇಕವಿಲ್ಲದ ಪ್ರಯತ್ನವು ಎಂದಿಗೂ ಫಲಕಾರಿಯಾಗುವುದಿಲ್ಲ.

ಪೌರುಷಂ ಚ ನವಾನಂತಂ
ನ ಪ್ರಯತ್ನಮಭಿವಾಂಛತೇ ।
ನ ಯತ್ನೇನಾಪಿ ಮಹತಾ ಪ್ರಾಪ್ಯತೇ ರತ್ನಮಶ್ಮತಃ ॥

ಪೌರುಷವಾಗಲಿ ಪ್ರಯತ್ನವಾಗಲಿ ಅನಂತವಾಗಿ ಮಾಡುತ್ತಲೇ ಇರಬೇಕು ಎಂಬುದೇನೂ ಇಲ್ಲ. ನಿರಂತರವಾದ ಯತ್ನವನ್ನು ಮಾಡಿದ ಮಾತ್ರಕ್ಕೇ ಕಲ್ಲಿನಿಂದ ರತ್ನವು ಸಿಕ್ಕುವುದೇನು ? (II. 5. 23).

ಈ ಕವಿಯ ಮತ್ತೊಂದು ಆಶ್ಚರ್ಯಕರವಾದ ಯೋಚನೆಯನ್ನು ಇನ್ನೊಂದು ಶ್ಲೋಕದಲ್ಲಿ ನೋಡಬಹುದು.

ಯಥಾ ಘಟಃ ಪರಿಮಿತೋ ಯಥಾ ಪರಿಮಿತಃ ಪಟಃ ।
ನಿಯತಃ ಪರಿಮಾಣಸ್ಥಃ ಪುರುಷಾರ್ಥಸ್ತಥೈವ ಚ ॥

ಘಟವು ಇಷ್ಟು ಗಾತ್ರ ಎಂದೂ ಪಟವು ಇಷ್ಟು ಅಗಲ ಇಷ್ಟು ಉದ್ದ ಎಂದೂ, ಅಳತೆಗೆ ಸಿಕ್ಕುವಂತೆ, ಪ್ರಯತ್ನವೂ ಕೂಡ ಈ ಕಾರ್ಯಕ್ಕೆ ಇಷ್ಟೇ ಎಂದು ಗೊತ್ತಾಗಿರುವುದು (II. 5. 24.).

ಈ ವಿಧವಾಗಿ ಪುರುಷ ಪ್ರಯತ್ನವನ್ನೂ ನಾವು ಅಳೆಯಲು ಸಾಧ್ಯವೆಂದು ಈ ಪ್ರಾಚೀನ ಕವಿಯು ಭರವಸೆಯಿಂದ ಸಾರಿರುವರು.

ಇಂದಿನ ಪ್ರಯತ್ನವೂ ಫಲಕಾರಿಯಾಗದೇ ಹೋದರೆ ಈ ಪ್ರಾಜ್ಞರ ಪ್ರಕಾರ ಆ ಪ್ರಯತ್ನವೂ ಸರಿಯಾದ ಬಲದಿಂದ ಕೂಡಿಲ್ಲವೆಂದು ತಿಳಿದುಕೊಳ್ಳಬೇಕು.

ಅನರ್ಥಃ ಪ್ರಾಪ್ಯತೇ ಯತ್ರ ಶಾಸ್ತ್ರಿತಾದಪಿ ಪೌರುಷಾತ್ ।
ಅನರ್ಥ ಕರ್ತೃ ಬಲವತ್ತತ್ರ ಜ್ಞೇಯಂ ಸ್ವಪೌರುಷಂ ॥
ಪರಂ ಪೌರುಷಮಾಶ್ರಿತ್ಯ ದಂತೈರ್ದಂತಾನ್ ವಿಚೂರ್ಣಯನ್ ।
ಶುಭೇನಾಶುಭಮುದ್ಯುಕ್ತಂ ಪ್ರಾಕ್ತನಂ ಪೌರುಷಂ ಜಯೇತ್ ॥

ಶಾಸ್ತ್ರಿತವಾದ ಐಹಿಕ ಪೌರುಷದಿಂದ ಅನರ್ಥವೇ ಲಭಿಸಿದರೆ, ಆ ಅನರ್ಥಕ್ಕೆ ಕಾರಣವಾದ ಪೂರ್ವಪೌರುಷವು ಬಲವಾಗಿತ್ತೆಂದು ತಿಳಿಯಬೇಕು.

ಹೆಚ್ಚು ಪೌರುಷವನ್ನು ಮಾಡಿ, ಅಶುಭಕಾರಿಯಾದ ಪ್ರಾಕ್ತನ ಪೌರುಷವನ್ನು ತನ್ನ ಹಲ್ಲುಮುಡಿ ಕಚ್ಚಿ, ಶುಭ ಪೌರುಷದಿಂದ ಗೆಲ್ಲಬೇಕು (II. 5. 89.).

ಆದುದರಿಂದ ತನ್ನ ಪ್ರಯತ್ನವು ವಿಫಲಗೊಂಡರೆ ಇದಕ್ಕೆ ಕಾರಣ ತನ್ನ ಹಿಂದಿನ ಕರ್ಮ ವಲ್ಲವೆಂದೂ ಇಂದಿನ ಪ್ರಯತ್ನದಲ್ಲಿ ಇರುವ ನ್ಯೂನತೆಯೇ ಕಾರಣವೆಂದೂ ತಿಳಿದು ಅದಕ್ಕಿಂತ ಹೆಚ್ಚು ಪ್ರಯತ್ನವನ್ನು ಮಾಡಿ ತನ್ನ ಗುರಿಯನ್ನು ಸಾಧಿಸಬೇಕು. ಆದುದರಿಂದಲೇ ಈ ಪ್ರಾಜ್ಞರು ನಮ್ಮ ದುಸ್ಥಿತಿಗೆ ಹಿಂದಿನ ಕರ್ಮವೇ ಕಾರಣವೆಂಬುವ ಊಹೆಯನ್ನು ಖಂಡಿಸಿ ರುವರು.

ಪ್ರಾಕ್ತನಃ ಪುರುಷಾರ್ಥೋಽಸೌ ಮಾಂ ನಿಯೋಜಯತೀತಿ ಧೀಃ ।
ಬಲಾದಧಸ್ಪದೀ ಕಾರ್ಯ ಪ್ರತ್ಯಕ್ಷಾದಧಿಕಾ ನ ಸಾ ॥

ಪ್ರಾಕ್ತನ ಪೌರುಷವು ನನ್ನನ್ನು ಹೇಗೆ ಪ್ರೇರಿಸುತ್ತಿದೆ ಎಂಬ ಬುದ್ಧಿಯನ್ನು ಬಲವಂತ ವಾಗಿ ಮೆಟ್ಟಬೇಕು. ಅದು ಪರೋಕ್ಷವು ಪ್ರತ್ಯಕ್ಷವಾದ ಐಹಿಕಪೌರುಷಕ್ಕಿಂತ ಅದು ಅಧಿಕ ವಲ್ಲ (II 5. 10).

ಇವಕ್ಕೆ ಒಂದು ದೃಷ್ಟಾಂತವನ್ನು ಕೊಡುವರು.

ದೋಷಃ ಶಾಮ್ಯತ್ಯ ಸಂದೇಹಂ ಪ್ರಾಕ್ತನೋಽದ್ಯತ ನೈರ್ಗುಣ್ಯೈಃ ।
ದೃಷ್ಟಾಂತೋಽತ್ರ ಹ್ಯಸ್ತನಸ್ಯ ದೋಷಸ್ಯಾದ್ಯಗುಣೈಃ ಕ್ಷಯಃ ॥

ಪ್ರಾಕ್ತನ ದೋಷಗಳೆಲ್ಲವೂ ಇಂದಿನ ಸತ್ಕರ್ಮಗಳೆಂಬ ಗುಣದಿಂದ ನಿಜವಾಗಿಯೂ ನಾಶ ವಾಗುವುವು. ನಿನ್ನೆಯ ದಿನದ (ದುರಾಹಾರಾದಿಜನ್ಯ) ದೋಷಗಳು ಇಂದಿನ (ಔಷಧಾದಿ) ಗುಣಗಳಿಂದ ನಾಶವಾಗುವುದೇ ಇದಕ್ಕೆ ದೃಷ್ಟಾಂತವು (II. 5 12).

ಆದುದರಿಂದ ಒಂದು ವ್ಯಕ್ತಿಯ ಅಥವಾ ಒಂದು ಕುಟುಂಬದ ಅಥವಾ ಒಂದು ದೇಶದ ಬಡತನಕ್ಕೂ ಕಡಿಮೆ ತಿಳುವಳಿಕೆಗೂ ಸೋಮಾರಿತನವೇ ಕಾರಣವೆಂದು ಈ ಕವಿಯು ತೋರಿಸಿ ಕೊಟ್ಟಿರುವರು.

ಆಬಾಲ್ಯಾದಲಮಭ್ಯಸ್ತೈಃ ಶಾಸ್ತ್ರಸತ್ಸಂಗಮಾದಿಭಿಃ ।
ಗುಣೈಃ ಪುರುಷಯತ್ನೇನ ಸ್ವಾರ್ಥಃ ಸಂಪ್ರಾಪ್ಯತೇ ಯತಃ ॥
ಇತಿ ಪ್ರತ್ಯಕ್ಷತೋ ದೃಷ್ಟಮನುಭೂತಂ ಶ್ರುತಂ ಕೃತಂ ।
ದೈವಾತ್ತಮಿತಿ ಮನ್ಯಂತೇ ಯೇ ಹತಾಸ್ತೇ ಕುಬುದ್ಧಯಃ ॥
ಆಲಸ್ಯಂ ಯದಿ ನ ಭವೇಜ್ಜಗತ್ಯನರ್ಥಃ
ಕೋನ ಸ್ಯಾದ್ಬಹುಧನಕೋ, ಬಹುಶ್ರುತೋ ವಾ ।
ಆಲಸ್ಯಾದಿಯಮವನಿಃ ಸಸಾಗರಾಂತಾ
ಸಂಪೂರ್ಣಾ ನರಪಶುಭಿಶ್ಚ ನಿರ್ಧನೈಶ್ಚ ॥

ಬಾಲ್ಯದಿಂದಲೂ ಅಭ್ಯಾಸವಾಗಿರುವ ಶಾಸ್ತ್ರ, ಸತ್ಸಂಗ ಎಂಬ ಗುಣಗಳಿಂದ ಕೂಡಿರುವ ಪುರುಷ ಪ್ರಯತ್ನವು ತನ್ನ ಇಷ್ಟಾರ್ಥ ಸಿದ್ಧಿಯನ್ನು ಸಂಪಾದಿಸಿ ಕೊಡುವುದು ಎಂಬುದು ಪ್ರತ್ಯಕ್ಷ ವಾಗಿ ಕಂಡಿರುವುದರಿಂದ, ಅನುಭವಿಸಿದವರು ಹೇಳಿರುವುದರಿಂದ, ಶಾಸ್ತ್ರಗಳಲ್ಲಿ ಶ್ರುತವಾಗಿರುವು ರಿಂದ, ಯಾರು ದೈವವೇ ಫಲವನ್ನು ಕೊಡುವುದು ಎಂದು ತಿಳಿದಿರುವರೋ ಮಾಡಿನೋಡಬಹು ದಾದ ಆ ಕುಬುದ್ಧಿಗಳು ಹಾಳಾದರು.

ಅನರ್ಥಕಾರಿಯಾದ ಆಲಸ್ಯವೆಂಬುದೇ ಲೋಕದಲ್ಲಿ ಇಲ್ಲವಾದರೆ, ಯಾವನು ತಾನೇ ಬಹು ಧನವಂತನಾಗುವುದಿಲ್ಲ ? ಯಾರಿಗೆ ತಾನೇ ಹೆಚ್ಚು ತಿಳುವಳಿಕೆಯನ್ನು ಪಡೆಯಲು ಅಸಾಧ್ಯ

ವಾಗುವುದು ? ಆಲಸ್ಯವಿರುವುದರಿಂದಲೇ ಸಾಗರಗಳವರೆಗೂ ಹಬ್ಬಿರುವ ಇಷ್ಟು ವಿಸ್ತಾರವಾದ ಪೃಥ್ವಿಯೂ ನರಪಶುಗಳಿಂದಲೂ ನಿರ್ಧನರಿಂದಲೂ ತುಂಬಿರುವುದು (II. 5. 28–30).

ಈ ವಿಧವಾಗಿ 1,300 ವರ್ಷಗಳ ಹಿಂದೆಯೇ ಭಾರತ ದೇಶದಲ್ಲಿ ಒಬ್ಬ ಪ್ರಾಜ್ಞರು ಬಡತನವನ್ನು ಅನಕ್ಷರಸ್ಥಿತಿಯನ್ನು ಕುರಿತು ವಿಶ್ಲೇಷಣೆ ಮಾಡಿ ಇವುಗಳಿಗೆ ಕಾರಣವು ಮನುಷ್ಯ ಪ್ರಯತ್ನದ ಅಭಾವವೇ ಹೊರತು ಬೇರೆ ಕಾರಣಗಳಲ್ಲವೆಂದು ಸ್ಪಷ್ಟವಾಗಿ ತೋರಿಸಿ ಕೊಟ್ಟಿರುವರು. ಈ ವಿಷಯವನ್ನು ಕುರಿತು ಮತ್ತೊಂದು ಕಡೆ ಅನುಭವದ ಆಧಾರದ ಮೇಲೆ ಈ ವಿಧವಾಗಿ ನಿರೂಪಿಸಿರುವರು

ದೇಶಕಾಲಕ್ರಿಯಾದ್ರವ್ಯ ವಶತೋ ವಿಸ್ಫುರಂತ್ಯಮೀ ।
ಸರ್ವ ಏವ ಜಗದ್ಭಾವಾ ಜಯತ್ಯಧಿಕ ಯತ್ನವಾನ್ ॥

ಜಗತ್ತಿನ ಪ್ರತಿಯೊಂದು ವ್ಯಕ್ತಿಯೂ ದೇಶ, ಕಾಲ, ಕ್ರಿಯಾ, ದ್ರವ್ಯ, ಇವುಗಳಿಗೆ ಅನುಸಾರವಾಗಿ ಕಾರ್ಯ ಮಾಡುವನು, ಯಾವನು ಅಧಿಕ ಪ್ರಯತ್ನ ಮಾಡುವನೋ ಅವನು ಗೆಲ್ಲುವನು (II. 6. 23.).

ಈ ವಿಧವಾಗಿ ಒಬ್ಬ ಮನುಷ್ಯನು ಕಾರ್ಯಸಿದ್ಧಿಯಲ್ಲಿ ಯಶಸ್ವಿಯಾದರೆ ಅದಕ್ಕೆ ಕಾರಣಗಳನ್ನು ನಿರ್ದಿಷ್ಟವಾಗಿ ಸೂಚಿಸುವುದಕ್ಕೆ ಸಾಧ್ಯವೆಂದು ಅದರಲ್ಲಿ ನಮ್ಮ ತಿಳುವಳಿಕೆಗೆ ಸಿಕ್ಕದಿರುವ ವಿಧಿ ಮುಂತಾದ ಗೂಢತತ್ತ್ವಗಳು ಯಾವುವೂ ಇಲ್ಲವೆಂದೂ ಈ ಪ್ರಾಚೀನ ಪ್ರಾಜ್ಞರು ವಿಶದವಾಗಿ ತೋರಿಸಿಕೊಟ್ಟಿರುವರು.

ಇವರು ಮಾಡಿರುವ ಪುರುಷ ಪ್ರಯತ್ನದ ವಿಶ್ಲೇಷಣವು ಎಲ್ಲ ಜನಾಂಗಕ್ಕೂ ಎಲ್ಲ ದೇಶ ಕಾಲಗಳಿಗೂ ಅನ್ವಯಿಸುವುದು ಇದು ಬಹಳ ಮುಖ್ಯವಾದ ವಿಷಯ. ಮಾನವ ಜೀವನದಲ್ಲಿ ಅಜ್ಞಾನವನ್ನೂ, ಬಡತನವನ್ನೂ, ವ್ಯಾಧಿಗಳನ್ನೂ ಪ್ರಯತ್ನಪೂರ್ವಕವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಸಮಾಜವೂ ದುಡಿದು ಗೆಲ್ಲಲು ಸಾಧ್ಯವೆಂಬುವ ಆಶಾವಾದವನ್ನು ಈ ಜ್ಞಾನಿಯು ಆರನೇ ಶತಾಬ್ದದಲ್ಲಿಯೇ ಭಾರತದೇಶದಲ್ಲಿ ಪ್ರತಿಪಾದಿಸಿರುವರು. ಇಂದು ಪ್ರತಿಯೊಂದು ಹಿಂದುಳಿದ ದೇಶವು ಲೋಕದಲ್ಲಿ ಮುಂದುವರಿಯಬೇಕೆಂದು ಪ್ರಯತ್ನಗಳನ್ನು ಮಾಡುವುದನ್ನೂ ನಾವು ಕಾಣುತ್ತಿರುವೆವು.

ಎನ್. ಬಸವಾರಾಧ್ಯ

ಚಿಂತನ-೫

೧

ದೇವಾಲಯ-ನ್ಯಾಯಾಲಯ

ಭರತಖಂಡದ ಪ್ರಾಚೀನ ದೇವಾಲಯಗಳು ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಮಹತ್ತರವಾದ ಕಾರ್ಯಗಳನ್ನು ನಿರ್ವಹಿಸಿವೆ. ನಮ್ಮ ದೇಶದ ಪ್ರತಿಯೊಂದು ಗ್ರಾಮದಲ್ಲೂ ಒಂದಿಲ್ಲ ಒಂದು ದೇವಾಲಯವಿರುವುದು ಕಂಡುಬರುತ್ತದೆ. ಈ ದೇವಾಲಯಗಳು ಆಯಾ ಗ್ರಾಮಗಳ ನ್ಯಾಯಾಲಯಗಳಾಗಿಯೂ ಕಾರ್ಯವನ್ನು ನಿರ್ವಹಿಸಿವೆ. ಕರ್ನಾಟಕದ ದೇವಾಲಯಗಳು ಸುವ್ಯವಸ್ಥಿತವಾದ ನಿಯಮಬದ್ಧವಾದ ಸಂಸ್ಥೆಗಳಾಗಿ ಕೆಲಸ ಮಾಡಿರುವುದಕ್ಕೆ ಸಾಕಷ್ಟು ಶಾಸನಾಧಾರಗಳು ಉಪಲಬ್ಧವಾಗಿವೆ ಈ ದೇವಾಲಯಗಳು ವಿದ್ಯಾಕೇಂದ್ರಗಳಾಗಿಯೂ ಕೆಲಸ ಮಾಡಿವೆ. ಇದಕ್ಕೆಲ್ಲ ನಮ್ಮ ಜನತೆಯಲ್ಲಿದ್ದ ಧರ್ಮಬುದ್ಧಿಯೇ ಕಾರಣವಾಗಿದೆ.

ನಮ್ಮ ಜನತೆಯಲ್ಲಿ ರೂಢಮೂಲವಾಗಿದ್ದ ಭಕ್ತಿನಿಷ್ಠೆಗಳ ಪ್ರತೀಕವಾಗಿ ದೇವಾಲಯಗಳು ನಿರ್ಮಾಣವಾಗಿವೆ. ಇವು ಉದಾತ್ತವಾದ ಸಂಸ್ಕೃತಿಯ ಸಾಧನೆಗೆ ಹಿನ್ನೆಲೆಯಾಗಿವೆ. ಈ ದೇವಾಲಯಗಳ ನಿರ್ಮಾಣಕ್ಕಾಗಿ ಧನಿಕರೂ ದರಿದ್ರರೂ ಧರ್ಮಬುದ್ಧಿಯಿಂದ ಮುಂದಾಗಿ ಬಂದು ದಾನಗಳನ್ನು ಮಾಡಿದ್ದಾರೆ. ಯಥಾಶಕ್ತಿಯಾಗಿ ಅವರವರ ಸೇವೆಯನ್ನು ಸಲ್ಲಿಸಿದ್ದಾರೆ. ಈ ಪುಣ್ಯಕಾರ್ಯದಿಂದ ತಮ್ಮ ಜೀವನ ಸಾರ್ಥಕವಾಯಿತು ಎಂಬ ಸಂತೃಪ್ತಿಮನೋಭಾವವೂ ಅವರಲ್ಲಿ ಕಂಡುಬರುತ್ತಿತ್ತು.

ದೇವಾಲಯಗಳ ಕಾರ್ಯ ಕೇವಲ ಒಬ್ಬಿಬ್ಬರಿಂದ ಆಗುವಂತಹುದಲ್ಲ. ರಾಜಮಹಾರಾಜರೂ ಮಂತ್ರಿಗಳೂ ದಂಡನಾಯಕರೇ ಮೊದಲಾದ ಅಧಿಕಾರಿಗಳು ದೇವಾಲಯಗಳನ್ನು ಕಟ್ಟಿಸಿರುವುದಕ್ಕೆ ಶಾಸನಗಳಲ್ಲಿ ಆಧಾರಗಳಿವೆ. ಕಷ್ಟಪಟ್ಟು ಹಣವನ್ನು ಸಂಪಾದಿಸಬೇಕು. ಈ ಹಣವನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸಬೇಕು ಎಂಬ ನಿಷ್ಕಾಮ ಬುದ್ಧಿಯಿಂದ ಪ್ರೇರೇಪಿತರಾದ ಅನೇಕರು ದೇವಾಲಯಗಳ ನಿರ್ಮಾಣಕ್ಕೆ ಕಾರಣಭೂತರಾಗಿದ್ದಾರೆ. ಮಾನವನ ದೇಹ ನಶ್ವರವಾದುದು ಐಶ್ವರ್ಯ ಅಧಿಕಾರ ಶಾಶ್ವತವಲ್ಲ. ಈ ಅಶಾಶ್ವತವಾದುದನ್ನು ಶಾಶ್ವತವಾದುದಕ್ಕೆ ವಿನಿಯೋಗಿಸಬೇಕು. ಧನವನ್ನು ಕಳ್ಳರು ಅಪಹರಿಸಿಬಿಡಬಹುದು. ಆದುದರಿಂದ ದೇವಾಲಯವನ್ನು ಕಟ್ಟಿಸಿಬಿಟ್ಟರೆ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ಅಂದಿನ ಜನ ನಂಬಿದ್ದರು. ಇದಕ್ಕೆ ಒಂದು ದೃಷ್ಟಾಂತವನ್ನು ದಾವಣಗೆರೆಯ ಈ ಶಾಸನದಿಂದ ಕಂಡುಕೊಳ್ಳಬಹುದಾಗಿದೆ:

> ಪಡೆದರ್ಥಂ ಕಳ್ಳರಿಂ ದಾಯಿಗರಿನಳಿಪರಿಂ ಭೂಪರಿಂ ಕಿಚ್ಚಿನಿಂದಂ
> ಕಿಡುಗುಂ ತಾನಂತದೇಂ ಶಾಶ್ವತಮೆನಿ........ಶಾಶ್ವತಂ ಮಾರ್ಪೆನೆಂದಾ

ನವೆ ಪೂಜ್ದೆ ಪೂರ್ಣಚಂದ್ರಾನನೆ ಜಿನಪತಿ ಸರ್ವೇಶನುಂ ಸೆಂಬನೂರೊಳು
ಕಮರಯ್ಯಂ ತಾನೆನಲು ಮಾಡಿಸಿದಳಧಿಕ ಸದ್ಭಕ್ತಿಯಿಂ ಕಾಳಿಯಕ್ಕಂ

ಕಾಳಿಯಕ್ಕ ಎಂಬುವವಳು ಸೆಂಬನೂರಿನಲ್ಲಿ ಜಿನದೇವಾಲಯವನ್ನು ಕಟ್ಟಿಸಿದಳು. ತಾನು ಸಂಪಾದಿಸಿದ ಹಣವು ಕಳ್ಳರಿಂದ ದಾಯಾದ್ಯರಿಂದ ರಾಜರಿಂದ ಬೆಂಕಿಯಿಂದ ಹಾಳಾಗಬಹುದು. ಅದರಿಂದ ಈ ಅಶಾಶ್ವತವಾದುದನ್ನು ಶಾಶ್ವತಗೊಳಿಸುವೆನು ಎಂದು ಹೇಳಿ ದೇವಾಲಯವನ್ನು ಕಟ್ಟಿಸಿದಳು. ಇದೇ ರೀತಿ ಅಯಿಕಜೀಯ, ಒಸಪಾಚಾರಿ ಎಂಬುವರೂ ಸಂಸಾರಕ್ಕೆ ಹೆದರಿ ದೇವಾಲಯಗಳನ್ನೂ ಕೆರೆಕಟ್ಟೆಗಳನ್ನೂ ಕಟ್ಟಿಸಿದಂತೆ ಶಾಸನಗಳು ಸಾರುತ್ತಿವೆ

ದೇವಾಲಯಗಳನ್ನು ಕಟ್ಟಿಸುತ್ತಿದ್ದವರ ಜೊತೆಗೆ ಅವುಗಳ ನಿರ್ವಹಣೆಗೆ ದತ್ತಿಗಳನ್ನು ದೇವಾಲಯಗಳನ್ನು ಕಟ್ಟಿಸಿದವರೇ ಅಲ್ಲದೆ ಹಲವಾರು ಭಕ್ತರೂ ಕೊಡುತ್ತಿದ್ದುದಕ್ಕೆ ಶಾಸನಾಧಾರಗಳಿವೆ. ಒಟ್ಟಿನಲ್ಲಿ ದೇವಸ್ಥಾನದ ಕಾರ್ಯ ಸಾರೋದ್ಧಾರವಾಗಿ ನಡೆದುಕೊಂಡು ಬರಬೇಕಾದರೆ ಅದಕ್ಕೆ ಬೇಕಾದಷ್ಟು ದತ್ತಿಗಳನ್ನು ಸಂಬಂಧಿಸಿದವರು ಕೊಡುತ್ತಾ ಬಂದಿದ್ದಾರೆ. ಇದಕ್ಕೆ ವಿಷ್ಣುವರ್ಧನನ ದಂಡನಾಯಕ ಗಂಗಚಮೂಪತಿಯ ದೃಷ್ಟಾಂತವನ್ನು ನೋಡಬಹುದಾಗಿದೆ. ಈ ಗಂಗಚಮೂಪತಿ ಚೋಳಸಾಮಂತರನ್ನು ಸೋಲಿಸಿದ್ದಕ್ಕಾಗಿ ಸಂಪ್ರೀತನಾದ ವಿಷ್ಣುವರ್ಧನ ಮೆಚ್ಚುವನ್ನು ಬೇಡಿಕೊಳ್ಳುವಂತೆ ಅವನಿಗೆ ತಿಳಿಸುವನು. ಗಂಗಚಮೂಪತಿ ಬೇಡಿಕೊಂಡದ್ದಾದರೂ ಏನು ?

ಅವನಿಪನೆನಗಿತ್ತಪನೆಂ
ದವರಿವರವೊಲುಳಿದ ವಸ್ತುವಂ ಬೇಡದೆ ಭೂ
ಭುವನಂ ಬಣ್ಣಿಸೆ ಗೋವಿಂ
ದವಾಡಿಯಂ ಬೇಡಿದಂ ಜಿನಾರ್ಚನಲುಬ್ಧಂ

ಗಂಗವಾಡಿಯ ಬಸದಿಗಳೆನಿತೊಳವನಿತುಮಂ ತಾನೆಯ್ದೆ ಪೊಸಯಿಸಿದಂ
ಗಂಗವಾಡಿಯ ಗೊಮ್ಮಟದೇವರ್ಗೆ ಸುತ್ತಾಲಯಮನೆಯ್ದೆ ಮಾಡಿಸಿದಂ
ಗಂಗವಾಡಿಯ ತಿಗುಳರಂ ಬೆಂಕೊಂಡು ವೀರಗಂಗಂಗೆ ನಿಮಿರ್ಚಿಕೊಟ್ಟಂ
ಗಂಗರಾಜನಾ ಮುನ್ನಿನ ಗಂಗರ ರಾಯಂಗಂ ನೂರ್ಮಡಿ ಧನ್ಯನತ್ತೆ ॥

ಅವರಿವರಂತೆ ಪದಾರ್ಥಗಳನ್ನು ಬೇಡದೆ ಗೋವಿಂದವಾಡಿ ಎಂಬ ಗ್ರಾಮವನ್ನು ಪಡೆದು ಅದನ್ನು ಗೊಮ್ಮಟೇಶ್ವರ ದೇವರ ಪೂಜೆಗೆ ಬಿಟ್ಟುಕೊಟ್ಟನು. ಗಂಗವಾಡಿಯಲ್ಲಿದ್ದ ಬಸದಿಗಳೆಲ್ಲವನ್ನೂ ಜೀರ್ಣೋದ್ಧಾರ ಮಾಡಿದನು. ಗೊಮ್ಮಟ ದೇವಾಲಯಕ್ಕೆ ಪ್ರಾಕಾರವನ್ನು ಕಟ್ಟಿಸಿದನು.

ಭಾರತೀಯ ಜನಜೀವನದಲ್ಲಿ ದೇವಾಲಯಗಳು ಮಹತ್ತರವಾದ ಪಾತ್ರವನ್ನು ನಿರ್ವಹಿಸಿವೆ. ಈ ದೇವಾಲಯಗಳ ನಿರ್ಮಾಣ ನಮ್ಮ ಜನರ ಧರ್ಮಬುದ್ಧಿಗೂ ದೈವಭಕ್ತಿಗೂ ದ್ಯೋತಕವಾಗಿವೆ.

೨

ದಾನಚಿಂತಾಮಣಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಲವಾರು ಕವಿಗಳು ತಮ್ಮ ಆಶ್ರಯದಾತರನ್ನು ಕೊಂಡು ಕೊನೆದಾಡಿರುವುದನ್ನು ನಾವು ಕಾಣುತ್ತೇವೆ. ಇವರಲ್ಲಿ ಮಹಾಕವಿ ರನ್ನನೂ ಒಬ್ಬ. ಈತ "ಫಣಿಪತಿಯ ಫಣಾರತ್ನಮುಂ ರನ್ನನ ಕೃತಿರತ್ನಮುಂ ಪರೀಕ್ಷಿಪಂಗೆಂಟೆರ್ದೆಯೇ ?" ಎಂದು ಪ್ರಶ್ನಿಸಿರುವುದೂ ಸರ್ವವಿದಿತವಾದುದು. ರನ್ನನ ಈ ಅತಿಯಾದ ಆತ್ಮಾಭಿಮಾನಕ್ಕೆ ಕಾರಕಳೂ ಪ್ರೇರಕಳೂ ಪೋಷಕಳೂ ಆದವಳು ಅತ್ತಿಮಬ್ಬೆ. ಆಕೆಯ ನಾಮಸ್ಮರಣೆಯೇ ಪುಣ್ಯಪ್ರದವೆಂದೂ

ಕವಿಗಳು ಹೇಳಿದ್ದಾರೆ. ಕಾವ್ಯಗಳಲ್ಲಿ, ಶಾಸನಗಳಲ್ಲಿ ಈಕೆಯ ಬಗೆಗೆ ಅನೇಕ ಉಲ್ಲೇಖಗಳು ಕಂಡುಬರುತ್ತವೆ.

ಕರ್ನಾಟಕದಲ್ಲಿ ಹತ್ತನೆಯ ಶತಮಾನದಲ್ಲಿ ರಾಷ್ಟ್ರಕೂಟರ ಆಡಳಿತವನ್ನು ಕೊನೆಗಾಣಿಸಿ ಚಾಳುಕ್ಯ ಸಾಮ್ರಾಜ್ಯವನ್ನು ನೆಲೆಗೊಳಿಸಿದವನು ಆಹವಮಲ್ಲ ನೂರ್ಮಡಿ ತೈಲಪ. ಈತನ ಮಹಾಮಂತ್ರಿಯಾಗಿದ್ದ ಧಲ್ಲಪನ ಹಿರಿಯಮಗ ನಾಗದೇವ. ಈ ನಾಗದೇವನ ಪತ್ನಿಯರೇ ಅತ್ತಿಮಬ್ಬೆ ಮತ್ತು ಆಕೆಯ ತಂಗಿ ಗುಂಡಮಬ್ಬೆ. ಸ್ವಾಮಿಕಾರ್ಯಧುರಂಧರನೂ ಮಹಾಪರಾಕ್ರಮಿಯೂ ಆಗಿದ್ದ ಸೇನಾಪತಿ ನಾಗದೇವ ಅಕಾಲಮರಣಕ್ಕೆ ತುತ್ತಾದನು. ಆತನ ಪತ್ನಿಯರಲ್ಲಿ ಕಿರಿಯವಳಾದ ಗುಂಡಮಬ್ಬೆ ಸಹಗಮನ ಮಾಡುವಳು. ಅತ್ತಿಮಬ್ಬೆ ತನ್ನ ಮಗನ ರಕ್ಷಣೆಗಾಗಿ ನಿಲ್ಲುವಳು. ಪತಿಯ ಮರಣಾನಂತರ ಜೈನವ್ರತನಿಷ್ಠೆಯ ಉಗ್ರದೀಕ್ಷೆಯನ್ನು ವಹಿಸಿದಳು. ಅನೇಕ ದಾನಧರ್ಮಗಳನ್ನೂ ನೆರವೇರಿಸಿದಳು.

ಅತ್ತಿಮಬ್ಬೆ ರನ್ನನಿಗೆ ಆಶ್ರಯ ನೀಡಿ ಆತನಿಂದ ಅಜಿತಪುರಾಣವನ್ನು ಬರೆಸಿದಳು. ರನ್ನ ಅತ್ತಿಮಬ್ಬೆಯ ದಾನಗುಣವನ್ನು ಮಾತ್ರವಲ್ಲದೆ ಧರ್ಮನಿಷ್ಠೆಯನ್ನೂ ಶೀಲವ್ರತವನ್ನೂ ಸದಾಚರಣೆಯನ್ನೂ ಕೊಂಡಾಡಿದ್ದಾನೆ.

ಅಳುರದು ಕಿರ್ಚು ಮುಟ್ಟದು ವಿಷಾಹಿ ಮಹಾಸತಿಯಿರ್ದ ಮಂಡಲಂ
ಬೆಳೆವುದು ಬೇಡಿದಂತೆ ಮಳೆಕೊಳ್ವುದೆನಿಪ್ಪ ಜಸಕ್ಕೆ ನೋಂತ ಭೂ
ತಿಳಕ ಪವಿತ್ರೆಯಂ ಗುಣಪವಿತ್ರೆಯನಾ ಸತಿಯಂ ಮಹಾಸತೀ
ತಿಳಕೆಯನತ್ತಿಮಬ್ಬರಸಿಯಂ ಪೆಸರ್ಗೊಳ್ವುದು ಪುಣ್ಯಕಾರಣಂ

ಅತ್ತಿಮಬ್ಬೆ ಇರುವ ನಾಡಿನಲ್ಲಿ ಬೆಂಕಿಯ ಭಯವಾಗಲಿ ಸರ್ಪಗಳ ಹೆದರಿಕೆಯಾಗಲಿ ಇರುವುದಿಲ್ಲ. ಅಲ್ಲಿ ಕಾಲಕಾಲಕ್ಕೆ ಮಳೆಬೆಳೆಗಳಾಗಿ ಆ ನಾಡು ಸಮೃದ್ಧಿಯಿಂದ ಇರುತ್ತದೆ. ಆದುದರಿಂದ ಆ ಮಹಾಸತಿಯ ನಾಮಸ್ಮರಣೆ ಪುಣ್ಯಕಾರಕವಾದುದು.

ರನ್ನನಿಗೆ ಅತ್ತಿಮಬ್ಬೆಯ ವಿಷಯದಲ್ಲಿ ಅಪಾರವಾದ ಪ್ರೀತಿ ಗೌರವ ಭಕ್ತಿ ಶ್ರದ್ಧೆ ವಿಶ್ವಾಸಗಳು ಮನೆಮಾಡಿಕೊಂಡಿದ್ದವು. ಆದುದರಿಂದಲೇ ಆಕೆಯ ನಾಮೋಚ್ಚಾರಣೆ ರಕ್ಷಾಮಂತ್ರವೆಂದೇ ಆತನು ದೃಢವಾಗಿ ನಂಬಿದ್ದನು. ಅತ್ತಿಮಬ್ಬೆಯ ಸಚ್ಚಾರಿತ್ರ ಶೀಲಾದಿಗಳನ್ನು ಬಿತ್ತರಿಸುವ ಪದ್ಯವಿದು :

ಬಿಳಿಯರಳೆಯಂತೆ ಗಂಗಾ
ಜಳದಂತೆಸೆವಜಿತಸೇನಮುನಿಪತಿಯ ಗುಣಾ
ವಳಿಯಂತೆ ನೆಗಟ್ದ ಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ

ದಾನಧರ್ಮಗಳಿಗೆ ಚಾಳುಕ್ಯರಾಜರು ಹೆಸರಾಂತವರು. ಅತ್ತಿಮಬ್ಬೆಯ ಪತಿ ನಾಗದೇವ ಈ ವಂಶಕ್ಕೆ ಸೇರಿದವನು. ಪತಿಯ ಮರಣಾನಂತರ ಅತ್ತಿಮಬ್ಬೆ ಆ ಮನೆತನದ ವಂಶದ ಗೌರವವನ್ನು ಕಾಪಾಡಿಕೊಂಡು ಬಂದಿದ್ದಾಳೆ. ಮಣಿಕನಕಖಚಿತವಾದ ಒಂದುಸಾವಿರದ ಐನೂರು ಜಿನಪ್ರತಿಮೆಗಳನ್ನು ಮಾಡಿಸಿ ದಾನಮಾಡಿದ್ದಾಳೆ. ಅಲ್ಲದೆ ಒಂದುಸಾವಿರದ ಐನೂರು ಜಿನಬಸದಿಗಳನ್ನು ಕಟ್ಟಿಸಿ ತನ್ನ ಧರ್ಮಶ್ರದ್ಧೆಯನ್ನು ಮೆರೆದಿದ್ದಾಳೆ.

ಅತ್ತಿಮಬ್ಬೆ ಪರಮಜೈನಭಕ್ತೆ. ಚಾವುಂಡರಾಯ ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರ ವಿಗ್ರಹವನ್ನು ಕಡೆಯಿಸಿದ ಸಂಗತಿಯನ್ನು ಕೇಳಿದ ಆಕೆ ಜಿನೇಶ್ವರನ ದರ್ಶನವನ್ನು ಮಾಡುವ ವರೆಗೆ ಅನ್ನವನ್ನು ಮುಟ್ಟುವುದಿಲ್ಲವೆಂದೂ ನಿಯಮವನ್ನು ಹಿಡಿದಳು. ತನ್ನ ನಾಡಿನಿಂದ ಶ್ರವಣ

ಬೆಳಗೊಳಕ್ಕೆ ನಿರಂತರವಾಗಿ ಪ್ರಯಾಣಮಾಡಿ ಗೊಮ್ಮಟೇಶ್ವರನ ಸಾನ್ನಿಧ್ಯದಲ್ಲಿ ನಿಂತಾಗ ಆಕೆಯ ಮಾರ್ಗಾಯಾಸ ಸೂಚಕವಾಗಿಯೋ ಎಂಬಂತೆ ಕಾಲವಲ್ಲದ ಕಾಲದಲ್ಲಿಯೂ ಮಳೆ ಸುರಿಯಿತಂತೆ. ಆ ಪದ್ಯ ಇಂತಿದೆ :

ಉನ್ನತ ಕುಕ್ಕುಟೇಶ್ವರ ಜಿನೇಶ್ವರನಂ ಜಿನಭಕ್ತಿವೋಗಿ ಕಾ
ಣ್ಬೆನ್ನೆಗಮನ್ನಮಂ ಬಿಸುಟು ಪರ್ವತಮಂ ಪರಿದೇಱಿ ತಜ್ಜಿನಾ
ಸನ್ನದೊಳತ್ತಿಮಬ್ಬೆಗೆ ಪಥಶ್ರಮಮಂ ಕಿಡಿಸಲ್ ಅಕಾಲವೃಷ್ಟಿಯಾ
ಯ್ತೆನ್ನದೊ ದೇವಭಕ್ತೆಗದು ಚೋದ್ಯಮೆ ಕೊಳ್ಳವೆ ಪುಷ್ಪವೃಷ್ಟಿಗಳ್

ದಾನಚಿಂತಾಮಣಿ ಅತ್ತಿಮಬ್ಬೆ ಪೊನ್ನನ ಶಾಂತಿಪುರಾಣದ ಒಂದು ಸಹಸ್ರಪ್ರತಿಗಳನ್ನು ಬರೆಸಿ ದಾನಮಾಡಿಸಳಂತೆ. ಶಾಸ್ತ್ರದಾನ, ಅನ್ನದಾನ, ಅರ್ಥದಾನ, ಜಿನಪ್ರತಿಮೆಗಳ ದಾನ, ಜಿನ ಬಸದಿಗಳ ನಿರ್ಮಾಣ—ಇವೇ ಮೊದಲಾದ ಲೋಕೋತ್ತರಕಾರ್ಯಗಳು ದಾನಚಿಂತಾಮಣಿಯ ಹೆಸರನ್ನು ಜೀವಂತಗೊಳಿಸಿವೆ. ಮಹಾಭಾರತದ ಕರ್ಣ 'ದಾನಶೂರ'ನಾದರೆ ಕನ್ನಡ ಸಾಹಿತ್ಯದ ಅತ್ತಿಮಬ್ಬೆ 'ದಾನಚಿಂತಾಮಣಿ' ಎನಿಸಿದ್ದಾಳೆ. ದಾನಧರ್ಮಗಳಿಗೆ ಹೆಸರಾದ ಈ ಜಿನ ಧರ್ಮಪತಾಕೆಯನ್ನು ಸ್ತುತಿಸಿದ ಕನ್ನಡ ಕವಿಗಳು ಕೃತಾರ್ಥರಾಗಿದ್ದಾರೆ.

ಅಕಳಂಕಚರಿತೆ ಜಿನಚರ
ಣಕಂಜಕಿಂಜಲ್ಕಪುಂಜರಂಜಿತನು ಸ
ರ್ವಕಳಾವಿದೆ ಶೌಚ ಘಟಾಂ
ಕಿಕೆ ದಾನವಿನೋದಿಯೆಂಬ ಬಿರುದಿಂ ನೆಗಳ್ದಳ್

ಗುಣದ ಖಣಿ ದಾನಚಿಂತಾ
ಮಣಿ ವಿಮಲಚರಿತ್ರೆ ಜೈನಶಾಸನ ರಕ್ಷಾ
ಮಣಿ ಸಜ್ಜನೈಕಚೂಡಾ
ಮಣಿಯೆಂದೆಂದತ್ತಿಮಬ್ಬೆಯಂ ಪೊಗಳದರಾರ್

೩

ಸ್ತ್ರೀ

ಭರತಖಂಡದಲ್ಲಿ ಸ್ತ್ರೀಯರಿಗೆ ವಿಶೇಷ ಸ್ಥಾನಮಾನಗಳಿವೆ. ವಿಶ್ವದ ಇತರ ದೇಶಗಳ ಸ್ತ್ರೀಯರಿಗಿಂತ ನಮ್ಮ ದೇಶದ ಸ್ತ್ರೀಯರಿಗಿರುವ ಅರ್ಹತೆಗಳು ವಿಶಿಷ್ಟವಾಗಿವೆ, ಮಿಗಿಲಾಗಿವೆ. ಪ್ರಾಚೀನ ಕಾಲದಲ್ಲಿ ಈ ದೇಶದ ಸ್ತ್ರೀಯರಿಗೆ ಮಹತ್ತರವಾದ ಗೌರವವನ್ನು ತೋರುತ್ತಿದ್ದುದಕ್ಕೆ ನಮ್ಮಲ್ಲಿ ಆಧಾರಗಳಿವೆ. ಭಾರತದ ಸ್ತ್ರೀಯರು ಪತಿವ್ರತಾಶಿರೋಮಣಿಯರು. ಇವರು ಸದಾ ಪತಿಗೆ ಅನುಕೂಲವರ್ತಿಗಳಾಗಿದ್ದು ಇಹಪರಗಳೆರಡರಲ್ಲಿಯೂ ಸದ್ಗತಿಯನ್ನು ಪಡೆಯುತ್ತಾರೆ ಎಂಬ ದೃಢವಾದ ನಂಬಿಕೆ ನಮ್ಮಲ್ಲಿ ನೆಲೆಗೊಂಡಿದೆ. ಈ ಉದಾತ್ತಧ್ಯೇಯವನ್ನೇ ನಮ್ಮ ದೇಶದಲ್ಲಿ ಅನಾದಿಕಾಲದಿಂದ ಅನುಸರಿಸಿಕೊಂಡು ಬರಲಾಗುತ್ತಿದೆ.

ವೇದಾಗಮ ಪುರಾಣ ಇತಿಹಾಸಗಳಲ್ಲಿ ಸ್ತ್ರೀಯರ ಬಗೆಗೆ ಸಾಕಷ್ಟು ಸದಭಿಪ್ರಾಯಗಳು ವ್ಯಕ್ತವಾಗಿದ್ದರೂ ಅವರ ಕರ್ತವ್ಯದ ಬಗೆಗೆ ಇತಿಮಿತಿಗಳನ್ನು ಸೂಚಿಸಲಾಗಿದೆ. ರಾಮಾಯಣ ಮಹಾಭಾರತಗಳಲ್ಲಿ ಸ್ತ್ರೀಯರ ಬಗೆಗೆ ವಿಶಿಷ್ಟ ಧೋರಣೆಯೇ ಕಂಡುಬರುತ್ತದೆ. ಸ್ತ್ರೀ ಕಾವ್ಯದ ಅಧಿದೇವತೆಯಾಗಿದ್ದಾಳೆ, ಕಾವ್ಯರಚನೆಗೆ ಸ್ಫೂರ್ತಿಯಾಗಿದ್ದಾಳೆ. ಕೆಲವೆಡೆ ಆಕೆ ಕಾವ್ಯಕರ್ತೃವೂ ಆಗಿದ್ದಾಳೆ. ಮನುಸ್ಮೃತಿಯಲ್ಲಿ ಒಂದೆಡೆ :

" ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ "
ಎಲ್ಲಿ ಸ್ತ್ರೀಯರು ಗೌರವಿಸಲ್ಪಡುವರೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ ಎಂದು ಹೇಳಿದ್ದಾರೆ. ಮತ್ತೊಂದೆಡೆ :

" ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ
ರಕ್ಷಂತಿ ಸ್ಥಾವಿರೇ ಪುತ್ರಾ ನಸ್ತ್ರೀ ಸ್ವಾತಂತ್ರ್ಯಮರ್ಹತಿ "

ಬಾಲ್ಯದಲ್ಲಿ ತಂದೆಯಿಂದಲೂ, ಯೌವನದಲ್ಲಿ ಪತಿಯಿಂದಲೂ, ವೃದ್ಧಾಪ್ಯದಲ್ಲಿ ಪುತ್ರರಿಂದಲೂ ರಕ್ಷಿಸಲ್ಪಡುತ್ತಾಳೆ. ಯಾವ ಸ್ತ್ರೀಯೂ ಸ್ವಾತಂತ್ರ್ಯವನ್ನು ಹೊಂದಲು ಅರ್ಹಳಲ್ಲ ಎಂದು ಹೇಳಿದ್ದಾರೆ. ಪ್ರಾಚೀನರಲ್ಲೇ ಸ್ತ್ರೀಯರ ಬಗೆಗೆ ಈ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗಿರುವುದು ಕಂಡುಬರುತ್ತದೆ.

ಜಗತ್ತಿನ ಎಲ್ಲ ಅನರ್ಥಗಳಿಗೂ ಸ್ತ್ರೀಯೇ ಮೂಲ, ಸ್ತ್ರೀ ಬುದ್ಧಿ ಪ್ರಳಯಾಂತಕ, ಸ್ತ್ರೀ ಮಾಯೆ ಮೋಸಗಾರ್ತಿ ಎಂದೂ ಮುಂತಾಗಿ ಕೆಲವರು ಉದ್ಗಾರ ತೆಗೆದಿದ್ದಾರೆ. ಅದಕ್ಕೆ ಅವರು ಸೀತೆಯ ದೆಸೆಯಿಂದ ರಾವಣ ಸತ್ತ, ದ್ರೌಪದಿಯಿಂದ ಕೀಚಕ ಸತ್ತ, ಮೇನಕೆಯಿಂದ ವಿಶ್ವಾಮಿತ್ರ ಹಾಳಾದ ಮುಂತಾದ ದೃಷ್ಟಾಂತಗಳನ್ನು ನೀಡುತ್ತಾರೆ.

ಪ್ರಾಚೀನ ಕನ್ನಡ ಕವಿಗಳು ಸ್ತ್ರೀಯರನ್ನು ನಖಶಿಖಾಂತವಾಗಿ ಹೊಗಳಿದ್ದಾರೆ. ಇದಕ್ಕಾಗಿ ಸಂಧಿಗಳನ್ನೇ, ಆಶ್ವಾಸಗಳನ್ನೇ ಮೀಸಲಾಗಿರಿಸಿದ್ದಾರೆ ಅಷ್ಟೇ ಏಕೆ ಇಡೀ ಕಾವ್ಯಗಳನ್ನೇ ಬರೆದಿದ್ದಾರೆ. ನೇಮಿಚಂದ್ರನಂತೂ " ಸ್ತ್ರೀ ರೂಪಮೆ ರೂಪಂ " ಎಂದುಬಿಟ್ಟಿದ್ದಾನೆ.

ಮತ್ತೊಬ್ಬ ಕವಿ :

ಕುಡಿದರಗಿಸಿಕೊಳ್ಳಬಹುದು ಗರಳವನು
ತುಡುಕಬಹುದು ಪಾವಕನ
ತಡೆಯಬಹುದು ಮದಕರಿಯ ತಿಳಿಯಬಾರ
ದೊಡನೆ ಮಾನಿನಿಯರ ಮನವ

ಎಂದು ಹೇಳಿ, ಅಷ್ಟಕ್ಕೇ ತೃಪ್ತನಾಗಲಿಲ್ಲ.

ತರುಣಿಯರುಗಳ ನಂಬದೆ ಹರಿಹರಬ್ರ
ಹ್ಮರು ತಂತಮ್ಮ ಸತಿಯರ
ಉರದೆ ಶಿರದೆ ಬಾಯೊಳು ತಾಳೆ ಮಿಕ್ಕಿನ
ನರರ ಲೆಕ್ಕಿಪರೆ ನಾರಿಯರು

ದೇವಾಧಿದೇವತೆಗಳಾದ ಹರಿಹರ ಬ್ರಹ್ಮರೂ ಕೂಡ ಸ್ತ್ರೀಯರನ್ನು ನಂಬಲು ಸಾಧ್ಯವಾಗದೆ ಎದೆಯಲ್ಲಿ, ತಲೆಯಲ್ಲಿ, ಬಾಯಲ್ಲಿ ಅವರನ್ನು ಬಚ್ಚಿಟ್ಟುಕೊಂಡರಂತೆ. ಇನ್ನು ಮಾನವರ ಪಾಡೇನು ಎಂದು ಹಾಸ್ಯಮಾಡಿದ್ದಾನೆ.

ಸರ್ವಜ್ಞ :

ಹೆಣ್ಣಿನಿಂದಲೆ ಇಹವು ಹೆಣ್ಣಿನಿಂದಲೆ ಪರವು
ಹೆಣ್ಣಿಂದ ಸಕಲಸಂಪದವು ಹೆಣ್ಣೊಲ್ಲ
ದಣ್ಣಗಳು ಯಾರೋ

ಎಂದು ಪ್ರಶ್ನಿಸಿದ್ದಾನೆ.

ವಚನಕಾರರು ಸ್ತ್ರೀಯರಿಗೆ ಮಿಗಿಲಾದ ಗೌರವವನ್ನು ಕೊಟ್ಟಿದ್ದಾರೆ. ಪುರುಷರಂತೆ

ಆಕೆಯೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಕೃಷಿಗೈದಿರುವುದನ್ನು ಕಾಣಬಹುದಾಗಿದೆ. ಸ್ತ್ರೀಯರನ್ನು ಮಾಯೆ ಮುಂತಾಗಿ ಟೀಕಿಸಿರುವುದನ್ನು :

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ

ಎಂದು ಪ್ರಭುದೇವರು ಅಲ್ಲಗಳೆದಿದ್ದಾರೆ. ಚೆನ್ನಬಸವಣ್ಣ ಮಹದೇವಿಯಕ್ಕನ ಬಗೆಗೆ:

ತನುವಿನೊಳಗಿದ್ದು ತನುವ ಗೆದ್ದಳು
ಮನದೊಳಗಿದ್ದು ಮನವ ಗೆದ್ದಳು
ವಿಷಯದೊಳಗಿದ್ದು ವಿಷಯಂಗಳ ಗೆದ್ದಳು
ಅಂಗಸಂಗವ ತೊಱೆದು ಭವವ ಗೆದ್ದಳು
ಕೂಡಲ ಚೆನ್ನಸಂಗಯ್ಯನ ಹೃದಯಕಮಲವ
ಬಗಿದುಹೊಕ್ಕು ನಿಜಪದವನೈದಿದ
ಮಹದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ

ಎಂಬ ಈ ಉನ್ನತ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಸಿದ್ಧರಾಮನಾದರೋ :

ತಾ ಮಾಡಿದ ಹೆಣ್ಣು ತನ್ನ ತಲೆಯನೇಱಿತ್ತು
ತಾ ಮಾಡಿದ ಹೆಣ್ಣು ತೊಡೆಯನೇಱಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇಱಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇಱಿತ್ತು
ಅದು ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ,
ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿಕಾರ್ಜುನ ನೋಡಾ

ಎಂದು ಹೇಳಿ ಹೆಣ್ಣೇ ದೇವರೆಂದು ಸಾರಿದ್ದಾನೆ.

ಹೆಣ್ಣಿನ ಬಗೆಗೆ ಕಂಡುಬಂದ ಈ ಅನಾದರವನ್ನು ಸಂಚಿಯ ಹೊನ್ನಮ್ಮ :

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು

ಈ ರೀತಿ ಹೇಳಿ ತೊಡೆದುಹಾಕಿದ್ದಾಳೆ. ಹೆಣ್ಣು ತಾಯಾಗಿ, ತಂಗಿಯಾಗಿ, ಅಕ್ಕನಾಗಿ, ಹೆಂಡತಿಯಾಗಿ ಜನಜೀವನದಲ್ಲಿ ನಿಗಿಲಾದ ಪಾತ್ರವನ್ನು ನಿರ್ವಹಿಸಿದ್ದಾಳೆ. ಆದ್ದರಿಂದಲೇ ನಮ್ಮ ಪ್ರಾಚೀನರು ಮಾತೃದೇವೋ ಭವ, ಪಿತೃದೇವೋ ಭವ ಎಂದು ಸ್ತ್ರೀಗೆ ಮೊದಲ ಸ್ಥಾನವನ್ನು ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಭಾರತೀಯ ಸ್ತ್ರೀ ಪ್ರಾಚೀನ ಸಂಸ್ಕೃತಿಯನ್ನೂ, ಆಧುನಿಕ ನಾಗರಿಕತೆಯನ್ನೂ ಸಮನ್ವಯಮಾಡಿಕೊಂಡು ಆದರ್ಶಪ್ರಾಯಳಾಗಿದ್ದಾಳೆ.

೪

ಮಿತ್ರಪ್ರೇಮ

ಮಹಾಭಾರತದ ಕರ್ಣ–ದುರ್ಯೋಧನರ ಸ್ನೇಹ ಲೋಕವಿಖ್ಯಾತವಾದುದು. ಪಂಪ ವಿಕ್ರಮಾರ್ಜುನ ವಿಜಯದಲ್ಲಿ ಈ ಪ್ರಸಂಗವನ್ನು ಅತ್ಯಂತ ಸ್ವಾರಸ್ಯಕರವಾದುದನ್ನಾಗಿ ಮಾಡಿದ್ದಾನೆ. ‘ಒಡಲೆರಡು ಜೀವ ಒಂದೇ’ ಎಂಬಂತಿದ್ದರು ಕರ್ಣ ದುರ್ಯೋಧನರು. ಕರ್ಣನ ಪೂರ್ವಾಪರಗಳನ್ನೆಲ್ಲ ಅರಿತಿದ್ದ ದುರ್ಯೋಧನ ಆತನಿಗೆ ಸೈನ್ಯಾಧಿಪತಿ ಪಟ್ಟವನ್ನು ಕಟ್ಟಲು ಸ್ವಾಮಿಕಾರ್ಯಧುರಂಧರನಾದ ಕರ್ಣ ವೀರಾವೇಶದಿಂದ ಹೋರಾಡಿ ಮಡಿಯುವನು. ಕರ್ಣನ ಸಾವಿನ ಸಂಗತಿಯನ್ನು ಕೇಳಿದ ದುರ್ಯೋಧನನಿಗೆ ಬರಸಿಡಿಲೆರಗಿದಂತಾಯಿತು. ಪ್ರಿಯಬಂಧು ಮಿತ್ರನ ಸಾವಿಗಾಗಿ ಪರಿಪರಿಯಾಗಿ ಪರಿತಪಿಸಿ ಕರ್ಣನ ಗುಣಗಾನ ಮಾಡುತ್ತಿದ್ದ ದುರ್ಯೋಧನನನ್ನು ಕುರಿತು ಅಶ್ವತ್ಥಾಮ “ಕುಲಬಲ ಪರಾಕ್ರಮಗಳಿಂದ ಕೂಡಿದವರನ್ನೆಲ್ಲ ಬಿಟ್ಟು ಅಂಬಿಗನಾದ ಆ ಕರ್ಣನಿಗಾಗಿ ಪರಿತಪಿಸುತ್ತಿರುವೆಯಲ್ಲಾ! ನಿನ್ನ ತಮ್ಮನಾದ ದುಶ್ಶಾಸನನ ರಕ್ತವನ್ನು ಭೀಮ ಕುಡಿಯುತ್ತಿದ್ದಾಗ ಕರ್ಣ ಏನು ಮಾಡಿದ? ನಿನಗೂ ಆ ಕರ್ಣನಿಗೂ ಯಾವುದೋ ಋಣಾನುಬಂಧ, ಕರ್ಣನಿಗಿಂತ ಶಕ್ತರು ಬೇರೆ ಯಾರೂ ಇಲ್ಲವೋ? ನನಗೆ ಅಪ್ಪಣೆಯನ್ನು ಕೊಡು, ಯುದ್ಧದಲ್ಲಿ ಎಲ್ಲರನ್ನೂ ಕೊಂದುಬರುತ್ತೇನೆ” ಎಂದು ಹೇಳಿದನು. ಕರ್ಣನನ್ನು ತಿರಸ್ಕರಿಸಿ ನುಡಿದುದನ್ನು ಕೇಳಿದ ದುರ್ಯೋಧನ ಅಶ್ವತ್ಥಾಮನನ್ನು ಕೊಲ್ಲುವಷ್ಟು ಕೋಪವನು ತಾಳಿ:

ನಿನ್ನಿಂದಂ ತ್ರಿಭುವನರಾ
ಜ್ಯೋನ್ನತಿ ಬಂದೆನೆಗೆ ಸಾರ್ಗುಮಪ್ಪೊಡವೊಲ್ಲೆಂ
ನೀನ್ನುಡಿದು ಬರ್ದುಕಿದ್ದೈ ಪೆಱ
ರೆನ್ನಿದಿರೊಳ್ ನುಡಿದು ಕರ್ಣನಂ ಬರ್ದುಕುವರೇ

ನಿನ್ನಿಂದ ಮೂರುಲೋಕದ ಆಧಿಪತ್ಯವು ದೊರಕಿದರೂ ಅದು ನನಗೆ ಬೇಡ. ನೀನಾದುದರಿಂದ ಈ ಮಾತುಗಳನ್ನಾಡಿ ಬದುಕಿರುವೆ. ಬೇರೆ ಯಾರಾದರೂ ನನ್ನ ಎದುರಿಗೆ ಇಂತಹ ಮಾತುಗಳನ್ನಾಡಿ ಬದುಕುತ್ತಿದ್ದರೆ? ಈ ರೀತಿ ಗರ್ಜಿಸುವನು.

ಕರ್ಣನ ಪರೋಕ್ಷದಲ್ಲಿ ಆತನ ಅವಹೇಳನ ನಡೆದದ್ದನ್ನು ಸಹಿಸದ ದುರ್ಯೋಧನ ಹೇಳಿದ ಮೇಲಿನ ಮಾತುಗಳು ಆತನ ಮಿತ್ರಪ್ರೇಮಕ್ಕೆ ಕಳಶವಿಟ್ಟಂತಿವೆ.

ಬದುಕಿದ್ದಾಗ ಹೊಗಳಿ ಅಟ್ಟಕ್ಕೇರಿಸಿ ಬೇಕಾದುದನ್ನೆಲ್ಲ ಪಡೆದುಕೊಂಡು ಸತ್ತಮೇಲೆ ತೆಗಳಿ ದೂಷಿಸುವ ಧೂರ್ತರು ನಮ್ಮ ಸಮಾಜದಲ್ಲಿ ಬಹುಮಂದಿ ಇದ್ದಾರೆ. ಇಂತಹವರಿಗೆ ದುರ್ಯೋಧನ ಕರ್ಣರ ಪ್ರಕರಣ ಅನುಕರಣೀಯವಾಗಬೇಕು, ಅನುಸರಣೀಯವಾಗಬೇಕು.

ಕರ್ಣ ದುರ್ಯೋಧನರ ಸ್ನೇಹ ಮೇರುವಿನಂತೆ ಅಚಲವಾದುದು. ಆದರ್ಶಪ್ರಾಯವಾದುದು ಎಂಬುದಕ್ಕೆ ಮಹಾಭಾರತದಲ್ಲಿ ಅನೇಕ ದೃಷ್ಟಾಂತಗಳಿವೆ. ಅವುಗಳಲ್ಲಿನ ಒಂದು ಸಂದರ್ಭ ಇದು: ಭಾರದ್ವಾಜರು ಕೌರವ ಪಾಂಡವರಿಗೆ ತಾವು ಕಲಿಸಿದ ವಿದ್ಯಾಪ್ರಭಾವವನ್ನು ಪ್ರದರ್ಶನ ಮಾಡುವುದಕ್ಕೆ ಒಂದು ರಂಗಸ್ಥಳವನ್ನು ಏರ್ಪಡಿಸುವನು. ಅರ್ಜುನ ತನ್ನ ಅಸಾಧಾರಣ ಅಸ್ತ್ರಕೌಶಲವನ್ನು ಪ್ರದರ್ಶನ ಮಾಡಲು ದುರ್ಯೋಧನನು ನಿಸ್ತೇಜನಾಗುವನು. ಕರ್ಣ ಅರ್ಜುನನೊಡನೆ ಸೆಣಸಾಡಲು ಬರುವನು. ಆಗ ದ್ರೋಣ ಕೃಪರು ಕರ್ಣನನ್ನು ಕುರಿತು “ನೀನು ಯಾರು? ನಿನ್ನ ಕುಲ ಯಾವುದು? ನಿನಗೂ ಅರ್ಜುನನಿಗೂ ಎಲ್ಲಿಯ ಜತೆ?” ಎಂದು ಕೇಳಲು ಕರ್ಣ ನಿರುತ್ತರನಾದನು. ಅದನ್ನು ಕಂಡ ದುರ್ಯೋಧನ:

ಕುಲಮೆಂಬುದುಂಟೆ ಬೀರಮೆ
ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿಂ ನೀ
ಮೊಲಿದೆಲ್ಲ ಪುಟ್ಟಿ ಬೆಳೆದಿರೊ
ಕುಲಮಿರ್ದುದೆ ಕೊಡದದೊಳಂ ಶರಸ್ತಂಬದೊಳಂ

ಪರಾಕ್ರಮವೇ: ಕುಲವಲ್ಲದೆ ಬೇರೆ ಕುಲವುಂಟೆ, ಕುಲವನ್ನೇಕೆ ದೊಡ್ಡದು ಮಾಡುವಿರಿ, ನೀವು ಮೊದಲು ಎಲ್ಲಿ ಹುಟ್ಟಿ ಬೆಳೆದಿರಿ, ಕೊಡದಲ್ಲಿಯೂ ಹುಲ್ಲಿನಲ್ಲಿಯೂ ಕುಲವಿರುವುದೆ ಎಂದು ಮೂದಲಿಸುವನು.

ನಮ್ಮ ದೇಶದಲ್ಲಿ ಕುಲದ ಪ್ರಶ್ನೆ ಬಂದಾಗಲೆಲ್ಲಾ ಮೇಲು ಕೀಳು ಎಂಬ ಭಾವನೆಯನ್ನು ವ್ಯಕ್ತಪಡಿಸಿರುವುದು ಅನೇಕ ಸಂದರ್ಭಗಳಲ್ಲಿ ಕಂಡುಬರುತ್ತದೆ. ಈ ಜಾತಿವಿಭೇದ ಪದ್ಧತಿ ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಇದೆ. ಈ ವಿಭೇದವನ್ನು ತೊಡೆದು ಹಾಕುವುದಕ್ಕೆ ಅನೇಕ ಮಹನೀಯರು ಸಮಾಜ ಸುಧಾರಕರು ಪ್ರಯತ್ನಪಟ್ಟಿದ್ದಾರೆ. ಬಸವಣ್ಣನವರು:

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದಂಗೆ

ಎಂದಿದ್ದಾರೆ. ಕನಕದಾಸರು:

ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ
ಜಲವೆ ಸಕಲ ಕುಲಕೆ ತಾಯಲ್ಲವೆ
ಜಲದ ಕುಲವನೇನಾದರು ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಿಲ್ಲವೀದೇಹ
ನೆಲೆಯರಿತು ನೀ ನೆನೆ ಕಂಡ್ಯ ಮನುಜ

ಎಂದು ಹಾಡಿದ್ದಾರೆ.

ಜಾತ್ಯತೀತವಾದ ನಮ್ಮ ಭಾರತದಲ್ಲಿ ಎಲ್ಲ ಕುಲದವರಿಗೂ ಎಲ್ಲ ಧರ್ಮದವರಿಗೂ ಸಮಾನ ಸ್ಥಾನಮಾನಗಳಿವೆ. ನಮ್ಮ ಪ್ರಾಚೀನ ಆಚಾರ್ಯರು ಯಾವುದನ್ನು ಬೋಧಿಸಿದರೋ ಅದನ್ನು ನಮ್ಮ ಸಂವಿಧಾನ ಮಾನ್ಯಮಾಡಿದೆ.

ಸ್ನೇಹಕ್ಕೆ ಸ್ವಾಮಿನಿಷ್ಠೆಗೆ ಶೌರ್ಯಕ್ಕೆ ದಾನಕ್ಕೆ ಹೆಸರಾಂತ ಕರ್ಣನನ್ನು ಪಂಪ:

ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮ
ನೊಂದೆಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ

ಎಂದು ಹೊಗಳಿದ್ದಾನೆ. ಕರ್ಣನ ಲೋಕವಿಖ್ಯಾತಗುಣಗಳು ಇಂದಿನ ಯುವಜನಕ್ಕೆ ಆದರ್ಶಪ್ರಾಯವಾಗಬೇಕು.

೩೯

ಗಂಡುತನ

ರನ್ನ ಮಹಾಕವಿಯ ಗದಾಯುದ್ಧ ಕಾವ್ಯದಲ್ಲಿ ಬರುವ ಒಂದು ಪ್ರಸಂಗ ಇದು. ಅಶ್ವತ್ಥಾಮನು ತನಗೆ ಸೇನಾಪತಿ ಪಟ್ಟವನ್ನು ಕಟ್ಟಲಿಲ್ಲವೆಂಬ ಆಕ್ರೋಶದಿಂದ ತೀರ್ಥಯಾತ್ರೆಗೆ

ಹೊರಟುಹೋಗುವನು. ಯುದ್ಧದ ಸಮಯದಲ್ಲಿ ಹೀಗಾದುದಕ್ಕಾಗಿ ಅಸಮಾಧಾನಗೊಂಡ ದುರ್ಯೋಧನ :

ತುಱುಗೋಳೊಳ್ ಪೆಣ್ಬುಯ್ಯಲೊಳ್
ಇಱಿವೆಸದೊಳ್ ನಂಟನೆಡಱಿಕೊಳೂರಱಿವಿನೊಳಂ
ತಱಿಸಂದು ಗಂಡುತನಮನೆ
ನೆಱಪದವಂ ಗಂಡನಲ್ಲನೆಂತುಂ ಷಂಡಂ

ಈ ರೀತಿ ನುಡಿಯುತ್ತಾನೆ. ಇದರ ಅರ್ಥ ಇಷ್ಟೆ. ಕಳ್ಳರು ಬಂದು ಗೋವುಗಳನ್ನು ಸೆರೆ ಹಿಡಿದುಕೊಂಡು ಹೋಗುವಾಗ, ಸ್ತ್ರೀಯರ ಮಾನಭಂಗದ ಪ್ರಕರಣ ಒದಗಿ ಅವರು ಮೊರೆಯಿಡುತ್ತಿರುವಾಗ, ಯುದ್ಧದಲ್ಲಿ ಪರಾಕ್ರಮಶಾಲಿಯಂತೆ ಹೋರಾಡಬೇಕಾದಾಗ, ನೆಂಟರಿಗೆ ಕಷ್ಟ ಮತ್ತು ಬಡತನ ಬಂದಾಗ, ಧೈರ್ಯದಿಂದ ಇವನ್ನು ಎದುರಿಸಿ ನಿಲ್ಲದವನು ಗಂಡನಲ್ಲ, ನಪುಂಸಕ.

ಭರತಖಂಡದಲ್ಲಿ ಧರ್ಮರಕ್ಷಣೆಗಾಗಿ ಪ್ರಾಣದ ಮೇಲಿನ ಹಂಗನ್ನು ತೊರೆದು ಹೋರಾಡಬೇಕಾದ ಪ್ರಸಂಗಗಳು ಹಲವಾರು ಒದಗಿ ಬಂದಿವೆ. ಈ ನಾಡಿನ ಸಂಸ್ಕೃತಿಯ ಮೇಲ್ಮೆಯನ್ನು ಸಾರುವ ಸನ್ನಿವೇಶಗಳಾಗಿ ಇವು ಪರಿಣಮಿಸಿವೆ. ನಮ್ಮ ಯೋಧರು ಇಂತಹ ಧರ್ಮಕಾರ್ಯಗಳಿಗಾಗಿ ಜೀವವನ್ನು ತೆತ್ತಿದ್ದಾರೆ. ಇವರಿಗಾಗಿ ವೀರಸ್ಮಾರಕಗಳನ್ನು ರಚಿಸುತ್ತಿದ್ದುದು ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ. ಪ್ರತಿಯೊಂದು ಗ್ರಾಮದಲ್ಲೂ ಇಂದಿಗೂ ಈ ವೀರಗಲ್ಲುಗಳು ಸ್ಮಾರಕಗಳು ಕಂಡುಬರುತ್ತವೆ. ಹಿಂದಿನ ಕಾಲದಲ್ಲಿ ಪ್ರತಿಯೊಂದು ಊರಿನಲ್ಲಿಯೂ ಕೆಲವು ಯೋಧರು ಈ ಧರ್ಮರಕ್ಷಣೆಯ ಕಾರ್ಯಕ್ಕಾಗಿ ಸದಾ ಸಿದ್ಧರಾಗಿದ್ದಂತೆ ತಿಳಿದು ಬರುತ್ತದೆ. ಇವರು ಸಾವಿಗೆ ಎಂದೂ ಹೆದರುತ್ತಿದ್ದವರಲ್ಲ ವೀರಶಾಸನಗಳಲ್ಲಿ ಬರುವ ಈ ಮುಂದಿನ ಶ್ಲೋಕ ಈ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತದೆ.

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಂಗನಾ
ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ

ಕಾಳಗದಲ್ಲಿ ಜಯಶಾಲಿಯಾದರೆ ಲಕ್ಷ್ಮಿ ಲಭಿಸುತ್ತಾಳೆ. ಒಂದುವೇಳೆ ಮೃತನಾದರೆ ದೇವಾಂಗನೆ ಲಭಿಸುತ್ತಾಳೆ. ಕ್ಷಣಮಾತ್ರದಲ್ಲಿ ಹಾಳಾಗುವ ಈ ಶರೀರಕ್ಕೆ ಕಾಳಗದಲ್ಲಿ ಸಾಯುವೆನೆಂಬ ಕೊರಗು ಏತಕ್ಕೆ ? ಈ ವೀರಭಾವನೆ ನಾಡಿನ ಯೋಧರಲ್ಲಿ ಮನೆಮಾಡಿಕೊಂಡಿತ್ತು. ಆದುದರಿಂದಲೇ ದೇಶಕ್ಕೆ ಧರ್ಮಕ್ಕೆ ಆಪತ್ತು ಒದಗಿದಾಗ ಈ ಯೋಧರು ಪ್ರಾಣದ ಮೇಲಿನ ಹಂಗನ್ನೂ ತೊರೆದು ಹೋರಾಡಿದ್ದಾರೆ. ರನ್ನನೇ ಮುಂದಿನ ಎರಡು ಪದ್ಯಗಳಲ್ಲಿ ಈ ಅಭಿಪ್ರಾಯವನ್ನು ಮತ್ತಷ್ಟು ಸ್ಪಷ್ಟಪಡಿಸಿದ್ದಾನೆ :

ಮಣಿಕನಕಂ ವಸ್ತುವಿಭೂ
ಷಣಂಗಳಂ ಕೊಟ್ಟು ಪೆಂಡಿರೊಲ್ವರೆ ಗಂಡರ್
ಗುಣಮನೆ ಮೆಚ್ಚುವುದು ಶಸ್ತ್ರ
ವ್ರಣಮುಂ ನಿನ್ನಂತೆ ಮೆಚ್ಚುವುದಿಱಿವಬೆಡಂಗಾ

ಸ್ತ್ರೀಯರು, ಪುರುಷರು ಕೊಡುವ ಮಣಿಕನಕಾದಿಗಳನ್ನು ಅಪೇಕ್ಷಿಸುವುದಿಲ್ಲ. ಅವರು ಪುರುಷರ ಗುಣವನ್ನೂ, ಶಸ್ತ್ರವ್ರಣವನ್ನೂ ಮೆಚ್ಚುತ್ತಾರೆ.

ಒಡಲೊಡವೆಯೆಂಬಿವೆರಡುಂ
ಕೆಡಲಿರ್ಪುವು ಕೆಡದ ಕಸವರಂ ಜಸಮದಱಿಂ
ಕೆಡುವೊಡಲೊಡವೆಯನೆಂದುಂ
ಕೆಡದೊಡವೆಗೆ ಮಾಱುಗುಡುವುದಿಱಿಂವಬೆಡಂಗಾ

ದೇಹ ಮತ್ತು ಐಶ್ವರ್ಯ ಕೆಟ್ಟುಹೋಗತಕ್ಕುವು ; ಅಶಾಶ್ವತವಾದುವು. ಆದುದರಿಂದ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಬೇಕು. ಇದಕ್ಕೆ ಪರಿಪೋಷಕವಾದ ಒಂದು ಆರ್ಯೋಕ್ತಿ ಹೀಗೆ ಹೇಳುತ್ತದೆ :

ಧರ್ಮ ಏವ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ
ತಸ್ಮಾದ್ಧರ್ಮೋ ನ ಹಂತವ್ಯಸ್ಸರ್ವೈಶ್ವರ್ಯಫಲೇಪ್ಸುಭಿಃ

ಇದರ ತಾತ್ಪರ್ಯವಿಷ್ಟೆ. ಧರ್ಮವನ್ನು ರಕ್ಷಿಸಿದವರನ್ನು ಧರ್ಮ ರಕ್ಷಿಸುತ್ತದೆ. ಆದುದರಿಂದ ಎಲ್ಲ ಐಶ್ವರ್ಯವನ್ನು ಅಪೇಕ್ಷಿಸುವವರು ಧರ್ಮವನ್ನು ಹಾಳುಮಾಡಬಾರದು.

ಭರತಖಂಡದ ಮೇಲೆ ಆಕ್ರಮಣ ನಡೆದ ಸಂದರ್ಭಗಳಲ್ಲಿ ಸ್ತ್ರೀಯರೂ ಬಾಲಕರೂ ವೃದ್ಧರೂ ವೀರಾವೇಶದಿಂದ ಹೋರಾಡಿರುವುದನ್ನು ನಮ್ಮ ಇತಿಹಾಸ ಸಾರುತ್ತಿದೆ. ಆದುದರಿಂದ ದೇಶಕ್ಕೆ ಹಾನಿಬೊದಗಿದಾಗ ನಾಡಿನ ಪ್ರತಿಯೊಬ್ಬರೂ ಹೋರಾಡಬೇಕಾದುದು ಅನಿವಾರ್ಯವಷ್ಟೇ ಅಲ್ಲ, ಕರ್ತವ್ಯವೂ ಹೌದು. ಈ ದೇಶರಕ್ಷಣೆಯ ಕಾರ್ಯದಲ್ಲಿ ವಿಶೇಷವಾಗಿ ಯುವಕರೂ ಯೋಧರೂ ಪ್ರಮುಖ ಪಾತ್ರವನ್ನು ವಹಿಸಬೇಕು. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಶ್ಲೋಕ ಬೀಜಮಂತ್ರವಾಗಬೇಕು. ಇಲ್ಲದಿದ್ದಲ್ಲಿ ರನ್ನ ಕವಿ ಹೇಳುವಂತೆ ನಾವು ಗಂಡರಲ್ಲ, ಷಂಡರಾಗುತ್ತೇವೆ.

೬

ಧರ್ಮಸಮನ್ವಯ

ಆರ್ಷೇಯಕಾಲದಿಂದಲೂ ಭರತಖಂಡ ಧರ್ಮಪ್ರಧಾನವಾದ ನಾಡೆಂದು ಖ್ಯಾತಿಯನ್ನು ಪಡೆದಿದೆ. ಈ ನಾಡಿನಲ್ಲಿ ಕಾಲಕಾಲಕ್ಕೆ ಹಲವಾರು ಧರ್ಮಗಳು ತಲೆಯೆತ್ತಿ ಮೆರೆದಿರುವುದನ್ನು ಇತಿಹಾಸದಿಂದ ಕಂಡುಕೊಳ್ಳಬಹುದಾಗಿದೆ. ಅನೇಕ ಧರ್ಮಗಳ ನೆಲೆವೀಡಾದ ಈ ನಾಡಿನಲ್ಲಿ ಒಂದು ಧರ್ಮಕ್ಕೂ ಮತ್ತೊಂದು ಧರ್ಮಕ್ಕೂ ಆಗಿಂದಾಗ್ಗೆ ಘರ್ಷಣೆಗಳು ನಡೆದಿರುವುದಕ್ಕೆ ಸಾಕಷ್ಟು ಆಧಾರಗಳು ಕಂಡುಬರುತ್ತವೆ. ಇಂತಹ ಸಂದರ್ಭಗಳಲ್ಲಿ ಈ ನಾಡಿನ ಧರ್ಮದೇವತೆಗಳಂತಿದ್ದ ರಾಜಮಹಾರಾಜರೂ, ಮಹಾತ್ಮರೂ, ವಿಭೂತಿಪುರುಷರೂ ಧರ್ಮಸಮನ್ವಯ ಕಾರ್ಯವನ್ನು ಕೈಕೊಂಡು ಧರ್ಮಸಂಸ್ಥಾಪನೆಯನ್ನು ಮಾಡಿದ್ದಾರೆ. ಜನಮನದ ಮಾಲಿನ್ಯವನ್ನು ತೊಳೆದು ಧರ್ಮೋದ್ಧಾರವನ್ನು ಮಾಡಿದ್ದಾರೆ. ಪುರಾತನ ಸಂಪ್ರದಾಯಗಳನ್ನು ಸಂಸ್ಕರಿಸಿ ಪರಿಷ್ಕರಿಸಿ ಜೀವನತತ್ತ್ವಗಳಿಗೆ ನವಚೈತನ್ಯವನ್ನು ತುಂಬಿ ನವೀಕರಿಸಿದ್ದಾರೆ. ಜನತೆಯ ಆತ್ಮೋದ್ಧಾರಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ.

ದುಷ್ಟಶಿಕ್ಷಣ ಮತ್ತು ಶಿಷ್ಟಸಂರಕ್ಷಣಾರ್ಥವಾಗಿ ಪರಾತ್ಪರನಾದ ಭಗವಂತನು ನಾನಾ ದೇಶಗಳಲ್ಲಿ ನಾನಾ ಕಾಲಗಳಲ್ಲಿ ನಾನಾ ರೂಪಗಳಲ್ಲಿ ಅವತರಿಸಿ ಧರ್ಮಸಂಸ್ಥಾಪನಾ ಕಾರ್ಯವನ್ನು ಕೈಗೊಳ್ಳುತ್ತಲೇ ಬಂದಿದ್ದಾನೆ ಇದನ್ನೇ ಭಗವದ್ಗೀತೆಯಲ್ಲಿ :

ಪರಿತ್ರಾಣಾಯ ಸಾಧೂನಾಂ
ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ
ಸಂಭವಾಮಿ ಯುಗೇಯುಗೇ

ಎಂದು ಹೇಳಲಾಗಿದೆ. ವಿಶ್ವಚೈತನ್ಯ ಸ್ವರೂಪನಾದ ಪರಮಾತ್ಮನು ತನ್ನ ಲೀಲಾವಿನೋದಾರ್ಥವಾಗಿ ಹಲವಾರು ರೂಪಗಳಲ್ಲಿ ಅವತರಿಸುತ್ತಾನೆ. ದೇವನೊಬ್ಬನೇ ಆದರೂ ನಾಮ ಹಲವು. ಆದರೆ ಜನ ಒಮ್ಮೊಮ್ಮೆ ಈ ಮೂಲತತ್ತ್ವವನ್ನೇ ಮರೆತು ತಮ್ಮ ತಮ್ಮ ದೇವರೇ ಸರ್ವಶ್ರೇಷ್ಠವೆಂದು ವಾದವಿವಾದಗಳನ್ನೂ ಹೋರಾಟವನ್ನೂ ನಡೆಸಿರುವುದನ್ನು ಕಾಣಬಹುದಾಗಿದೆ. ಇಂತಹ ಒಂದು ಪ್ರಕರಣ ಕನ್ನಡನಾಡಿನಲ್ಲಿ ಎರಡನೆಯ ನರಸಿಂಹನ ಕಾಲದಲ್ಲಿ ನಡೆದಂತೆ ಕಂಡುಬರುತ್ತವೆ. ಶಿವಪಾರಮ್ಯಕ್ಕಾಗಿಯೂ ವಿಷ್ಣುಪಾರಮ್ಯಕ್ಕಾಗಿಯೂ ಘರ್ಷಣೆ ನಡೆದಾಗ ಈ ಎರಡನೆಯ ನರಸಿಂಹನ ದಂಡನಾಯಕನಾದ ಪೋಲಾಳ್ವನು ಹರಿಹರೇಶ್ವರ ದೇವಾಲಯವನ್ನು ಕಟ್ಟಿಸಿ ಧರ್ಮಸಮನ್ವಯ ಮಾಡಿದಂತೆ ದಾವಣಗೆರೆಯ ಒಂದು ಶಾಸನದಲ್ಲಿ ಉಕ್ತವಾಗಿದೆ. ಆ ಶಾಸನದ ಸಾರ್ವಕಾಲಿಕ ಪದ್ಯಗಳು ಇವು:

ಹರಿಯಿಂದಂ ಬಿಟ್ಟು ದೈವಂ ಧರಣೀತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್
ಹರನಿಂದಂ ಬಿಟ್ಟು ದೈವಂ ಧರಣೀತಳದೊಳಿಲ್ಲೆಂದು ಪೇಳ್ವರ್ ಕೆಲಂಬರ್
ನರರಾ ಸಂದೇಹಮಂ ಪಿಂಗಿಸಲತಿಶಯದಿಂ ಕೂಡಲೂರಲ್ಲಿ ಶೋಭಾ
ಕರಮಪ್ಪಂತೊಂದೆ ರೂಪಂ ತಳೆದ ಹರಿಹರಂ ಕೂರ್ತು ರಕ್ಷಿಕ್ಕೆ ನಮ್ಮಂ

ಸಂದ ಶಿವಂಗೆ ವಿಷ್ಣುವಿನ ರೂಪಮದಾದುದು ವಿಷ್ಣುವಿಂಗೆ ಪೆಂ
ಪೊಂದಿ ನೆಗೆಟ್ಟವೆತ್ತ ಶಿವರೂಪವದಾದುದು ವೇದವಾಕ್ಯದಿಂ
ದೆಂದವನೆಯ್ದೆ ನಿಶ್ಚಯಿಸುವಂತಿರೆ ಕೂಡಲೊಳೇಕಮೂರ್ತಿಯಿಂ
ನಿಂದ ಜಗನ್ನುತ ಹರಿಹರಂ ಪರಿರಕ್ಷಿಸುತಿರ್ಕೆ ಧಾತ್ರಿಯಂ

ಹರಿಹರರಿಗೆ ಭೇದವಿಲ್ಲವೆಂಬ ಉದಾತ್ತತತ್ತ್ವವನ್ನು ನಿರಂತರವಾಗಿ ಸಾರುತ್ತಿವೆ ಈ ಲೋಕೋತ್ತರವಾದ ಪದ್ಯಗಳು.

ಇದೇ ರೀತಿ ಬ್ರಹ್ಮ ವಿಷ್ಣು ಮಹೇಶ್ವರರನ್ನು ಏಕಕಾಲದಲ್ಲಿ ಸ್ಥಾಪಿಸಿದುದಕ್ಕೆ ಬಾದಾಮಿಯ ಒಂದು ಶಾಸನದಲ್ಲಿ ಉಲ್ಲೇಖವಿದೆ. ಎರಡನೆಯ ಜಯಸಿಂಹನ ಅಕ್ಕ ಅಕ್ಕಾದೇವಿ ಎಂಬುವಳು ಬ್ರಹ್ಮ ವಿಷ್ಣು ಶಿವ ಈ ತ್ರಿಮೂರ್ತಿಗಳ ದೇವಾಲಯಗಳನ್ನು ಕಟ್ಟಿಸಿದಳು. ಅಲ್ಲದೆ ತಾನು ಜೈನ ಬೌದ್ಧ ಶೈವ ವೈಷ್ಣವ ಧರ್ಮಗಳನ್ನೂ ಸ್ವತಃ ಆಚರಿಸಿ ಧರ್ಮಸಮನ್ವಯವನ್ನು ಸಾಧಿಸಿ ತೋರಿಸಿಕೊಟ್ಟಿದ್ದಾಳೆ. ಬುಕ್ಕರಾಯನ ಕಾಲದಲ್ಲಿ ಜೈನರಿಗೂ ವೈಷ್ಣವರಿಗೂ ವಿವಾದ ತಲೆದೋರಿದಾಗ ಆತನು ಆ ಎರಡೂ ಧರ್ಮದವರನ್ನೂ ಸಂತೈಸಿ ಒಟ್ಟುಗೂಡಿಸಿ ಧರ್ಮಸಮನ್ವಯ ಮಾಡಿದ್ದನ್ನು ಶಾಸನವೊಂದು ಬಿತ್ತರಿಸುತ್ತದೆ.

ಕನ್ನಡನಾಡು ಸರ್ವಧರ್ಮಗಳನ್ನೂ ಸಮನ್ವಯಮಾಡಿಕೊಂಡು ಬಹುಧರ್ಮಧೇನುವಿನ ಹಕ್ಕಾಡುಂಬೊಲಂ ಎಂಬ ಖ್ಯಾತಿಯನ್ನು ಪಡೆದಿದೆ. ಇದಕ್ಕೆ ಈ ನಾಡಿನ ಪ್ರತಿಯೊಂದು ಗ್ರಾಮದಲ್ಲಿಯೂ ಕಂಡುಬರುವ ಹಲವಾರು ದೇವಾಲಯಗಳೇ ಜೀವಂತ ನಿದರ್ಶನಗಳೆನಿಸಿವೆ. ಬೇಲೂರು ಶಾಸನದ ಒಂದು ಪದ್ಯ ಈ ಸಾರ್ವಕಾಲಿಕ ನಿತ್ಯಸತ್ಯವನ್ನೇ ಪ್ರತಿಪಾದಿಸುತ್ತಿದೆ:

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನಃ
ಬೌದ್ಧಾಃ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋಽಯಂ ವೋ ವಿದಧಾತು ವಾಂಛಿತಫಲಂ ಶ್ರೀಕೇಶವೇಶಸ್ಸದಾ

ಈ ನಾಡಿನಲ್ಲಿ ಅವತರಿಸಿದ ವಿಭೂತಿಪುರುಷರೆಲ್ಲಾ ಧರ್ಮಸಮನ್ವಯ ಕಾರ್ಯವನ್ನು ನಿರಂತರವಾಗಿ ಅವ್ಯಾಹತವಾಗಿ ನಿರ್ವಹಿಸಿಕೊಂಡು ಬಂದಿದ್ದಾರೆ. ಬುದ್ಧ ಬಸವೇಶ್ವರರಾದಮೇಲೆ

ಭಾರತದ ಭಾಗ್ಯವಿಧಾತ ಮಹಾತ್ಮ ಗಾಂಧೀಜಿ ಅವರು ಕೂಡ "ಈಶ್ವರ ಅಲ್ಲಾ ತೇರೇ ನಾಮ್" ಎಂಬ ಬೀಜಸೂತ್ರವನ್ನೇ ಪಾರಾಯಣ ಮಾಡಿದ್ದಾರೆ. ಈ ಎಲ್ಲ ಜಿಜ್ಞಾಸೆಯ ಸಾರಾಂಶವಿಷ್ಟೆ. ದೇವನೊಬ್ಬ ನಾಮ ಹಲವು. ಯಾರು ಯಾವ ಹೆಸರಿನಿಂದ ಬೇಕಾದರೂ ದೇವರನ್ನು ಪೂಜಿಸಿ ಪುನೀತರಾಗಬಹುದು. ಆದರೆ ಯಾರೂ ಎಂದೆಂದೂ ದೈವಕ್ಕೂ ಧರ್ಮಕ್ಕೂ ಅಪಚಾರವೆಸಗಬಾರದು. ದ್ರೋಹವನ್ನು ಬಗೆಯಬಾರದು. ಏಕೆಂದರೆ ಯಾರು ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ. ಈ ಧರ್ಮಬುದ್ಧಿ ದೈವಭಕ್ತಿ ಈ ದೇಶದ ಜನಕ್ಕೆ ನಿರಂತರವಾಗಿ ಚಿಂತನವಾಗಿರಲಿ ಎಂದು ಹಾರೈಸೋಣ.

ಪುಸ್ತಕ ಲೋಕ

ಶ್ರೇಷ್ಠ ಶಿಕ್ಷಣತಜ್ಞರು : ಪ್ರೊ. ಎಂ. ಕೆ. ವರಗಿರಿ, ಕನ್ನಡ ಅಧ್ಯಯನಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (ರಜತ ಮಹೋತ್ಸವ ಪ್ರಕಟಣೆ –30) 1975, ಪು. 127/234, ಬೆಲೆ 16–00

ಕರ್ನಾಟಕ ವಿಶ್ವವಿದ್ಯಾನಿಲಯದ ರಜತಮಹೋತ್ಸವ ಸಂದರ್ಭದ 30ನೇ ಪ್ರಕಟಣೆಯಾದ ಈ ಕೃತಿ, ಪ್ರಾದೇಶಿಕ ಭಾಷೆಗಳಲ್ಲಿ ವಿಶ್ವವಿದ್ಯಾನಿಲಯದ ಮಟ್ಟದ ಗ್ರಂಥಗಳನ್ನು ಪ್ರಕಟಿಸುವ ಯೋಜನೆಗನುಗುಣವಾಗಿ ಹೊರಬಂದಿದೆ. ಕೃತಿಕಾರರೇ ಹೇಳಿರುವಂತೆ, ಈ ವಿಷಯವನ್ನು ಆರಿಸಿಕೊಂಡ ವಿದ್ಯಾರ್ಥಿ ಸಮುದಾಯಕ್ಕೆ ಅವರ ಬೋಧನೆಯ ಫಲವಾಗಿ ಈ ಕೃತಿ ಮೂಡಿದೆ. ಅವರು ಅಗತ್ಯವಾದ ಸಂಬಂಧಿತ ವಿಷಯಸಾಮಗ್ರಿಯನ್ನು ಎಚ್ಚರಿಕೆಯಿಂದ ಸಂಗ್ರಹಿಸಿ ಸರಳವಾದ ಹಾಗೂ ಆಕರ್ಷಕ ಶೈಲಿಯಲ್ಲಿ ಸುಸಂಗತವಾಗಿ ನಿರೂಪಿಸಿದ್ದಾರೆ.

ಕಳೆದ ಎರಡು ಸಾವಿರಕ್ಕೂ ಹೆಚ್ಚು ವರ್ಷಗಳಿಂದ ನಡೆದಿರುವ ಶೈಕ್ಷಣಿಕ ಚಿಂತನ ಹಾಗೂ ವಿಧಾನಗಳು ಪಾಶ್ಚಾತ್ಯ ಹಾಗೂ ಪೌರ್ವಾತ್ಯದ ವಿವಿಧ ರಾಷ್ಟ್ರಗಳ ಪ್ರಮುಖ ಚಿಂತನಕಾರರ ಮೇಲೆ ಗಮನಾರ್ಹ ಪ್ರಭಾವ ಬೀರಿವೆ. ಇಂದಿನ ಶಿಕ್ಷಣ ವಿಧಾನ ಎಂದರೆ, 25 ಶತಮಾನಗಳಿಗೂ ಹೆಚ್ಚು ಕಾಲದ ಸಂಚಿತ ಅನುಭವ ಎನ್ನುವುದರಲ್ಲಿ ಸಂದೇಹವಿಲ್ಲ. ಶಿಕ್ಷಣಶಾಸ್ತ್ರದ ಯಾವುದೇ ಆಸಕ್ತ ವಿದ್ಯಾರ್ಥಿಯಾದರೂ ಇಂದಿನ ಶಿಕ್ಷಣ ವಿಧಾನದ ಹಿನ್ನೆಲೆಯಲ್ಲಿನ ಮೂಲಭೂತ ಚಿಂತನವನ್ನು ಅರ್ಥಮಾಡಿಕೊಳ್ಳಬೇಕಾದರೆ, ಶಿಕ್ಷಣ ಕ್ಷೇತ್ರದ ವಿವಿಧ ಚಿಂತಕರು ನೀಡಿರುವ ಕೊಡುಗೆಯನ್ನೂ ಅರಿತುಕೊಳ್ಳುವುದು ಅತ್ಯಂತ ಅಗತ್ಯವೇ ಆಗುತ್ತದೆ.

ಭಿನ್ನ ಭಿನ್ನ ಕಾಲಗಳಲ್ಲಿ ಶೈಕ್ಷಣಿಕ ಚಿಂತನದ ಮೇಲೆ ಪ್ರಭಾವ ಬೀರಿ ಅದಕ್ಕೆ ರೂಪು ಕೊಟ್ಟ ಹನ್ನೊಂದು ಪಾಶ್ಚಾತ್ಯ ಹಾಗೂ ನಾಲ್ವರು ಭಾರತೀಯ ಶಿಕ್ಷಣ ಚಿಂತಕರು ನಿರೂಪಿಸಿದ ತತ್ವಗಳ ವಿವಿಧವಾದ ವಿವರಗಳನ್ನು ಸಂಗ್ರಹಿಸಲು, ಸಾಹಿತ್ಯ ಹಾಗೂ ಶಿಕ್ಷಣಶಾಸ್ತ್ರದಲ್ಲಿ ಗಣನೀಯ ಅನುಭವವಿರುವ ಕೃತಿಕಾರರು ಸಾಕಷ್ಟು ಶ್ರಮವಹಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾನಿಲಯದ ಬಿ ಎ (ಭಾಗ III ರ) ಶಿಕ್ಷಣ ಪಠ್ಯಕ್ರಮವನ್ನು ಉದ್ದಿಷ್ಟವಾಗಿ ಇಟ್ಟುಕೊಂಡಿರುವ ಕಾರಣ ಈ ಪುಸ್ತಕದ ವ್ಯಾಪ್ತಿ ಸೀಮಿತಗೊಂಡಿದೆ. ಹಾಗಾಗಿಯೇ, ಬಹುಶಃ ಲೇಖಕರು ಕೇವಲ ನಾಲ್ವರು ಪೌರ್ವಾತ್ಯ ಚಿಂತಕರ ಬಗ್ಗೆ ಮಾತ್ರ ಇಲ್ಲಿ ಹೇಳಬೇಕಾಗಿ ಬಂದಿರಬಹುದು. ಆದರೂ ಈ ನಾಲ್ವರು ಭಾರತೀಯ ಶಿಕ್ಷಣತಜ್ಞರ ಚಿಂತನಗಳು ಅನುಕ್ರಮರೂಪದಲ್ಲಿ ನಿರೂಪಿತವಾಗಿ, ಇಡೀ ಪುಸ್ತಕದ ಒಟ್ಟು ಚೌಕಟ್ಟಿನಲ್ಲಿ ಸುಸಂಗತವಾಗಿ ಅಡಕವಾಗುವಂತೆ ಎಚ್ಚರ ವಹಿಸಿದ್ದಾರೆ.

ಇಂಥ ಕ್ಷೇತ್ರದಲ್ಲಿ ಕೆಲಸ ಮಾಡುವ ಯಾವುದೇ ಲೇಖಕನಾಗಲಿ, ಈ ವಿಷಯದ ಬಗ್ಗೆ ಇರುವ ಅಗಾಧ ಸಾಮಗ್ರಿಯನ್ನು ಸಂಕ್ಷಿಪ್ತಗೊಳಿಸಿಯೂ ಓದುಗನಿಗೆ ನಿರೂಪಣೆಯಲ್ಲಿ ಆಸಕ್ತಿಯುಳಿಸಿಕೊಳ್ಳುವಂತೆ ಮಾಡುವುದು ನಿಜವಾಗಿಯೂ ಕಷ್ಟ. ಈ ಕೆಲಸದಲ್ಲಿ ಶ್ರೀ ವರಗಿರಿಯವರ ಯಶಸ್ಸು ಪಡೆದಿದ್ದಾರೆ. ವಿವಿಧ ವಿವರಗಳ ಸಂಘಟನೆಯಲ್ಲಿ ಕೌಶಲ್ಯಪೂರ್ಣ ಆಯ್ಕೆ ಮಾಡುವಲ್ಲಿ, ಶಿಕ್ಷಣಶಾಸ್ತ್ರದ ಆರಂಭ ವಿದ್ಯಾರ್ಥಿಗೆ ಸಾಮಾನ್ಯ ಪ್ರವೃತ್ತಿಗಳನ್ನು ಅರ್ಥಮಾಡಿಕೊಳ್ಳಲು ಅಷ್ಟೇನೂ ಪ್ರಮುಖವಲ್ಲದ ವಿವರಗಳನ್ನು ತರ್ಕಬದ್ಧವಾಗಿ ಕೈಬಿಡುವುದ

ರಲ್ಲಿ ಅಪಾರ ಜಾಣ್ಮೆಯನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಯೊಬ್ಬ ಚಿಂತಕನ ಬಗ್ಗೆಯೂ ಪ್ರತ್ಯೇಕ ಶೀರ್ಷಿಕೆಯಡಿಯಲ್ಲಿ ಚರ್ಚಿಸಲಾಗಿದೆ; ಪ್ರತಿಯೊಂದು ಪ್ರಕರಣದಲ್ಲಿಯೂ ಅಧ್ಯಯನದ ಹಿನ್ನೆಲೆ, ಶಿಕ್ಷಣತಜ್ಞನ ಜೀವನ ಚಿತ್ರ, ಅವನ/ಅವಳ ಶೈಕ್ಷಣಿಕ ಬರವಣಿಗೆ ಮತ್ತು ಆಯಾ ಶಿಕ್ಷಣತಜ್ಞ ತನಗೆ ದೊರೆತ ಮಾಧ್ಯಮಗಳ ಮೂಲಕ ಹೊರಪಡಿಸಿರುವ ಶಿಕ್ಷಣ ತತ್ವಗಳ ಬಗ್ಗೆ ವಿವರಗಳಿವೆ. ಕೆಲವೊಮ್ಮೆ, ಸಾಮಾನ್ಯ ಶೈಕ್ಷಣಿಕ ಚಿಂತನಕ್ಕೆ ಆ ಶಿಕ್ಷಣತಜ್ಞ ನೀಡಿರುವ ಕೊಡುಗೆಯನ್ನು ಕುರಿತ ಸಣ್ಣ ವಿಮರ್ಶಾತ್ಮಕ ಟಿಪ್ಪಣಿಯೂ ಇದೆ.

ಬಿ. ಎ. ವಿದ್ಯಾರ್ಥಿಗಳ ಪಠ್ಯಪುಸ್ತಕವಾಗಿ ಇದು ಬಹುದಿನದ ಅಗತ್ಯವನ್ನು ಪೂರೈಸಿದೆ. ಕನ್ನಡದಲ್ಲಿ ಈ ವಿಷಯವನ್ನು ಅಧ್ಯಯನ ಮಾಡಿ, ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರಿಸಬೇಕೆಂಬ ವಿದ್ಯಾರ್ಥಿಗೆ ಈ ಬಗ್ಗೆ ಪುಸ್ತಕಗಳೇ ಇರಲಿಲ್ಲ. ಆದ್ದರಿಂದ ಆ ದೃಷ್ಟಿಯಿಂದ ಈ ಕೃತಿ ತುಂಬಾ ಸ್ವಾಗತಾರ್ಹ.

ಆದರೆ, ವಿದ್ಯಾರ್ಥಿಯಾದವನು ಈ ಎಲ್ಲ ಚಿಂತಕರ ಕೊಡುಗೆಯನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡುವಂತೆ, ಅವನಿಗೆ ಮಾರ್ಗದರ್ಶನ ಮಾಡಬೇಕು. ಹಾಗಾದಾಗ ಮಾತ್ರ ಶೈಕ್ಷಣಿಕ ಚಿಂತನದ ಬೆಳವಣಿಗೆಯನ್ನು ಅದರ ಸರಿಯಾದ ಅರ್ಥದಲ್ಲಿ ಅವನು ಗ್ರಹಿಸಬಲ್ಲ. ಆದ್ದರಿಂದ ಕೃತಿಕಾರರು ತಮ್ಮ ಕೃತಿಯಲ್ಲಿ ಸೇರಿಸಿರುವ ಎಲ್ಲ ಚಿಂತಕರ ಕೊಡುಗೆಯ ಬಗ್ಗೆ ವಿಮರ್ಶಾತ್ಮಕ ಮೌಲ್ಯಮಾಪನ ಮಾಡುವಂಥ ಲೇಖನವನ್ನು ಕೊನೆಯ ಅಧ್ಯಾಯವಾಗಿ ಸೇರಿಸಿದ್ದರೆ ಹೆಚ್ಚು ಉಚಿತವಾಗುತ್ತಿತ್ತು. ಆಗ ಆಧುನಿಕ ಶೈಕ್ಷಣಿಕ ವಿಧಾನಗಳಿಗೆ ಈ ಚಾರಿತ್ರಿಕ ಅಧ್ಯಯನದ ಔಚಿತ್ಯವೇನು ಎನ್ನುವುದರ ಬಗ್ಗೆ ಅಭ್ಯಾಸಿ ವಿದ್ಯಾರ್ಥಿಗೆ ಸ್ಪಷ್ಟನೆ ದೊರೆಯುತ್ತಿತ್ತು.

ಈ ಕೃತಿಯಲ್ಲಿ ಅಲ್ಲಲ್ಲಿ ಕೆಲವಾರು ಚಾರಿತ್ರಿಕ ದೋಷಗಳು ತಲೆಹಾಕಿವೆ. ರೋಮನ್ ಸಾಮ್ರಾಜ್ಯ ಪತನವಾದ ನಂತರ ಬಂದ ಷಿಯಿಸಂನಿಂದ 'ಯೂನಿವರ್ಸಲ್ ಚರ್ಚ್ ಆಫ್ ಕ್ರಿಶ್ಚಿಯಾನಿಟಿ' ವಿಭಜಿತವಾಗಿತ್ತು ಎನ್ನುವುದು, ಅಲ್ಲದೆ ಯೂರೋಪಿನಲ್ಲಿನ ಧಾರ್ಮಿಕ ಸುಧಾರಣೆಗಳ ಕಾಲದಲ್ಲಿ ಇಗ್ನೇಷಿಯಸ್ ಲಯೋಲ ಕ್ರಿಯಾಶೀಲನಾಗಿದ್ದ ಎನ್ನುವುದು ಚಾರಿತ್ರಿಕ ಅಂಶ. ಆದರೂ ಈ ಅಂಶ ಹೇಗೋ ಕೃತಿಕಾರರ ಗಮನಕ್ಕೆ ಬಾರದೆ ಉಳಿದಿದೆ. ಇಂಥವೇ ದೋಷಗಳನ್ನು ಇತರೆಡೆಗಳಲ್ಲಿಯೂ ಕಾಣಬಹುದು. ಮುಂದಿನ ಆವೃತ್ತಿಯಲ್ಲಿ ಇಂಥ ಚಾರಿತ್ರಿಕ ದೋಷಗಳನ್ನು ಸರಿಪಡಿಸಿ ಸಾಮಗ್ರಿಯನ್ನು ಪುನರ್ಪರಿಶೀಲಿಸುತ್ತಾರೆ ಎಂದು ಭಾವಿಸೋಣ

ಈ ಪುಸ್ತಕದ ಮುದ್ರಣ ತೀರಾ ಅಭಾಸಪೂರ್ಣವಾಗಿದೆ. ಪೂರ್ಣ ವಿರಾಮಗಳು ಅಗತ್ಯಕ್ಕಿಂತ ಹೆಚ್ಚಾಗಿ ಸಿಕ್ಕಾಪಟ್ಟೆ ಬಳಕೆಯಾಗಿರುವುದು ಕಣ್ಣಿಗೆ ಹೊಡೆಯುತ್ತದೆ. ಕರಡುತಿದ್ದುವ ಕಾರ್ಯದ ಕಡೆ ಗಮನವನ್ನೇ ಕೊಟ್ಟಂತೆ ಕಾಣುವುದಿಲ್ಲ.

ಒಟ್ಟಿನಲ್ಲಿ ಈ ಪುಸ್ತಕ ಪ್ರಯೋಜನಕಾರಿಯಾದುದು, ಕನ್ನಡದ ಶಿಕ್ಷಣ ಸಾಹಿತ್ಯಕ್ಕೆ ಮೌಲಿಕ ಕೊಡುಗೆ. ಕೃತಿಕಾರರ ಸಾಧನೆ ನಿಜವಾಗಿಯೂ ಸ್ತುತ್ಯಾರ್ಹ.

ರಾಮ್ ಕುಲಕರ್ಣಿ

ಭಾರತದ ಗ್ರಾಮೀಣ ಗ್ರಂಥಾಲಯಗಳು: ಲೇಖಕ ಮತ್ತು ಪ್ರಕಾಶಕ: ಟಿ. ಆರ್. ನಾಗಪ್ಪ, ಸಂಶೋಧನಾಧಿಕಾರಿ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು–೪, ಪುಟಗಳು xii+212 (1977).

ಭಾರತದ ವಿವಿಧ ರಾಜ್ಯಗಳಲ್ಲಿ, ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಗ್ರಂಥಾಲಯ ಸ್ಥಾಪನೆಯ ಐತಿಹಾಸಿಕ ಪರಿವೀಕ್ಷಣೆಯನ್ನೊಳಗೊಂಡ ಈ ಗ್ರಂಥ ಕನ್ನಡ ಗ್ರಂಥಾಲಯ ಶಾಸ್ತ್ರವಾಙ್ಮಯಕ್ಕೆ ಅಪೂರ್ವ ಕೊಡುಗೆ. ಭಾರತದ ಗ್ರಾಮೀಣ ಗ್ರಂಥಾಲಯದ ಬಗೆಗಿನ

ಇಂಥ ಗ್ರಂಥ ಇಂಗ್ಲೀಷಿನಲ್ಲಾಗಲೀ ಇತರ ಭಾಷೆಗಳಲ್ಲಾಗಲೀ ಇಲ್ಲವಾದ್ದರಿಂದ ಈ ಗ್ರಂಥಕ್ಕೆ ವಿಶಿಷ್ಟ ಸ್ಥಾನವಿದೆ.

ಸಾಕ್ಷರತಾ ಚಳುವಳಿ, ವಯಸ್ಕರ ವಿದ್ಯಾಭ್ಯಾಸ ಚಳುವಳಿಯ ಒತ್ತೊತ್ತಿಗೇ ದೇಶದ ಪ್ರತಿಯೊಂದು ಪ್ರಾಂತದಲ್ಲಿ ಗ್ರಂಥಾಲಯ ಸ್ಥಾಪನೆ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಈ ದಿಸೆ ಯಲ್ಲಾದ ಚಟುವಟಿಕೆಗಳ ಕುರಿತು ಈ ಗ್ರಂಥ ಸರಿಯಾದ ಮಾಹಿತಿ ಒದಗಿಸಿ ಕೊಡುತ್ತದೆ. ಅನೇಕ ವರ್ಷಗಳ ಕಾಲ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿದ್ದು ಕೊಂಡು ಪುಸ್ತಕ ಭಂಡಾರಗಳನ್ನು ರಾಜ್ಯದ ಎಲ್ಲಾ ಕಡೆಗೂ ತೆಗೆದುಕೊಂಡು ಹೋಗಿ ಗ್ರಾಮೀಣ ಜನರ ಸಂಪರ್ಕ ಪಡೆದು ಅವರ ಜೀವನಕ್ರಮ, ಶಿಕ್ಷಣ ಮಟ್ಟವನ್ನೂ ತಿಳಿದು ಕೊಂಡು, ಗ್ರಾಮಸ್ಥರಲ್ಲಿ ಗ್ರಂಥಾಲಯಗಳ ಬಗೆಗೆ ಮನವರಿಕೆ ಮಾಡುವಂತಾಗಲು ನಾನಾ ಬಗೆಯ ಚಟುವಟಿಕೆಗಳನ್ನು ರೂಪಿಸಿ ಅಪಾರ ಅನುಭವವನ್ನು ಪಡೆದಿರುವ ಶ್ರೀ ನಾಗಪ್ಪನವರ ಈ ಪುಸ್ತಕವು ಅತ್ಯಂತ ಸರಳವಾದ ಭಾಷೆಯಿಂದ ಸುಂದರವಾದ ನಿರೂಪಣೆಯಿಂದಾಗಿ ಎಲ್ಲರೂ ಓದಬಹುದಾಗಿದೆ. ಈಗಾಗಲೆ ಶ್ರೀ ನಾಗಪ್ಪನವರು ತಮ್ಮ ಅನೇಕ ಕೃತಿಗಳ ಮೂಲಕ ಕನ್ನಡಿಗ ರಿಗೆ ಚಿರಪರಿಚಿತ ವ್ಯಕ್ತಿ. ಮುನ್ನುಡಿಯಲ್ಲಿ ದೇಶಪಾಂಡೆಯವರು ಹೇಳಿದ "ಪ್ರಪಂಚದ ಗ್ರಂಥಾಲಯ ಇತಿಹಾಸವನ್ನು ನಾಂದಿ ಮಾಡಿಕೊಂಡು ಭಾರತದ ಪ್ರತಿಯೊಂದು ರಾಜ್ಯಕ್ಕೂ ನಮ್ಮನ್ನು ಕರೆದೊಯ್ದು ಅಲ್ಲಿ ಯಾವ ರೀತಿ ಗ್ರಾಮಸ್ಥರಿಗೆ ಗ್ರಂಥಾಲಯದ ಸೇವೆ ಸಲ್ಲುತ್ತಿದೆ ಎಂಬುದನ್ನು ಅಂಕಿಅಂಶ ಸಹಿತ ಬಹಳಷ್ಟು ವಿವರಗಳಿಂದ ಮನದಟ್ಟಾಗುವಂತೆ ಚಿತ್ರಿಸಿದ್ದಾರೆ." ಎಂಬ ಮಾತು ಅತಿಶಯೋಕ್ತಿ ಅಲ್ಲವೆಂದು ಈ ಗ್ರಂಥ ಓದಿದವರಿಗೆ ಮನವರಿಕೆಯಾಗುತ್ತದೆ.

ಪ್ರತಿ ರಾಜ್ಯದಲ್ಲೂ ಗ್ರಂಥಾಲಯದ ಸ್ಥಾಪನೆ, ಬೆಳವಣಿಗೆ, ಇನ್ನೊಂದಕ್ಕಿಂತ ತೀರ ಭಿನ್ನ ವಾಗಿದ್ದು ಪ್ರತಿಯೊಂದರ ಬೆಳವಣಿಗೆಯೂ ಆಶ್ಚರ್ಯ ಪಡುವಂತಿದೆ. ಉದಾಹರಣೆಗೆ ಕ್ರಿ. ಶ. ೧೯೧೦ರ ಸಮಯದಲ್ಲಿ ಬರೋಡದಲ್ಲಿ ಗ್ರಂಥಾಲಯ ಸ್ಥಾಪನೆಯ ಬಗ್ಗೆ ಹೇಳುತ್ತಾ ಮಕ್ಕಳಿಗಾಗಿ ಗ್ರಂಥ ನಿರ್ಮಾಣ ಕಾರ್ಯ, ಅವರಿಗೆ ದಿನಾ ಕಥೆಹೇಳುವ ಗೋಷ್ಠಿಗಳ ಸ್ಥಾಪನೆ, ಸಿನೇಮ ಪ್ರದ ರ್ಶನ ಕಾರ್ಯ ಅಲ್ಲಿ ಹೇಗೆ ನಡೆಯುತ್ತಿತ್ತು ಎನ್ನುವುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ತಮಿಳುನಾಡಿನಲ್ಲಿ ಗ್ರಂಥಾಲಯದ ದೀಪದ ವ್ಯವಸ್ಥೆಗೆ ಎಣ್ಣೆ ಸಂಗ್ರಹದ ವಿಚಾರ, ಗಾಡಿಯಲ್ಲೂ ಸಂಚಾರಿ ಪುಸ್ತಕ ಭಂಡಾರದ ಕಾರ್ಯ, ಆಂಧ್ರದ ಮನೆಗೊಂದು ಪುಸ್ತಕ ಭಂಡಾರ ಯೋಜನೆ ಆಂಧ್ರದ ಗ್ರಂಥಾಲಯ ಚಳುವಳಿಯ ರಾಮದಂಡು, ಉತ್ತರ ಪ್ರದೇಶದ ಮಾರುಕಟ್ಟೆ ಪುಸ್ತಕ ಭಂಡಾರ, ಪಂಜಾಬಿನ ಕಾಲೇಜೊಂದರ ಗ್ರಂಥಾಲಯ ಚಳುವಳಿಯ ವಿಚಾರ ಇನ್ನೂ ಹಲವು ವಿಚಾರಗಳು ಕುತೂಹಲಕಾರಿಯಾಗಿವೆ. ಮಾತ್ರವಲ್ಲದೆ ಆಯಾ ರಾಜ್ಯಗಳಲ್ಲಿ, ಗ್ರಂಥಾಲಯ ಚಳು ವಳಿಯ ಚುಕ್ಕಾಣಿ ಹಿಡಿದು ಅಹರ್ನಿಶಿ ದುಡಿದು ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕ ರೀತಿಯಲ್ಲಿ ಜ್ಞಾನ ಪ್ರಸಾರ, ಪುಸ್ತಕ ಭಂಡಾರಗಳ ಸ್ಥಾಪನೆ ಇತ್ಯಾದಿ ಹಲವಾರು ಯೋಜನೆಗಳ ಮೂಲಕ ಉತ್ತಮ ಭೂಮಿಕೆಯನ್ನು ಸಿದ್ಧಪಡಿಸಿದ ಉತ್ಸಾಹಿ ಮುಂದಾಳುಗಳ ಸಂಕ್ಷಿಪ್ತ ವಿವರಣೆಯೂ ಈ ಗ್ರಂಥದಲ್ಲಿದೆ. ಉದಾಹರಣೆಗೆ ಬರೋಡದ ಗಾಯಕ್‌ವಾಡ್ ಮಹಾರಾಜರು, ಗ್ರಂಥಾಲಯ ವಿಜ್ಞಾನದ ಪಿತಾಮಹ ಡಾ॥ ಎಸ್. ಆರ್. ರಂಗನಾಥನ್, ಆಂಧ್ರದಲ್ಲಿ ಐಯ್ಯಂಕಿ ವೆಂಕಟರಮ ಣಯ್ಯ ಮುಂತಾದ ಮುಂದಾಳುಗಳ ಪ್ರಯತ್ನದ ಫಲವಾಗಿಯೇ, ಇಂದು ಭಾರತದಲ್ಲಿ ಗ್ರಾಮೀಣ ಗ್ರಂಥಾಲಯಗಳು ಇಷ್ಟರಮಟ್ಟಿಗೆ ಮುಂದುವರೆಯಲು ಸಾಧ್ಯವಾಗಿದೆ. ಉತ್ಸಾಹಿ ವ್ಯಕ್ತಿಗಳು ಮಾತ್ರವಲ್ಲದೆ ದೇಶಾದ್ಯಂತ ಅನೇಕ ಸಂಘ ಸಂಸ್ಥೆಗಳು, ಉದಾಹರಣೆಯಾಗಿ ಕೇರಳದ "ಕೇರಳ ಗ್ರಂಥ ಶಾಲಾ ಸಂಘ," ನಮ್ಮ ರಾಜ್ಯದ "ವಯಸ್ಕರ ಶಿಕ್ಷಣ ಸಮಿತಿ," ಲಕ್ನೋದ "ಸಾಕ್ಷರತಾ ನಿಕೇತನ ಸಂಸ್ಥೆ," ರಾಜಾಸ್ಥಾನದ "ಉದಯಪುರ ಸೇವಾ ಸಮಿತಿ," ಪಶ್ಚಿಮ ಬಂಗಾಳದ "ಬೆಂಗಾಲ್ ಸೋಷಿಯಲ್ ಸರ್ವೀಸ್ ಲೀಗ್" ಹಾಗು ಇನ್ನಿತರ ಖಾಸಗಿ ಸಂಘ ಸಂಸ್ಥೆಗಳು ನಿರ್ವಹಿಸಿದ ಮಹತ್ತರ ಕಾರ್ಯಕ್ರಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಇದೀ ಗ್ರಂಥವನ್ನು

ಓದಿ ಮುಗಿಸಿದಾಗ ಸಾಕ್ಷರತೆಯಲ್ಲಿ, ಗ್ರಂಥಾಲಯದ ಬೆಳವಣಿಗೆಯಲ್ಲಿ ನಮ್ಮ ದೇಶ ಪ್ರಪಂಚದ ಇತರ ದೇಶಕ್ಕಿಂತ ಎಷ್ಟು ಹಿಂದೆ ಇದೆ ಎಂಬ ಅರಿವು ಮೂಡುತ್ತದೆ. ಪ್ರತಿ ರಾಜ್ಯದ ಅಂಕಿ ಅಂಶ ಪರಿಶೀಲಿಸಿ ತುಲನೆ ಮಾಡಿದಾಗ ಹಿಂದುಳಿದ ನಮ್ಮ ನಮ್ಮಲ್ಲೇ ಪುನಃ ನಮ್ಮ ಸ್ವವಿವೇಚನೆ ಮಾಡಿಕೊಳ್ಳಲು ಈ ಗ್ರಂಥ ಉಪಯುಕ್ತ.

ವಿಶಾಲವಾದ ಭಾರತ ದೇಶವನ್ನು ಅದರಲ್ಲೂ ಗ್ರಾಮೀಣ ವಿಭಾಗವನ್ನೇ ತಮ್ಮ ಸಂಶೋಧನಾ ಕ್ಷೇತ್ರವಾಗಿ ಆರಿಸಿಕೊಂಡ ಟಿ. ಆರ್. ನಾಗಪ್ಪನವರು ಎಷ್ಟೋ ವೇಳೆ ಆಯಾ ರಾಜ್ಯಗಳ Bulletin ಗಳನ್ನೋ, ಕೆಲವು ದಾಖಲೆಗಳನ್ನೋ, ಆಧರಿಸಿ ಗ್ರಂಥ ನಿರ್ಮಾಣ ಮಾಡಿದ್ದಾರೆ. ದಾಖಲೆಗಳೇ ಇಲ್ಲದ ರಾಜ್ಯಗಳಲ್ಲಿ ಸಂಬಂಧ ಪಟ್ಟ ವ್ಯಕ್ತಿಗಳಿಗೆ ಪತ್ರ ಬರೆದು ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಮಾಹಿತಿಗಳು ದೊರಕದಿದ್ದಲ್ಲಿ ಪ್ರಮಾಣಕವಾಗಿ ದೊರಕಿಲ್ಲ ಎಂದಿದ್ದಾರೆ.

ಗ್ರಂಥವನ್ನು ತೀರಾ ಶಾಸ್ತ್ರದ ನೀರಸ ಗದ್ಯದಲ್ಲಿ ಬರೆಯದೇ ಬಹುರೋಚಕವಾಗಿ ಬರೆಯಲು ಯತ್ನಿಸಿದ್ದಾರೆ. ಪ್ರತಿಯೊಂದು ರಾಜ್ಯದ ಗ್ರಾಮೀಣ ಗ್ರಂಥಾಲಯದ ಬೆಳವಣಿಗೆಯ ಲೆಕ್ಕಾಚಾರದೊಂದಿಗೆ ಕುತೂಹಲ ಹುಟ್ಟಿಸುವ ವಿವರಣೆ ಇರುವುದರಿಂದ ಸಂಶೋಧಕನಿಗೆ ಮಾತ್ರವಲ್ಲದೆ ಸಾಮಾನ್ಯ ಜ್ಞಾನಾಕಾಂಕ್ಷಿಗೂ ಈ ಗ್ರಂಥ ರುಚಿಸುತ್ತದೆ.

ಆದರೆ ಅಲ್ಲಲ್ಲಿ ಮುಖ್ಯ ವಿಚಾರವನ್ನು ವಿವರಿಸುವಾಗ ವಿಚಾರಾಂತರವಾದುದೂ ಇದೆ. ಉದಾಹರಣೆಗೆ ಬರೋಡ ಸಂಸ್ಥಾನದ ಗ್ರಾಮೀಣ ಗ್ರಂಥಾಲಯದ ಬೆಳವಣಿಗೆಯ ಬಗೆ ಬರೆಯುತ್ತಾ ಮಕ್ಕಳ ಶಿಕ್ಷಣ ಪ್ರಪಂಚದ ಇತರ ಕಡೆಗಳಲ್ಲಿ ಹೇಗಿದೆ (ಪುಟ ೬೧) ಎಂದು ವಿವರಿಸುವಾಗ ವಿಚಾರ ತಂತು ಕಡಿದ ಭಾಸವಾಗುತ್ತದೆ. ಆ ವಿಚಾರವನ್ನು ಅಡಿ ಟಿಪ್ಪಣಿಯಲ್ಲಿ ಕೊಡಬಹುದಿತ್ತು.

ಐದು ರಾಷ್ಟ್ರೀಯ ಗ್ರಂಥಾಲಯಗಳ ಹೆಸರನ್ನು ಹೇಳುತ್ತಾ ಫ್ರಾನ್ಸ್, ಬ್ರಿಟನ್, ಅಮೆರಿಕ, ರಷ್ಯಾ, ಜಪಾನ್‌ಗಳ ಜೊತೆಗೆ ಕಲ್ಕತ್ತೆಯ ಗ್ರಂಥಾಲಯವನ್ನು ವಿಶ್ವದ ಪಂಚಮಹಾರಾಷ್ಟ್ರೀಯ ಗ್ರಂಥಾಲಯಗಳ ಪೈಕಿ ಒಂದಾಗಿದೆ ಎಂದಿದ್ದಾರೆ (ಪುಟ ೬೨).

ಗ್ರಂಥದಲ್ಲಿ ಮುದ್ರಣ ದೋಷದ ಬಗ್ಗೆ ತಪ್ಪೋಲೆ ಕೊಟ್ಟಿದ್ದರೂ, ಅದರಲ್ಲಿಲ್ಲದ ಹಲವು ಮುದ್ರಣ ದೋಷಗಳು ಗ್ರಂಥದಲ್ಲಿದೆ.

ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಗ್ರಂಥ ಋಣವನ್ನು ಕೊಟ್ಟಿರುತ್ತಾರೆ. ಲೇಖಕರ ಪಟ್ಟಿಯನ್ನು ಮಾಡುವ ಕ್ರಮದಲ್ಲಿ ಬಳಕೆಯಲ್ಲಿರುವ ನಿರ್ದಿಷ್ಟ ವಿಧಾನಗಳನ್ನು ಅನುಸರಿಸದೇ ಇರುವುದು ಸ್ವಲ್ಪ ಮಟ್ಟಿಗೆ ಕೊರತೆ ಎನಿಸುತ್ತದೆ.

ಸಾಧ್ಯವಾದ ಕಡೆಗಳಲ್ಲೆಲ್ಲಾ ವಿಷಯಗಳನ್ನು ಅಂಕಿ ಅಂಶಗಳ ಮೂಲಕ ವಿವರಿಸಿದ್ದಾರೆ. ಈ ಮಾಹಿತಿಯನ್ನು ಇತ್ತೀಚಿನವರೆಗೂ ಸಂಗ್ರಹಿಸಿದ್ದರೆ ಪುಸ್ತಕದ ಉಪಯುಕ್ತತೆ ಇನ್ನಷ್ಟು ಹೆಚ್ಚಾಗುತ್ತಿತ್ತು.

ಒಟ್ಟಿನಲ್ಲಿ ಗ್ರಂಥವನ್ನು ಎಲ್ಲರೂ ಓದಬಹುದಾಗಿದೆ. ಭಾಷೆಯ ಸರಳತೆ, ವಿಷಯ ನಿರೂಪಣೆಯಲ್ಲಿ ವೋಲ್ಮಟ್ಟ ಇವು ಪುಸ್ತಕವನ್ನು ಓದಿಸಿಕೊಂಡು ಹೋಗುತ್ತದೆ. ಇದು ಸಂಶೋಧಕನಿಗೆ ಮಾತ್ರವಲ್ಲ, ಸರಕಾರಕ್ಕೂ ಮಾರ್ಗದರ್ಶಿಯಾಗಿದೆ. ನೂರಾರು ಕಮಿಟಿಗಳು ಐದಾರು ವರ್ಷಗಳ ಕಾಲ ದುಡಿದು ಮುಂದಿಡಬಹುದಾದ ಎಲ್ಲ ವರದಿಗಳ ಕೆಲಸವನ್ನು ಪ್ರಸ್ತುತ ಲೇಖಕರು ಮಾಡಿದ್ದಾರಾದ್ದರಿಂದ ಸರಕಾರಕ್ಕೆ ಗ್ರಂಥಾಲಯದ ಬಗ್ಗೆ ನೈಜ ಮಾಹಿತಿ ಸಿಗುತ್ತದೆ. ಆದರೆ ಸರಕಾರ ಕೊಡುವ ಅನುದಾನದ ಅರ್ಧಾಂಶವನ್ನು ಉಪಯೋಗಿಸಿದ ರಾಜ್ಯಗಳ ಔದಾಸೀನತೆಯೂ ಜನತೆಗೆ ತಿಳಿಯುತ್ತದೆ. ಭಾರತದ ಗ್ರಾಮೀಣ ಗ್ರಂಥಾಲಯ ಬೆಳವಣಿಗೆ ಬಗೆಗಿನ ಸಂಪೂರ್ಣ ಚಿತ್ರವನ್ನು ಕೊಡುವ ಈ ಗ್ರಂಥ ಭಾರತದ ಇತರ ಭಾಷೆಗಳಿಗೂ ಅನುವಾದವಾಗಲು ಯೋಗ್ಯವಾಗಿದೆ.

ಎನ್ ಬಿ ಪಾಂಗಣ್ಣಾಯ

ವಾಣಿಜ್ಯ ವಿಜ್ಞಾನ ಪರಿಚಯ–ಲೇಖಕರು : ಪ್ರೊ. ಈರಣ್ಣ ಹಟ್ಟಿ ಮತ್ತು ಪ್ರೊ. ಪಿ. ಜಿ. ಇಟ್ನಾಳ, ಪ್ರ : ಕನ್ನಡ ಅಧ್ಯಯನಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 3 ; ಪುಟ : ೩೨೪, ಬೆಲೆ 15ರೂ.

ಪ್ರಸ್ತುತ ಕೃತಿಯು ವಾಣಿಜ್ಯ ಶಾಸ್ತ್ರದಲ್ಲಿ ಒಂದು ದಿಟ್ಟ ಹೆಜ್ಜೆ. ಕನ್ನಡ ಮಾಧ್ಯಮದಲ್ಲಿ ವಾಣಿಜ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕಗಳು ಅತಿ ವಿರಳವಾಗಿರುವಾಗ ಇದೊಂದು ಸ್ವಾಗತಾರ್ಹ ಕೃತಿ.

ಇದು ಕೇವಲ ವಾಣಿಜ್ಯ ಶಾಸ್ತ್ರದ ವಿದ್ಯಾರ್ಥಿಗಳಿಗಲ್ಲದೆ ಕಲಾ ವಿಭಾಗದ ಕೆಲವು ವಿದ್ಯಾರ್ಥಿಗಳಿಗೂ, ಅಧ್ಯಾಪಕ ವರ್ಗದವರಿಗೂ ಮಾರ್ಗದರ್ಶನದಂತಿರುವುದು ಇದರ ಇನ್ನೊಂದು ವಿಶೇಷ. ವಾಣಿಜ್ಯ ಶಾಸ್ತ್ರದಲ್ಲಿ ಆಸಕ್ತಿಯುಳ್ಳವರೂ ಪ್ರಸ್ತುತ ಕೃತಿಯಿಂದ ಲಾಭವನ್ನು ಪಡೆಯಬಹುದಾಗಿದೆ.

ಈ ಪುಸ್ತಕವು ಹನ್ನೊಂದು ಅಧ್ಯಾಯಗಳನ್ನೊಳಗೊಂಡಿದೆ. ಮೊದಲನೆಯ ಅಧ್ಯಾಯದಲ್ಲಿ ವಾಣಿಜ್ಯ ಶಾಸ್ತ್ರ ಎಂದರೇನು ? ಎಂಬುವುದನ್ನು ಲೇಖಕರು ಸಮರ್ಪಕವಾಗಿ ವಿವರಿಸಿದ್ದಾರೆ. ಈ ಅಧ್ಯಾಯದಲ್ಲಿ ವಾಣಿಜ್ಯದ ಮುಖ್ಯ ಶಾಖೆಗಳನ್ನೂ ವಾಣಿಜ್ಯದ ವ್ಯಾಪ್ತಿಯನ್ನೂ ಹಾಗೂ ವಾಣಿಜ್ಯದ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಆದರೆ ವಾಣಿಜ್ಯಶಾಸ್ತ್ರದಲ್ಲಿ ಸಾಮಾನ್ಯವಾಗಿ ಬಳಸುವ ಪಾರಿಭಾಷಿಕ ಪದಗಳ ಅರ್ಥಗಳನ್ನು ಹೆಚ್ಚು ಸಮರ್ಪಕವಾಗಿ ಮಾಡಿಕೊಡಬಹುದಾಗಿತ್ತು. ಉದಾ : (a) **Negotiable Instrument** (b) **Dishonoured Bill** (c) **Cheque** ಇತ್ಯಾದಿ.

ಎರಡನೆಯ ಅಧ್ಯಾಯ ವಾಣಿಜ್ಯ ವಿಕಾಸವನ್ನು ಪರಿಚಯ ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ. ಈ ಅಧ್ಯಾಯದಲ್ಲಿ ವಾಣಿಜ್ಯವು ಹೇಗೆ ವಿವಿಧ ಹಂತಗಳನ್ನು ದಾಟಿ ಇಂದು ವಾಣಿಜ್ಯ ಶಾಸ್ತ್ರವಾಗಿದೆಯೆಂಬುದನ್ನು ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಕೈಗಾರಿಕಾ ಕ್ರಾಂತಿಯು ಪರಿಚಯವನ್ನೂ ಮಾಡಿಕೊಟ್ಟಿದ್ದಾರೆ ವಾಣಿಜ್ಯಶಾಸ್ತ್ರವು ಬೃಹದಾಕಾರವಾಗಿ ವಿಕಾಸಗೊಳ್ಳಲು ಇದೊಂದು ಕಾರಣವೂ ಹೌದು. ಇದರ ನಿರೂಪಣಾಕ್ರಮ ಉತ್ತಮವಾಗಿದೆ.

ಮೂರನೆಯ ಅಧ್ಯಾಯದಲ್ಲಿ ಅರ್ಥಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರದ ಪರಸ್ಪರ ಸಂಬಂಧವನ್ನು ವಿವರಿಸಲಾಗಿದೆ. ಇದರಲ್ಲಿ ಅರ್ಥಶಾಸ್ತ್ರದಲ್ಲಿ ಬರುವ ಮುಖ್ಯಾಂಶಗಳನ್ನು ಅರ್ಥವತ್ತಾಗಿ ವಿವರಿಸಿದ್ದರೂ ಇದರಿಂದ ವಿದ್ಯಾರ್ಥಿಗಳಿಗೆ ವಿಷಯದ ಪರಿಚಯ ಮಾತ್ರ ಸಾಧ್ಯವಾಗಿದ್ದು ಜ್ಞಾನಾರ್ಜನೆಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಇದರಲ್ಲಿಲ್ಲದಿರುವುದು ಒಂದು ಕೊರತೆಯಾಗಿದೆ. ಆ ವಿಷಯಗಳನ್ನು ಇನ್ನಷ್ಟು ವಿವರಿಸಿದ್ದಲ್ಲಿ ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುತ್ತಿತ್ತು.

ಮುಂದಿನ ಮೂರು ಅಧ್ಯಾಯಗಳಲ್ಲಿ ವಾಣಿಜ್ಯ ಸಂಘಟನೆಯ ವಿವಿಧ ರೂಪಗಳನ್ನು ಕುರಿತು ಸಾಕಷ್ಟು ದೀರ್ಘವಾಗಿ ಚರ್ಚಿಸಲಾಗಿದೆ. ಏಕವ್ಯಕ್ತಿಯ ಯಜಮಾನ ಸಂಸ್ಥೆ, ಪಾಲುಗಾರಿಕೆ ಸಂಸ್ಥೆ ಮತ್ತು ಸಂಯುಕ್ತ ಬಂಡವಾಳಸಂಸ್ಥೆ–ಇವುಗಳ ಲಕ್ಷಣ, ಪ್ರಯೋಜನ ಹಾಗೂ ಹಾನಿಗಳನ್ನು ವಿವರಿಸಲಾಗಿದೆ. ಸಂಯುಕ್ತ ಬಂಡವಾಳ ಸಂಸ್ಥೆಯನ್ನು ಕುರಿತ ವಿವರಣೆ ಅತ್ಯುತ್ತಮವಾಗಿದೆ. ಬಂಡವಾಳ ಸಂಸ್ಥೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನೂ ಇಲ್ಲಿ ವಿಶ್ಲೇಷಿಸಿರುವುದರಿಂದ ವಿದ್ಯಾರ್ಥಿಗಳು ಹೆಚ್ಚಿನ ಉಪಯೋಗ ಪಡೆಯಬಹುದು. ಈ ಅಧ್ಯಾಯವು ವಾಣಿಜ್ಯ ಶಾಸ್ತ್ರದ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗಿದೆ. ಲೇಖಕರು ಪ್ರಸ್ತುತ ವಿಷಯದ ಪರಿಚಯವನ್ನು ಸಮರ್ಥವಾಗಿ ಮಾಡಿಕೊಟ್ಟಿದ್ದಾರೆ. ಲೋಕೋಪಯೋಗಿ ಸಂಸ್ಥೆ, ಸಹಕಾರಿ

ಸಂಸ್ಥೆಗಳಿಗೆ ಸಂಬಂಧಿಸಿದ ವಿವರಗಳನ್ನೂ ಇಲ್ಲಿ ಕೊಟ್ಟಿರುವುದರಿಂದ ಇದು ಹೆಚ್ಚಿನ ಮಹತ್ವವನ್ನು ಪಡೆದಿದೆ. ಇದರಿಂದ ಉಳಿದ ಕೆಲವೇ ಕೃತಿಗಳಿಗಿಂತಲೂ ಇದು ವಿಭಿನ್ನ ದೃಷ್ಟಿಕೋನ ಹೊಂದಿರುವುದು ಸ್ಪಷ್ಟವಾಗಿದೆ. ಲೇಖಕರು ವಾಣಿಜ್ಯ ಸಂಘಟನೆಯ ವಿವಿಧ ರೂಪಗಳನ್ನು ಪರಿಚಯ ಮಾಡಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಮುಂದೆ ಮೂರು ಅಧ್ಯಾಯಗಳಲ್ಲಿ ಕಛೇರಿಯ ಕಾರ್ಯನಿರ್ವಹಣೆಯನ್ನು ವಿವರಿಸಲಾಗಿದೆ. ಮೊದಲ ಹಂತದಲ್ಲಿ ಕಾರ್ಯಾಲಯದ ಅರ್ಥ ಹಾಗೂ ಆಧುನಿಕ ಕಛೇರಿಗಳಲ್ಲಿ ಇರುವ ವಿವಿಧ ಭಾಗಗಳ ಪರಿಚಯ ಮಾಡಿಕೊಡಲಾಗಿದೆ. ಇವುಗಳ ವಿವರಣೆ ಸಂಕ್ಷಿಪ್ತವಾಗಿದ್ದರೂ ಉತ್ತಮವಾಗಿದ್ದು ಕಛೇರಿಯಲ್ಲಿ ನಡೆಯುವ ಎಲ್ಲ ಕಾರ್ಯಗಳ ಪರಿಚಯವೂ ದೊರೆಯುತ್ತದೆ. ಮುಂದಿನ ಹಂತದಲ್ಲಿ ಆಧುನಿಕ ಕಛೇರಿಯಲ್ಲಿ ಬಳಸುವ ಯಂತ್ರೋಪಕರಣಗಳನ್ನು ಪರಿಚಯಿಸಲಾಗಿದೆ. ಎಲ್ಲಾ ಯಂತ್ರೋಪಕರಣಗಳ ಕಾರ್ಯನಿರ್ವಹಣೆ ಹಾಗೂ ಉಪಯೋಗಗಳನ್ನೂ ಕೊಡಲಾಗಿದೆ. ಈ ವಿವರಣೆಯೊಂದಿಗೆ ಯಂತ್ರೋಪಕರಣಗಳ ಚಿತ್ರಗಳನ್ನೂ ಅಳವಡಿಸಿ ಅವುಗಳ ಕಾರ್ಯಾಚರಣೆಯ ವಿವರಣೆಗಳನ್ನೂ ನೀಡಿದ್ದಲ್ಲಿ ವಿದ್ಯಾರ್ಥಿಗಳಿಗೆ ವಿಷಯ ಮನದಟ್ಟಾಗಲು ಹೆಚ್ಚಿನ ಸಹಾಯವಾಗುತ್ತಿತ್ತು.

ಒಂಬತ್ತನೆಯ ಅಧ್ಯಾಯದಲ್ಲಿ ದಫ್ತರ ಪದ್ಧತಿ ಮತ್ತು ವಿಷಯಸೂಚಿಯನ್ನು ಕುರಿತಂತೆ ಚರ್ಚಿಸಲಾಗಿದೆ. ಇದು ಸಾಕಷ್ಟು ವಿವರಣೆಗಳನ್ನೊಳಗೊಂಡ ಅಧ್ಯಾಯವಾಗಿದೆ. ಜೊತೆಗೆ ಚಿತ್ರಗಳನ್ನೂ ಅಳವಡಿಸಿರುವುದರಿಂದ ವಿಷಯಗ್ರಹಣೆಯು ಸುಲಭ ಸಾಧ್ಯವಾಗಿದೆ. ಪ್ರಪ್ರಥಮವಾಗಿ ಲೇಖಕರು ಕಛೇರಿ ನಿರ್ವಹಣೆಯನ್ನು ಕುರಿತು ಕನ್ನಡದಲ್ಲಿ ಬರೆದಿದ್ದಾರೆ. ವಿಷಯ ನಿರೂಪಣೆಯೂ ಉತ್ತಮವಾಗಿದ್ದು ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಕಾರಿಯಾಗಿದೆಯಲ್ಲದೆ ಈ ದಿಶೆಯಲ್ಲಿ ಲೇಖಕರು ಯಶಸ್ವಿ ಕಾರ್ಯವನ್ನು ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ಆರಂಭವಾಗಿರುವ ಹೊಸ ವಿಭಾಗದ ವಿದ್ಯಾರ್ಥಿಗಳಿಗೆ(Secretarial Practice) ಈ ಅಧ್ಯಾಯವು ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ

ವಾಣಿಜ್ಯ ಸಾಮ್ರಾಜ್ಯದಲ್ಲಿ ಅವಿಭಾಜ್ಯವಾಗಿ ದುಡಿಯುತ್ತಿರುವ ಸಂಸ್ಥೆಯೆಂದರೆ ಬ್ಯಾಂಕಿಂಗ್ ಸಂಸ್ಥೆ. ಈ ಬ್ಯಾಂಕಿಂಗ್ ಸಂಸ್ಥೆಯ ವ್ಯವಹಾರ ಪದ್ಧತಿಯನ್ನು ಈ ಕೃತಿಯಲ್ಲಿ ಸೇರಿಸಿರುವುದು ಸೂಕ್ತವಾಗಿದೆ. ಬ್ಯಾಂಕಿಂಗ್ ವ್ಯವಹಾರ ಪದ್ಧತಿಯನ್ನೂ ವಿವಿಧ ಬ್ಯಾಂಕುಗಳ ಕಾರ್ಯವನ್ನೂ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಇದರೊಂದಿಗೆ ಬ್ಯಾಂಕ್ ರಾಷ್ಟ್ರೀಕರಣವನ್ನು ಕುರಿತಂತೆ ಚರ್ಚಿಸಿರುವುದು ಈ ಅಧ್ಯಾಯಕ್ಕೆ ಹೆಚ್ಚಿನ ಪುಷ್ಟಿಯನ್ನು ನೀಡಿದೆ. ಈ ಅಧ್ಯಾಯವನ್ನು ಈ ಗ್ರಂಥದ ಉತ್ತಮ ಅಧ್ಯಾಯವೆಂದು ಪರಿಗಣಿಸಬಹುದು.

ಹನ್ನೊಂದನೆಯ ಅಧ್ಯಾಯದಲ್ಲಿ ವಾಣಿಜ್ಯ ಕಾಗದ ಪತ್ರಗಳನ್ನು ಕುರಿತ ವಿವರಣೆಗಳೂ ಇವೆ. ಹುಂಡಿ, ಪ್ರಾಮಿಸರಿ ನೋಟ್ ಮತ್ತು ಚೆಕ್ಕುಗಳನ್ನು ಕುರಿತು ಸುದೀರ್ಘವಾಗಿ ವಿವರಿಸಿದ್ದಾರೆ. ಚೆಕ್ಕಿನ ವಿಚಾರವನ್ನು ಹೆಚ್ಚಾಗಿ ಪ್ರಸ್ತಾಪಿಸಿರುವುದರಿಂದ ವಿದ್ಯಾರ್ಥಿಗಳು ಬ್ಯಾಂಕಿಂಗ್ ವ್ಯವಹಾರಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗಿದೆ. ಆದರೆ ಇಲ್ಲಿ ಹುಂಡಿ ಹಾಗೂ ಪ್ರಾಮಿಸರಿ ನೋಟ್, ಚೆಕ್ಕು ಮತ್ತು ಹುಂಡಿ ಹಾಗೂ ಪ್ರಾಮಿಸರಿ ನೋಟ್ ಮತ್ತು ಚೆಕ್ಕುಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿಲ್ಲ. ಹಾಗೆ ಮಾಡಿದ್ದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಉಪಯೋಗವಾಗುತ್ತಿತ್ತು.

ಬಿ. ಜೆ. ಗುರುಪ್ರಸಾದ್

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ ಮೈಸೂರು–೫೭೦ ೦೧೩